ರುಜುವಾತು

ಕರು: ಯು. ಆರ್. ಅನಂತಮೂರ್ತಿ ೧ ಜನವರಿ-ಮಾರ್ಚ್ ೧೯

ರುಜುವಾತು : ತ್ರೈಮಾಸಿಕ

ಸನ್ನಿವೇಶ ಪ್ರಕಾಶನ

* ಹೊಸದಿಕ್ಕುಗಳ ಹುಡುಕಾಟಕ್ಕಾಗಿ
* ಸೃಜನ ಶೀಲತೆಯಲ್ಲಿ ಹೊಸಪ್ರಯೋಗಗಳನ್ನು ಪ್ರೋತ್ಸಾಹಿಸುವುದಕ್ಕಾಗಿ
* ನಮ್ಮ ಸಾಮಾಜಿಕ ಸ್ಯಾಂಸ್ಕೃತಿಕ ಸಂದರ್ಭದ ಶೋಧಕ್ಕಾಗಿ

ಸಂಪಾದಕ

ಯು. ಆರ್. ಅನಂತಮೂರ್ತಿ

ಸಂಪಾದಕ ಮಂಡಳಿ

ಕಿ. ರಂ. ನಾಗರಾಜ

ಕೆ. ಪಿ. ವಾಸುದೇವನ್

ಆರ್. ರಾಮಚಂದ್ರ

ವ್ಯವಸ್ಥಾಪಕ ಸಂಪಾದಕ

ಎನ್. ವಿದ್ಯಾಶಂಕರ್

ಲೇಖಕ ಸಂಪಾದಕರು

ಜಿ. ಎಸ್. ಆಮೂರ್
ಎಚ್. ಎಸ್. ಜಿಳಿಗಿರಿ
ಶಾಂತಿನಾಥ ದೇಸಾಯಿ
ಕೆ. ವಿ. ನಾರಾಯಣ
ರಾಮಚಂದ್ರದೇವ

ಎಸ್. ವೆಂಕಟರಾಂ
ರಾಜೀವ ತಾರಾನಾಥ
ಎಸ್. ಜಿ. ವಾಸುದೇವ್
ಎಂ. ಎಸ್. ತಿಮ್ಮಪ್ಪ
ಕೆ. ವಿ. ಸುಬ್ಬಣ್ಣ
ಗಿರೀಶ್ ಕಾಸರವಳ್ಳಿ

ಕೆ. ಸತ್ಯನಾರಾಯಣ
ಟಿ. ಜಿ. ರಾಘವ
ಮಾನವೇಂದ್ರನಾಥ ಎಸ್. ಶೆಟ್ಟಿ
ಉಲ್ಲಾಸ್ ಕಾರಂತ
ಸರ್ವಮಂಗಳ

ಲೇಖಕರಿಗೆ ಸೂಚನೆ

ನಮ್ಮ ಬದುಕಿನ ಸದ್ಯದ ವಾಸ್ತವ ಮತ್ತು ಸೃಜನ ಶೀಲತೆಗಳನ್ನು ಗುರುತಿಸುವುದು, ಪರೀಕ್ಷಿಸುವುದು, ಪ್ರಕಟಿಸುವುದು 'ರುಜುವಾತು'ವಿನ ಗುರಿಯಾಗಿದೆ. ಈ ಗುರಿಯ ಸಾಧನೆಗಾಗಿ ಮಾನವ ಸಂಸ್ಕೃತಿಗೆ ಸಂಬಂಧಿಸಿದ ಎಲ್ಲ ರಂಗಗಳಲ್ಲೂ ಪ್ರಯೋಗ ಶೀಲತೆಯನ್ನೂ, ತೆರೆದ ಮನಸ್ಸಿನ ಶೋಧನೆಯನ್ನೂ ನಮ್ಮ ಪತ್ರಿಕೆ ಪ್ರೋತ್ಸಾಹಿಸುತ್ತದೆ.

ಇಲ್ಲಿ ಪ್ರಕಟವಾದ ಲೇಖನಗಳು ಆಯಾಯ ಲೇಖಕರ ಅಭಿಪ್ರಾಯಗಳು. ಅವುಗಳ ಬಗ್ಗೆ ವೈಯಕ್ತಿಕ ನಿಂದೆಗೆ ಅವಕಾಶವಿಲ್ಲದಂತೆ ಗಂಭೀರವಾಗಿ ನಡೆಯುವ ಚರ್ಚೆಯನ್ನು ಪತ್ರಿಕೆ ಪ್ರೋತ್ಸಾಹಿಸುತ್ತದೆ. ಲೇಖನಗಳನ್ನು ಹಾಳೆಯ ಒಂದೇ ಮಗ್ಗುಲಲ್ಲಿ ಬರೆದೋ, ಟೈಪ್ ಮಾಡಿಯೋ ಕಳುಹಿಸಬೇಕು. ನಾವು ಪ್ರಕಟಿಸಲಾಗದ ಲೇಖನಗಳನ್ನು ಲೇಖಕರಿಗೆ ಹಿಂದಿರುಗಿಸುವುದು ಅಸಾಧ್ಯವಾದ್ದರಿಂದ ಲೇಖನದ ಇನ್ನೊಂದು ಪ್ರತಿಯನ್ನು ಬರಹಗಾರರು ತಮ್ಮಲ್ಲಿ ಉಳಿಸಿಕೊಂಡಿರಬೇಕೆಂದು ನಮ್ರವಾಗಿ ಪ್ರಾರ್ಥಿಸುತ್ತೇವೆ. ಟಿಪ್ಪಣಿಗಳು, ಗ್ರಂಥ–ಋಣಗಳ ಸೂಚನೆ ಆದಷ್ಟೂ ಲೇಖನದಲ್ಲೇ ಸೇರುವಂತೆ ಬರೆಯಬೇಕು. ಬರವಣಿಗೆ ಸ್ವೀಕೃತವೇ ಅಲ್ಲವೇ ಎಂಬುದನ್ನು ಹದಿನೈದು ದಿನಗಳೊಳಗೆ ಲೇಖಕರಿಗೆ ತಿಳಿಸಲಾಗುವುದು. ಬರವಣಿಗೆಯನ್ನು ಸಂಪಾದಕರ ಈ ವಿಳಾಸಕ್ಕೆ ಕಳುಹಿಸಬೇಕು.

ಯು. ಆರ್. ಅನಂತಮೂರ್ತಿ,
849, ಟಿ. ಕೆ. ಲೇ ಔಟ್,
ಸರಸ್ವತಿಪುರಂ, ಮೈಸೂರು 570 009

ಚಂದಾದಾರರಿಗೆ ಸೂಚನೆ

ಚಂದಾವನ್ನು ಕೆಳಗೆ ಕೊಟ್ಟಿರುವ ವ್ಯವಸ್ಥಾಪಕ ಸಂಪಾದಕರ ವಿಳಾಸಕ್ಕೆ ಮನಿ ಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕಳುಹಿಸಬೇಕು. ಚೆಕ್ಕಿನಲ್ಲಿ ಕಳುಹಿಸುವವರು ಬ್ಯಾಂಕ್ ಕಮೀಷನ್ ಎರಡು ರೂಪಾಯಿಗಳನ್ನು ಸೇರಿಸಿ ಕಳುಹಿಸಬೇಕು. ಚೆಕ್ ಮತ್ತು ಡ್ರಾಫ್ಟ್‌ಗಳು ಸನ್ನಿವೇಶ, ಬೆಂಗಳೂರು–ಈ ಹೆಸರಿನಲ್ಲಿರಬೇಕು.

ಚಂದಾವಿವರ :

ಬಿಡಿಪ್ರತಿ : 6 ರೂಪಾಯಿಗಳು
ವಾರ್ಷಿಕ ಚಂದಾ : 20 ರೂಪಾಯಿಗಳು
ಆಜೀವ ಚಂದಾ : 250 ರೂಪಾಯಿಗಳು

ಎನ್. ವಿದ್ಯಾಶಂಕರ್, 43/48, ಮಹಡಿ
7ನೇ ಕ್ರಾಸ್, ವಸಂತನಗರ
ಬೆಂಗಳೂರು–560 052

ಕ್ರ. ಸಂ. ೦೧

೨೦-೨-೮೧.

ರುಜುವಾತು

ಜನವರಿ-ಮಾರ್ಚ್ 1981.

ಸಂಚಿಕೆ ೧

ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ—

ಸನ್ನಿವೇಶ ಪ್ರಕಾಶನದ ತ್ರೈಮಾಸಿಕ.

ಅರ್ಪಣೆ : ಅಳಿದ ಗೆಳೆಯ ಎಸ್. ವೆಂಕಟರಾವ್ ನೆನಪಿಗೆ

ಚಾರ್ಂದೇವನ ಕೊನೆಯ ದಿನಗಳು 3
ಭಾಲಚಂದ್ರ ನೆಮಾಡೇ

ಭಾಲಚಂದ್ರ ನೆಮಾಡೆ : ಒಂದು ಪರಿಚಯ 10
ಜಿ. ಎಸ್. ಅಮೂರ್

ಬಸವಣ್ಣ ಮತ್ತು ವಚನ ಸಾಹಿತ್ಯ 12
ಬಿ. ದಾಮೋದರ ರಾವ್

ಮುಂದುವರಿದ ಕನವರಿಕೆ 18
ಶಿವರಾಮಕಾರಂತ

ಅಸ್ಸಾಂ ಸಮಸ್ಯೆಯನ್ನು ಕುರಿತು 25
ಎಸ್. ವೆಂಕಟರಾವ್

ಇಕಾಲಜಿ ಮತ್ತು ಸಾಮಾಜಿಕ ಧೋರಣೆಗಳು 31
ಕೆ. ಉಲ್ಲಾಸ್ ಕಾರಂತ

ಭಾರತೀಯ ಸಂವೇದನೆ 41
ಪಿ. ನರಸಿಂಹ ಭಟ್ಟ

ಈ ನನ್ನ ವೃಕ್ಷ 57
ಎಸ್. ಜಿ. ವಾಸುದೇವ್

ಬರಿವ ಕೆಲಸ ಬದುಕುವ ಕೆಲಸ 59
ರಾಮಚಂದ್ರದೇವ

ಸಂಗ್ರಹ : ಸಾಹಿತಿಗಳೊ, ಆಸ್ಥಾನಿಕರೊ ? (63) ರುಡಾಲ್ಫ್ ಬಾಹ್ರೋನ ವಿಚಾರಗಳು (64) ಪುಟ್ಟ ಮಾನವನ ಅದ್ಭುತ ಚೈತನ್ಯ (70) ಸಿಮೋನ್‌ವೇಲ್ : ನಿಯತಿ ಮತ್ತು ಒಳಿತು (74)

ಚರ್ಚೆ : ಭಾರತೀಯ ಸಂಸ್ಕೃತಿ ಮತ್ತು ಪ್ರಜಾಪ್ರಭುತ್ವ
ಒಂದು ಟಿಪ್ಪಣಿ : ಟಿ.ಜಿ.ರಾಘವ 77

ಪುಸ್ತಕ ವಿಮರ್ಶೆ : ಕರ್ವಾಲೋ ಕಥೆ 79
ಪ್ರೋಲಂಕಿ ರಾಮಮೂರ್ತಿ

ವಿಮರ್ಶೆಯ ಪರಿಭಾಷೆ :
Complexity : **ಸಂಕೀರ್ಣತೆ** 88
ಓ. ಎಲ್. ನಾಗಭೂಷಣ ಸ್ವಾಮಿ

ಕವಿತೆಗಳು : **ದಾಂಪತ್ಯದ ಐದು ಹಂತ,** ಮಾಸ್ತಿ ವೆಂಕಟೇಶ ಐಯ್ಯಂಗಾರ್ (91). **ಮರುಳ ಶಂಕರ ದೇವ.** ಎಚ್. ಎಸ್.ಶಿವಪ್ರಕಾಶ್ (94). **ದಾರಿ ಹಿಡಿಯುವುದು.** ಜಯಸುದರ್ಶನ (96). **ಗರತಿಯೊಬ್ಬಳ ಅನಿಸಿಕೆ.** ಶ್ರೀ ಕೃಷ್ಣ ಆಲನಹಳ್ಳಿ (98), **ಸಣ್ಣ ಪುಟ್ಟ ಉಪಯುಕ್ತ ವಸ್ತುಗಳು.** ಎಸ್ ಮಂಜುನಾಥ(99), **ಬೆಳುವಲದ ಬಾಗಿನ,** ಚೆನ್ನವೀರ ಕಣವಿ (99). **ಅಪಘಾತ,** ಕಮಲ ಹೆಮ್ಮಿಗೆ (100), **ಇಂಡಿಯಾದ ನಿಬಿಡಾರಣ್ಯಗಳಲ್ಲಿ,** ಎಚ್.ಎಸ್.ವೆಂಕಟೇಶಮೂರ್ತಿ (101). **ಬಾಬು ಜಗಜೀವನರಾಮ್ ಎಂಬ ಸರಳ ರಗಳೆ,** ನಾ.ಮೊಗಸಾಲೆ (102), **ಎಲ್ಲಿಗ್ಬಂತು ಸಂಗಯ್ಯ,** ಜಿ.ಎಸ್.ಸಿದ್ಧಲಿಂಗಯ್ಯ (104) **ಸುದ್ದಿಜೀವಿಗಳು.** ಜಿ.ಎಸ್.ಶಿವರುದ್ರಪ್ಪ, (105). **ಅ ಆ ಮತ್ತು ...** ಗೋವಿಂದಯ್ಯ (105) **ಶಾಂತವೇರಿಯ ಅಶಾಂತ ಸಂತ,** ಗೋಪಾಲಕೃಷ್ಣ ಅಡಿಗ. (106),

ಸಂಪಾದಕನ ಟಿಪ್ಪಣಿಗಳು 108

ಅಳಿದ ಗೆಳೆಯ ವೆಂಕಟರಾವ್ 124
ಯು. ಆರ್. ಅನಂತಮೂರ್ತಿ

ಈ ಸಂಚಿಕೆಯ ಲೇಖಕರು :

ಭಾಲಚಂದ್ರ ನೆಮಾಡೆ, ರೀಡರ್, ಇಂಗ್ಲಿಷ್ ವಿಭಾಗ, ಮರಾಠವಾಡ ನಿಶ್ವವಿದ್ಯಾನಿಲಯ, ಔರಂಗ ...ದುಕೊಂಡು ...ರಾಠಿ ಸಾಹಿತಿ. ❖ **ಜಿ.ಎಸ್.ಆಮೂರ್,** ಪ್ರೊಫೆಸರ್, ಇಂಗ್ಲಿಷ್ ವಿಭಾಗ, ಮರಾಠವಾಡ ವಿಶ್ವವಿದ್ಯಾ... , ಔರಂಗಾಬಾದ್ ❖ **ಬಿ.ದಾಮೋದರರಾವ್,** ರೀಡರ್ ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು, **ಶಿವರಾಮ ಕಾರಂತ,** ಸಾಲಿಗ್ರಾಮ ಅಂಚೆ, ಉಡುಪಿ ತಾಲ್ಲೂಕು, ದ.ಕ.ಜಿಲ್ಲೆ ❖ ದಿವಂಗತ **ಎಸ್. ...ಕಟರಾಮ್** ಎಂ ಎಲ್.ಸಿ ಮತ್ತು ಎಚ್.ಎಂ.ಎಸ್. ಅಧ್ಯಕ್ಷರು ❖ **ಪಿ.ನರಸಿಂಹ ಭಟ್ಟ,** ಪಾದೇಕಲ್ಲು, ಕರೆ...ಪೋಸ್ಟ್ ಸತ್ಯಸಾಯಿ ವಿಹಾರ ಮಾರ್ಗ. ದ.ಕ ❖ **ಎಸ್.ಜಿ.ವಾಸುದೇವ,** ಕಲಾವಿದ, ಚೋಳಮಂಡಲ, ಮದರಾಸು. **ರಾಮಚಂದ್ರದೇವ,** ಸಹಾಯಕ ಸಂಪಾದಕ, ಪ್ರಜಾವಾಣಿ, ಬೆಂಗಳೂರು-1 ❖ **ಪಿ.ಕೆ.ಸುರೇಶ,** ಉಪಸಂಪಾದಕ. ಮೈಸೂರುಮಿತ್ರ, ಮೈಸೂರು, ❖ **ಟಿ.ಜಿ.ರಾಘವ,** ಇಂಗ್ಲಿಷ್ ಅಧ್ಯಾಪಕ. ಎಂ.ಇ'ಎಸ್. ಕಾಲೇಜು, ಬೆಂಗಳೂರು-3, ❖ **ಪೋಲಂಕಿ ರಾಮಮೂರ್ತಿ,** ರೀಡರ್, ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು. **ಓ.ಎಲ್.ನಾಗಭೂಷಣಸ್ವಾಮಿ,** ಇಂಗ್ಲಿಷ್ ಅಧ್ಯಾಪಕ, ಸಹ್ಯಾದ್ರಿ ಕಾಲೇಜು. ಶಿವಮೊಗ್ಗ. ❖ **ಮಾಸ್ತಿ ವೆಂಕಟೇಶ ಐಯ್ಯಂಗಾರ್,** ಬಸವನಗುಡಿ, ಬೆಂಗಳೂರು. ❖ **ಜಯಸುದರ್ಶನ,** 769, 5ನೇ ಬ್ಲಾಕ್ ರಾಜಾಜಿ ನಗರ, ಬೆಂಗಳೂರು-10 ❖ **ಶ್ರೀ ಕೃಷ್ಣ ಆಲನಹಳ್ಳಿ,** ನಂ.12. 4ನೇ ಮೇನ್, ಒಂಟಿಕೊಪ್ಪಲು, ಮೈಸೂರು **ಎಸ್.ಮಂಜುನಾಥ,** ಟೆಲಿಫೋನ್ ಆಪರೇಟರ್, ಹುಣಸೂರು ❖ **ಚೆನ್ನವೀರ ಕಣವಿ,** ನಿರ್ದೇಶಕರು, ಪ್ರಸಾರಾಂಗ ಕರ್ನಾಟಕವಿಶ್ವವಿದ್ಯಾನಿಲಯ. ಧಾರವಾಡ ❖ **ಕಮಲ ಹೆಮ್ಮಿಗೆ,** ಆಕಾಶವಾಣಿ, ಮಂಗಳೂರು, ❖ **...ಸ್.ಎಸ್. ವೆಂಕಟೇಶ ಮೂರ್ತಿ,** ಕನ್ನಡ ಅಧ್ಯಾಪಕರು, ಸೇಂಟ್ ಜೋಸೆಫ್ ಕಾಲೇಜು, ಬೆಂಗಳೂರು ❖ ನ... 2-104/2 **'ಕವಿತಾ',** ಕಾಂತಾವರ, **ಕಾರ್ಕಳ.** ❖ **ಜಿ.ಎಸ್.ಶಿವರುದ್ರಪ್ಪ,** ನಿರ್ದೇಶಕ, ಕನ್ನ... ಕೇಂದ್ರ, ಬೆಂಗಳೂರು ವಿಶ್ವವಿದ್ಯಾನಿಲಯ ❖ **ಗೋವಿಂದಯ್ಯ,** ಅಧ್ಯಾಪಕ, ಅರ್ಥಶಾಸ್ತ್ರ ವಿಭ..., ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. ❖ **ಗೋಪಾಲಕೃಷ್ಣ ಅಡಿಗ** 460ಎ, 6ನೆ ಕ್ರಾಸ್, 7ನೇ ಬ್ಲಾಕ್ ವೆಸ್ಟ್, ಜಯನಗರ, ಬೆಂಗಳೂರು ❖ **ಎಚ್.ಎಸ್.ಶಿವಪ್ರಕಾಶ್** ಇಂ... ಅಧ್ಯಾಪಕ, ಸರ್ಕಾರಿ ಕಾಲೇಜು, ತುಮಕೂರು. ❖ **ಜಿ.ಎಸ್.ಸಿದ್ಧಲಿಂಗಯ್ಯ,** ಪ್ರಿನ್ಸಿಪಾಲ್, ... ನಾರಾಣಿ ಕಾಲೇಜು, ಬೆಂಗಳೂರು. ❖ **ರಾಮಮೂರ್ತಿ,** ವ್ಯಂಗ್ಯ ಚಿತ್ರಕಾರ, ಪ್ರಜಾವಾಣಿ, ಬೆಂಗಳೂರು-1. **ಯು. ಆರ್. ಅನಂತಮೂರ್ತಿ,** ಪ್ರೊಫೆಸರ್, ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ. ಮೈಸೂರು-6

Printed, Published and edited by U. R. Ananthamurthy, 849, T. K. Layout, Mysore-570 009. for SANNIVESHA PRAKASHANA at Shree Printers, 2753, 4th Main Road, V. V Mohalla Mysore-570 002.

ಭಾಲಚಂದ್ರ ನೇಮಾಡೇ

ಚಾಂಗದೇವನ ಕೊನೆಯ ದಿನಗಳು

ಝೂಲ ಕಾದಂಬರಿಯ ಭಾಗ

ಮರಾಠಿಯಿಂದ ಕನ್ನಡಕ್ಕೆ: ಜಿ. ಎಸ್. ಆಮೂರ್

ಇದಾದ ಮೇಲೆ ಭೋಳೆ[1] ರಜೆಯಲ್ಲೆಲ್ಲ ಓಮುಬರೆಯುವುದರಲ್ಲಿ ಮುಳುಗಿಬಿಟ್ಟ. ಹೆಂಡತಿಯನ್ನು ಪುನಃ ತವರು ಮನೆಗೆ ಕಳಿಸಿದ.

ಓದಲಿಕ್ಕೆಂದು ತೆಗೆದಿಟ್ಟ ಪುಸ್ತಕಗಳನ್ನು ರಾತ್ರಿ–ದಿವಸ ಎನ್ನದೆ ಚಾಂಗದೇವ ಮೊದಲನೆಯ ತಿಂಗಳಲ್ಲಿ ಓದಿ ತೆಗೆದ. [illegible]ಗಳೆಲ್ಲ ಮುಗಿದು ಹೋದ ಮೇಲೆ ಅವನಿಗೆ [illegible]ಉಳಿದದ್ದವು. ಬಿಸಿಲಿನ ದಿನಗಳು ಮತ್ತು ಮೈಮೇಲೆ [illegible]ಮುಬೀಳುವ ಏಕಾಕಿತನ. ಮತ್ತೆ ಆತ ರಾತ್ರಿ ಅಪರಾತ್ರಿ ಊರ ಹೊರಗೆ ತಿರುಗಾಡಲು ಸುರುವು ಮಾಡಿದ. ತನ್ನ [illegible]ಯನ್ನು ಮೇಲೆ ಕೆಳಗೆ ಮಾಡುತ್ತ ಆತ ಹೇಳುತ್ತಿದ್ದ: [illegible] ಕೈಗಳಾದರೂ ಎಷ್ಟೊಂದು ಹಿಂಸ್ರ ಕಾಣುತ್ತವೆ. [illegible]ಲಯ ನಿರ್ಮಾಣ ಮಾಡುವುದು. ಇಲ್ಲವಾದರೆ ದುಷ್ಟ ಕೆಲಸಕ್ಕೆ ಇವುಗಳನ್ನು ಉಪಯೋಗಿಸಬಹುದು. ಕೈಗಳನ್ನು ರಿಕಾಮೀ ಬಿಡುವದು ಬರೋಬರಿಯಲ್ಲ.

ಒಮ್ಮೆ ಭೋಳೆ ಅವನಿಗೆ ಹೇಳಿದ, ನೀನು ಯಾವಾಗಲೂ ಕೈ ಮೇಲೆ ಕೆಳಗೆ ಮಾಡಿ ನೋಡುತ್ತಾ ಕುಳಿತು ಬಿಡ್ತೀ. ಅದಕ್ಕಿಂತ, ಈ ನಾಯಿ ನಮಗಿಷ್ಟು ತಾಪ ಕೊಡ್ತದಲ್ಲಾ ಅದಕ್ಕೆ ಏನಾದರೂ ಮಾಡು. ಅದಕ್ಕೀಗ ರಾತ್ರಿ ಹುಚ್ಚು ಹಿಡದದ. ನಿನ್ನೆ ಕೆಲಸದವಳನ್ನೂ ಕಡಿಯಿತು. ಮಾಲಕ್, ಈ ವಿಷಯವನ್ನು ಗೊತ್ತಿಗೆ ಹಚ್ಚಲೇಬೇಕು. ಮ್ಯುನಿಸಿ-ಪಾಲಿಟಿವಾಲಾಗಳೆಲ್ಲ ಹರಾಮಖೋರರು. ನಮ್ಮ ದೇಶದೊಳಗೆ ನಾಗರಿಕರೇ ಟ್ಯಾಕ್ಸ್ ತುಂಬಬೇಕು, ನಾಗರಿಕರೇ ಪ್ರಶ್ನೆ ಬಿಡಿಸಬೇಕು. ಸರಕಾರ ನಾಗರಿಕರಿಗಾಗಿ ಏನೂ ಮಾಡಬೇಕಾಗಿಲ್ಲ.

ಜೆ ಶ್ರು ಚಾಂಗದೇವ ಹೇಳಿದ. ನಾಗರಿಕರ ಎಲ್ಲಾ ಪ್ರಶ್ನೆಗಳನ್ನು ಬಿಡಿಸೋ ಸರಕಾರ ನಾಗರಿಕರ ಮೇಲೆ ತನ್ನ ಹಿಡಿತ ಗಟ್ಟಿ ಮಾಡತಿರತದ. ಅದು ಈ ದೇಶದ ನಾಗರಿಕರಿಗೆ ಒಪ್ಪಿಗೆಯೇನು ?

ಭೋಳೇ ಅಂದ, ಈ ನಾಯಿಯ ಪ್ರಶ್ನೆ ಹೇಗೆ ಬಿಡಿಸತೀ ಅದನ್ನು ಮೊದಲು ಹೇಳು. ನಾಯಿಯಿಂದ ಕಡಿಸಿಕೊಂಡು ಮನುಷ್ಯ ಸಾಯೋದನ್ನ ನೀನು ನೋಡಿರಲಿಕ್ಕಿಲ್ಲ, ಭಯಂಕರ....

ಚಾಂಗದೇವ ಹೇಳಿದ, ನನಗೆ ಈ ನಾಯಿಯಿಂದ ಎಂದೂ ತೊಂದರೆಯಾಗಿಲ್ಲ. ಉಲಟ್, ನಾನು ಹೊರಗಿನಿಂದ ಬಂದೆನೋ ಬಾಲ ಅಲಗಾಡಸ್ತಾ ದೂರ ಓಡ್ತದ. ಎರಡನೆಯವರಿಗೆ ಕಡಿದರ ಅವರು ಅದಕ್ಕೇನು ಮಾಡ್ತಾರೋ ಮಾಡಲಿ, ಎರಡನೆಯವರ ವಿಚಾರ ನಾವೇ ಮಾಡಬೇಕು. ಎಲ್ಲಾರ ಪ್ರಶ್ನೆ ಸರಕಾರ ಬಿಡಿಸಬೇಕು ಅಂತ ನೀವು ಠರಾಯಿಸಿದರ ಭೋಳೇ ಸಾಹೇಬ್, ಜಗತ್ತಿನೊಳಗ ಸರಿಯಾಗಿ ಬಾಳೋದೇ ಸಾಧ್ಯವಿಲ್ಲ. ಫೋಫಳೇ[2] ನಮ್ಮ ವಿಚಾರ ಮಾಡ್ತಾನೇನು ಯಾವಾಗಾದರೂ ? ಆಹಾರ ಮಂತ್ರಿ ಹಸಿದವರ ವಿಚಾರ ಮಾಡ್ತಾನೇನು ? ಇಲ್ಲಿ ಸಮಾಜ ಅನ್ನುವ ವಸ್ತುವೇ ಅಸ್ತಿತ್ವದಲ್ಲಿಲ್ಲ. ತಮ್ಮ ತಮ್ಮ ಜೋಳಿಗೀ ತುಂಬಲಿಕ್ಕೆ ಕಟ್ಟಿದ ದೇಶ ಇದು. ಎಲ್ಲಿಯ ತನಕ ನೀನು ಈ ಸಮಾಜದ ಸಲುವಾಗಿ ಕಷ್ಟ ಸೋಸತೀ ?

ನಿನ್ನ ಈ ಹಿಂದೂ ವಿಚಾರ ಸಾಕು. ಈ ವರ್ತನೆಗಳನ್ನು ನಾವೇ ಒಡೆಯಬೇಕು. ನೀನು ಈ ನಾಯಿಯ ಪ್ರಶ್ನೆ ಬಿಡಿಸಿ ತೋರಿಸು. ಬಾಕೀ ಚರ್ಚೆ ಬೇಡ. ಅದರೊಳಗೆ ನನಗೆ ಇಂಟರೆಸ್ಟ್ ಇಲ್ಲ.

ನಾಳೆ ನನ್ನ ಮಡುಗನಿಗೆಯೇ ಕಡಿದರೆ ? ನಾನು

1 ಪುರಾಣಿಕ ಕಾಲೇಜಿನಲ್ಲಿ ಚಾಂಗದೇವನ ಸಹೋದ್ಯೋಗಿ.

2 ಚಾಂಗದೇವನಿದ್ದ ಮನೆಯ ಮಾಲೀಕ.

ಹೇಳಿದ್ದು ಕೇಳು, ನನಗೆ ಸಹಾಯ ಮಾಡು. ಈ ವಿಷಾ ಹಾಕೋ ಕಾರ್ಯಕ್ರಮ ಪಾರುಮಾಡೋದು ನನಗೊಬ್ಬನಿಗೆ ಹೇಗೋ ಹೇಗೋ ಅನ್ನಿಸತದ. ಇಲ್ಲೇ ಕೊಲ್ಲೋಣ ಅಂದರ ಕೆಟ್ಟ ನಾತ. ದೂರ ಹೋಗಲೇಬೇಕು. ಅಲ್ಲವಾ ?

ಚಾಂಗದೇವ ತನ್ನ ಕೈ ಮೇಲೆಕೆಳಗೆ ಮಾಡಿ ನೋಡಿಕೊಳ್ಳುತ್ತ, ಅಂಗೈಯನ್ನು ಅಗಲಮಾಡಿ, ಉಪಾಯವಿಲ್ಲದೇ ಹೇಳಿದ, ಠೀಕ್. ಹೊರಡು, ಏನು ಮಾಡೋಣ?

ಭೋಳೇ ಅಂದ. ನೀನು ಬಹಳ ಉಮದೀ ಮನುಷ್ಯ. ನಾನು ಊರೊಳಗೆ ಹೋಗಿ ವಿಷಾ ತರ್ತೀನಿ, ನೀನು ನಿನ್ನ ಈ ಪ್ರೀತಿಯ ನಾಯಿಯನ್ನ ಹೊರಗೆ ಹೊರಡಿಸು. ಊರ ಹೊರಗೆ ಕರೆದುಕೊಂಡು ಹೋಗಿ ಕೊಲ್ಲೋಣ. ಕೇಕ್ ತಗೋ ಜೊತೆಗೆ.

ಸರಿ, ನೀನು ಪರಭಾರೇ ನಾಕೇ ಕಡೆಗೆ ಬಂದುಬಿಡು. ನಾನು ಇಲ್ಲಿಂದ ನಾಯೀ ಹೊರಡಿಸಿಕೊಂಡು ಬರ್ತೀನಿ. ಕೇಕ್‌ನಲ್ಲಿ ಸರಿಯಾಗಿ ವಿಷ ಹಾಕಬಹುದು. ನೀನು ನಾಯಿಗೆ ಹೇಳಿಬಿಡು, ಬ್ರೆಡ್ ಸಿಗಲಿಲ್ಲ ಅಂದರೆ ಕೇಕ್ ತಿನ್ನು.

ನಂತರ ಭೋಳೆ ಪೇಟೆಯತ್ತ ಸಾಯಕಲ್ ತುಳಿದ. ಅಲ್ಲಿಯವರೆಗೆ ಚಾಂಗದೇವ ಅರಿವೆ ಹಾಕಿಕೊಂಡು ತಯಾರಾದ. ದಿನದಂತೆ, ಕಿಟಕಿಯಿಂದ ನಾಯಿ ಕಾಣಿಸಿಕೊಳ್ಳುತ್ತಿತ್ತು. ಚಾಂಗದೇವ ಅದಕ್ಕೆ ದಿನಾಲು ಉಳಿದ ಬ್ರೆಡ್ ಹಾಕುತ್ತಿದ್ದ. ಅದು ಈಗ ಉದ್ದ ಮುಂಗಾಲುಗಳ ಮೇಲೆ ತನ್ನ ಕೊಳೆತ ಮೋರೆಯನ್ನು ಹೊರಳಾಡಿಸುತ್ತ ಕುಳಿತಿತ್ತು. ಬಿಸಿಲು ಮತ್ತು ನಾಯಿ ಆ ರೀತಿ ಕುಳಿತದ್ದು ನೋಡಿ ಚಾಂಗದೇವನ ಮಸ್ತಕ ಕ್ಷುಬ್ಧವಾಯಿತು. ಆತ ಗಟ್ಟಿಯಾಗಿ ಹೇಳಿದ. ನಡೆ. ಇವತ್ತು ಏನಾದರೂ ಆಗಲಿ ನಿನ್ನನ್ನು ಮುಗಿಸಿ ಬಿಡ್ತೇನೆ. ಪ್ರತಿಯೊಂದು ದಿವಸ ಒಂದೇ ರೀತಿ ಯಾಕಾದರೂ ಬದಕ್ತೀಯಾ ಮಗನೇ.

ನಾಯಿ ಪಿಳಿ ಪಿಳಿ ನೋಡುತ್ತ ಅವನಿಗೆ ಜೊತೆ ನೀಡಿತು. ಮೈಗಂಟಿದ ಉಣ್ಣೆ ಕಡಿಯು ಹೋಗಿ ತಾನೇ ಗಾಯಗೊಳಿಸಿದ್ದ ಕೆಂಪು ಬಾಲವನ್ನು ಕಷ್ಟದಿಂದ ಅಲುಗಾಡಿಸಿತು.

ಆಮೇಲೆ ಬೇಕಿಯಂಥ ಆ ಬಿಸಿಲಲ್ಲಿ ಸಾಯಕಲ್ ತೆಗೆದುಕೊಂಡು ಚಾಂಗದೇವ ಹೊರಗೆ ಬಂದ. ಬಗಲ್ಲಿದ್ದ ಕೇಕ್ ನಾಯಿಗೆ ತೋರಿಸುತ್ತ ಹೇಳಿದ. ನಡೆ. ಏಳು.

ನಾಯಿ ಮೈ ಝಾಡಿಸಿ ಕೇಕ್‌ನತ್ತ ನೋಡುತ್ತ ಎದ್ದು ಅವನ ಬಳಿಗೆ ಬಂದಿತು. ಆಗ ಆತ ಕೇಕಿನ ಸಣ್ಣ ತುಣುಕನ್ನು ಅದರತ್ತ ಒಗೆದು ಉಳಿದದ್ದನ್ನು ಕೈಯಲ್ಲಿಯೇ ಇಟ್ಟುಕೊಂಡ. ನಾಯಿ ನೆಲದ ಮೇಲೆ ಬಿದ್ದ ಆ ತುಂಡನ್ನು ಮಣ್ಣುಸಹಿತ ನಾಲಿಗೆಯಿಂದ ಎತ್ತಿ ನುಂಗಿತು. ಮತ್ತು ನೋವಿನಿಂದ ಭಾರವಾದ ಬಾಲವನ್ನು ವೇಗದಿಂದ ಅಲುಗಾಡಿಸಲಿಕ್ಕೆ ಸುರುವು ಮಾಡಿತು.

ಚಾಂಗದೇವ ಒಂದು ಕೈಯಲ್ಲಿ ಕೇಕ್ ಹಿಡಿದುಕೊಂಡು ಸಾಯಕಲ್ ನಡೆಸಲು ಪ್ರಾರಂಭಮಾಡಿದ. ಕೇಕಿನ ಆಸೆಯಿಂದ ತನ್ನ ಶಕ್ತಿಯನ್ನೆಲ್ಲ ಒಟ್ಟು ಹಾಕಿ ನಾಯಿ ಅವನ ಹಿಂದೆ ಓಡಹತ್ತಿತು. ನಡು ನಡುವೆ ನೆಲ ಮೂಸಿ ನೋಡಿ ಬೇಕರಿಸಿ ಮತ್ತೆ ಸಾಯಕಲ್ಲಿನತ್ತ ಓಡುತ್ತ ಬರುತ್ತಿತ್ತು. ಅಲ್ಲಲ್ಲಿ ಉಚ್ಚೆ ಮಾಡುತ್ತಿತ್ತು. ನಂತರ ಉಚ್ಚೆ ಹೊಯ್ಯುವುದು ಕಡಿಮೆಯಾಯಿತು. ಅದು ಬಹಳ ಹಿಂದೆ ಉಳಿದಾಗ ಚಾಂಗದೇವ ನೆಲಕ್ಕೆ ಕಾಲು ಹಚ್ಚಿ ಬಿಸಿಲಿನ ತಾಪವನ್ನು ಸೋಸುತ್ತ ಹಿಂದಕ್ಕೆ ತಿರುಗಿ ಕರೆಯುತ್ತಿದ್ದ, ಅವ್, ಅವ್, ಚಲ್, ಓಡು.

ನಾಯಿ ಶಕ್ತಿಯಿಲ್ಲದಿದ್ದರೂ ಓಡುತ್ತಲೇ ಇತ್ತು. ನಾಕೆಯವರೆಗೂ ಹೀಗೆಯೆ ನಡೆಯಿತು. ನಾಕೆ ಮುಟ್ಟಿದ ನಂತರ ಕೈಯಲ್ಲಿದ್ದ ಕೇಕನ್ನು ಕಿಸೆಯಲ್ಲಿ ಹಾಕಿ ಒಂದು ಕಾಲು ನೆಲಕ್ಕೆ ಹಚ್ಚಿ ಚಾಂಗದೇವ ಸಾಯಕಲ್ ಮೇಲೆಯೆ ಉಳಿದ. ನಾಯಿ ಮರ್ಯಾದೆಯಿಂದ, ವಿಶ್ವಾಸದಿಂದ ಆಸೆ ತುಂಬಿ ಅವನನ್ನ ನೋಡುತ್ತ ಒಂದು ಬದಿಯಲ್ಲಿ ಕುಳಿತುಕೊಂಡಿತು. ಸ್ವಲ್ಪ ವೇಳೆಯಲ್ಲಿ ಭೋಳೆ ಬಂದ. ಅವರು ಮಾತಿಲ್ಲದೆ ಸಾಯಕಲ್ ನಡೆಸುತ್ತ ರಸ್ತೆ ಕೂಡಿದರು. ನಾಯಿ ಸಾವಕಾಶ ಅವರನ್ನು ಹಿಂಬಾಲಿಸಿತು. ಕದಾಚಿತ್ ಅದು ಅಷ್ಟರಲ್ಲಿ ಕೇಕ್ ಮರೆತಿರಬಹುದು ಕೂಡ : ಕೇವಲ ತನ್ನ ಹಿತಚಿಂತಕನ ಹಿಂದೆ ವಿಶ್ವಾಸದಿಂದ ಹೋಗುವದು ಇಷ್ಟೆ ವಿಚಾರ ಅದರ ತಲೆಯಲ್ಲಿ ಇದ್ದಿರಬಹುದು.

ಶಹರದ ಹದ್ದು ಹಿಂದೆ ಉಳಿದು ರೇಲ್ವೆ ಹಳಿಗಳು ಕಾಣಿಸಿಕೊಂಡವು. ಅನಂತರ ಫ್ಯಾಕ್ಟರಿಗಳ ಸಾಲುಗಳ ನಡುವಿನಿಂದ ಅವರಿಬ್ಬರೂ ಹೊರಗೆ ಬಂದರು. ಬಿಸಿಲಿನ ಝಳವನ್ನು ಮೋರೆಯ ಮೇಲೆ ತೆಗೆದುಕೊಳ್ಳುತ್ತ ಇಬ್ಬರೂ ಮುಂದೆ ಮುಂದೆ ಮತ್ತು ನಾಲ್ಕೂ ಕಾಲುಗಳನ್ನು ತಿಕ್ಕುತ್ತ ಬರುತ್ತಿರುವ ಧೂಳದ ಒಂದು ಮೋಡ ಹಿಂದೆ. ಇಷ್ಟುದ್ದ ನಾಲಿಗೆ ಚಾಚಿ ಅದು ಓಡುವ ಪ್ರಯತ್ನ ನಡೆಸಿತ್ತು. ಆದರೆ ದಣಿದಿದ್ದ ಅದಕ್ಕೆ ಇದು ಸಾಧ್ಯವಾಗುವ ಚಿಹ್ನೆ ಕಾಣಲಿಲ್ಲ. ನಾಲ್ಕು ಕಾಲುಗಳಿದ್ದದ್ದರಿಂದ ಆತ್ಮವಿಶ್ವಾಸ ಬಹಳ ಪ್ರಾಣಿಗಳಿಗೆ.

ಮುಂದೆ ಅವರಿಗೆ ಒಂದು ಕಾಲುದಾರಿ ಸಿಕ್ಕಿತು. ಸಮೀಪದಲ್ಲೆಲ್ಲ ಜಾಲಿಯ ಗಿಡಗಳು. ಒಂದು ಬದಿಗೆ

ಫ್ಯಾಕ್ಟರಿಯ ಜನರ ಸಲುವಾಗಿ ಗುಡಿಸಿಲಿನ ಹಾಟೆಲ್ಲು. ಅಲ್ಲಿ ಒಬ್ಬ ಬಾಕಿನ ಮೇಲೆ ನಿದ್ದೆಹೋಗಿದ್ದ, ಉಳಿದ ಎಲ್ಲಕಡೆಗೆ ಶೂನ್ಯ ಬಿಸಿಲು ಬಿಟ್ಟು ಮತ್ತೇನೂ ಇರಲಿಲ್ಲ.

ಭೋಳೇ ಹೇಳಿದ, ಮಾಲಕ್ ಸಾಕು ಇನ್ನು ನೀನೇನು ಕಾರಿಯುವರೆಗೆ ಕರೆದುಕೊಂಡು ಹೋಗುವನೇನು ನಾಯಿ ಕೊಲ್ಲಲಿಕ್ಕೆ?

ಚಾಂಗದೇವ ಅಂದ, ಇದನ್ನ ಕೊಲ್ಲೋದಕ್ಕಿಂತ ಅಲ್ಲಿ ಎದುರಿಗೆ ಹಳ್ಳಿ ಕಾಣ್ತದಲ್ಲ, ಅಲ್ಲಿ ಬಿಟ್ಟುಬಂದರೆ ಹ್ಯಾಗೆ?

ಭೋಳೆ ಬೇಸರದಿಂದ ನಿಂತುಕೊಂಡಿದ್ದ. ಅವನಿಗೆ ಇದು ಪಸಂದ್ ಬರಲಿಲ್ಲ. ಚಾಂಗದೇವ ಹೇಳಿದ, ನೀನು ಇಲ್ಲೇ ಹಾಟೆಲ್ಲಿನೊಳಗೆ ಇರು. ನಾನೆಲ್ಲ ಬರೋಬರಿ ಮಾಡ್ತೇನಿ.

ಭೋಳೆ ಸಿಟ್ಟಿನಿಂದಲೇ ಗುಡಿಸಿಲಿನತ್ತ ಹೊರಳಿದ. ಚಾಂಗದೇವ ನೆಟ್ಟಗೆ ಮುಂದೆ ನಡೆದ. ನಾಯಿಯೂ ಅವನ ಹಿಂದೆ ಹಿಂದೆ ಹೋಯಿತು, ಅವರು ಕಾಣದಾದರು. ಭೋಳೆ ಹಲ್ಲಲ್ಲಿ ಕಡ್ಡಿಯನ್ನು ಸಿಕ್ಕಿಸುತ್ತ ಹಾಟೆಲ್ಲಿನ ಬಾಕಿನ ಮೇಲೆ ಕುಳಿತುಕೊಂಡ. ಅರ್ಧ ಮುಕ್ಕಾಲು ಗಂಟೆಯಾಗಿರಬಹುದು, ಭೋಳೆ ನಡುನಡುವೆ ಕಾಲು ದಾರಿಯತ್ತ ಕಣ್ಣಿಟ್ಟು ಹಲ್ಲಲ್ಲಿ ಕಡ್ಡಿಯನ್ನು ತಿರುವ ಹತ್ತಿದ. ಅಷ್ಟರಲ್ಲಿ ದೂರ ಚಾಂಗದೇವ ಹೊಲದೊಳಗಿಂದ ಸಾಯಕಲ್ಲನ್ನು ಕೈಯಿಂದ ದೂಡುತ್ತ ಬರುವುದು ಕಾಣಿಸಿತು. ಧಡಬಡಿಸುತ್ತ ಅವನು ಸಾಯಕಲ್ಲಿನೊಂದಿಗೆ ಕಾಲುದಾರಿ ಸೇರಿದ. ಮತ್ತು ಬೆವರು ಸುರಿಸುತ್ತ ಜೋರಾಗಿ ಉಸಿರಾಡುತ್ತ ಭೋಳೆ ಕುಳಿತಲ್ಲಿಗೆ ಬಂದ.

ಭೋಳೆ ಬೇಸರದಿಂದ ಹೇಳಿದ. ದಮ್ಮು ಹತ್ತುವಷ್ಟು ಏನೂ ಮಾಡಬೇಡಾಂತ. ಡಾಕ್ಟರು ಹೇಳಿಲ್ಲೇನಪ್ಪಾ.

ಚಾಂಗದೇವ ಉಸಿರು ತೆಗೆದುಕೊಳ್ಳುತ್ತ ಹೇಳಿದ, ಆ ಹಾಳಾದ್ದನ್ನ ಬಿಟ್ಟು ಬಂದೆ. ಅಲ್ಲಿ ನಾಯಿ ಅದನ್ನ ಮುತ್ತಿಬಿಟ್ಟವು. ಸೊಟ್ಟ ಸೊಟ್ಟ ಗಲ್ಲಿಗಳೊಳಗಿಂದ ಪಾರಾಗ್ತ ತಿಪ್ಪೆಗಳ ನಡುವಿನಿಂದ ತಪ್ಪಿಸಿಕೊಂಡು ನಾನು ಬಂದುಬಿಟ್ಟೆ. ಒಳ್ಳೇದಾಯಿತು. ಹುಚ್ಚುಚ್ಚಾರ ಮಾಡಿ ಕೊಲ್ಲೋದಕ್ಕಿಂತ.

ಅಂದರೆ. ನೀನು ಇಲ್ಲೀ ಜನರನ್ನ ಕಡಿಯಲಿ ಅಂತ ಆ ನಾಯಿ ಬಿಟ್ಟುಬಂದೆಯಾ? ಉಪಯೋಗ ಏನಾಯ್ತು ಬಿಟ್ಟು?

ಸ್ವಲ್ಪ ಹೊತ್ತಿನಲ್ಲಿ ಭೋಳೆ ಕಾಲುದಾರಿಯತ್ತ ಸಂಶಯಾಸ್ಪದ ನೋಡುತ್ತ ಎದ್ದು ಹೇಳಿದ. ನೋಡು, ಇಲ್ಲಿ ಬಾ. ನೋಡು. ತಿರುಗಿ ಬಂದುಬಿಟ್ಟಿತು ಅದು.

ಚಾಂಗದೇವ ನೋಡಿದ. ನಾಯಿ ಸಾವಕಾಶ ಬಿಸಿಲಿನೊಳಗಿಂದ ಸರಿಯಾಗಿ ರಸ್ತೆ ಹುಡುಕಿಕೊಂಡು ತಿರುಗಿ ಬರುತ್ತಿತ್ತು. ಭೂತದಂತೆ ಕಾಣುತ್ತಿತ್ತು ಅದು ಈಗ. ನಂತರ .ಮೊದಲೇ ನಿಶ್ಚಯಿಸಿದಂತೆ, ಅದು ಅಲ್ಲಿಗೇ ಬಂದು ದಮ್ಮು ಆರಿಸಿಕೊಳ್ಳುತ್ತ ಚಾಂಗದೇವನ ಕಡೆಗೆ ದೃಷ್ಟಿಯಿಟ್ಟು ಸಮಾಧಾನದಿಂದ ಕುಳಿತುಕೊಂಡಿತ್ತು.

ಭೋಳೆ ಹೇಳಿದ, ತೆಗೆ ಆ ಕೇಕ್, ನಿನಗೆ ಸಾಧಿಸೋದಿಲ್ಲ ಇದು.

ನಂತರ ಆತ ಚಾಂಗದೇವನಿಂದ ಕೇಕ್ ತೆಗೆದುಕೊಂಡು ಒಳಗೆ ಹೋಗಿ ಕಿಸೆಯೊಳಗಿದ್ದ ಪುಡಿಕೆಯನ್ನು ಬಿಚ್ಚಿ ಗಪ್‌ಚುಪ್ ಕೇಕಿನಲ್ಲಿ ವಿಷ ತುಂಬಿದ. ಹೊರಗೆ ಬಂದು ನಾಯಿಯೆದುರು ಕೇಕ್ ಇಡುತ್ತಾ ಹೇಳಿದ. ಈಗ ನೋಡು.

ದಣಿದು ಹೋಗಿದ್ದ ಟೊಂಕವನ್ನು ಕಷ್ಟದಿಂದ ಎತ್ತುತ್ತ ನಾಯಿ ಕೇಕಿದ್ದಲ್ಲಿಗೆ ಮೋತಿಯನ್ನು ಒಯ್ದಿತು. ಸ್ವಲ್ಪ ಮೂಸಿ ನೋಡಿ ಮೋರೆಯ ಮೇಲೆ ಸಂಶಯ ತೋರಿಸುತ್ತ ನಾಲಿಗೆಯಿಂದ ಕೂಡ ಮುಟ್ಟದೆ ತಿರುಗಿ ತನ್ನ ಸ್ಥಳಕ್ಕೆ ಹೋಗಿ ಉದ್ದ ನಾಲಿಗೆ ಚಾಚಿ ಚಾಂಗದೇವನನ್ನು ನೋಡುತ್ತ ಕುಳಿತುಬಿಟ್ಟಿತು. ಈಗ ಮಾತ್ರ ಭೋಳೆ ಪೂರಾ ಖಲಾಸ್ ಆದ. ಹೇಳಿದ, ಹೊರಗೆ ಒಂದು ಕಣ ಕೂಡಾ ಕಾಣಿಸದ್ಹಾಂಗ ವಿಷ ತುಂಬೇನಿ. ನೋಡು ಈ ಪ್ರಾಣಿಗಳಿಗಾದರೂ ಎಷ್ಟು ಬುದ್ಧಿ ಇರತದ. ಚಾಂಗದೇವ ರಾವ್ ನೀನೇ ಹಾಕಪ್ಪಾ. ನಿನ್ನ ಕೈಯಿಂದಲೇ ತಿಂದೀತು ಇದು. ಏಳು.

ಚಾಂಗದೇವ ಹೇಳಿದ, ಹೀಂಗ ಅದಕ್ಕೆ ಮೋಸ ಮಾಡೋದು ಮನುಷ್ಯತ್ವಕ್ಕೆ ಸರಿಹೋಗೋದಿಲ್ಲ. ಅದರ ವಿಶ್ವಾಸಘಾತ ಮಾಡೋದು ಬರೋಬರಿ ಅಲ್ಲ.

ಮತ್ತೇನು, ಮನೆಗೆ ಕರೆದುಕೊಂಡು ಹೋಗಬೇಕಂತೀ ಏನು ಇದನ್ನ?

ಕೊಲ್ಲಬೇಕಲ್ಲ ಇದನ್ನ? ಈಗ ನೋಡು. ನಾವು ಮನುಷ್ಯರೇ ಅಂದಮೇಲೆ ಏನಾದರೂ ಕ್ರೂರ ಕೆಲಸ ಮಾಡಬಲ್ಲೆವು. ನಮ್ಮ ಕೈಗಳನ್ನೇ ನೋಡು. ಗೆರೆಗಳೆಲ್ಲ ಸೇರಿ ಈ ಕಡೆಯಿಂದ ಅಂಗೈ ಅದ್ಭುತ ಕಾಣಿಸ್ತದ. ಆದರೆ ಹಿಂದಿನಿಂದ ನೋಡು, ಎಷ್ಟು ಹಿಂಸ್ರ ಅನಿಸ್ತದ. ಇದು ಮನುಷ್ಯನ ಹಿಂಸ್ರತೆಯ ಚಿಹ್ನ. ಮಾನವತೆಯ ಇತಿಹಾಸ ಇದು. ಮುಂಗೈ. ಕ್ರೌರ್ಯ.

ಹೀಗೆ ಮಾತಾಡುತ್ತ ಕೈ ಅತ್ತಿಂದಿತ್ತ ಹೊರಳಿಸುತ್ತ ಆತ ಎದ್ದುನಿಂತ. ಬದಿಗೆ ಬಿದ್ದಿದ್ದ ಕಟ್ಟಿಗೆಯನ್ನು

ಅಚಾನಕವಾಗಿ ಎತ್ತಿಕೊಂಡು ಎರಡೂ ಕೈಗಳಿಂದ ಅದನ್ನು ಸಂಭಾಳಿಸುತ್ತ ನಾಯಿಯ ಹತ್ತಿರಬಂದ. ಅದು ಈಗ ಪೂರಾ ದಣಿದಿತ್ತು. ಗ್ಲಾನಿಯಲ್ಲಿದ್ದಂತಿತ್ತು. ಆತ ಕಟ್ಟಿಗೆ ಹಿಡಿದುಕೊಂಡು ಬರುವುದನ್ನು ನೋಡಿ ಗಡಬಡಿಸಿ ಎದ್ದಿತು, ಮತ್ತು ಎರಡು ಹೆಜ್ಜೆ ಹಿಂದೆ ಸರಿಯಿತು. ಆಗ ಆತ ಸಿಟ್ಟಿನಿಂದ ಹಲ್ಲು ಕಡಿಯುತ್ತ ಕಟ್ಟಿಗೆಯನ್ನು ತಲೆಯ ಮೇಲೆತ್ತಿ ತಿರುವುತ್ತ ನಾಯಿಯ ಬೆನ್ನ ಮೇಲೆ ಇಕ್ಕರಿಸಿದ. ಮೊದಲನೆ ಹೊಡೆತಕ್ಕೆ ನಾಯಿ ಭಯಂಕರ ಒಡಕುದನಿ ತೆಗೆದು ಗಿರಕಿ ಹೊಡೆಯುತ್ತ ಓಡಹತ್ತಿತು. ಎರಡನೇ ಹೊಡೆತಕ್ಕೆ ತನ್ನ ಸುತ್ತಲೇ ತಿರುಗುತ್ತ ಕುಪ್ಪಳಿಸಿತು. ಬಾಯಿಯಲ್ಲಿ ಬುರುಗು. ಆಗ ಆತ ಪ್ರಚಂಡ ಕಲ್ಲೊಂದನ್ನು ಎತ್ತಿ ಅದರ ತಲೆಯ ಮೇಲೆ ಹಾಕಿದ. ಕೈಕಾಲು ಅಲ್ಲಾಡಿಸುತ್ತ ನಾಯಿ ಉರುಳಿತು. ಕಣ್ಣು ತೆರೆದಿಟ್ಟು ಶಾಂತವಾಯಿತು. ಆಗ ಆತ ಉಗುಳಿ ಅಲ್ಲಿಂದ ತಿರುಗಿದ ಮತ್ತು ಭೋಳೇನಿಗೆ ಹಕ್ಕಿನಿಂದ ಹೇಳಿದ, ಆಯಿತೋ?

ಭೋಳೆ ಚಕಿತನಾಗಿ ನಿಂತುಬಿಟ್ಟಿದ್ದ. ಅವನ ಕಾಲು ಹಿಡಿದು ಆತ ಹೇಳಿದ, ನೀನು ಮಾಡಿದ್ದೇ ಸರಿಯಪ್ಪ. ನೀನೇ ನನ್ನ ಗುರು. ಭಯಂಕರ ಇದ್ದೀ ನೀನು. ಚಾಂಗ–ದೇವ್ರೋ ಗುರು ಮಾಪ್ರಲೀ.

ಈ ವಿಚಿತ್ರ ಗೊಂದಲದಿಂದಾಗಿ ಇಷ್ಟೊತ್ತಿಗೆ ಎದ್ದು ಕುಳಿತಿದ್ದ ಹಾಟೆಲ್ಲು ನಡೆಸುವ ಮನುಷ್ಯ ಹೇಳಿದ, ಸಾ! ಏನ್ ಜೋರಿಲೆ ಕೆಡವಿದೆಯಪಾ, ಇದಕ್ಕಂತಾರ ಮುಸಷ್ಟಾ ಅಂತ. ಛಾ ಮಾಡಲೇನ?

ಉಗುಳು ಹೊರಗೆ ಹಾಕುತ್ತ ಭೋಳೆ ಹೇಳಿದ, ಚಹಾ? ಛೇ, ಛೇ ಇನ್ನು ಎರಡು ದಿವಸ ಊಟ ಹೋಗೋದಿಲ್ಲ. ಈಗ ಚಹಾ ಹ್ಯಾಗೆ ತಗೊಳ್ಳೋದು? ನನಗಂತೂ ವಾಕರಿಕೆ, ಮಳ ಮಳಾ ಅನ್ನತದ.

ಚಾಂಗದೇವ ಜೋರು ಜೋರು ಶ್ವಾಸ ತೆಗೆದುಕೊಳ್ಳುತ್ತ ಹೇಳಿದ, ಊಟ ನೀರು ಯಾಕೆ ಬೇಡ? ಇದು ಸಾಯೋದಕ್ಕೂ ನೀನು ಉಣ್ಣೋದಕ್ಕೂ ಯಾವ ವೈಜ್ಞಾನಿಕ ಸಂಬಂಧ?

ಶರಣುಹೋದವನಂತೆ ಭೋಳೆ ಹೇಳಿದ, ಎಂಥದೋ ಸಂಬಂಧ ಇದೆ ಗುರುಮಹಾರಾಜ್.

ಜಗತ್ತಿನೊಂದಿಗೆ ಜೀವ ಇಷ್ಟೊಂದು ಹೊಂದಿಕೊಂಡಿರತದಲ್ಲ. ಈ ಸಂಬಂಧವನ್ನ ಹಿಂಸೆಯಿಂದ ಇಲ್ಲದಂತೆ ಮಾಡೋದು ನೀಚತನ. ಇದು ನಿನಗೆ ತಿಳಿದದ ಅಂತನ ನಿನ್ನ ಜೀವಾನೂ ನಿನ್ನ ಜೊತೆಗೆ ಯುದ್ಧಕ್ಕೆ ನಿಂತಿತ್ತು. ಈಗ ಈ ಪ್ರಕಾರ ಸಂಪೂರ್ಣ ಮರೆತುಬಿಡೋತನಕ ಜೀವ ಮತ್ತು ನಿನ್ನ ಶರೀರ ಇವುಗಳೊಳಗೆ ಶತ್ರುತ್ವ ಉಳಿಯೋದೇ.

ನಂತರ ಇಬ್ಬರೂ ಬಿಸಿಲನ್ನು ಕತ್ತರಿಸುತ್ತ ಸಾಯಕಲ್ಲೇರಿ ತಿರುಗಿ ಬಂದರು. ಬಂದ ಕೂಡಲೇ ಭೋಳೇನಿಗೆ ಪ್ರಚಂಡ ವಾಕರಿಕೆ. ಎರಡು ದಿವಸ ಊಟ ಮುಟ್ಟಲಿಲ್ಲ. ಚಾಂಗದೇವ ಕೂಟಿಯಲ್ಲಿ ಎರಡೆರಡು ದಿವಸ ಊಟ ಮಾಡುತ್ತಿರಲಿಲ್ಲ. ಊಟ ನಿಲ್ಲಿಸಿದರೆ ಆಧ್ಯಾತ್ಮಿಕ ಭಾವನೆ ಬರ್ತದೆ ಅಂತ ಆತ ಹೇಳ್ತಿದ್ದ.

ಅಷ್ಟರಲ್ಲಿ ಊರೊಳಗೆ ಒಮ್ಮಿಂದೊಮ್ಮೆಲೆ ದಂಗೆ ಸುರುವಾಯಿತು. ಇಷ್ಟು ಭಯಂಕರ ಬಿಸಿಲು ಏರಿದ ಮೇಲೆ ಎಲ್ಲರ ತಲೆ ಕಾಯುವುದೇ. ಮತ್ತೆ ಎಂದಿನಂತೆ ದಂಗೆ.

ಆ ದಿವಸ ಒಮ್ಮಿಂದೊಮ್ಮೆಲೆ ಎಲ್ಲಾ ಕಡೆಗೂ ಓಡಾಟ ಕೇಳಿಸಿತು. ರಸ್ತೆಯ ಮೇಲೆ ತುಂಬು ವೇಗದಲ್ಲಿ ಮೋಟಾರು, ರಿಕ್ಷಾ ಓಡಹತ್ತಿದವು. ಪೋಪಳೆ ಬಂಗಲೆಯೊಳಗಿದ್ದ ಎಲ್ಲ ಜನ ಗಲಿಬಿಲಿ ಮಾಡುತ್ತ ಎದ್ದರು. ಧಡಾ ಧಡಾ ಬಾಗಿಲು ಜಡಿದ ಸಪ್ಪಳ. ಪೋಫಳೇ ಹೊರಬಾಗಿಲಿಗೆ ಕೀಲಿ ಹಾಕಿಬಿಟ್ಟರು. ಅಷ್ಟರಲ್ಲೇ ಒಬ್ಬ ಗೃಹಸ್ಥ ಬಾಗಿಲಿನ ಮೇಲಿನಿಂದ ಒಳಗೆ ಹಾರಿ ಆಶ್ರಯ ಬೇಡಹತ್ತಿದ. ಊರೊಳಗೆ ಮುಸಲ್ಮಾನರ ಓಣಿಗಳಲ್ಲಿ ಒಮ್ಮೆಲೆ ಬಡಿದಾಟ ಸುರುವಾಗಿದೆಯೆಂದು ಅವನು ಹೇಳುತ್ತಿದ್ದ. ಪೋಫಳೆ ಒಳಬಾಗಿಲನ್ನು ತೆರೆದು ಅವನನ್ನು ಸಂಶಯದಿಂದಲೆ ಒಳಗೆ ಕರೆದುಕೊಂಡ. ಹೆದರಿಕೆಯಿಂದ ಎಲ್ಲರೂ ಗಟ್ಟಿಯಮೇಲೆ ಹೋದರು. ಆ ಗೃಹಸ್ಥ ಊರೊಳಗಿನ ಒಂದು ವಸತೀ ಕಡೆಗೆ ಬೊಟ್ಟುಮಾಡಿ ತೋರಿಸುತ್ತ ಹೇಳಿದ, ಅಲ್ಲಿ ಎಲ್ಲಾ ಗುಂಪು ಜಮಾ ಆಗಿದ್ದಾವೆ. ಒಬ್ಬ ಮುಸಲ್ಮಾನ ಆಕಳ ಕೊಯ್ದ. ಮುಸಲ್ಮಾನ ಗೂಂಡಾಗಳು ಮನೆ ಮನೆ ಹೊಕ್ಕು ಹಿಂದೂಗಳನ್ನು ಹೊಡೆಯತಾ ಇದ್ದಾರೆ. ಕಯಾಮತಕೀ ರಾತ!

ಸ್ವಲ್ಪ ಹೊತ್ತಿನಲ್ಲಿ ಆ ವಸತಿಯಿಂದ ಹೊಗೆಯ ತೆರೆಗಳು ಮೇಲೆ ಬರಹತ್ತಿದವು. ಆ ಗೃಹಸ್ಥ ಹೇಳಿದ, ಮುಸಲ್ಮಾನ ವಸತಿಗೆ ಉರಿ ಹತ್ತೇದ, ಅರಿವೆ ಅಂಗಡಿ ಸಾಲಿಗೇನೇ ಉರಿ ಹತ್ತಿರಬೇಕು. ಶಾಬಾಸ್, ಆ ದೇಶ ದ್ರೋಹಿಗಳ ಗತಿ ಹೀಗೇ ಆಗ್ಬೇಕು.

ಗಟ್ಟಿಯ ಮೇಲೆ ಬರುತ್ತ ಪೋಫಳೇ ಹೇಳಿದರು, ಪೋಲೀಸ್ ಚೌಕಿಗಳೆಲ್ಲ ಎಂಗೇಜ್ಡ್, ಎಲ್ಲೂ ಫೋನ್ ಹತ್ತ

ವಲ್ಲದು. ನಮ್ಮದೇ ಒಂದು ಮನೆ ಬಾಜೂಕ್ಕದ. ಮಗ್ಗುಲಿನ ವಸ್ತೀ ಜನ ಬಂದರೆ ಐದು ಮಿನಿಟಿನೊಳಗೆ ಹೆಣಾ ಬೀಳ್ತಾವ.

ಸೆರಗನ್ನು ಕಣ್ಣುಗಳತ್ತ ಒಯ್ದು ಕೆಳಗಿಳಿಯುತ್ತ ಪೋಫಳೀಬಾಯಿ ಹೇಳಿದಳು, ದೇವಾ ನಿನಗ ಒಂದು ಲಕ್ಷ ಬಿಲ್ಪತ್ರಿ ಏರಸ್ತೀನಿ, ನಮ್ಮನ್ನುಳಿಸು. ಶುಭಾ ದೇವರ್ನ ನೀರಿನೊಳಗಿಡು. ಪರಮೇಶ್ವರಾ!

ಊರೊಳಗಿನಿಂದ ಗಲಿಬಿಲಿ ಕೇಳಬರುತ್ತಿತ್ತು. ನಂತರ ಕತ್ತಲೆಯಾಗುತ್ತ ಹೋದಹಾಗೆ ಬೇರೆ ಬೇರೆ ಸ್ಥಳಗಳು ಉರಿಯಹತ್ತಿದವು. ಎಲ್ಲರೂ ನಡುಗಿಹೋದರು. ಊರೊಳಗಿನಿಂದ ಬಂದೂಕು ಹಾರಿಸಿದ ಆವಾಜು. ನಡುವೆಯೆ ಪೋಲೀಸ್ ಗಾಡಿಗಳು ಭರಭರಾಟಿಯಲ್ಲಿ ಹೊರಟಿದ್ದವು. ಅಲ್ಲದೆ ದೂರದಿಂದ ಕೇಳಬರುತ್ತಿದ್ದ ಕೋಲಾಹಲ. ಬಂಗಲೆಯಲ್ಲಿ ಯಾರೂ ದೀಪ ಹಚ್ಚಿರಲಿಲ್ಲ. ಬಂಗಲೆಯ ಎಲ್ಲ ಬಾಗಿಲುಗಳನ್ನೂ ಬಂದುಮಾಡಿ ಪೋಫಳೆಯವರು ಎಲ್ಲರಿಗೂ ಬಡಿಗೆ, ಈಳಿಗೆ, ಚಾಕೂ ತೆಗೆದುಕೊಂಡು ತಮ್ಮ ಕಡೆಗೆಯೆ ಬಂದು ಕೂಡಲಿಕ್ಕೆ ಹೇಳಿದರು, ಮತ್ತು ಎಂದಿನಂತೆ ಜಾತೀಯ ಹರಟೆ ಸುರುವು ಮಾಡಿದರು. ಈಗ ಚಾಂಗದೇವನಿಗೆ ಅದರಲ್ಲಿ ಯಾವ ಆಸ್ಥೆಯೂ ಉಳಿದಿರಲಿಲ್ಲ. ಎಲ್ಲವೂ ಎಂದಿನಂತೆಯೇ ನಡೆದಿತ್ತು. ಇಡೀ ರಾತ್ರಿ ಯಾರೂ ಮಲಗಲಿಲ್ಲ. ಗಾಳಿಗೆ ಏನು ಸಪ್ಪಳವಾದರೂ ಎಲ್ಲರೂ ಹೆದರಿ ಎದ್ದು ಕೂಡುತ್ತಿದ್ದರು.

ಆ ನಂತರ ಎಂದಿನಂತೆ ಶುಷ್ಕ, ಸುಳ್ಳು ಹರಟೆ. ಸತ್ತವರ ಹಕೀಕತ್ತು. ಸುಳ್ಳುಸುದ್ದಿ. ಅಶುದ್ಧ ವಾತಾವರಣ. ಎಂಟು ದಿವಸ ಕರ್ಫ್ಯೂ ಕಾಯಮ್ಮಾಗಿತ್ತು. ಹಾಟೆಲ್ಲು, ಖಾನಾವಳಿಗಳು ಬೇಮುದ್ದತ ಬಂದಾಗಿದ್ದವು. ಹಾಲಿನವನದೂ ಬಂದ್. ಮನೆಯಲ್ಲಿ ಕುಡಿಯಲಿಕ್ಕೆ, ತಿನ್ನಲಿಕ್ಕೆ ಏನೂ ಇರಲಿಲ್ಲ. ಗೋಧಿ, ಜೋಳ ಬೇಯಿಸಿ ಗುಗ್ಗರಿ ಊಟ ನಡೆದಿತ್ತು. ಭೋಳೆ ಆಗ್ರಹ ಮಾಡಿದಾಗ ಚಾಂಗದೇವ ಸ್ವಲ್ಪ ಉಣ್ಣುತ್ತಿದ್ದ. ಉಳಿದಾಗೆಲ್ಲ ಪ್ರಖರ ಉಪವಾಸ. ನಂತರ ಕರ್ಫ್ಯೂ ಸ್ವಲ್ಪ ಸ್ವಲ್ಪ ಸಡಿಲಾದರೂ ಬರೀ ಊಟಕ್ಕೆಂದು ಹೊರಗೆ ಹೋಗುವುದನ್ನು ತಪ್ಪಿಸಿ ಚಾಂಗದೇವ ಮನೆಯಲ್ಲೇ ಬಿದ್ದಿರುತ್ತಿದ್ದ. ಸಾವಕಾಶ ಊರಲ್ಲಿ ಎಲ್ಲವೂ ಮತ್ತೆ ಸುರಳೀತವಾಯಿತು.

ನಂತರ ಬೇಸಿಗೆ ದಿವಸ ದಿವಸಕ್ಕೆ ಬೆಳೆಯುತ್ತ ಹೋದ ಹಾಗೆ ಚಾಂಗದೇವ ಹೆಚ್ಚು ಹೆಚ್ಚು ಅಸ್ವಸ್ಥನಾಗುತ್ತ ನಡೆದ. ಮತ್ತೆ ಆ ಸ್ತಬ್ಧ ಕಬ್ಬಿಣ ಮಧ್ಯಾಹ್ನ ಮಿಂಚಹತ್ತಿತು. ವಸ್ತುಗಳು ತಮ್ಮ ಅರ್ಥವನ್ನು ಕಳೆದುಕೊಂಡವು. ಏಕಾಕಿತನದಿಂದಾಗಿ ವಾತಾವರಣದಲ್ಲಿ ಆಘಾತಗಳೆತ್ತಿಳಿವು. ಬರೀ ಹೊಟ್ಟೆ ನಿರುತ್ಸಾಹ. ಕಾಟು, ತಲೆದಿಂಬು, ಛತ್ತು, ಒಂದೇ ಸವನೆ ಹರಿಯುತ್ತಿದ್ದ ರಾತ್ರಿ ಮತ್ತು ದಿವಸಗಳನ್ನು ಒರೆಸಿ ಒಗೆಯುವ ಕಾಲದ ಅಜಸ್ರ ಸ್ರೋತ: ಮಧ್ಯಾಹ್ನ ಉರಿಬಿಸಿಲಲ್ಲೇ ಒಬ್ಬನೇ ಹೊರಗೆ ಹೋಗಿ ರಸ್ತೆ ತುಳಿಯುತ್ತ ತಿರುಗಿ ಕಾಲು ನೋಯಿಸಿಕೊಳ್ಳುವುದು. ಅತ್ತಿತ್ತ ತಿರುಗಾಡಿ ಮತ್ತೆ ಅದೇ ರಸ್ತೆ ಹಿಡಿದು ಮತ್ತೆ ಮನೆ. ಬೆಳದಿಂಗಳಲ್ಲಿ ಆಲದ ಮರಗಳ ಕೆಳಗೆ ಸರಿಯುತ್ತ ಮನೆಯೆದುರಿಗೆ. ಮತ್ತೆ ಕತ್ತಲಲ್ಲಿ ಕೀಲಿ ಹುಡುಕುತ್ತ ಒಳಗೆ; ಜೇಬಿನಲ್ಲಿನ ಒಂದೊಂದೆ ವಸ್ತುವನ್ನು ಹೊರತೆಗೆದು ಅರಿವೆ ಕಳಚಿ ಕೊನೆಗೆ ಶರೀರವನ್ನೂ ಕಳಚಲಾಗುವುದಿಲ್ಲವಲ್ಲ ಎಂಬ ಅರಿವು. ನಿವ್ವಳ ಸಂವೇದನೆಯ ವ್ಯಥೆಯನ್ನು ಮನಸ್ಸಿನಲ್ಲಿ ಕುದಿಸುತ್ತ ಮನಸ್ಸಿನ ಸುತ್ತಲೂ ದಶದಿಕ್ಕುಗಳಲ್ಲಿ ಅದನ್ನು ಚೆಲ್ಲುತ್ತ ಸಂಪೂರ್ಣ ಅನಾಕಾರನಾಗುತ್ತ ಆಕಾಶದಲ್ಲಿ ರೂಪಾಂತರ ಹೊಂದುತ್ತ ಹೋಗುವುದು.

ಒಮ್ಮೊಮ್ಮೆ ಬಾಗಿಲಿನ ಹೊರಗೆ ಮೆಟ್ಟಿಲಿನ ಮೇಲೆ ಕುಳಿತು ಆಕಾಶಕ್ಕೆ ಹುಚ್ಚು ಹಿಡಿಸುವ ತಾರೆಗಳನ್ನು ಅವಲೋಕಿಸುತ್ತ ರಾತ್ರಿ ಕಳೆಯುವದು; ಶರೀರ ಮತ್ತು ಮನಸ್ಸುಗಳಿಗೆ ಯಾವ ಥರದ ಆಕಾಂಕ್ಷೆಗಳ ಜಯಮಾಲೆ ಇಲ್ಲ ಎಂಬ ವೇದನೆಯಿಂದ ಒಳಗಿಂದೊಳಗೆಯೇ ಕುಸಿದು ಬೀಳುವ ಅಜ್ಞೇಯ ಝುರಿಗಳು.

ಒಮ್ಮೆ ಮಧ್ಯಾಹ್ನದ ನಂತರ ಊರ ಹೊರಗೆ ಹುಲ್ಲು ಗದ್ದೆ ತುಳಿಯುತ್ತ ನಡೆದು ಹೋದ. ನಡೆಯುತ್ತ ಟೂರಿಸ್ಟ್ ಹಾಟೆಲ್ಲಿನ ಹಿಂದಿನ ನಾಲೆಯಿಂದ ರೋಶನ್ ಬಾಗಿಗೆ ಬಂದ. ಬಾಗಿನ ಕೊನೆಯ ತುದಿಯನ್ನು ನೋಡಬೇಕು ಎಂದು ಗುಡ್ಡದವರೆಗೂ ಬಂದು ಮುಟ್ಟಿದ. ಅಲ್ಲಿ ಅಡ್ಡ ಹೊರಳಿ ಮತ್ತೆ ತಿರುಗಿ ಇನ್ನೊಂದು ತುದಿಯವರೆಗೆ, ಎಲ್ಲ ಕಡೆಗೂ ಹುಲ್ಲು, ಕಂಟಿಗಳು, ನಡು ನಡುವೆ ಪ್ರಚಂಡ ಇರುವೆ-ಹುತ್ತ' ಪಕ್ಷಿ. ಮಧ್ಯೆ ಹಿಂದೆ ಎಂದೋ ಬೆಳೆಸಿದ ದಟ್ಟ ಜಂಗಲ್—ಇವೆಲ್ಲ ಅವನ ಮನಸ್ಸನ್ನು ತುಂಬಹತ್ತಿದಾಗ ಅವನಿಗೆ ಒಮ್ಮಿಂದೊಮ್ಮೆ ಆನಂದದ ಅನುಭವವಾಗ ತೊಡಗಿತು. ಗಿಡಗಳ ನಡುವಿನಿಂದ ಹೊಳೆಯುತ್ತಿದ್ದ ಸೂರ್ಯಪ್ರಕಾಶವನ್ನು ನೋಡುತ್ತಿದ್ದಂತೆ ಅವನಿಗೆ ಎನಿಸಿತು. ಈ ಜಗತ್ತು ಸ್ವಚ್ಛವಿದೆ, ಆಕಾಶ ಸ್ವಚ್ಛವಿದೆ. ಪಕ್ಷಿಗಳು ಸ್ವಚ್ಛವಿವೆ. 'ಆನಂದೋತ್ಸವ' ಮಾಡು. ಯಾಕೆಂದರೆ.

ಅದನ್ನು ಬಿಟ್ಟರೆ ನಿನಗೆ ಗತ್ಯಂತರವಿಲ್ಲ. ಇದೆಲ್ಲ ಒಳ್ಳೆಯದೇ ಇದೆ, ಅದನ್ನು ಸ್ವೀಕರಿಸು. ಎಲ್ಲ ಆನಂದ ನಿನ್ನ ಕಡೆಗೆಯೇ ಹರಿದು ಬರುತ್ತಿದೆ. ಆನಂದದ ಬುಗ್ಗೆಗಳು ತೆರೆಗಳು ಬಂದಂತೆ ಸಹಜವಾಗಿ ಮೇಲೆ ಉಕ್ಕಿದವು ಮತ್ತು ಅವನಿಗೆ ಸವಿಯಾದ ಗುಂಗು ಹತ್ತಿತು.

ಅವನು ಎದ್ದಾಗ ಸಂಜೆಯಾಗಿಹೋಗಿತ್ತು, ಪ್ರೇಮದಿಂದ ಎದೆತುಂಬಿ ಗಿಡಗಳು ಮೇಲಿನಿಂದ ಕೆಳತನಕ ತೂಗಾಡುತ್ತಿದ್ದವು.

ಆಮೇಲೆ ರಸ್ತೆ ಎಲ್ಲಿರಬೇಕು ಎಂದು ಅಂದಾಜು ತೆಗೆಯುತ್ತ ಆತ ಎಲ್ಲಿಯೋ ನಡೆದ. ದೂರದಲ್ಲಿ, ತೋಟದ ಮೂಲೆಯಿಂದ ಹುಡುಗರು ಆಡುವ ಸುಂದರ ಶಬ್ದ ಕೇಳಿಬಂತು. ಆತ ಆ ಕಡೆಗೆ ಹೊರಳಿದ, ಎದುರಿಗೆ ಪಕ್ಷಿಗಳ ಪಂಜರಗಳ ಸಾಲು. ಅವುಗಳ ಕಲಕಲ. ನಂತರ ಮಂಗಗಳ ಪಂಜರಗಳು. ಹುಡುಗರತ್ತ ನೋಡುತ್ತ ಚಿಕ್ಕ ಚಿಕ್ಕ ಮಂಗಗಳು ಗಮ್ಮತ್ತು ನಡೆಸಿದ್ದವು. ಮುಂದೆ ದೊಡ್ಡ, ಎದ್ದು ಕಾಣುವ ಮುದ್ರೆಗಳುಳ್ಳ ಚಲೋ ಚಿರತೆ ಮುಂಗಾಲೊಂದರ ಮೇಲೆ ತಲೆಯಿಟ್ಟು ಮನುಷ್ಯನಂತೆ ಹುಲ್ಲಿನ ಮೇಲೆ ಆರಾಮಾಗಿ ಬಿದ್ದುಕೊಂಡಿತ್ತು, ಮತ್ತೊಂದು ಚಿರತೆ ಮೇಲಿಂದ ಮೇಲೆ ಕೆಂಪು ದವಡೆಗಳನ್ನು ತೆರೆದು ಗಂಟಲಲ್ಲಿ ಏನೋ ಸಿಕ್ಕಿಕೊಂಡಂತೆ ಖೇಕರಿಸುತ್ತಿತ್ತು, ಮುಂದೆ ಚಿಗರಿಗಳ ಉದ್ದುದ್ದ ಚಾಳಿಗೆ ಮನೆಗಳು. ನಂತರ ಸಾಕಷ್ಟು ನಡೆದ ಮೇಲೆ ಒಂದೆರಡು ಗಟ್ಟಿಮುಟ್ಟಾದ ಖಾಲೀ ಪಂಜರಗಳು. ಅದಕ್ಕೂ ಮುಂದೆ ಸುಂದರ ಕರೀ ಪಟ್ಟೆಗಳ ಹುಲಿ ಅತ್ತಿಂದಿತ್ತ ಸುಮ್ಮನೆ ಅಡ್ಡಾಡುತ್ತಿದೆ. ನಂತರ ಪೂರ್ಣ ನಿದ್ರೆಯಲ್ಲಿದ್ದ ಇನ್ನೊಂದು ಹುಲಿ, ಅದರ ಬಾಯಿ ಸುತ್ತ ನೊಣಗಳು ಕೂಡುವುದು ಏಳುವುದು ನಡೆಸಿದ್ದವು.

ಅಲ್ಲಿಯೇ ಮೂಲೆಯಲ್ಲಿ ಗಿಡದ ಕೆಳಗೆ ಬೀಡಿ ಸೇದುತ್ತ ಕುಳಿತಿದ್ದ ನೌಕರನನ್ನು ಆತ ಕೇಳಿದ. ಈ ಹುಲಿ ಇಷ್ಟ್ಯಾಕೆ ಸೊರಗಿದ್ದಾವೆ? ಅನುಕೂಲ ಇದ್ದೆ ಇದೆ, ಇವನ್ನ ಇಲ್ಲಿ ಯಾಕೆ ಇಡ್ತೀರಿ?

ಆ ನೌಕರನ ಸಮೀಪದಲ್ಲಿ ಒಬ್ಬ ಕಸ ಗುಡಿಸುವಾಕೆಯೂ ಬೀಡಿ ಸೇದುತ್ತ ಕುಳಿತಿದ್ದಳು. ಆ ಹೆಂಗಸು ಚಾಂಗದೇವನನ್ನು ನೋಡಿ ಹೇಳಿದಳು. ಈ ಬಾಡಖೋಗಳು ಎರಡು ಆಗಲೇ ಕೊಂದಾರ. ಇವನ್ನೂ ಕೊಲ್ಲತಾರ ಈಗ. ದಿನಾ ಮುನಿಸೀಪಾಲ್ಟಿಯವರು ನಾಲ್ಕು ಕಿಲೋ ಮಟನ್ ಕೊಡತಾರ. ಅದನ್ನ ಈ ಸಿಪಾಯಿಗೋಳು ಮನೀಗೆ ಒಯ್ಯತಾರ, ಮಾರಿ ದುಡ್ಡ ತಿಂತಾರ. ಗರೀಬ್ ಪ್ರಾಣಿಗೋಳಿಗೆ ಎಂತಾದಾದರೂ ಕೆಟ್ಟ ಮಟನ್ ತಿನ್ನಲಿಕ್ಕೆ ಕೊಡತಾರ.

ನೌಕರ ಸುಮ್ಮನೆ ನಕ್ಕ, ಇಲ್ಲಿ ಮನಸ್ಯಾರಿಗೇ ತಿನ್ನಾಕೆ ಸಿಗೋದಿಲ್ಲ, ಜನಾವರದ್ದು ತೊಗೊಂಡು ಏನು ಮಾಡೀ ಬಾಯೀ....

ಅಲ್ಲಿಯೇ ಮುಂದೆ ಸಣ್ಣ ಸಣ್ಣ ಗಿಡಗಳ ಮೇಲೆ ನೂರಾರು ಕರಿಗುಬ್ಬಿಗಳು ಚಿಂವು ಚಿಂವು ಮಾಡುತ್ತ, ಕುಳಿತು ಎದ್ದು ನಡೆಸಿದ್ದವು. ಅಷ್ಟೇ ಜಾಗದಲ್ಲಿ ಜೀವ ತೆಗೆಯುವಂಥ ಗಲಿಬಿಲಿ, ತಾಮ್ರ ವರ್ಣದ ಆಕಾಶದತ್ತ ಈ ಗುಬ್ಬಿಗಳನ್ನು ಕಾಯಂ ಆಗಿ ಹಾರಹಚ್ಚುವ ಆ ಗಿಡಗಳು ವಿಚಿತ್ರವಾಗಿ ಕಾಣುತ್ತಿದ್ದವು. ಆಮೇಲೆ ಎಲ್ಲೆಲ್ಲಿಯೋ ರಸ್ತೆ ಬಿಟ್ಟು ಹಿಡಿಯುತ್ತ ಊರು ಸೇರಿದ ನಂತರ ಎದುರಿಗಿನ ಗಲ್ಲಿಯಲ್ಲಿ ಎರಡೂ ಬಾಜುವಿನ ಮನೆಗಳಲ್ಲಿನ ಗಲಿಬಿಲಿ ಕೇಳುತ್ತ ಆತ 'ಪರಗುಡೀ ಖಾನಾವಳ' ಎಂಬ ಪಾತಿಯನ್ನು ಹೊತ್ತ ಮನೆಯನ್ನು ಊಟಕ್ಕಾಗಿ ಸೇರಿದ.

ಎಷ್ಟೋ ದಿನಗಳ ನಂತರ ಊಟ ಮಾಡಿ ಮತ್ತೆ ಹೊರಗೆ ಹೊರಟ. ಊರನ್ನು ಸುತ್ತಿದ ಆಲದ ಮರಗಳ ದೊಡ್ಡ ರಸ್ತೆಯ ಮೇಲೆ ಕಾಲಿಟ್ಟಾಗ ಊರಿನ ಆ ಭಾಗದಲ್ಲಿಯೇ ಅದೇ ರಸ್ತೆಯ ಮೇಲೆ ಒಂದು ಹೆಜ್ಜೆಯ ಅಂತರದಲ್ಲಿಯೇ ತನ್ನ ಮನೆಯಿದೆ ಎಂಬ ಅರಿವು ಮೂಡಿತು. ನಡೆದುಹೋದ ನಂತರ ಒಂದು ದೀಪದ ಕೆಳಗೆ ಒಬ್ಬ ಮನುಷ್ಯ ಕಾಲು ಮಡಿಚಿ ಮಡಿಚಿ ನಿರೀಚ್ಛೆಯಿಂದ ಸಾಯಕಲ್ಲಿನಲ್ಲಿ ಪಂಪಿನಿಂದ ಹವೆ ತುಂಬುವದು ಕಂಡಿತು. ನಂತರ ಸ್ವಲ್ಪ ವೇಳೆಯಲ್ಲಿ ಧಡ ಧಡ ಮುಚ್ಚುತ್ತಿರುವ ಅಂಗಡಿಗಳು, ಹಾಟೆಲ್ಲುಗಳು: ತೆರೆದಿದ್ದ ಒಂದು ಹಾಟೆಲ್ಲಿನಲ್ಲಿ ಚಹ ಹೇಳಿ ಹೊರಗಿನ ನಿರ್ಜನ ರಸ್ತೆಯ ಕಡೆಗೆ ನೋಡುತ್ತ ಕುಳಿತ. ಸ್ವಲ್ಪ ವೇಳೆಯಲ್ಲಿ ಆ ಹಾಟೆಲ್ಲೂ ಬಂದಾಗ ಹತ್ತಿದ ನಂತರ ಎಷ್ಟೋ ದಿವಸಗಳಿಂದ ತನ್ನ ಸ್ನೇಹಿತನಾದ, ಝಗ ಝಗ ಹೊಳೆಯುವ ರಸ್ತೆ. ಪರಿಚಿತವಾದ ತಿರುವು ಮುಂದೆ ಉದ್ದ ರಸ್ತೆ. ರಸ್ತೆಯಲ್ಲಿ ಒಂದು ಭಾರವಾದ ಟ್ರಕ್ಕು ಆವನಿಂದ ಒಂದೆರಡು ಇಂಚು ಮಾತ್ರ ದೂರದಲ್ಲಿ ಧಡ ಧಡ ಶಬ್ದ ಮಾಡುತ್ತ ಹೊರಟುಹೋಯಿತು. ಎದುರಿಗೆ ಪೆಟ್ರೋಲ್ ಪಂಪಿನ ಮೇಲೆ ಎತ್ತರದಲ್ಲಿ ಆಕಾಶವನ್ನು ಬೆಳಗುವ ಹತ್ತಿ ಆರುವ ಪ್ರಚಂಡ ಟಾಯರಿನ ನಿಯಾನ್ ಜಾಹೀರಾತು. ಮೇಲೆ ಭರ ಭರ ಕರಗುತ್ತಿರುವ ಮೋಡಗಳೊಳಗಿಂದ ಸರಿಯುತ್ತಿದ್ದರೂ ಇದ್ದಲ್ಲಿಯೇ ಇರುವ ಕೋರೆ ಚಂದ್ರ. ಹವೆಯಲ್ಲಿ ತಳ

ಮಳಿಸುವ ಸೆಖೆ. ನೋಯುವ ಕಾಲು. ಉದ್ದವಾದ ಸಮಪ್ರಕಾಶಿತ ರಸ್ತೆ.

ಬಂಗಲೆಯೆದುರಿಗೆ ಬಂದಾಗ ಅವನಿಗೆ ಕಂಡದ್ದು ಒಳಗೆ ತೋಟದ ಅಂಗಳದಲ್ಲಿ ಅವನ ರೂಮಿನ ಬಾಗಿಲ ಬಳಿಯಲ್ಲಿಯೇ ಝಿಮ್ಮಾ, ಫುಗಡೀ ಆಡುತ್ತಿದ್ದ ಅಂಗಳ ತುಂಬ ಹುಡುಗೆಯರು. ಆದರೂ ಅವನು ನೆಟ್ಟಗೆ ಕೋಣೆ ಸೇರಿದ. ಹಾಡುತ್ತ ಸುತ್ತುಹಾಕುತ್ತಿದ್ದ ಹುಡುಗೆಯರು ಅವನನ್ನು ನೋಡಿ ಒಬ್ಬೊಬ್ಬರೇ ಸುಮ್ಮನಾಗುತ್ತ ನಡೆದರು. ಬಾಗಿಲಲ್ಲಿ ಕುಳಿತಿದ್ದ ಇಬ್ಬರು ತರುಣ ಹುಡುಗೆಯರು ಕೂಡ ಝಟಕ್ಕನೇ ಎದ್ದು ಸೆರಗು ಸಾವರಿಸುತ್ತ ಬದಿಗೆ ಸರಿದು ನಿಂತರು. ಒಮ್ಮೆಲೆ ನಿಶ್ಶಬ್ದ, ಜೇಬಿನಲ್ಲಿ ಆಗಲೇ ಹುಡುಕಿಟ್ಟಿದ್ದ ಕೀಲಿಕೈ ಹೊರತೆಗೆದು ತನ್ನ ಪರಿಚಯದ ಕೀಲಿ ತೆಗೆದ; ಒದ್ದು ಬಾಗಿಲನ್ನು ಹಿಂದೆ ಸರಿಸಿದ. ಮತ್ತೆ ಹಿಂದಿನಿಂದ ಬಾಗಿಲನ್ನು ಮುಚ್ಚಿ ಬಂದು ಮಾಡಿದ. ಮತ್ತು ಒಳಗಿನ ಕತ್ತಲೆ ಕೋಣೆಯನ್ನು ಸೇರಿದ.

ಹೊರಗೆ ಇಷ್ಟೊತ್ತು ಆ ಹುಡುಗೆಯರು ಹತ್ತಿಕ್ಕಿಟ್ಟಿದ್ದ ನಿರ್ಹೇತುಕ ಯೌವನಿಕ ನಗೆ ಈಗ ಉಕ್ಕಿ ಹರಿಯಿತು. ಆ ಕತ್ತಲಲ್ಲಿಯೇ ಆತ ತನ್ನ ಜೇಬು ಖಾಲೀ ಮಾಡಿ ನಿದ್ದೆ ಆವರಿಸಿದ್ದರಿಂದ ಹಾಗೆಯೇ ಅಡ್ಡಾದ. ಕಣ್ಣು ಒಳಗಿಂದ ಒಳಗೇಮಾತಾಡಿತು. ಕಣ್ಣು ಮುಂದೆ ಪರಮಾಣುಗಳು ಹೊಳೆದು ಹೋದವು. ಆತ ನಿದ್ದೆ ಹೋದ.

ನಡುವೆ ಯಾವಾಗಲೋ ಎಚ್ಚರಾದಾಗ ಬಾಗಿಲು ಕಿಡಕಿ ಫಟ ಫಟ ಬಾರಿಸುತ್ತಿದ್ದವು. ಆತ ಎದ್ದು ಬಾಗಿಲು ಕಿಡಕಿಗಳನ್ನು ಭದ್ರಪಡಿಸುತ್ತಿರುವಾಗ ಹೊರಗೆ ಪ್ರಚಂಡ ಬಿರುಗಾಳಿಯ ಮೊರೆತ. ಅದನ್ನು ಕೇಳಿ ಅವನಿಗೆ ಸಮಾಧಾನವೆನಿಸಿತು. ನಂತರ ಒಮ್ಮಿಂದೊಮ್ಮೆ ದೀಪಗಳೆಲ್ಲ ಆರಿ ಹೋದವು, ಸಂಪೂರ್ಣ ಕತ್ತಲೆ. ದೂರದಲ್ಲಿ ಎಲ್ಲಿಯೋ ಎಲ್ಲ ದಿಕ್ಕುಗಳಿಗೂ ಉರಿ ಹತ್ತಿದಂತೆ ಮಿಂಚು.

ಬಾಗಿಲು ತೆರೆದು ಹೊರಗಿನ ಮಳೆಯಲ್ಲಿ ನಿಂತು ಆತ ಮಣ್ಣಿನ ವಾಸನೆಯನ್ನು ಹೀರಿದ. ನೀರಹನಿಗಳಿಂದ ಅವನ ಶರೀರ ಒಮ್ಮೆಲೆ ತಂಪಾಯಿತು. ಮಾಳಿಗೆಯ ನೀರೂ ಅವನ ಮೈಮೇಲೆ ಬೀಳಹತ್ತಿತು. ಮತ್ತಷ್ಟು ಮಣ್ಣಿನ ಉಗ್ರ ವಾಸನೆ. ಎದುರಿಗೆ ಒಂದರಂತೆ ಇನ್ನೊಂದಿರುವ ಮೇಲೆ ಕೆಳಗೆ ಹೋಗುತ್ತಿರುವ ಹೊಳೆಯುತ್ತಿರುವ ವಿದ್ಯುತ್ತಿನ ರೇಖೆಗಳು. ಎಲ್ಲವೂ ಎಲ್ಲ ಕಡೆಗೂ ಮಳೆಯಲ್ಲಿ ಮುಚ್ಚಿದಂತೆ. ಮೈಮೇಲೆ ಮಳೆ ಬೀಳುತ್ತಲೇ ಇತ್ತು. ಅವನು 'ಸ್ಥಿತಿ' ಮುಟ್ಟಿದ. ತನ್ನ ಇಡೀ ಪೊಳ್ಳು ಆಯುಷ್ಯ ತುಂಬಿಹರಿಯುತ್ತಿರುವಂತೆ ಆತನಿಗೆ ಭಾಸವಾಯಿತು.

ಮೈಯಲ್ಲಿ ನಡುಗು ಹುಟ್ಟಿಸುವ ಮಳೆಯ ನಾದವನ್ನು ಸಂಪೂರ್ಣವಾಗಿ ಶರೀರದಲ್ಲಿ ತುಂಬಿಕೊಳ್ಳುತ್ತ ಆತ ಹೇಳಿದ, ಈ ಘನಘೋರ[1] ಸೃಷ್ಟಿತತ್ತ್ವದ ಭಾಗವೆಂದೇ ನಮ್ಮ ಅಸ್ತಿತ್ವವಿದೆ. ಈ ಬೆಟ್ಟವೆಲ್ಲ ಪೊಳ್ಳು, ಇಲ್ಲಿನ ಆಗು ಹೋಗುಗಳನ್ನಾರೂ ಅರಿಯರು. ಅನು ಅನಾದಿಯಿಂದ ಅಸ್ವಸ್ಥನಯ್ಯಾ. ಎನ್ನನ್ನು ಅಸ್ವಸ್ಥತೆಯಿಂದ ಸ್ವಾತ್ಥಕ್ಕೆ ಕರೆದೊಯ್ಯು ಅಯ್ಯಾ, ಈ ಸಂಕುಚಿತ ಒಡೆದು ಹೋದ ಜೀವನದಲ್ಲಿ ನನ್ನ ಸಂಪೂರ್ಣ ಅಸ್ತಿತ್ವವನ್ನು ಹರಿಯಿಸುವುದು ಅಸಾಧ್ಯ. ನಾನು ಯಾರಿಗೂಬಂಧಿತನಲ್ಲ. ನನಗೆ ಮನೆಮಾರು ಇಲ್ಲ. ಜಾತಿ ಧರ್ಮ ಇಲ್ಲ, ಇಲ್ಲ. ತಂದೆ ತಾಯಿಗಳನ್ನು, ಸ್ವಗ್ರಾಮವನ್ನು, ಸ್ವಸಂಬಂಧಿಕರನ್ನು ನಾನು ತ್ಯಜಿಸಿದ್ದೇನೆ. ಹೇ, ಘನಘೋರ ಸೃಷ್ಟಿತತ್ವವೇ, ನನ್ನನ್ನು ಶುದ್ಧ ಜೀವವನ್ನಾಗಿ ಮಾಡು. ಯಾಕೆಂದರೆ, ಏನಾದರೂ ಮಾಡಿ ನಾನು ಪರಿಶುದ್ಧವಾದ ಜೀವಸತ್ವವಾಗಬೇಕು.

ನಂತರ ಆತನಿಗೆ ಎಲ್ಲಿಂದಲೋ ಗರಗರ ತಿರುಗಹಚ್ಚುವಂಥ ಪ್ರಚಂಡ ಬವಳಿ ಬಂದಿತು. ಆತ ಜೋಲಿ ಹಿಡಿಯುತ್ತ–, ಏಳುತ್ತ ಕೂಡುತ್ತ– ನೆಲಕ್ಕೆ ಕುಸಿದ. ಅವನ ಕಣ್ಣೆದುರಿನಿಂದ ಹಿಂದಿನ, ಇಂದಿನ, ತನ್ನ, ತನ್ನವಲ್ಲದ, ಚಹರೆಗಳು ಸರಿಯಹತ್ತಿದವು. ಮುಂಜಾವು. ಸಂಜೆ, ಬಿಸಿಲು. ಬೆಳದಿಂಗಳು, ಮನೆ ಊರು, ರಸ್ತೆಗಳು, ವರ್ಷಗಳು ಎಲ್ಲವೂ ಒಂದರಿಂದ ಒಂದು ಬಿಡಿಯಾಗುತ್ತ, ಮತ್ತೆ ಏಕತ್ರವಾಗುತ್ತ ನಡೆದವು. ಕಣ್ಣೆದುರಿಗೆ ಒಮ್ಮೆ ಕತ್ತಲೆ, ನಂತರ ಒಮ್ಮೆಲೆ ಲಕಲಕ ಬೆಳಕು. ಇದುವರೆಗಿನ ದಿನಗಳೆಲ್ಲ ಒಂದು ಕಡೆ, ರಾತ್ರಿಗಳೆಲ್ಲ ಒಂದು ಕಡೆ ಒಟ್ಟುಗೂಡಿದ ಹಾಗೆ. ಮತ್ತೆ ಮತ್ತೆ ಹಣಿಕಿಕ್ಕುವ ಹೊಸ ಮೋಡಗಳು. ಮತ್ತು ತಲೆಯ ಮೇಲಿಂದ ಹಾಯ್ದು ಹೋಗುವ ಕೊನೆಯ ಮೋಡಗಳು. ‹ ಹವೆಯಲ್ಲಿ ಇಡೀ ದಿವಸ ಝಗಮಗಿಸುವ ಪ್ರಕಾಶ ಆಕಾಶದಲ್ಲಿ ಅದೃಶ್ಯ ಸೂರ್ಯನ ಉದ್ದುದ್ದ ಬೆಳಕಿನ ಕಿರಣಗಳು. ಅದ್ಭುತ ಶಾಂತವಾದ ಏಕಾಕೀ ರಾತ್ರಿ. ಮನೆ ಮನೆಗಳ ಮೇಲೆ. ಗಿಡ ಗಿಡಗಳ ಮೇಲೆ ಬಾಗಿದ ಚಂದ್ರರೇಖೆ. ಸುಖೀ. ಸ್ಥಿರ, ಸ್ತಬ್ಧ. ಗತಿ—ವಿರೋಧೀ ಗಿಡಗಳು. ಮತ್ತೆ ಮತ್ತೆ ತೂಗುವ ಗಿಡಗಳ ನೆರಳುಗಳ ಬಲೂನುಗಳಲ್ಲಿ ಐಷ ಆರಾಮೀ ರಸ್ತೆಗಳು. ಧೀಗು

1 ಮಹಾನುಭಾವ ಪಂಥದ ಪ್ರವರ್ತಕ ಚಕ್ರಧರನ ಭಿಕ್ಷದ ಪ್ರಾರ್ಥನೆಯನ್ನು ಅನುಸರಿಸಿದ ಶೈಲಿಯ ವಚನೀಕರಣ

ಕಟ್ಟಿದ ಎಂದಿನಂತಹ ಕತ್ತಲೆ. ಮತ್ತೆ ಮಣ್ಣು ತೋಯಿಸಿ ಹುಟ್ಟುತ್ತಿರುವ ಚಿರಂತನ ತೃಣ. ಘನಘೋರವಾಗಿ ಮಳೆಗರೆಯುತ್ತಿರುವ ಮೋಡಗಳು. ಚಿಕ್ಕಂದಿನಲ್ಲಿನ ಧೋಂಡೀ[1] ಹಾಡುಗಳ ಸೂರು. ಬರತ ರೇs ಬರತ ರೇs ಮೇಘರಾಯಾ ಬರತ ರೇs ಮತ್ತೆ ಗಡಗಡಾಟ. ತುತೂರಿಗಳ ಹೃದಯಭೇದೀ ಲಲಕಾರ. ನಾವು ಹೋಗ ಬೇಕೆಂದುಕೊಂಡಿರುವ ಜಾಗ ನಮ್ಮ ಮನಸ್ಸಿನಲ್ಲಿ ಇನ್ನೂ ಇದ್ದೇ ಇರುತ್ತದೆ. ಒಳಗಿನಿಂದ ಹೊರಗಿನಿಂದ ಗೋಡೆ ಗಳಿಗೆ ಸುರಂಗ ಹತ್ತಿಯೇ ಇರುತ್ತದೆ. ಒಂದು ದಿನ ಸುರಂಗಗಳು ಧಡಾಡಿಸುತ್ತವೆ. ಆಗ ಶರೀರದ ಸ್ಫೋಟ. ನಮ್ಮಿಂದಲೇ ಎಲ್ಲ ವಿಷಯಗಳೂ ಹೊರಡುತ್ತವೆ. ನಾವಿಲ್ಲ ದಿದ್ದರೂ ಈ ಪ್ರಿಯ ವಿಷಯಗಳು ಹೀಗೇ ಇರುತ್ತವೆ. ಇದೇನು ಸಣ್ಣ ಮಾತೇ ? ಭೂಮಿ ಪರಕೀಯವೆನಿಸಿ ತಮ್ಮಿಂದ ತಾವೇ ಕಾಲುಗಳು ಮೇಲೇಳುತ್ತವೆ. ಆಗ ಪ್ರಚಂಡ ವಿಪ್ಲವ. ಹೃದಯವನ್ನು ಒಡೆದು ಚೂರು ಮಾಡುವ ವಿದ್ಯುತ್ತಿನ ಕಡಕಡಾಟ.

ಈ ಕೋಲಾಹಲ ನಡೆದಾಗ ಅವನ ಮೇಲೆ ದಟ್ಟವಾದ ನಾಸ್ತಿತ್ವಭಾವದ ಕತ್ತಲೆ ಕುಸಿಯಿತು. ತನ್ನನ್ನು ಸ್ಥಲ-ಕಾಲಗಳು ತೂರಿಬಿಟ್ಟನಂತರವೂ ತಾನು ಯಾರಿಗೆ ಯಾರೂ ಅಲ್ಲ. ತನ್ನ ಯಾವುದೂ ಯಾವುದದ್ದರದಲ್ಲ. ಮುಕ್ತಿಯ ನಿರತಿಶಯ ಆನಂದ. ತಾನು ಎಲ್ಲ ಕಡೆಯಿಂದಲೂ ಸ್ಥಿರ ವಾಗಿಬಿಟ್ಟಿದ್ದೇನೆ. ತನ್ನ ಅಸ್ತಿತ್ವದ ಅಚ್ಚಿನ ಸುತ್ತಲೂ ಈ ಎಲ್ಲವೂ ಇದ್ದದ್ದು ಇಲ್ಲದ್ದು ಸೇರಿ ಸುತ್ತುತ್ತಿದೆ. ಸೂರ್ಯಮಾಲಿಕೆ ಸೇರಿ, ನಕ್ಷತ್ರಾಂಕಿತ ಆಕಾಶ ಸೇರಿ ಈ ಸಂಪೂರ್ಣ ಅಂತರಾಳ ತನ್ನ ಅಚ್ಚಿನ ಸುತ್ತಲೇ. ತಾನೇ ಈ ಅಂತರಾಳವನ್ನು ಹಿಡಿದಿಟ್ಟಿರುವ ಪ್ರಖರ ವಿದ್ಯುತ್‌ಬಿಂದು.

[1] ಮಳೆಯು ಸಲುವಾಗಿ ಮಾಡುವ ಒಂದು ವಿಧಿಯ ಅಂಗ ವಾಗಿ ಬರುವ ಹಾಡು.

ಭಾಲಚಂದ್ರ ನೆಮಾಡೇ : ಒಂದು ಪರಿಚಯ

ಜಿ. ಎಸ್. ಆಮೂರ್

ಕೋಸಲಾ (1963) ಕಾದಂಬರಿಯಿಂದ ಪ್ರಸಿದ್ಧಿಗೆ ಬಂದ ಭಾಲಚಂದ್ರ ನೇಮಾಡೇ ಮರಾಠೀ ಕಾದಂಬರಿ ಯಲ್ಲಿ ದೊಡ್ಡ ಹೆಸರು. **ಕೋಸಲಾ**ದಿಂದ ಹನ್ನೆರಡು ವರ್ಷಗಳ ಅಂತರದಲ್ಲಿ ಬರೆದ **ಬಿಢಾರ** (1975) **ಜರೀಲಾ** (1977). **ಝೂಲಾ** (1979) ಮತ್ತು ಅಪ್ರಕಟಿತ **ಹಿಂದೂ** ಇವು ಇತರ ಕಾದಂಬರಿಗಳು. ಈ ನಾಲ್ಕೂ ಒಂದು ಬೃಹತ್ ಕಾದಂಬರಿಯ ಭ ಗಗಳು. ಈ ಕಾದಂಬರಿ ಗಳಲ್ಲದೆ, **ಮೆಲಡಿ** (1970) ಎಂಬ ಕವನ ಸಂಗ್ರಹವನ್ನೂ ಅವರು ಪ್ರಕಟಿಸಿದ್ದಾರೆ. ನೇಮಾಡೇ ಪ್ರಥಮ ದರ್ಜೆಯ ವಿಮರ್ಶಕರೆಂದು ಕೂಡ ಗುರುತಿಸಲ್ಪಡುತ್ತಾರೆ. ಇತ್ತೀಚೆಗೆ ಕೊಲ್ಹಾಪುರದ ಸೆಮಿನಾರ್ ಒಂದರಲ್ಲಿ ಓದಿದ ಮತ್ತು ನಂತರ **ಅನುಷ್ಟುಂಭ** (ಸಪ್ಟಂಬರ್-ಅಕ್ಟೋಬರ್) ಪತ್ರಿಕೆಯಲ್ಲಿ ಪ್ರಕಟವಾದ 'ಮರಾಠೀ ಕಾದಂಬರಿ: ಪ್ರೇರಣಾ ವ ಸ್ವರೂಪ' ಸಮೀಕ್ಷೆ ಸದ್ಯ ಎಲ್ಲ ಕಡೆಯಲ್ಲಿಯೂ ಚರ್ಚೆಯ ವಿಷಯವಾಗಿದೆ. ವೃತ್ತಿಯಿಂದ ಅವರು ಇಂಗ್ಲೀಷ್ ಶಿಕ್ಷಕ ರಾಗಿದ್ದು ಔರಂಗಾಬಾದಿನ ಮರಾಠವಾಡಾ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ರೀಡರ್ ಎಂದು ಕೆಲಸ ಮಾಡುತ್ತಿದ್ದಾರೆ. ಅವರು ಮೂಲತಃ ಖಾರದೇಶದವರು. ಅವರಿಗೀಗ ನಲ್ವತ್ತೆರಡು ವರ್ಷ ವಯಸ್ಸು.

ಮರಾಠೀ ಕಾದಂಬರಿಗೆ ಹೊಸ ತಿರುವು ಕೊಟ್ಟ ನೇಮಾಡೇ ಅವರ ಪ್ರಥಮ ಕೃತಿ, **ಕೋಸಲಾ** ಸ್ವಾತಂತ್ರ್ಯೋತ್ತರದ ಯುವ ಜನಾಂಗದ ಆಳವಾದ ನಿರಾಶೆಯ ಅಭಿವ್ಯಕ್ತಿಯಲ್ಲಿ ಒಡಮೂಡಿದ್ದರಿಂದ ಪ್ರಾತಿನಿಧಿಕ ಸ್ವರೂಪ ವನ್ನು ಪಡೆದುಕೊಂಡಿತು. ಅದರ ನಾಯಕ ಪಾಂಡುರಂಗ ಸಾಂಗ್ವೀಕರ ಹೊಸ ಜನಾಂಗದ ಅನಾಥ ಪ್ರಜ್ಞೆ, ಪರಕೀಯ ಪ್ರಜ್ಞೆ, ನಿರಾಕರಣಗಳ ಪ್ರತೀಕವಾಗಿ ಕಾದಂಬರಿಯ ಯಶಸ್ವಿಗೆ ಮು ಖ್ಯ ಕಾರಣನಾಗುತ್ತಾನೆ. **ಕೋಸಲಾ**ದ ಇನ್ನೊಂದು ವೈಶಿಷ್ಟ್ಯವೆಂದರೆ ಆಡುಮಾತಿನ. ಭಾಷಾ ವೈವಿಧ್ಯದ ಎಲ್ಲ ಸಾಧ್ಯತೆಗಳನ್ನೂ ದುಡಿಸಿಕೊಂಡ ಶೈಲಿ, ಮತ್ತು ಮರಾಠೀ ಕಾದಂಬರಿಗೆ ತೀರ ಹೊಸತಾದ ನಿರ್ವ

ಸನ್ನಿವೇಶ

ಹಣಾ ಕ್ರಮ. ಮರಾಠೀ ಕಾದಂಬರಿಯು ಅದುವರೆಗೆ ತುಳಿದ ಹಾದಿಯನ್ನು ಬಿಟ್ಟು ಕಾದಂಬರಿಯ ಸ್ವರೂಪವನ್ನೆ ಬದಲಿಸಿ **ಕೋಸಲಾ** ತನ್ನದೇ ಆದ ಮಾರ್ಗವನ್ನು ರೂಪಿಸಲು ಶಕ್ತವಾಯಿತು. ಮರಾಠೀ ಕಾದಂಬರಿಯಲ್ಲಿ ಮೊಟ್ಟ ಮೊದಲನೆಯ ಕಾದಂಬರಿಯಾದ ಬಾಬಾ ಪದಮನಜಿ ಅವರ **ಯಮುನಾಪರ್ಯಟನ** (1857) ದಿಂದ ಪ್ರಾರಂಭವಾದ ಕೃತಿ ಪ್ರಧಾನ ವಾಸ್ತವ ಮಾರ್ಗದಲ್ಲಿ **ಕೋಸಲಾ** ಒಂದು ಮಹತ್ವದ ಮೈಲಿಗಲ್ಲು.

ಬಿಢಾರ ಬರೆಯುವ ಹೊತ್ತಿಗೆ ನೆಮಾಡೇ ಅವರ ವಿಚಾರ ಕ್ರಮದಲ್ಲಿ ಮಹತ್ವದ ಬದಲಾವಣೆಗಳಾಗಿದ್ದವು. ನಿರಾಕರಣದ ವೈಯಕ್ತಿಕ ಅರ್ಥವಂತಿಕೆಗಿಂತ ಈಗ ಅವರಿಗೆ ಒಟ್ಟು ಸಮಾಜದ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂದು ತಿಳಿಯುವುದು ಹೆಚ್ಚು ಮಹತ್ವದ್ದಾಗಿ ಕಂಡಿತು. **ಬಿಢಾರ** ದಿಂದ ಪ್ರಾರಂಭವಾಗುವ ಅವರ ಕಾದಂಬರಿ ಚತುಷ್ಟಯದಲ್ಲಿ ಮರಾಠೀ ಸಮಾಜ–ಸಂಸ್ಕೃತಿಗಳ ವಿರಾಟ ಸ್ವರೂಪವೇ ನಮಗೆ ನೋಡಸಿಗುತ್ತದೆ. ಈ ಕಾದಂಬರಿಗಳ ನಾಯಕನಾದ ಚಾಂಗದೇವ್ ಪಾಟೀಲ ನೆಮಾಡೇಯವರ ಅಖಂಡ ಮಾನವೀಯತೆಯ, ನಿತಾಂತ ಜೀವನಶ್ರದ್ಧೆಯ ಪ್ರತೀಕವಾಗಿದ್ದಾನೆ. ಅವನಿಗೆ ತನ್ನವೇ ಆದ ಪ್ರಖರ ನೈತಿಕ ಮೌಲ್ಯಗಳಿದ್ದರೂ ಅವನ ಕ್ರಿಯೆಯೆಲ್ಲ ಸಮಾಜದೊಡನೆ ಹೊಂದಾಣಿಕೆಯನ್ನು ಸಾಧಿಸುವುದರಲ್ಲಿಯೇ ತೊಡಗಿರುತ್ತದೆ. ಆದರೆ ಇಂದಿನ ಸಾಮಾಜಿಕ ಪರಿಸ್ಥಿತಿಯ ದುರಂತದಿಂದಾಗಿ ಇದು ಅವನ ಸೋಲಿನಲ್ಲಿ ಕೊನೆಗೊಳ್ಳುತ್ತದೆ. **ಝೂಲ** ಕಾದಂಬರಿಯಲ್ಲಿ ಈ ಅಂತರ ಪರಮಾವಧಿಯನ್ನು ತಲುಪುತ್ತದೆ. ಅಪರಿಮಿತವಾದ, ಆತ್ಯಂತಿಕವಾದ ಜೀವನಶ್ರದ್ಧೆ, ಅದಮ್ಯ, ಜೀವಂತ ಮಾನವೀಯತೆ ಅವನ ಬಾಳಿನ ಒಂದು ಧ್ರುವವಾದರೆ, ಪೊಳ್ಳು ಸಮಾಜ, ಅರ್ಥವನ್ನು ಕಳೆದುಕೊಂಡ ಮೌಲ್ಯಗಳು, ಕ್ಷುದ್ರತೆ ಇನ್ನೊಂದು ಧ್ರುವವಾಗುತ್ತವೆ.

ಇಲ್ಲಿ ಉದ್ಧೃತವಾದ ಕಾದಂಬರಿಯ ಕೊನೆಯ ಭಾಗದಲ್ಲಿ ಚಾಂಗದೇವ ಅನೇಕ ಅನುಭವಗಳನ್ನು ದಾಟಿ ಪ್ರಾಯೋಪವೇಶವಂತಹ ಒಂದು ಅವಸ್ಥೆಯನ್ನು ಮುಟ್ಟಿರುತ್ತಾನೆ. ನೆಮಾಡೇಯವರಂತೆಯೇ ಮಹಾನುಭಾವ ಸಾಹಿತ್ಯದ ವಟ್ಟಿ ಪ್ರಸಾವದಲ್ಲಿ ಬೆಳೆದು ಬಂದ ಚಾಂಗದೇವ ಈ ಅವಸ್ಥೆಯನ್ನು 'ಸ್ಥಿತಿ' ಎಂದು ಗುರುತಿಸುತ್ತಾನೆ. ಪರಿಶುದ್ಧ ಜೀವವಾಗಿ ಸೃಷ್ಟಿತತ್ವದೊಂದಿಗೆ ತಾದಾತ್ಮ್ಯ ಹೊಂದುವುದೊಂದೇ ಅವನಿಗೆ ಉಳಿದಿರುವ ದಾರಿ. ಇದೇ ಅವನ ಮುಕ್ತಿ.

ಹೀಗೆಂದು, ನೇಮಾಡೇಯವರ ಜೀವನದೃಷ್ಟಿ ನೈರಾಶ್ಯಮಯವೆಂದು ಹೇಳಲಿಕ್ಕಾಗುವುದಿಲ್ಲ. ಸಾಂಗ್ವೀಕರು.ಚಾಂಗದೇವ ಅವರ ಮೌಲ್ಯಪ್ರಜ್ಞೆ ಮಾನವ ಜೀವನ ಅದ್ಭುತಗಳಲ್ಲೊಂದು. ಇದು ಇವರ ಕಾದಂಬರಿಯಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಇವಲ್ಲದೆ, '**ಝೂಲ**' ಕಾದಂಬರಿಯಲ್ಲಿ ಮತ್ತೊಂದು ಪ್ರಕಾರದ ನಾಯಕ–ನಾಮದೇವ ಭೋಳೆ–ಉದ್ಭವಿಸುತ್ತಾನೆ. ಇಂಥ ಕೊಳೆತ ಹದಗೆಟ್ಟ ಸಮಾಜದಲ್ಲಿಯೇ ಸಾರ್ಥಕ ಜೀವನವನ್ನು ಹುಡುಕುವ, ಭಾರತೀಯ ಸಂಸ್ಕೃತಿಯ ಸಂಶೋಧಕನಾದ ಈತ ನೆಮಾಡೇ ಅವರ ಮುಂದಿನ ಕಾದಂಬರಿ **ಹಿಂದೂ**ದ ನಾಯಕನಾಗಲಿದ್ದಾನೆ.

ಕನ್ನಡದ ಸಂದರ್ಭದಲ್ಲಿ ನೆಮಾಡೇ ಅವರನ್ನು ಹೋಲಿಸುವುದಾದರೆ ಅವರನ್ನು ಲಂಕೇಶರಿಗೆ ಹೋಲಿಸಬೇಕು. **ಬಿರುಕಿ**ನಿಂದ **ಮುಸ್ಸಂಜೆಯ ಕಥಾಪ್ರಸಂಗ**ದವರೆಗಿನ ಲಂಕೇಶರ ಬೆಳವಣಿಗೆಯ ಕ್ರಮ ನೆಮಾಡೆಯವರ ಬೆಳವಣಿಗೆಯ ಕ್ರಮಕ್ಕೆ ಎಷ್ಟೋ ಹೋಲಿಕೆಗಳನ್ನು ಹೊಂದಿದೆ. ಇಂಥ ತುಲನಾತ್ಮಕ ಅಭ್ಯಾಸ ಸದ್ಯದ ಬರೆಹದ ಉದ್ದೇಶವಲ್ಲದ್ದರಿಂದ ನೆಮಾಡೇ ಅವರ ಪರಿಚಯಕ್ಕೆ ಇಷ್ಟು ಮಾತು ಸಾಕು ಎಂದು ತೋರುತ್ತದೆ.

"ಇನ್ನೊಬ್ಬನ ಸ್ವಾತಂತ್ರ್ಯವನ್ನು ನಾಶಪಡಿಸುವುದು, ತನ್ನದನ್ನು ಕಳೆದು ಕೊಳ್ಳದ ಹೊರತು ಸಾಧ್ಯವಿಲ್ಲ''

—ಮಿಲೋವಿನ್ ಜಿಲಾಸ್ : Conversations with Stalin

ಬಿ. ದಾಮೋದರ ರಾವ್

ಬಸವಣ್ಣ ಮತ್ತು ವಚನಸಾಹಿತ್ಯ

ವಚನವಾಙ್ಮಯ ಒಂದು ಹೊಸ ಧಾರ್ಮಿಕಪಂಥದ ಚಿಂತನಾ ಮಾಧ್ಯಮವಾಗಿ ಬೆಳೆದು ಬಂದರೂ ವಚನಕಾರರಿಗೆ ಮಾತಿಗೂ ಬದುಕಿಗೂ ಇರುವ ಅನಿವಾರ್ಯ ಸಂಬಂಧದ ಅರಿವು ಚೆನ್ನಾಗಿಯೇ ಇತ್ತು. ಭೌತಿಕ ಮತ್ತು ಆಧ್ಯಾತ್ಮಿಕಗಳ ಸಂಯೋಜನೆಯಲ್ಲಿ ಶಬ್ದವು ಮಹತ್ವದ ಪಾತ್ರವನ್ನು ನಿರ್ವಹಿಸಬಲ್ಲುದೆಂಬುದನ್ನು ಅವರು ತಿಳಿದಿದ್ದರು. ಮರ್ತ್ಯದಿಂದ ದೈವಿಕತೆಯೆಡೆಗೆ "ಶಬ್ದ ಸೋಪಾನವ ಕಟ್ಟಿ ನಡೆಸಿದವರು"[1] ಶರಣರು, ಎಂದು ವಚನಕಾರರಲ್ಲಿ ಒಬ್ಬನಾದ ಚೆನ್ನಬಸವ ಹೇಳುತ್ತಾನೆ. ಹಾಗೆಯೇ "ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ" ಎನ್ನುವ ಅಲ್ಲಮಪ್ರಭು ಇನ್ನೊಂದು ಕಡೆ, "ವಾಕುಪಾಕವಾದಡೇನು ಮನಪಾಕವಾಗದನ್ನಕ್ಕರ?" ಎಂದು ಹಂಗಿಸುವಾಗ ಮಾತಿನ ಹವದಲ್ಲಿಯೂ ಮೋಸದ ಛಾಯೆ ಇರಬಹುದಾದ ಸಾಧ್ಯತೆಯನ್ನು ಸೂಚಿಸುತ್ತಾನೆ. ಬಸವಣ್ಣನ ಧೋರಣೆ ಅವನ ಜನಪ್ರಿಯವಾದ ಈ ಸಾಲುಗಳಲ್ಲಿ ವ್ಯಕ್ತವಾಗಿದೆ :

ನುಡಿದರೆ ಮುತ್ತಿನ ಹಾರದಂತಿರಬೇಕು!
ಸುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು!
ನುಡಿದರೆ ಪಳಿಕದ ಶಲಾಕೆಯಂತಿರಬೇಕು!
ನುಡಿದರೆ ಲಿಂಗಮೆಚ್ಚಿ ಅಹುದೆನ್ನಬೇಕು!
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯ?[2]

ವಾಗರ್ಥ ಅನುಭವಗಳ ಅಭಿನ್ನತೆಯ ಪ್ರಜ್ಞೆ ಇಷ್ಟು ಸ್ಫುಟವಾಗಿರುವಾಗ ಈ ನುಡಿಗಾರರು ವಚನವನ್ನು ಸಾಹಿತ್ಯವೆಂದೂ ಗಣಿಸಿರಬೇಕು. ಬಸವಣ್ಣನು ಶರಣನ ವ್ಯಕ್ತಿತ್ವದ ವಿಕಾಸವನ್ನು ಚಿತ್ರಿಸುತ್ತ "ಮತಿ ಎಂಬ ಸಟ್ಟುಗದಲ್ಲಿ ಘಟ್ಟಿಸಿ, ಪಾಕಕ್ಕೆ ತಂದು, ಭಾವದಲ್ಲಿ ಕುಳ್ಳಿರಿಸಿ ಪರಿಣಾಮದೋಗರವ ಬಡಿಸಿ" ಕೂಪಲಸಂಗಮದೇವನನ್ನು ತೃಪ್ತಿಗೊಳಿಸಬಹುದೆಂದು ಹೇಳುತ್ತಾನೆ. ಅವನ ಈ ಮಾತುಗಳಲ್ಲಿ ಸಾಹಿತ್ಯ ಆಗುವ, ಅಂದರೆ ವಾಕ್ ಶರೀರದಲ್ಲಿ ಕಾವ್ಯಾನುಭವ ಪಾಕಗೊಳ್ಳುವ, ಸೃಜನಕ್ರಿಯೆಯ ಗತಿ–ವಿನ್ಯಾಸಗಳನ್ನು ಗುರುತಿಸಬಹುದು.

ತಾಳಮಾನವ ಸರಿಸವನರಿಯೆ!
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವ,
ನಿನಗೆ ಕೇಡಿಲ್ಲಾಗಿ ಆನು ಒಲಿದಂತೆ ಹಾಡುವೆ.

ಸಾಹಿತ್ಯ ಸಂಗೀತಗಳ ಶಾಸ್ತ್ರೀಯ ಜ್ಞಾನವಿಲ್ಲದ ತಾನು **ಕೂಡಲಸಂಗಮನಿಗೆ** ಕೇಡಿಲ್ಲದಂತೆ ಹಾಡುವುದನ್ನು ಬಿಟ್ಟು, ಬೇರೆ ಯಾವ ನಿರ್ಬಂಧವನ್ನೂ ಒಪ್ಪುವ ಸ್ಥಿತಿಯಲ್ಲಿ ಇಲ್ಲ ಎಂಬ ಬಸವಣ್ಣನ ಈ ವಚನದ ವಿನಯದ ಮರೆಯಲ್ಲಿ ಛಂದಸ್ಸು, ಲಯಗಳನ್ನು ಎಚ್ಚರದಿಂದ ಬಳಸದಿದ್ದಲ್ಲಿ ಆ ಮಟ್ಟಿಗೆ **ಕಲಾಕೃತಿಗೆ** ಕೇಡಾಗಬಹುದು ಎನ್ನುವ ಒಳದನಿಯೂ ಇದೆಯೆ?

ಸಾಹಿತ್ಯದ ದೃಷ್ಟಿಯಿಂದ, ಬಸವಣ್ಣನಲ್ಲಿ ಸ್ಥೂಲವಾಗಿ ಮೂರು ರೀತಿಯ ವಚನಗಳನ್ನು ಗುರುತಿಸಬಹುದು. ಒಂದು ನೀತಿಪ್ರಧಾನವಾಗಿರುವ ನೇರ ಹೇಳಿಕೆಗಳ ವಚನಗಳು; ಎರಡು, ಗಣನೀಯ ಪ್ರಮಾಣದಲ್ಲಿ ಕಾವ್ಯಗುಣಗಳನ್ನು ಒಳಗೊಂಡು, ಆದರೆ ಏಕಸ್ತರದಲ್ಲಿ ಮಾತ್ರ ದುಡಿಯುವಂಥ ವಚನಗಳು; ಮೂರು, ಧ್ವನಿಪೂರ್ಣವಾಗಿದ್ದು ವಚನ ಪ್ರಕಾರದ ಮಿತಿಯೊಳಗೆ ಅಸಾಮಾನ್ಯವೆನಿಸುವಷ್ಟು ಸತ್ವವುಳ್ಳ ವಚನಗಳು.

ಬಸವಣ್ಣನ ವಚನಗಳಲ್ಲಿ ಹೆಚ್ಚಿನವು ಶಿವತತ್ತ್ವವನ್ನು ನಿರೂಪಿಸುತ್ತವೆ; ಭಕ್ತನು ಮಾಡಬಾರದ್ದನ್ನು ಹಾಗೂ ಮಾಡಬೇಕಾದ್ದನ್ನು ನೇರವಾದ ಮಾತುಗಳಲ್ಲಿ ಹೇಳುತ್ತವೆ ;

ಕಳಬೇಡ, ಕೊಲಬೇಡ
ಹುಸಿಯ ನುಡಿಯಲು ಬೇಡ
ಮುನಿಯಬೇಡ.
ಅನ್ಯರಿಗೆ ಅಸಹ್ಯಪಡಬೇಡ,
ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ!
ಇದೇ ಬಹಿರಂಗ ಶುದ್ಧಿ!
ಇದೇ ನಮ್ಮ ಕೂಡಲಸಂಗಮನೊಲಿಸುವ ಪರಿ!

ಮತ್ತು

ದೇವಲೋಕ ಮರ್ತ್ಯಲೋಕವೆಂಬುದು
ಬೇರಿಲ್ಲ ಕಾಣಿರಣ್ಣ.
ಸತ್ಯವ ನುಡಿವುದೇ ದೇವಲೋಕ;
ಮಿಥ್ಯವ ನುಡಿವುದೇ ಮರ್ತ್ಯಲೋಕ:
ಆಚಾರವೇ ಸ್ವರ್ಗ, ಅನಾಚಾರವೇ ನರಕ.
ಕೂಡಲಸಂಗಮದೇವ ನೀನೇ ಪ್ರಮಾಣು.

ಇಲ್ಲಿ ನೀತಿಬೋಧನೆಯೇ ಮುಖ್ಯವಾಗಿದ್ದು, ತತ್ತ್ವ ಮೂರ್ತವಾಗುವುದಿಲ್ಲ. ಅಂತರಂಗ–ಬಹಿರಂಗ, ದೇವಲೋಕ–ಮರ್ತ್ಯಲೋಕ, ಸ್ವರ್ಗ–ನರಕ ಇತ್ಯಾದಿಗಳ ಭಿನ್ನ–ಅಭಿನ್ನಗಳನ್ನು ನಿರೂಪಿಸುವುದಕ್ಕೆ ಬೇಕಾದ ಪಾದ ರಚನೆಯಿದೆ; ಅನುಪ್ರಾಸವಿದೆ. ಆದರೆ ಸಾಮಾನ್ಯ ಅನುಭವವನ್ನು ವ್ಯವಸ್ಥಿತಗೊಳಿಸುವ ಅಥವಾ ಅಸಾಮಾನ್ಯವನ್ನು ವ್ಯಂಜಿಸುವ ಪ್ರತಿಮೆಗಳಿಲ್ಲ. ವಚನದ ಒಟ್ಟು ನಿರ್ಮಿತಿಯಲ್ಲಿ, ಲಯದಲ್ಲಿ ಹೆಚ್ಚಿನ ಕಲೆಗಾರಿಕೆ ಕಾಣುವುದಿಲ್ಲ. ಆದರೆ ಇನ್ನು ಕೆಲವು ವಚನಗಳಲ್ಲಿ ಲಯ ಹಾಗೂ ಪ್ರತಿಮೆಗಳು ಭಾವಕ್ರಿಯೆಗೆ ಪೂರಕವಾಗಿ ದುಡಿಯುತ್ತವೆ.

ಇವನಾರವ ಇವನಾರವ ಇವನಾರವ
ಎಂದೆನಿಸದಿರಯ್ಯ.
ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸಯ್ಯ
ಕೂಡಲಸಂಗಮದೇವಯ್ಯ ನಿಮ್ಮಯ ಮನೆಮಗ
ನೆಂದೆನಿಸಯ್ಯ.

ಕೂಡಲಸಂಗಮನ ಬಳಗವು ತನ್ನನ್ನು ಪರಕೀಯನಂತೆ ಕಂಡು ತನಗೆ ಮುಜುಗರವಾಗಬಹುದೆಂಬ ಕಳವಳ ಭಕ್ತನನ್ನು ಕಾಡುತ್ತದೆ. ಕೂಡಲಸಂಗಮನ 'ಮನೆಮಗ'ನಾದರೆ ಮುಜುಗರ ತಪ್ಪುತ್ತದೆ. ಸಂಬಂಧ ಸಹಜವಾದಾಗ ನಡವಳಿಕೆಯೂ ಸಹಜವಾಗುತ್ತದೆ. ಹೀಗೆ ಈ ವಚನದಲ್ಲಿ 'ಮನೆಮಗ' ಎಂಬ ಒಂದು ಸರಳ ಪ್ರತಿಮೆಯ ಸುತ್ತ ಜರುಗುವ ಭಾವಾಭಿನಯಕ್ಕೆ 'ಇವನಾರವ', 'ಇವನಮ್ಮವ' ಎಂಬ ಪರಕೀಯತೆ ಹಾಗೂ ಆತ್ಮೀಯತೆಯನ್ನು ಸ್ಪಂದಿಸುವ ಸಾಮಾನ್ಯ ಪದಗಳ ನಿಯಂತ್ರಿತ ಪುನರಾವರ್ತನೆಯ ಮೂಲಕ ಆಡುಮಾತಿಗೆ ದೂರವಿಲ್ಲದ ಲಯವು ಪೋಷಕವಾಗುತ್ತದೆ.

''ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ'' ವಚನದಲ್ಲಿ ಪದಗಳ ಪುನರುಕ್ತಿ ಇನ್ನೂ ಪರಿಣಾಮಕಾರಿಯಾಗಿದೆ :

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?
ಹೊಸ್ತಿಲಲ್ಲಿ ಹುಲ್ಲುಹುಟ್ಟಿ, ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?
ತನುವಿನಲ್ಲಿ ಹುಸಿತುಂಬಿ, ಮನದಲ್ಲಿ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ
ಕೂಡಲಸಂಗಮದೇವ.

ಮೊದಲ ಸಾಲಿನಲ್ಲಿ ಬರುವ ''ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?'' ಎಂಬ ಪ್ರಶ್ನೆ ಮತ್ತೆ ಮೂರನೆಯ ಸಾಲಿನಲ್ಲಿ ಮರುಕಳಿಸುತ್ತದೆ. ಆದುದರಿಂದ ಹೊಸ್ತಿಲ ಮುಂದೆ ಹುಲ್ಲು ಬೆಳೆದು, ಒಳಗೆ ಧೂಳು ತುಂಬಿರುವ ಮನೆಯಲ್ಲಿ ಯಜಮಾನ ಇಲ್ಲವೋ ಏನೋ ಎನ್ನುವ ಅನುಮಾನ ಬಲವಾಗುತ್ತದೆ. 'ಇದ್ದಾನೋ ಇಲ್ಲವೋ' ಎನ್ನುವ ಪ್ರಶ್ನೆಗೆ ''ಮನೆಯೊಳಗೆ ಮನೆಯೊಡೆಯನಿಲ್ಲ'' ಎಂಬ ಉತ್ತರ ವಚನದ ಕೊನೆಯಲ್ಲಿ ದೊರೆಯುವುದು ಅನಿವಾರ್ಯವಾಗುತ್ತದೆ. ಹೊಸ್ತಿಲಲ್ಲಿ ಹುಟ್ಟಿದ ಹುಲ್ಲು, ಒಳಗೆ ತುಂಬಿದ ರಜ—ಇವಕ್ಕೆ ಸಂವಾದಿಯಾಗಿ ತನುವಿನಲ್ಲಿ ತುಂಬಿದ ಹುಸಿ ಹಾಗೂ ಮನದಲ್ಲಿ ತುಂಬಿರುವ ವಿಷಯ. ಅಂದರೆ ಇಂದ್ರಿಯಜನ್ಯ ಲಾಲಸೆ ಬರುತ್ತವೆ. ಭಾರತೀಯ ಪರಂಪರೆಯಲ್ಲಿ ಮನುಷ್ಯ ಶರೀರಕ್ಕೆ ಮನೆ ರೂಪಕವಾಗಿ ಬರುವುದು ಹೊಸತೇನೂ ಅಲ್ಲ. ದೇಹ, ಮನೆ, ದೇವಾಲಯ ಹಾಗೂ ಜಗತ್ತು, ಇವು ಆತ್ಮ ತಂಗುವ ಆಲಯಗಳು ಎಂಬ ಕಲ್ಪನೆ ನಮ್ಮಲ್ಲಿ ಇರುವುದರಿಂದ ಆತ್ಮನ ಒಂದು ಆಲಯವು ಇನ್ನೊಂದು ಆಲಯಕ್ಕೆ—ದೇಹವು ಮನೆಗೆ ಅಥವಾ ದೇವಾಲಯಕ್ಕೆ—ರೂಪಕವಾಗಿ ಬರುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಈ ವಚನದಲ್ಲಿ ದೇಹಕ್ಕೆ ರೂಪಕವಾಗಿರುವ ಮನೆಯು ಒಡೆಯನ ಇರುವಿಕೆ

ಯನ್ನು ಖಚಿತಗೊಳಿಸುವ ಬದಲಾಗಿ ಅವನು ಇರಬೇಕಾದಲ್ಲಿ ಇಲ್ಲ ಎಂಬ ಅನುಮಾನವನ್ನು ದೃಢಪಡಿಸುತ್ತದೆ. ರಜಸ್ಸು, ಹುಸಿ, ಬಯಕೆಗಳು ತುಂಬಿಕೊಂಡಿರುವುದರಿಂದ, ದೇಹದೇಗುಲದಲ್ಲಿ ಕೂಡಲಸಂಗಮನಿಗೆ ಎಡೆಯೇ ಇಲ್ಲದಂತಾಗಿದೆ. ಇಲ್ಲಿ "ಉಳ್ಳವರು ಶಿವಾಲಯವ ಮಾಡುವರು" ವಚನದಲ್ಲಿ ಬರುವ "ದೇಹವೇ ದೇಗುಲ" ಎಂಬ ಸಮೀಕರಣವನ್ನು ಜ್ಞಾಪಿಸಿಕೊಳ್ಳಬಹುದು. ಮನೆ–ತನು, ದೇಹ–ದೇಗುಲಗಳು ಮೂಲತಃ ಒಂದೇ ವಿಚಾರಧಾರೆಯಿಂದ ಹುಟ್ಟಿ ಬಂದವುಗಳಾದರೂ ಈ ಎರಡು ವಚನಗಳಲ್ಲಿ ಅವು ಕ್ರಿಯಾತ್ಮಕವಾಗಿ ಭಿನ್ನವಾಗಿವೆ ಎಂಬುದನ್ನು ಗಮನಿಸಬೇಕು. ದೇಹವೇ ದೇಗುಲ ಎಂಬ ನಂಬುಗೆಯು ಸ್ವಾನುಭವದಲ್ಲಿ ನಿಜವಾಗುವ ಮುನ್ನ ಬರುವ ಎಡರು–ತೊಡರುಗಳನ್ನು ಕೊಳಕು ತುಂಬಿದ ಮನೆಯೊಳಗೆ ಮನೆಯೊಡೆಯನಿಲ್ಲ ಎಂಬ ನಕಾರವು ಸೂಕ್ಷ್ಮವಾಗಿ ಸೂಚಿಸುತ್ತದೆ. ಆ ಮೂಲಕ ಶರೀರವೇ ದೇವಾಲಯ ಎನ್ನುವ ಕೆಚ್ಚಿನ ನಂಬುಗೆಯನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಮಾಡುತ್ತದೆ.

ಬಸವಣ್ಣನ ವಚನದಲ್ಲಿನ ಒಡೆಯ ಹೊಲಸು ತುಂಬಿದ ಮನೆಯಿಂದ ಸದ್ದಿಲ್ಲದೆ ಹೊರಟುಹೋಗಿದ್ದರೆ, ಅಲ್ಲಮನ ಒಂದು ವಚನದಲ್ಲಿ ಬೆಂಕಿಹತ್ತಿ ಉರಿದರೂ ಹದಕ್ಕೆ ಬಾರದ ತಾವಿನಿಂದ ಮನೆಯೊಡೆಯನು ತತ್ತರಿಸಿ ತೊಲಗುವ ಪರಿಸ್ಥಿತಿ ಬರುತ್ತದೆ :

"ಆರೂ ಇಲ್ಲದಾರಣ್ಯದೊಳಗೆ ಮನೆಯ ಕಟ್ಟಿದರೆ, ಕಾಡುಗಿಚ್ಚು ಎದ್ದು ಬಂದು ಹತ್ತಿತಲ್ಲಾ! ಆ ಉರಿಯೊಳಗೆ ಮನೆ ಬೇವಲ್ಲಿ ಮನೆಯೊಡೆಯನೆತ್ತ ಹೋದನೋ ? ಆ ಉರಿಯೊಳಗೆ ಬೇದ ಮನೆ ಬೇಗೆಯಾಗದುದ ಕಂಡು ಮನೆಯೊಡೆಯನಳಲುತ್ತ ಬಳಲುತ್ತೈದಾನೆ. ಗೋಹೇಶ್ವರ, ನಿಮ್ಮ ಒಲವಿಲ್ಲದ ತಾವ ಕಂಡು ಮನದಲ್ಲಿ ಹೇಸಿ ತೊಲಗಿದೆನಯ್ಯ"

"ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?" ವಚನದ ತನು–ಮನೆಗಳ ಸಂಬಂಧಕ್ಕೆ ಸಂಗತವಾದ ಒಂದು ಕಿವಿಮಾತು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ವಚನಕಾರನಲ್ಲಿಯೂ ಸಿಗುತ್ತದೆ. ಪಡೆದ ನಂಬಿಕೆಯನ್ನು, ಕೇಳಿ ತಿಳಿದ ತತ್ತ್ವವನ್ನು ಅನುಭಾವವೆಂದು ಹೇಳಿಕೊಳ್ಳುವ ವಾಗದ್ವೈತಿಗಳನ್ನು ಉದ್ದೇಶಿಸಿ ಅವನು ಅನುಭಾವವೆಂಬುದು **ನಿಜವಾಸದಲ್ಲಿರಿಸುವದು** ಎನ್ನುತ್ತಾನೆ :

"ಅನುಭಾವವ ನುಡಿವ ಅಣ್ಣಗಳಿರಾ, ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ. ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂಬುದು ತಾನಾರೆಂಬುದ ತೋರುವುದು. ಅನುಭಾವವೆಂಬುದು ನಿಜವಾಸದಲ್ಲಿರಿಸುವದು...."

ಮನೆಯೊಡೆಯನನ್ನು ನಿಜವಾಸದಲ್ಲಿರಿಸುವ, ಅಂದರೆ ತಾನು ಯಾರು ಎಂದು ತೋರುವ ಆತ್ಮವಿದ್ಯೆಯು ರಹಸ್ಯವನ್ನು ಬಹಿರಂಗದಲ್ಲಿ ಬಿತ್ತರಿಸಲಿಕ್ಕೆ ಆಗುವುದಿಲ್ಲ ಎನ್ನುವ ಧಾಟಿಯಲ್ಲಿರುವ ಈ ಕೆಳಗಿನ ಬಿರುನುಡಿಯ ವಚನ ಚೆನ್ನಬಸವಣ್ಣನದ್ದು :

"ಅನುಭಾವ ಅನುಭಾವವೆಂದಿರಿ. ಅನುಭಾವವೆಂಬುದು ನೆಲದ ಮರೆಯ ವಿಧಾನ ಕಾಣಿರೋ. ಅನುಭಾವವೆಂಬುದೇನು ರಚ್ಚೆಯ ಮಾತೆ ? ಅನುಭಾವವೆಂಬುದೇನು ಸಂತೆಯ ಸುದ್ದಿಯೇ? ಅನುಭಾವವೆಂಬುದೇನು ಬೀದಿಯ ಪಸಾರವೆ? ಏನಹೇಳುವೆನಯ್ಯಾ ಅನುಭಾವದ ಘನವನು? ಆನೆಯ ಮಾನದೊಳಗಿಕ್ಕಿದೊಡೆ ಅಡಗುವದೆ, ದರ್ಪಣದೊಳಗಲ್ಲದೆ? ಆ ಹಾಗೆ ಕಂಡಕಂಡಲ್ಲಿ ಗೋಷ್ಠಿ, ಗೋಷ್ಠಿ, ನಿಂದನಿಂದಲ್ಲಿ ಬಂದಬಂದಲ್ಲಿ ಅನುಭಾವವ ಮಾಡುವ ಪಾತಕರನೆನಗೊಮ್ಮೆ ತೋರದಿರಯ್ಯಾ ಕೂಡಲ ಚೆನ್ನಸಂಗಮದೇವಾ".

ಇದನ್ನ "ಕರುಳಕಲೆ ಪ್ರಕಟಿತ ಉಂಟೆ ಕೂಡಲಸಂಗಮದೇವ" ಎಂದು ಬಸವಣ್ಣ ಮೆಲುನುಡಿಯಲ್ಲಿ ಕೇಳುವಾಗ, ಪ್ರಶ್ನೆ ಹೆಚ್ಚು ಆಪ್ತವಾಗುತ್ತದೆ, ಪರಿಣಾಮಕಾರಿಯಾಗುತ್ತದೆ.

ತತ್ತ್ವದ ಅಥವಾ ನಂಬಿಕೆಯ ನೆಲೆಯಲ್ಲಿ ದೇಹ–ದೇಗುಲಗಳನ್ನು ಸಮೀಕರಿಸುವುದಕ್ಕೂ, ತತ್ತ್ವ–ನಂಬಿಕೆಗಳಿಗೆ ಅನುಭಾವ ಆಶ್ರಯವಾಗಿ ಬರುವುದಕ್ಕೂ ಇರುವ ಅಂತರವನ್ನು ವಚನಕಾರರಲ್ಲಿ ಕೆಲವರು ಗಮನಿಸಿ ಎಚ್ಚರಿಕೆಯ ಮಾತುಗಳನ್ನಾಡಿದ್ದರೆಂಬುದು ಇಲ್ಲಿ ಮುಖ್ಯ. ಬಸವಣ್ಣನ ವಚನಗಳಲ್ಲಿರುವ ಪರಮತ ಪರದೈವಗಳ ನಿಂದೆಯನ್ನು ಬದ್ಧ ಸಾಹಿತ್ಯದ ಯೋಜಿತ ವಿಸಂಗತಿಗಳಲ್ಲಿ ಒಂದು ಎಂದು ಈಗ ನಾವು ಹೇಳಬಹುದಾದರೂ ಆ ನಿಂದೆಯಿಂದ ವಚನಕಾರನ ಘನತೆಯೇನೂ ಹೆಚ್ಚುವುದಿಲ್ಲ ಎನ್ನುವುದು ಸ್ಪಷ್ಟ. ಆದರೆ ಆತ್ಮವಿಮರ್ಶೆ ಹಾಗೂ ಸ್ವಪಂಥೀಯರ ಬೇಜವಾಬ್ದಾರಿಯನ್ನು ಕುರಿತು ಲೇವಡಿ–ಇವು ನೇರ ಹೇಳಿಕೆಗಳ ಗುಂಪಿಗೇ ಸೇರಿಸಬಹುದಾದ ವಚನಗಳನ್ನೂ ಮೊನಚಾಗಿಸುತ್ತವೆ.[3]

'ಇವನಾರವ ಇವನಾರವ' ಮತ್ತು 'ಮನೆಯೊಡೆಯ', ಇವೆರಡೂ ಕಾವ್ಯಗುಣಗಳಿರುವ ವಚನಗಳೆಂಬುದರಲ್ಲಿ ಅನುಮಾನ ಇಲ್ಲ. 'ಮನೆಯೊಡೆಯ' ವಚನದ ಬೀಸು ಮತ್ತು

ಅವರ ಅನುಭವದ ವ್ಯಾಪ್ತಿ ಸ್ವಲ್ಪ ಹಿರಿದಾಗಿರುವುದರಿಂದ ಆ ಮಟ್ಟಿಗೆ ಅದು ಹೆಚ್ಚು ಸಫಲವಾಗುತ್ತದೆ. ಆದರೆ ಈ ರೀತಿಯ ವಚನಗಳ ಅರ್ಥ ಫಲಿಸುವುದು ಒಂದು ಸ್ತರದಲ್ಲಿ ಮಾತ್ರ. 'ಮನೆಯಲ್ಲಿ ರಜ ತುಂಬಿ' ಎನ್ನುವಲ್ಲಿ 'ರಜ'ಕ್ಕೆ 'ಧೂಳು' ಮತ್ತು 'ರಜೋಗುಣ'—ಈ ಎರಡು ಅರ್ಥಗಳು ಅನ್ವಯಿಸುವುದಾದರೂ ಇಲ್ಲಿ ಶ್ಲೇಷೆ ವಚನದ ಅರ್ಥವನ್ನು ಬೇರೊಂದು ಮಜಲಿಗೆ ಹಾಯಿಸುವುದಿಲ್ಲ. ವಚನದ ಅನುಭವವನ್ನು ಮನೆಗೆ ತನು ಸಂವಾದಿಯಾಗಿರುವ ಚೌಕಟ್ಟಿಗೆ ಹೊರತಾದ ಬೇರೊಂದು ಚೌಕಟ್ಟಿನಲ್ಲಿಟ್ಟು ನೋಡುವಂತೆ ಶ್ಲೇಷೆ ಒತ್ತಾಯಿಸುವುದಿಲ್ಲ.

ಈ ಮಾದರಿಯ ಇನ್ನೊಂದು ವಚನ, ಹಾವಾಡಿಗ ಮತ್ತು ಆವನ ಮೂಗಿಲ್ಲದ ಹೆಂಡತಿಗೆ ಸಂಬಂಧಿಸಿದ್ದು:

ಹಾವಾಡಿಗನು, ಮೂಕೊರತಿಯು ತನ್ನ ಮಗನ ಮದುವೆಗೆ
ಶಕುನವ ನೋಡ ಹೋಹಾಗ,
ಇದಿರಲ್ಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
ಶಕುನವ ಹೊಲ್ಲೆಂಬ ಚದುರನ ನೋಡಾ!
ತನ್ನ ಸತಿ ಮೂಕೊರತಿ, ತನ್ನ ಕೈಯಲು ಹಾವು!
ತಾನು ತನ್ನ ಭಿನ್ನವನರಿಯದೆ
ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲ ಸಂಗಮದೇವ.

ಮಗನ ಮದುವೆಗೆ ಶಕುನಕೇಳಲು ಹೊರಟ ಹಾವಾಡಿಗ ಮೂಕೊರತಿಯರಿಗೆ ಕೈಯಲ್ಲಿ ಹಾವು ಹಿಡಿದುಕೊಂಡಿರುವ ಗಂಡು, ಮೂಗಿಲ್ಲದ ಹೆಣ್ಣು—ಇಂತಹ ಇನ್ನೊಂದು ಜೊತೆ ಇದಿರಾದಾಗ ಅವರಿಗೆ ತಮ್ಮನ್ನು ತಾವೇ ಕಂಡ ಅನುಭವವಾಗಿರಬೇಕಾದರೂ ಆತ್ಮಜ್ಞಾನ ಒಂದಿಷ್ಟೂ ಮೂಡದೆ, ಅಪಶಕುನವಾಯಿತೆಂದು ಅವರು ತಮ್ಮ ಮನೆಗೆ ಹಿಂದಿರುಗುವ ಈ ದೃಶ್ಯ ಅನನ್ಯವಾದದ್ದು. ನಿಜಸ್ಥಿತಿಯನ್ನು ಅರಿತುಕೊಳ್ಳದೆ, ತಮ್ಮ ನ್ಯೂನತೆಯನ್ನು ಮರೆತು ಇತರರನ್ನು ದೂಷಿಸುವ ಈ ಬೆರಗಿನ ಅನುಭವವನ್ನು ಭಕ್ತನು ಕೂಡಲಸಂಗಮನೊಡನೆ ಹಂಚಿಕೊಳ್ಳುತ್ತಾನೆ. "ತಾನು ತನ್ನ ಭಿನ್ನವರಿಯದೆ ಅನ್ಯರನೆಂಬ ಕುನ್ನಿಯನೇನೆಂಬೆ" ಎಂಬ ಉದ್ಗಾರ ಈ ದಂಪತಿಗಳಿಗೆ ಅನ್ವಯಿಸುವುದರ ಜೊತೆಗೆ ಇಲ್ಲಿ ನಡೆಯುವ ಕ್ರಿಯೆಯು ಸಾರ್ವತ್ರಿಕವಾದ ಒಂದು ಅನುಭವವೂ ಹೌದು ಎಂದು ಸೂಚಿಸುತ್ತದೆ. ಹೀಗಾಗಿ ಕೊನೆಯ ಎರಡು ಸಾಲುಗಳಿಂದ ವಚನದ ಕಾವ್ಯತ್ವಕ್ಕೆ ಹೆಚ್ಚಿನ ಧಕ್ಕೆಯಾಗುವುದಿಲ್ಲ.

ಈ ವಚನದೊಂದಿಗೆ "ಲೋಕದ ಡೊಂಕ ನೀವೇಕೆ ತಿದ್ದುವಿರಿ" ವಚನವನ್ನು ಹೋಲಿಸಿದರೆ ದೃಶ್ಯಾನುಭವಕ್ಕೂ ನೀತಿಗಳಿಗೂ ಇರುವ ಗುಣವ್ಯತ್ಯಾಸ ಗೊತ್ತಾಗುತ್ತದೆ:

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ :
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ
ನಮ್ಮ ಕೂಡಲ ಸಂಗಮದೇವ.

ಇಲ್ಲಿ "ಲೋಕದ ಡೊಂಕ" ಮತ್ತು "ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ" ಎಂಬ ಮಾತುಗಳಲ್ಲಿ ಕಾಣುವ ತೆಳ್ಳಗಿನ ಚಿತ್ರರೇಖೆಗಳು ಇಲ್ಲದೆ ಹೋಗಿದ್ದರೆ ವಚನ ತೀರಾ ಕಳಪೆಯಾಗುತ್ತಿತ್ತು. ಆದರೂ "ಹಾವಾಡಿಗನು, ಮೂಕೊರತಿಯು" ಮತ್ತು "ಮನೆಯೊಳಗೆ ಮನೆಯೊಡೆಯ ನಿದ್ದಾನೊ ಇಲ್ಲವೊ" ವಚನಗಳ ದೃಶ್ಯಚೈತನ್ಯ ಮತ್ತು ಕ್ರಿಯಾ ಚೈತನ್ಯ ಇಲ್ಲಿ ಇಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

ಇನ್ನು, ಒಂದೇ ಮಜಲಿನಲ್ಲಿ ಚಲಿಸಿ ಸಫಲವಾಗುವ ವಚನಗಳಿಗಿಂತಲೂ ಹೆಚ್ಚಿನದನ್ನು ಸಾಧಿಸುವ ವಚನಗಳನ್ನು ಚರ್ಚಿಸಬೇಕಾಗಿದೆ. ಅವುಗಳಲ್ಲಿ ಒಂದನ್ನು ನಾನು ಇಲ್ಲಿ ವಿಶ್ಲೇಷಿಸುತ್ತೇನೆ:

ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇಬೇಕು.
ದಕ್ಕನುಂಗಿದಂತೆ ಬೆರೆದುಕೊಂಡಿರಬೇಡ.
ಬೇಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದರೆ,
ಬೇಡಿದ ಪದವಿಯನೀವ ಕೂಡಲಸಂಗಮದೇವ.

ಇಲ್ಲಿನ ಭಾವಕ್ರಿಯೆ ಲಿಂಗ–ಜಂಗಮ, ದಕ್ಕ–ಗೊನೆವಾಳೆ–ಈ ಜೋಡಿಗಳ ಸುತ್ತ ನಡೆಯುತ್ತದೆ. ಕ್ರಿಯೆ ಒಂದೇ ಮಟ್ಟದಲ್ಲಿ ಜರುಗದೆ, ವಚನ ಅತ್ತ ಇತ್ತ ಕಣ್ಣು ಹಾಯಿಸಿ ಮುಂದೆ ಸಾಗುತ್ತದೆ. ಹೀಗಾಗಿ ಏಕಮುಖವಾದ ಚಲನೆಗೆ ಪೋಷಕವಾಗಿ ಬರುವ ಪದಗಳ ಪುನರಾವರ್ತನೆಯ ಅಗತ್ಯ ಇಲ್ಲಿ ಇಲ್ಲ. "ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇಬೇಕು" ಎಂಬ ಅಚ್ಚುಕಟ್ಟಾದ ಮೊದಲ ಸಾಲು ಒಂದು ಚುಟುಕಿನ ಹುರುಳು ನುಡಿಯಂತೆ ಇದ್ದರೆ, "ದಕ್ಕನುಂಗಿದಂತೆ ಬೆರೆದುಕೊಂಡಿರಬೇಡ" ಎಂಬ ಎರಡನೆಯ ಸಾಲು ಗಾದೆಯ ಮಾತಿನಂತೆ ಇದೆ. ಮೊದಲ ಸಾಲು 'ಬೇಕು'ವಿನೊಂದಿಗೆ ಮುಕ್ತಾಯ ಗೊಳ್ಳುವುದರ ಮೂಲಕ ಎಚ್ಚರಿಕೆ ನೀಡಿದರೆ ಎರಡನೆಯ ಸಾಲು "ಬೇಡ" ಎಂದು ಎಚ್ಚರಿಸುತ್ತದೆ. ಗಾದೆಯ ಒರಟುಮಾತಿನ ನಂತರ ಬರುವ ಹಾಗೂ ಸ್ವರನಾದ್ಯಶ್ಯವನ್ನು ಮುಖ್ಯವಾಗಿ ಅವಲಂಬಿಸಿದ

'ಬೇಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದರೆ ಬೇಡಿದ ಪದವಿಯನೀವ ಕೂಡಲಸಂಗಮದೇವ' ಎಂಬ ಮೂರನೆಯ ಮತ್ತು ನಾಲ್ಕನೆಯ ಪಾದಗಳು ಬಾಗಿ ಬಳುಕುವ ಕ್ರಿಯೆಯನ್ನು ಸಮರ್ಪಕವಾಗಿ ವ್ಯಂಜಿಸುತ್ತವೆ. ವಚನ ಅಭಿನಯಿಸುವ ಒಟ್ಟು ಅನುಭವವು ತಿಳುವಾಗಿಲ್ಲದೆ ಇರುವುದರಿಂದ ಲಯವೂ ಅಷ್ಟು ಸರಳವಾಗಿ ಇಲ್ಲ.

ಪ್ರಾರಂಭದಲ್ಲಿ ಬರುವ "ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇಬೇಕು" ಎಂಬ ಸಾಲನ್ನು ವ್ಯಾಖ್ಯಾನಿಸುವಲ್ಲಿ ಸಮಸ್ಯೆಗಳು ಏಳುತ್ತವೆ. ವೀರಶೈವರು ಇಷ್ಟಲಿಂಗವನ್ನೂ ಜಂಗಮರನ್ನೂ ಆರಾಧಿಸುವುದರಿಂದ, "ಇಷ್ಟಲಿಂಗವನು ದೇಹದಲ್ಲಿ ಧರಿಸಿಕೊಂಡು ಅದನ್ನು ಪೂಜಿಸುವವರು ಜಂಗಮರು ಬಂದಾಗ ಅವರಿಗೆ ಭಯಭಕ್ತಿಯಿಂದ ದಾಸೋಹ ಮಾಡಬೇಕು" ಎಂದು ಈ ಸಾಲನ್ನು ಅರ್ಥಮಾಡಿಕೊಳ್ಳಬಹುದು. ವೈದಿಕ ಸಂಪ್ರದಾಯದ ಶೈವರು ಮುಂದುವರೆಸಿಕೊಂಡು ಬಂದಿದ್ದ ಸ್ಥಾವರಲಿಂಗ ಪೂಜೆಯನ್ನು ವೀರಶೈವ ಧರ್ಮ ಒಂದು ಹಂತದಲ್ಲಿ ತೀವ್ರವಾಗಿ ವಿರೋಧಿಸಿರುವುದು ತಿಳಿದ ಸಂಗತಿಯಾಗಿದೆ. ಆದ್ದರಿಂದ 'ಶಿವಾಲಯದಲ್ಲಿ ಸ್ಥಾವರಲಿಂಗದ ಪೂಜೆ ಮಾಡಿದವರು ತಮ್ಮ ಈ ತಪ್ಪಿಗಾಗಿ ಜಂಗಮವಾದ ಇಷ್ಟಲಿಂಗದ ಕ್ಷಮೆ ಕೋರಬೇಕು'ಎಂದು ವ್ಯಾಖ್ಯಾನ ಮಾಡಬಹುದು. ಆದರೆ, ವಿಗ್ರಹ ಪೂಜೆಗಾಗಿ ಶಿವಾಲಯಗಳಿಗೆ ಹೋಗುವುದನ್ನು ವಿರೋಧಿಸಿ ಅವೈದಿಕವಾಗಿ ಹೊಸ ಧರ್ಮವೊಂದನ್ನು ಸ್ಥಾಪಿಸಿದ ಬಸವಣ್ಣನಲ್ಲಿ ತನ್ನ ಪೂರ್ವಾಶ್ರಮದ ವೈದಿಕ ಸಂಸ್ಕಾರ ಪೂರ್ತಿಯಾಗಿ ಅಳಿಸಿಹೋಗಿರಲಾರದು. ಈ ಮಾತನ್ನು ಒಪ್ಪುವುದಾದರೆ "ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇಬೇಕು" ಎಂಬುದನ್ನು "ದೇವಾಲಯದಲ್ಲಿ ಶಿವಲಿಂಗವನ್ನು ಪೂಜೆ ಮಾಡಿದ ಬಳಿಕ ತಾವು ತಮ್ಮ ದೇಹದಲ್ಲಿ ಧರಿಸಿರುವ ಇಷ್ಟಲಿಂಗವನ್ನು ನಿಷ್ಠೆಯಿಂದ ಆರಾಧಿಸಬೇಕು" ಎಂದೂ ಅರ್ಥ ಮಾಡಬಹುದು. ಬಸವಣ್ಣನ ಬೇರೆ ಎರಡು ವಚನಗಳಲ್ಲಿ ಬರುವ "ಸ್ಥಾವರ ಜಂಗಮ ಒಂದೆಂದರಿದರೆ ಕೂಡಲಸಂಗಮದೇವ ಶರಣು ಸನ್ನಿಹಿತನು" ಮತ್ತು "ಸ್ಥಾವರ ಜಂಗಮ ಒಂದೆಂದುದು ಕೂಡಲಸಂಗನ ವಚನ" ಇವು ಈ ವ್ಯಾಖ್ಯಾನವನ್ನು ಸಮರ್ಥಿಸುತ್ತವೆ.

ಗಾದೆಯ ಮಾತಿನಂತಿರುವ "ದಕ್ಕನುಂಗಿದಂತೆ ಬೆರೆದುಕೊಂಡಿರಬೇಡ" ಎಂಬ ಎರಡನೆಯ ಸಾಲಿನಲ್ಲಿ ಬರುವ "ದಕ್ಕು" ಪದಕ್ಕೆ "ಚೂಪಾದ ತುದಿಯುಳ್ಳ ಕಟ್ಟಿಗೆ ಅಥವಾ ಕಬ್ಬಿಣದ ತುಂಡು" ಎಂಬ ಅರ್ಥ ಇದೆ. ಶೂಲದಂತಿರುವ ಕಡ್ಡಿಯನ್ನು ನುಂಗಿದ ವ್ಯಕ್ತಿ ಸೆಟೆದು ನೆಟ್ಟಗಾಗುವುದು ಸ್ವಾಭಾವಿಕ. ಅವನ ಶರೀರ ತನಗೆ ಸಹಜವಾದ ಬಾಗಿಬಳುಕುವ ಗುಣವನ್ನು ತಾತ್ಕಾಲಿಕವಾಗಿ ಕಳೆದುಕೊಳ್ಳುತ್ತದೆ. ಪರಕೀಯವಾದ ವಸ್ತು ಹೊಟ್ಟೆಯೊಳಗೆ ಇದ್ದವರಂತೆ ನಿಮಿರಿನಿಂತವನು ಇಷ್ಟಲಿಂಗವನ್ನಾಗಲೀ ಜಂಗಮರನ್ನಾಗಲೀ ಬಾಗಿ ಪೂಜಿಸಲಾರ.

ಕಡ್ಡಿನುಂಗಿದಂತೆ ಬೆರೆದುಕೊಳ್ಳುವವನ ಚಿತ್ರಕ್ಕೆ ತೀರ ಭಿನ್ನವಾಗಿರುವ, ಬಳುಕುವ ಬಾಳೆಯ ಚಿತ್ರ ವಚನದ ಮೂರನೆಯ ಮತ್ತು ನಾಲ್ಕನೆಯ ಸಾಲುಗಳಲ್ಲಿ ಮೂಡುತ್ತದೆ. ಇದು ಜಂಗಮರು ಆಗಮಿಸಿದಾಗ ಭಕ್ತನು ಕೋಲಿನಂತೆ ನೆಟ್ಟಗೆ ನಿಂತಿರದೆ ಬೇಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಳ್ಳುವ ಚಿತ್ರ. ಬಾಳೆಯು ಸ್ವಂತ ಕಾಯಕದಿಂದ ಕಾಯಿ ಸೊಕ್ಕಿ ಬೆಳೆಯುತ್ತದೆ. ಆದರೆ ಗೊನೆ ಬೀಗಿದ ಬಾಳೆ ನೆಟ್ಟಗೆ ನಿಲ್ಲುವದಿಲ್ಲ. ತನ್ನ ಕಾಯಕವನ್ನು ಪೂಜಾಫಲವಾಗಿ ಅರ್ಪಿಸುವ ಭಂಗಿಯಲ್ಲಿ ಬಾಗಿ ನಿಲ್ಲುತ್ತದೆ. ಹಾಗೆಯೇ ಭಕ್ತಿಯ ಪುಷ್ಟಿಯಿಂದ ಬಳುಕುವ ಭಕ್ತನು ಜಂಗಮವಾದ ಇಷ್ಟಲಿಂಗಕ್ಕೆ ಮತ್ತು ಮನೆಯ ಬಾಗಿಲಿಗೆ ಬರುವ ಜಂಗಮರಿಗೆ ತನ್ನ ಕಾಯಕದ ಫಲವನ್ನು ಭಯ–ವಿನಯಗಳಿಂದ ಅರ್ಪಿಸಿ ಒಲೈಸುವ ಆವಶ್ಯಕತೆಯನ್ನು ವಚನ ಅಭಿನಯಿಸುತ್ತದೆ.

ಆದರೆ, ಪಡಿತರಕೊಟ್ಟು ಸೇವೆ ಮಾಡಬೇಕಾಗುತ್ತವೆ ಎಂಬ ಭಯದಿಂದ ಜಂಗಮರನ್ನು ಕಂಡು ಸೆಟೆದು ದೂರ ನಿಲ್ಲುವ ಗೃಹಸ್ಥರು ಹನ್ನೆರಡನೆಯ ಶತಮಾನದಲ್ಲಿಯೂ ಇದ್ದುದಕ್ಕೆ ಈ ವಚನದಾಖಲೆಯಾಗುತ್ತದೆ. ಇನ್ನೊಂದುಕಡೆ "ಕಾಡುವ ಬೇಡುವ ಜಂಗಮ ಬಂದರೆ ನೀಡಲು ಬಾರದು ಕೂಡಲಸಂಗಮದೇವ" ಎನ್ನುವ ಹಿತವಚನ ದೊರೆಯುತ್ತದೆ. ಈ ಮೂಲಕ ಬಸವಣ್ಣನ ಕಾಲದಲ್ಲಿ ಜಂಗಮರನ್ನು ಕಂಡು ಹಿಂಜರಿಯುವ ಗೃಹಸ್ಥರೂ ಇದ್ದಂತೆ, ಜಂಗಮರ ಕಾಟವೂ ಸಾಕಷ್ಟು ಇತ್ತು ಎಂಬ ಅಂಶ ಸ್ಥಿರವಾಗುತ್ತದೆ.

ವೀರಶೈವ ಧರ್ಮದಲ್ಲಿ ಬರುವ ಕಾಯಕದ ಕಲ್ಪನೆಯ ಹಿನ್ನೆಲೆಯಲ್ಲಿ ವಚನದ ಎರಡನೆಯ ಸಾಲಿನತ್ತ ಮತ್ತೆ ಕಣ್ಣು ಹಾಯಿಸಿದರೆ 'ದಕ್ಕು' ಪದಕ್ಕೆ 'ಆಸ್ತಿ' ಎಂಬ ಇನ್ನೊಂದು ಅರ್ಥವೂ ಅಲ್ಲಿ ಅಸಂಗತವೆನಿಸುವುದಿಲ್ಲ. ಪರರ ಆಸ್ತಿನುಂಗಿದವನು ಅದನ್ನು ಸುಲಭವಾಗಿ ಜೀರ್ಣಿಸಿಕೊಳ್ಳಲಾರ. ಅದು ಹೊಟ್ಟೆಯಲ್ಲಿ ಶೂಲದಂತಿದ್ದು ಅವನು ಶಾರೀರಿಕ ಮತ್ತು ಮಾನಸಿಕ ಒತ್ತಡಕ್ಕೊಳಗಾಗುವುದರಿಂದ ಅವನ ಭಂಗಿಯಲ್ಲಿ

ದಕ್ಕು ನುಂಗಿದ ಸೆಟೆ ಕಾಣುತ್ತದೆ. ವೀರಶೈವ ಚಿಂತನೆಯ ಪ್ರಕಾರ, ಕಾಯಕದಿಂದ ಒದಗಿದ ಫಲವನ್ನು ಬಿಟ್ಟು, ಬೇರೊಬ್ಬರಿಗೆ ಸೇರಿದ ಒಂದು ಕಟ್ಟಿಗೆಯ ತುಂಡನ್ನು ಸೆಳೆದರೂ ಅದು ಆ ವ್ಯಕ್ತಿಗೆ ದಕ್ಕುವುದಿಲ್ಲ. ಅಲ್ಲದೆ, ಬೇರೆಯವರ ಸೊತ್ತನ್ನು ಅವನು ಅರ್ಪಿಸಿದರೆ ಅದನ್ನು ಇಷ್ಟಲಿಂಗವೂ ದಕ್ಕಿಸಿಕೊಳ್ಳಲು ಸಿದ್ಧವಿಲ್ಲ. ಜಂಗಮರೂ ದಕ್ಕಿಸಲಾರರು. ಹೀಗೆ 'ದಕ್ಕು' ಪದದ ಬೇರೆ ಬೇರೆ ಅರ್ಥಗಳಾದ "ಶೂಲದಂತಿರುವ ಕಡ್ಡಿ". "ಅಸ್ತಿ", "ಪ್ರಾಪ್ತವಾಗು" "ದಕ್ಕಿಸಿಕೊಳ್ಳು"—ಇವು ಒಂದನ್ನೊಂದು ಪುಷ್ಟಿಗೊಳಿಸುವುದರಿಂದ ಈ ವಚನವು ಧಾರ್ಮಿಕ. ಸಾಮಾಜಿಕ, ದೈಹಿಕ ಹಾಗೂ ಮಾನಸಿಕ ವ್ಯಾಪಾರಗಳನ್ನು ಮೇಳವಿಸುವುದರಲ್ಲಿ ಸಫಲವಾಗುತ್ತದೆ. 'ದಕ್ಕು' ಪದದ ಧ್ವನಿವಲಯ ವಿಸ್ತಾರವಾದಂತೆ ವಚನದಲ್ಲಿ ನಮಗೆ ಆಗುವ ಅನುಭವವೂ ದಟ್ಟವಾಗುತ್ತದೆ. ಈ ವಚನ ಒಂದೇ ಪಾತಳಿಯಲ್ಲಿ ಚಲಿಸದೆ ಬೇರೆ ಬೇರೆ ತಲಗಳಲ್ಲಿ ಕ್ರಿಯಾಶೀಲವಾಗಿ ಒಂದು ಸಂಕೀರ್ಣ ಅನುಭವವನ್ನು ನಮಗೆ ಮುಟ್ಟಿಸುತ್ತದೆ.

ಸೇರ ಮಾತುಗಳಲ್ಲಿ ಶಿವತತ್ತ್ವವನ್ನು ನಿರೂಪಿಸುವ ನೀತಿ ಪ್ರಧಾನವಾದ ವಚನಗಳನ್ನು ಬಿಟ್ಟರೂ, ಕಾವ್ಯಾಂಶಗಳನ್ನು ಚೆನ್ನಾಗಿ ದುಡಿಸಿಕೊಂಡು, ಆದರೆ ಏಕಮುಖವಾಗಿ ಚಲಿಸುವಂತಹ ಅನೇಕ ವಚನಗಳು ಬಸವಣ್ಣನಲ್ಲಿ ದೊರೆಯುತ್ತವೆ. ಇವುಗಳಲ್ಲಿ ಹೆಚ್ಚಿನವು, ಮನವನ್ನು ಓತಿ, ಗೋಸುಂಬೆ, ಬಾವಲಿ, ನಾಯಿ ಅಥವಾ ಮರ್ಕಟವನ್ನಾಗಿ, ಸಂಸಾರವನ್ನು ರಾಹುವಾಗಿ, ದೇಹವನ್ನು ಮನೆಯಾಗಿ, ಅಂದರೆ ಒಂದು ವಸ್ತುವನ್ನು ಇನ್ನೊಂದು ವಸ್ತುವಿಗೆ ಸಂವಾದಿಯಾಗಿಸಿ ಭಾವವನ್ನು ಅಭಿನಯಿಸುತ್ತವೆ. ಇವು ಉಪಮಾಪ್ರಧಾನವಾದ ಅಥವಾ ರೂಪಕಪ್ರಧಾನವಾದ ವಚನಗಳು. ಬಹುಶಃ ಈ ವಚನಗಳನ್ನು ಅನ್ಯೋಕ್ತಿಗಳೆಂದೇ ಕರೆಯಬೇಕು. ವಚನ ಸಾಹಿತ್ಯದಲ್ಲಿ ಅನ್ಯೋಕ್ತಿ ಹುಲುಸಾಗಿ ಬೆಳೆದಿದೆ. ಈ ಸಮೃದ್ಧಿಯನ್ನು ನೋಡುವಾಗ, ವಚನವು ಮುಖ್ಯವಾಗಿ ಅನ್ಯೋಕ್ತಿ ಫಲಿಸುವ ಒಂದು ಸಾಹಿತ್ಯ ಪ್ರಕಾರ ಎನ್ನಬಹುದು. ಆದರೆ ಹನ್ನೆರಡನೆಯ ಶತಮಾನದ ಮೂಲತಃ ಧಾರ್ಮಿಕವಾದ ಸಂವೇದನೆಯ ನಿರ್ದೇಶನದಲ್ಲಿದ್ದೂ ಅಸಾಮಾನ್ಯವೆನಿಸುವಷ್ಟು ಧಾರಣಶಕ್ತಿಯನ್ನು ಹೊಂದಿ ನಮ್ಮ ಸಮಕಾಲೀನ ಸಂವೇದನೆಗೆ ಸವಾಲಾಗಿ ನಿಲ್ಲುವ ಕೆಲವು ವಚನಗಳು ಬಸವಣ್ಣನಲ್ಲಿ ಸಿಗುತ್ತವೆ. ಸಂಪ್ರದಾಯದ ಅನೇಕ ಕಟ್ಟುಪಾಡುಗಳನ್ನು ಉಲ್ಲಂಘಿಸಿದ ಒಂದು ಆಂದೋಲನದ ಸಂವಹನ ಮಾಧ್ಯಮವಾಗಿ ಹುಟ್ಟಿಕೊಂಡ ವಚನಪ್ರಕಾರವು ತನ್ನ ಸೀಮೆಯನ್ನು ಮೀರಿ ಅನ್ಯೋಕ್ತಿಗಿಂತ ಹೆಚ್ಚು ಸಂಕೀರ್ಣವಾದ, ಅದಕ್ಕಿಂತ ಹೆಚ್ಚು ಸಲ್ಲುವ ಅನುಭವದತ್ತ ತುಡಿಯುತ್ತಿರುವ ಚಿಹ್ನೆಗಳು ಇಲ್ಲಿ ಕಾಣುತ್ತವೆ.

---

1. ಸ.ಶಿ. ಭೂಸನೂರ ಮಠ (ಸಂ), 'ವಚನ ಸಾಹಿತ್ಯ ಸಂಗ್ರಹ'

2. ಎಲ್. ಬಸವರಾಜು (ಸಂ), 'ಬಸವೇಶ್ವರ ವಚನ ಸಂಗ್ರಹ'

3. ಉದಾ :

ಎನ್ನಲ್ಲಿ ಭಕ್ತಿಸಾಸುವೆಯ ಷಡ್ಭಾಗದಿನಿತಿಲ್ಲ;
ಎನ್ನ ಭಕ್ತನೆಂಬರು: ಎನ್ನ ಸಮಯಾಚಾರಿ[1] ಎಂಬರು
ನಾನೇನು ಪಾಪವ ಮಾಡಿದೆನೊ !
ಬೆಳೆಯದ ಮುನ್ನವೇ ಕೊಯ್ವರೆ ಹೇಳಯ್ಯ ?
ಇರಿಯದ ವೀರ ಇಲ್ಲದ ಸೊಬಗು ತ
ಎಲ್ಲ ಒಡೆಯರು ಏರಿಸಿ ನುಡಿವರು
ಎನಗಿದು ವಿಧಿಯೆ ಕೂಡಲಸಂಗಮದೇವ

(ಬಸವರಾಜು; ಬ.ವ.ಸಂ. ಪು 67 ವ. 197)

[1] ಆಚಾರ್ಯ ಪುರುಷ ; ಒಂದು ಧರ್ಮದ ಆಚಾರ, ಕಟ್ಟು ಕಟ್ಟಳೆಗಳನ್ನು ವಿಧಿಸುವನು.

ಈ ಲೇಖನದಲ್ಲಿ ವಿಶ್ಲೇಷಿಸಿದ ಕೆಲವು ವಚನಗಳನ್ನು ಎಚ್. ಎಂ. ಚನ್ನಯ್ಯ (ಜಿಜ್ಞಾಸೆ), ಎಂ. ಜಿ. ಕೃಷ್ಣಮೂರ್ತಿ (ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು), ಎಂ. ಚಿದಾನಂದಮೂರ್ತಿ (ವಚನ ಸಾಹಿತ್ಯ), ಎ.ಕೆ. ರಾಮಾನುಜನ್ (ಸ್ಪೀಕಿಂಗ್ ಆಫ್ ಶಿವ), ಇತ್ಯಾದಿ ಲೇಖಕರು ಬೇರೆ ಬೇರೆ ದೃಷ್ಟಿಗಳಿಂದ ಚರ್ಚಿಸಿದ್ದಾರೆ.

ಮುಂದುವರಿದ ಕನವರಿಕೆ

ಭಾರತದ ಅರುವತ್ತೈದು ಕೋಟಿ ಪ್ರಜೆಗಳಲ್ಲಿ ಒಬ್ಬನಾಗಿ ಬಾಳುತ್ತಿರುವ ನನ್ನಂಥವನಿಗೆ ಈ ಕನವರಿಕೆಯ ಆಘಾತ 1975 ಜೂನ್ 25ನೆಯ ದಿನ ಕಾಣಿಸಿಕೊಂಡುದು ನಿಜವಾದರೂ, ಅದು ಆ ದಿನತೊಡಗಿ ತುರ್ತುಪರಿಸ್ಥಿತಿಯ ಭೀಕರ ರೂಪವನ್ನು ತಾಳಿ ಎರಡು ವರ್ಷಗಳ ಅವಧಿಯಲ್ಲಿ ಸ್ವತಂತ್ರ ಭಾರತವು ತೀರ ಅತಂತ್ರ ಪರಿಸ್ಥಿಯನ್ನು ತಲಪುವಂತಾದರೂ, ಅದರ ರದ್ದತಿ ಮತ್ತು ಮರುಚುನಾವಣೆ ಒಂದೆರಡು ದಿನಗಳ ನಿಟ್ಟುಸಿರಿಗೆ ಅವಕಾಶ ಮಾಡಿಕೊಟ್ಟಿತೇ ಹೊರತು, ಅದಕ್ಕಿಂತ ಹೆಚ್ಚಿನ ಕೆಲಸ ಮಾಡಿದಂತೆ ಕಾಣಿಸುವುದಿಲ್ಲ. 1947ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ದೊರಕಿಸಿಕೊಂಡ ನಾವು ಪ್ರಜಾಪ್ರಭುತ್ವವನ್ನು ಸ್ಥಾಪಿಸಿ ಯಾವೆಲ್ಲ ಹೊಂಗನಸುಗಳನ್ನು ಕಂಡಿದ್ದೆವೋ, ಅವುಗಳ ಹುಟ್ಟನ್ನೇ ಈ ವಿದ್ಯಮಾನ ಅಡಗಿಸಿತು. ಇದು ಕೇವಲ ಅಂದಿನ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯ ವೈಯಕ್ತಿಕ ಕ್ರಿಯೆಯಾಗಿ ಕಾಣಿಸಿದರೂ, ಆ ಕ್ರಿಯೆಯನ್ನು ಸಾಧ್ಯವನ್ನಾಗಿ ಮಾಡಿಸಿದ್ದು, ಯಾವತ್ತೂ, ಭಾರತದ ಜನತೆ ಮತ್ತು ಅವರಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟರೆಂಬ ಹೆಮ್ಮೆಯಿಂದ ಎದೆ ತಟ್ಟಿಕೊಳ್ಳುತ್ತಿದ್ದ ರಾಷ್ಟ್ರೀಯ ಕಾಂಗ್ರೆಸ್ಸಿನ ಮುಂದಾಳುಗಳ ವರ್ತನೆ. ಈ ವರ್ತನೆ ಹಿಂದಣ 28 ವರ್ಷಗಳ ಅವಧಿಯದು. ಆ ದೀರ್ಘ ಅವಧಿಯಲ್ಲಿ ನನಗೆ ಕಾಣಿಸಿಕೊಂಡದ್ದು ಕೆಲವೊಂದು ಸಾರ್ವಜನಿಕ ಪ್ರವೃತ್ತಿಗಳು. ಅವರಲ್ಲಿ ಮೊದಲಿನ ಲಕ್ಷಣ—ಸ್ವಾತಂತ್ರ್ಯವೀರರೋ. ಧುರೀಣರೋ ಆಗಿದ್ದು ಅಧಿಕಾರ ವಹಿಸಿಕೊಂಡವರ ಅಯೋಗ್ಯತೆ. ಎರಡನೆಯದು—ಅವರಲ್ಲಿ ಕಾಣಿಸ ತೊಡಗಿದ ಅಧಿಕಾರದ ದಾಹ; ಮೂರನೆಯದು—ಅಧಿಕಾರವನ್ನು ವಹಿಸಿದ ಬಳಿಕ ಅವರು ಬೆಳೆಯಿಸುತ್ತ ಬಂದ ವ್ಯಕ್ತಿಗತ ಸ್ವಾರ್ಥ. ಈ ಪ್ರವೃತ್ತಿಗಳು ಅಡೆತಡೆಯಿಲ್ಲದೆ 28 ವರ್ಷಗಳ ಕಾಲ ಮುಂದುವರಿದುದರಿಂದಲೇ ಇಂದಿರಾಗಾಂಧಿಯ ನಿರಂಕುಶ ಪ್ರವೃತ್ತಿ ಸಾಧ್ಯವಾಯಿತು. ಪೂರ್ವಾವಧಿಯಲ್ಲಿ ನಡೆದ ವಿದ್ಯಮಾನಗಳನ್ನೂ ಎಣಿಸದೆಯೇ ತುರ್ತು ಪರಿಸ್ಥಿತಿಯ ಆಘಾತಗಳನ್ನಾಗಲಿ, ಅನಂತರ ಕ್ಷಣಿಕವಾಗಿ ಕಾಣಿಸಿಕೊಂಡ ಜನತಾಪಕ್ಷದ ವಿಜಯವನ್ನಾಗಲಿ, ಮುಂದೆ ಅನೇ ಪಕ್ಷದ ನಿರ್ಮೂಲನವನ್ನಾಗಲಿ ನಾವು ಅರ್ಥ ಮಾಡಿಕೊಳ್ಳಲಾರೆವು.

ಅತ್ಯಾರಂಭದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ ನಾವು—ಇಲ್ಲಿನ 65 ಕೋಟಿ ಪ್ರಜೆಗಳಲ್ಲಿ ಬಹು ಹೆಚ್ಚಿನವರು ಈ ಮಹಾದೇಶದ ಸಮಸ್ಯೆಗಳನ್ನು ಕುರಿತು ತಿಳಿಯಲಾರದವರು ಎಂಬುದನ್ನು ಮರೆಯುತ್ತೇವೆ. ಅವರಲ್ಲಿ 80% ಜನ ನಿರಕ್ಷರಸ್ಥರು; ದಿನವನ್ನೆಲ್ಲ ಜೀವನದ ಹೋರಾಟದಲ್ಲಿ ಕಳೆಯುವವರು. ಹೆಚ್ಚೆಂದರೆ ಅವರಿಗೆ ಗೊತ್ತಿರುವುದು ಅವರ ಹೊಟ್ಟೆಯ ಸಮಸ್ಯೆ. ಅವರು ಯಾರನ್ನಾದರೂ ತಮ್ಮ ಪ್ರತಿನಿಧಿಗಳನ್ನಾಗಿ ಆರಿಸಿದ್ದರೆ, ಅದು ಆ ವ್ಯಕ್ತಿಗಳನ್ನು ಕುರಿತ ಅಜ್ಞಾನದಿಂದ ಮತ್ತು ಕಾಂಗ್ರೆಸ್ಸಿನ ಮೇಲಣ ಕುರುಡು ನಂಬಿಕೆಯಿಂದ ಹೊರತು ದೇಶಕ್ಕೆ ಅಂಟಿದ ಬೇನೆಗಳ ಯಾವ ತಿಳಿವಳಿಕೆಯಿಂದಲೂ ಅಲ್ಲ. ಚುನಾವಣೆಯ ಕಾಲದಲ್ಲಿ ಆ ತಿಳಿವಳಿಕೆಯನ್ನು ಜನತೆಯಲ್ಲಿ ಮೂಡಿಸುವ ಪ್ರಯತ್ನವನ್ನು ಮಾಡಿದವರಿದ್ದರೆ, ಅದು ಕಪಟನಾಟಕ ವಿಶಾರದರಾದ ನಾಯಕರು, ತಮ್ಮ ಬೆಂಬಲಿಗರ ಪಡೆಯಿಂದ ವ್ಯಕ್ತಿಲಾಭದ ಆಸೆಯನ್ನು ತೋರಿಸಿಯೋ, ಜಾತಿ, ಕೋಮು, ಮತಗಳ ಭ್ರಮೆತಟ್ಟಿದವರಿಗೆ ಆ ಭ್ರಮೆಗಳನ್ನು ಬೆಳೆಯಿಸಲು ಬೇಕಾದ ಆಸೆಯನ್ನು ತೋರಿಸಿಯೋ ಸಂಪಾದಿಸಿದ ಮತಗಳಿಂದ ಪ್ರಾತಿನಿಧ್ಯಗಳಿಸಿ ಮೇಲೆ

ಬಂದವರು.

ಇದು ಸಾಧ್ಯವಾಗುವುದಕ್ಕೆ ಬೇಕಾದ ವಿವೇಕ, ಮತದಾರರಲ್ಲಿ ಪ್ರಚೋದನೆಯ ಶಕ್ತಿಯಾಗುವ ಬದಲು, ಮೂರ್ತಿಪೂಜೆ ಚುನಾವಣೆಯ ವಸ್ತುವಾದದ್ದು ಮೊದಲ ಕಾರಣ. ಇಲ್ಲಿನ ಮೂರ್ತಿಗಳು ಜೀವಂತ ಮೂರ್ತಿಗಳು. ಅವರ ಹಿರಿಮೆಗೆ ಕಾರಣವಾದದ್ದು ಮೂರ್ತಿಪೂಜೆಗೆ ಗುರಿಯಾದ ಗಾಂಧೀಜಿಯ ಬೆಂಬಲಿಗರು ಎನ್ನುವ ಭಾವನೆ. ಬೆಂಬಲ ಕೊಡಲು ಕಾರಣ—ಇಂಥವರು ಮಾಡಿದ ತ್ಯಾಗ ಅಥವಾ ಸೆರೆಮನೆಯವಾಸ. ಅವರಲ್ಲಿ ಬಹುಮಂದಿ ತಾತ್ಕಾಲಿಕ ಅಥವಾ ತುಸು ದೀರ್ಘಕಾಲದ ಸ್ವಾತಂತ್ರ್ಯಾಕಾಂಕ್ಷೆಯ ಹಂಬಲದಿಂದ ಪ್ರೇರಿತರಾದವರು ಎಂಬುದೂ ನಿಜ. ಅವರ ಜತೆಯಲ್ಲೇ ಮೇಧಾವಿಗಳೂ ಇದ್ದರು: ಇದ್ದಾರೆ. ಈ ಮೇಧಾವಿಗಳು ದೇಶದ ಆರ್ಥಿಕ, ಸಾಮಾಜಿಕ ಮತ್ತು ಇತರ ಸಮಸ್ಯೆಗಳನ್ನು ಬಲ್ಲವರಾಗಿದ್ದುದೂ ನಿಜವೇ. ಆದರೆ ಇಂಥ ವಿಷಯಗಳ ಗಂಧಗಾಳಿಯಿಲ್ಲದ ಜನತೆ ಇಂಥ ನಾಯಕರ ಮಹಾತ್ಯಾಗಕ್ಕೆ ಮಾರುಹೋಗಿ, ಕಣ್ಮುಚ್ಚಿ ಮತದಾನ ಮಾಡುತ್ತ ಬಂದುದೂ ಅಷ್ಟೇ ಕಟುವಾದ ಸತ್ಯ.

ಈ ಸತ್ಯದಿಂದಾಗಿ ನಾಯಕ ಪಟ್ಟಕ್ಕೇರಿದವರು, ಯಾವತ್ತು ಜನತೆಯ ಪೂಜೆಗೊಳಗಾದರು. ಈ ನಾಯಕರ ತಿಳಿವಳಿಕೆಯಲ್ಲಿ 'ಜನತೆಗೆ ಬುದ್ಧಿಯೇ ಇಲ್ಲ; ತಾವು ದೇಶದ ಅಭ್ಯುದಯವನ್ನು ಸಾಧಿಸಿದರೆ ಉಂಟು; ಇಲ್ಲವಾದರೆ ಇಲ್ಲ' ಎಂಬ ದುರಹಂಕಾರವೂ ಇದ್ದಿತು. ನೆಹರೂ ಮೊದಲಾದ ಮೇಧಾವಿಗಳು ಸಹ ಅಂಥ ಭ್ರಮೆಯಲ್ಲಿ ತೇಲಿದವರೇ. ಅಂತಹವರಲ್ಲಿ ಪ್ರಾಮಾಣಿಕರೂ ಇದ್ದರು, ಮೂಗುದಾರ ಹಿಡಿದು ನಡೆಸಬಹುದಾದ ಹುಂಬರೂ ಸಾಕಷ್ಟು ಇದ್ದರು. ಆದರೆ ಆ ಸ್ವತಂತ್ರ ಭಾರತದ ಆಡಳಿತೆಯನ್ನು ಹೊರಬೇಕಾಗಿ ಬಂದ ಪ್ರಸಂಗದಲ್ಲಿ ನಾವು ಆ ಕೆಲಸಕ್ಕೆ ಆರಿಸಬೇಕಾದವರು—ಸ್ವಾತಂತ್ರ್ಯದ ಹೊಣೆಯನ್ನು ಹೊರಲು ಯಾವ ತೆರನ ಯೋಗ್ಯತೆ, ನೈಪುಣ್ಯ, ನಿಸ್ಪೃಹತೆ ಮತ್ತು ಕರ್ತೃತ್ವಶಕ್ತಿ ಉಳ್ಳವರನ್ನಷ್ಟೆ. ಅಷ್ಟನ್ನು ಮಾತ್ರ ನಾವು ಯೋಚಿಸದೆ ಹೋದೆವು.

ಸ್ವಾತಂತ್ರ್ಯ ನಾಡಿನ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಬೇಕು. ಆದರೆ, ಅವೆಲ್ಲವೂ ನಾಯಕರ ಸ್ವಾಭಿಮಾನ ಮತ್ತು ಸ್ವಾರ್ಥಕ್ಕೆ ಬಲಿಯಾದವು. ಮೊದಲಿಗೆ ಇಷ್ಟು ದೊಡ್ಡ ರಾಜ್ಯವನ್ನು ಆಳಬೇಕಾದರೆ ಅದರ ವಿವಿಧ ಸಮಸ್ಯೆಗಳು ಯಾವುವೆಂದು ತಿಳಿದು, ಮುಂದಿನ ಹೆಜ್ಜೆಯನ್ನು ಇರಿಸಲು ಬೇಕಾದ ಅರ್ಥಿಕಜ್ಞಾನ, ಔದ್ಯಮಿಕ ಪ್ರಗತಿಯ ವಿಚಾರ, ದೇಶದ ಆಂತರಿಕ ಮತ್ತು ವಿದೇಶೀಯ ಸಂಬಂಧಗಳ ನೀತಿ ಇಂಥವುಗಳ ಬಗ್ಗೆ ಸಮರ್ಥರಾದ ವ್ಯಕ್ತಿಗಳನ್ನು ಆರಿಸಿ, ಜನತೆಯ ಪ್ರತಿನಿಧಿಗಳನ್ನಾಗಿ ಮಾಡಬೇಕು ಎಂಬ ಆಯ್ಕೆ ಪ್ರಜಾಪ್ರಭುತ್ವದಲ್ಲಿ ಪ್ರಥಮ ಪ್ರಶ್ನೆಯಾಗಬೇಕಾಗಿತ್ತು. ಅದು ಖಂಡಿತಕ್ಕೂ ಆಗಲಿಲ್ಲ. ಔದ್ಯಮಿಕ ಸಮಸ್ಯೆಗಳ ತಿಳಿವಳಿಕೆಗೆ ಉದ್ಯಮ ಸಂಬಂಧದ ಅನುಭವ ಬೇಕು. ಹಣಕಾಸಿನ ಪ್ರಶ್ನೆಗೆ ಅದಕ್ಕೆ ಬೇಕಾದ ತಜ್ಞರುಬೇಕು. ಆರೋಗ್ಯ, ವಿದ್ಯೆ ಮೊದಲಾದ, ಅಥವಾ ಇನ್ನಿತರ ಪ್ರಗತಿಗಳ ಸಂಬಂಧಗಳಲ್ಲಿ ಅವುಗಳಲ್ಲಿ ತಜ್ಞತೆ ಪಡೆದ ವ್ಯಕ್ತಿಗಳನ್ನು ಮೊದಲು ಹುಡುಕಿ, ಆಯ್ದು, ಅನಂತರ ಅವರಿಗೆ ಪ್ರಾತಿನಿಧ್ಯವನ್ನು ದೊರಕಿಸುವ ಪ್ರಯತ್ನವನ್ನು ನಾವು ಮಾಡಬೇಕಿತ್ತು. ನಾಳಿದಿನ ಈ ದೇಶಕ್ಕೂ ಇನ್ನೊಂದು ದೇಶಕ್ಕೂ ಯುದ್ಧ ಪ್ರಾಪ್ತಿಯಾದರೆ ಏನೆಲ್ಲ ಆಗಬೇಕಾದೀತು ಎಂದು ಯೋಚಿಸಬಲ್ಲ, ಸೂಚಿಸಬಲ್ಲ ವ್ಯಕ್ತಿಗಳನ್ನು, ಸಮರ್ಥರನ್ನು ಆರಿಸಬೇಕಾಗಿತ್ತು. ಆದರೆ ನಮ್ಮ ತ್ಯಾಗವೀರರು ತಾವು ಗಳಿಸಿಕೊಂಡ ನಾಯಕಪಟ್ಟವನ್ನು ಆ ಹಕ್ಕಿನಿಂದಲೇ ಉಳಿಸಿಕೊಂಡರು. ಅದನ್ನು ಕಾಪಾಡಲು ಪ್ರಯತ್ನಿಸಿದರು; ತ್ಯಾಗದ ಬಿರುದು, ಜೈಲಿಗೆ ಹೋದ ಬಿರುದುಗಳೇ ರಾಜ್ಯದ ಆಡಳಿತೆಗೆ ಬೇಕಾದ ತಜ್ಞತೆ ಮತ್ತು ನೈಪುಣ್ಯಗಳು ಅನಿಸಿದುವು. ಆಡಳಿತ ನಡೆಸಲು ಬೇಕಾದ ಸಾಮರ್ಥ್ಯವನ್ನು ನಾವು ಮಾನದಂಡವನ್ನಾಗಿ ಮಾಡಿಕೊಳ್ಳಲಿಲ್ಲ. ಆದುದರಿಂದ ಜನತೆಯ ಮುಂದಿಟ್ಟ ಮತ್ತು ಆ ಜನತೆ ಆರಿಸಿದ ಯಾವ ಆಸಾಮಿ ಇದ್ದರೂ, ಆತ ಯಾವ ಮಂತ್ರಿಪಟ್ಟಕ್ಕೂ ಯೋಗ್ಯ ಎಂಬ ಭಾವನೆಯನ್ನು ನಮ್ಮ ನಾಯಕರಲ್ಲಿ ಮೂಡಿಸಿದೆವು. ಆಯ್ದುಬಂದ ಪ್ರತಿಯೊಬ್ಬನ ತಲೆಯಲ್ಲೂ ತಾನು ಮಂತ್ರಿಯಾದರೆ ಆ ಮಂತ್ರಿಪದ ತನ್ನನ್ನು ಯಾವ ಕೆಲಸಕ್ಕೂ ಯೋಗ್ಯನನ್ನಾಗಿ ಮಾಡೀತು ಎಂಬ ಆತ್ಮವಿಶ್ವಾಸವನ್ನು (ದಾರ್ಷ್ಟ್ಯವನ್ನು) ಬೆಳೆಸಿದೆವು.

ನಿಶ್ಚಿತ ಉದ್ದೇಶದ ಮಂತ್ರಿಪಟ್ಟಕ್ಕೆ ಅಯೋಗ್ಯರಾದವರು ಕಾರ್ಯನಿರ್ವಹಣೆ ಮಾಡಿದರೆ ಯಾವ ಬಗೆಯ ಪ್ರಗತಿ ಸಾಧಿಸೀತು? ತಮ್ಮ ಹೊಣೆಯನ್ನೇ ತಿಳಿಯದವರು ಅಧಿಕಾರಕ್ಕೆ ಬಂದಾಗ, ಮೆರೆಯುವುದಕ್ಕೆ, ಬಾಯಿತುಂಬ ಮಾತನಾಡುವುದಕ್ಕೆ ಕಲಿತರು. ಜನರ ಅಂಧ ಶ್ರದ್ಧೆಗಳನ್ನು ಬಳಸಿ ತಾವು ಬೃಹಸ್ಪತಿಗಳೆನಿಸಿಕೊಂಡರು. ತಮ್ಮ ಜನ್ಮದಲ್ಲೇ ಕಾಣದ ಹಣಕಾಸಿನ ವ್ಯವಹಾರದ ಯಜಮಾನಿಕೆ ಬಂದಾಗ ಅದನ್ನು ತಮ್ಮ ಮತ್ತು ಸ್ವಂತ ಜನರ

ಲಾಭಕ್ಕಾಗಿ ಬಳಸಿದರು. ಜನತೆಯ ಮುಂದೆ ಸಮಾಜವಾದೀ ಘೋಷಣೆಗಳನ್ನು ಸಾರಿ ಕಾರ್ಯವಿಧಾನದಲ್ಲಿ ಸಮಾಜ ಇರುವುದು ತಮ್ಮನ್ನಾರಿಸುವುದಕ್ಕಾಗಿ ಮಾತ್ರ ಎಂದು ತಿಳಿದುಕೊಂಡರು.

ಇದರಿಂದಾದ ಹಾನಿ ವಿಕೃತ ಮತ್ತು ಕುಂಠಿತ ಆರ್ಥಿಕ ಪ್ರಗತಿ. ಜನರ ದಾರಿದ್ರ್ಯ ನಿವಾರಣೆ ಆಗದೆ ಹೋದರೂ, ಉದ್ಯಮಿಗಳ, ವ್ಯಾಪಾರಿಗಳ ಸಂಪತ್ತು ಬೆಳೆಯಿತು, ಮಂತ್ರಿಗಳ ಸಂಪತ್ತು ಬೆಳೆದೇ ಬೆಳೆಯಿತು. ಅವರ ನೆಂಟರಿಷ್ಟರು ಹೊಸ ಕನಸುಗಳನ್ನು ಕಾಣತೊಡಗಿದರು. ಜನಸಾಮಾನ್ಯರ ಸ್ಥಿತಿ ಅನೇಕ ವಿಷಯಗಳಲ್ಲಿ ಕೇಳುವವರಿಲ್ಲದ ಸ್ಥಿತಿಯಾಯಿತು.

ನಾವು ಎಷ್ಟೆಲ್ಲ ಮಾಡಬಹುದಿತ್ತು—ಎಂಬ ಬಗ್ಗೆ ಜಾಗತಿಕ ಯುದ್ಧದ ಬಳಿಕ ಹೊರದೇಶಗಳಲ್ಲಿ ನಡೆದ ವಿದ್ಯಮಾನಗಳನ್ನು ನಾವು ಪರಿಶೀಲಿಸಬೇಕಾಗಿದೆ. ಯುದ್ಧದಿಂದ ಧೂಳೀಧ್ವಂಸವಾದ ಯುರೋಪಿನ ರಾಷ್ಟ್ರಗಳಲ್ಲಿ ಯಾವೆಲ್ಲ ಆರ್ಥಿಕ ಮತ್ತು ಔದ್ಯಮಿಕ ಪ್ರಗತಿ ಮುಂದಣ ಒಂದೇ ದಶಕದಲ್ಲಿ ಆಯಿತು. ಯುದ್ಧದಲ್ಲಿ ಒದೆತಿಂದ ಜಪಾನು ಎಂಥ ಪ್ರಗತಿಯನ್ನು ಸಾಧಿಸಿತು? ಸ್ವಂತ ಮನೆಯನ್ನೇ ಕಳೆದುಕೊಂಡ ಚೀನಿಯರು ಥೈವಾನಿನಲ್ಲಿ ಏನು ಕೆಲಸ ಮಾಡಿದರು—ಎಂಬುದನ್ನು ನಾವು ಕಾಣಬಲ್ಲೆವಾದರೆ ಅದೆಲ್ಲ ನಮಗೂ ತಿಳಿದೀತು. ಆಗ ಯುದ್ಧದಲ್ಲಿ ತಮ್ಮ ಯೌವನಸ್ಥ ಪ್ರಜೆಗಳನ್ನು ಕಳೆದುಕೊಂಡ, ನಗರಗಳನ್ನೂ, ಕಾರ್ಖಾನೆ, ರೇವುಗಳನ್ನೂ ಕಳೆದುಕೊಂಡ – ಜರ್ಮನಿ, ಜಾಪಾನ್, ಥೈವಾನ್, ಹಾಲೆಂಡ್ ಮೊದಲಾದ ಸಣ್ಣ ದೊಡ್ಡ ದೇಶಗಳು ಸಾಧಿಸಿದ ಪ್ರಗತಿಯ ಹತ್ತರಲ್ಲಿ ಒಂದು ಅಂಶವನ್ನೂ ನಾವು ಸಾಧಿಸಿಲ್ಲ. ಇದಕ್ಕೆ ಮುಖ್ಯ ಕಾರಣ– ನಮ್ಮ ನಾಯಕರಲ್ಲಿ ಬಲು ಹೆಚ್ಚಿನವರು ಆಡಳಿತ ನಡೆಸಲು ಬಾರದವರು, ತಮ್ಮ ಹೊಣೆಗಾರಿಕೆಯನ್ನು ಅರಿಯದವರು. ದೇಶಸೇವೆಯ ನೆಪದಲ್ಲಿ ಸ್ವಂತ ವ್ಯಕ್ತಿತ್ವವನ್ನು ಹಿಗ್ಗಿಸಿ, ಅಧಿಕಾರದ ದುರ್ಲಾಭ ಪಡೆಯಲು ಸಮಯ ಕಳೆದವರು; ತಮ್ಮನ್ನು ತಾವು ಮೆರೆಯಿಸಿದವರು, ಒಡ್ಡು ಪ್ರಜೆಗಳ ಚಿಂತೆ ಮಾಡದವರು, ಯಾವ ರಾಜಕೀಯ ಪಕ್ಷವೇ ಆಗಲಿ ಅದು ತನ್ನ ಗುಂಪಿನಲ್ಲಿ ಸಮರ್ಥರನ್ನು, ಪ್ರಾಮಾಣಿಕರನ್ನು ತಾನು ಮಾಡಬೇಕೆನ್ನುವ ಕೆಲಸಗಳ ದೃಷ್ಟಿಯಿಂದ ಆರಿಸಬೇಡವಿತ್ತೇ? ಹಾಗೇ ಮಾಡದಿದ್ದುದು ದೇಶಕ್ಕೇ ದ್ರೋಹವನ್ನು ಬಗೆದಂತೆ. ನಾಯಕತ್ವದಿಂದ ಯೋಗ್ಯತೆ ಉತ್ಪನ್ನವಾಗುವುದಿಲ್ಲ. ಯೋಗ್ಯರನ್ನು, ಸಮರ್ಥರನ್ನು ಪಕ್ಷಗಳು ಹುಡುಕಿ ಹೋಗಬೇಕು. ತಾವೇ ದೊರೆಗಳಾಗುವ ಅಪೇಕ್ಷೆಯುಳ್ಳ ಸ್ವಾರ್ಥಿಗಳು ಅಂಥವರನ್ನು ದೂರ ಇಟ್ಟರು. ನಮ್ಮ ಜನರು ಮಾಡಿದ ಕೆಲಸ ಅದೇನೇ.

ದೇಶದ ರಕ್ಷಣೆ ಮತ್ತು ವಿದೇಶಾಂಗ ನೀತಿಯಲ್ಲೂ ಇದೇ ರೀತಿಯ ಅನಭಿಜ್ಞತೆಯನ್ನು ನೆಹರೂ, ವಿ. ಕೆ. ಮೆನನ್ ಮತ್ತು ಚವ್ಹಾಣ್‌ರವರು ಲೋಕಕ್ಕೆ ಕಾಣುವಂತೆ ತೋರಿಸಿಕೊಟ್ಟಿದ್ದಾರೆ. ಚೀನಾ ಭಾರತಕ್ಕೆ ನುಗ್ಗಿದ ಕಾಲದಲ್ಲಿ ನಾವು ಮೊರೆಹೋದದ್ದು ಅಮೇರಿಕಕ್ಕೆ! ಚೀನಾ ಹಿಂದಕ್ಕೆ ಸರಿದದ್ದು ಎರಡು ಪ್ರಬಲ ರಾಷ್ಟ್ರಗಳ ಭೀತಿಗೆ.

ಈ ಅವಧಿಯಲ್ಲಿ ನಮ್ಮ ಪ್ರಬಲ ಪಕ್ಷಗಳು ಕಲಿತು ಕೊಂಡ ರಾಜನೀತಿಯನ್ನು ನಾವು ಚೆನ್ನಾಗಿ ವಿವೇಚಿಸಬೇಕು. ಪ್ರಜಾಪ್ರಭುತ್ವ ನಡೆಯುವುದು ಜನರ ಮತಗಳ ಬೆಂಬಲದಿಂದ. ಆ ಮತಗಳು ಯಾವ ಕೈಯಲ್ಲಿದೆ, ಅಲ್ಪಸಂಖ್ಯಾತರ ಕೈಯಲ್ಲಿದೆಯೇ, ಮುಸ್ಲಿಮರ ಕೈಯಲ್ಲಿದೆಯೇ, ಹರಿಜನರ ಕೈಯಲ್ಲಿದೆಯೇ, ಕಾರ್ಖಾನೆಯ ಶ್ರಮಗಾರರ ಕೈಯಲ್ಲಿದೆಯೇ ಎಂಬುದನ್ನು ಯೋಚಿಸಿದರು. ಸೂಕ್ಷ್ಮವಾಗಿ ಎಣಿಸಿದರೆ ಮತಗಳು ಯಾವ ಜಾತಿ, ಕೋಮಿನವರ ಕೈಯಲ್ಲಿದೆ ಎಂಬುವನ್ನು ಕಂಡುಕೊಂಡರು. ಅವರಲ್ಲಿ ದುಡ್ಡಿನ ಆಮಿಷ ಬಿತ್ತಿದರು. ಅವರ ನಾಯಕರನ್ನು ಬೆಲೆಗೆ ಕೊಳ್ಳುವ ಪಾಠ ಕಲಿತರು. ಜಾತಿ, ಕೋಮುಗಳ ಬೆಂಬಲದಿಂದ ಮೇಲಕ್ಕೆ ಬಂದು, ಮೆರೆಯಬಲ್ಲ ವ್ಯಕ್ತಿಗಳನ್ನು ಆರಿಸಿ ಅವರಿಗೆ ಮಂತ್ರಿಪಟ್ಟದ ಆಮಿಷ ತೋರಿಸಿ, ಲಾಭದ ಆಮಿಷ ತೋರಿಸಿ, ತಂತಮ್ಮ ವ್ಯಕ್ತಿತ್ವದ ಸುತ್ತಲೂ ತಮಗೆ ಅನುಕೂಲವಾದಂತಹ ಗುಂಪುಗಳನ್ನು ನೆಹರು ಆದಿಯಾಗಿ ಪ್ರತಿಯೊಬ್ಬ ಮುಂದಾಳು ಪೂ ಬೆಳೆಯಿಸತೊಡಗಿದನು. ಈ ನಾಯಕರು ಭ್ರಷ್ಟಾಚಾರದಲ್ಲಿ ಮುಳುಗಿದವರೆಂದು ಜನರು ದೂರಿದರೂ. ಕಣ್ಮುಚ್ಚಿ ಅವರನ್ನೇ ಕಟ್ಟಿಕೊಂಡರು. ನೆಹರೂ ಸಹ ಪ್ರತಾಪಸಿಂಗ್ ಕೈರಾನ್, ಬಿಜು ಪಟ್ನಾಯಿಕ್ ಮೊದಲಾದ ಭ್ರಷ್ಟಾಚಾರಿಗಳನ್ನು ರಕ್ಷಿಸಿ ತಮ್ಮ ಬೆಂಬಲಕ್ಕೆ ಕಟ್ಟಿಕೊಂಡರು. ಅಂಥವರ ಬೆಂಬಲ ತಪ್ಪಿದರೆ ಸ್ವತಃ ನೆಹರುಗಳ ಪ್ರಧಾನಿಪಟ್ಟ ಉಳಿಯಲಾರದ ವಾತಾವರಣ ನಿರ್ಮಾಣಗೊಂಡಿತ್ತು.

ಅಷ್ಟರಲ್ಲಿಯೇ ಸುಮಾರು 20 ವರ್ಷಗಳ ಕಾಲ ಕಾಂಗ್ರೆಸ್ಸಿನ ಮೆರೆದಾಟ ನಡೆದಿತ್ತು. ಮಂತ್ರಿ ಪದವಿಗಳ ಹಸಿವಿನಿಂದ ಬಾಧಿತರಾದವರ ಸಂಖ್ಯೆ ಒಂದೇ ಸಮನೆ ಹೆಚ್ಚಿತ್ತು. ಪ್ರಾಂತೀಯ ನಾಯಕರೆಲ್ಲರೂ ದಿಲ್ಲಿಯಲ್ಲಿಯೇ

ತಾವು ಆಳುವ ಸ್ವರ್ಗವಿದೆಯೆಂದು ತಿಳಿದುಕೊಂಡರು. ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಾಂತೀಯ ನಾಯಕರು ಸಹ ಇದೇ ಧೋರಣೆಯಿಂದ ವಿವಿಧ ಪ್ರಾಂತ್ಯಗಳಲ್ಲಿ ತಮ್ಮ ವರ್ಚಸ್ಸನ್ನು ಬೆಳೆಯಿಸಿ ಬಲವಾಗಿ ಬೇರೂರಿದ್ದರು. ಕಾಮರಾಜ ನಾಡಾರ್‌ರಂತಹ, ಸ್ವಂತಕ್ಕೆ ಲಾಭ ಬೇಕಿಲ್ಲದ, ಆದರೆ ದೊರೆತನದ ಕಿರೀಟ ಒಪ್ಪಿಸಬಲ್ಲ ಹಲಕೆಲವು ಪ್ರಭೃತಿಗಳು ಪ್ರತಿಯೊಂದು ಪ್ರಾಂತದಲ್ಲೂ ಕಾಣಿಸಿಕೊಂಡರು. ನೆಹರು ಕಣ್ಮುಚ್ಚುವುದರೊಳಗಾಗಿ ಈ ಬಗೆಯ ಶಕುನಿಗಳಲ್ಲಿ 'ಮುಂದಿನ ಪ್ರಧಾನಿ ಯಾರು' ಎಂಬ ಬಗ್ಗೆ ಪೈಪೋಟಿ ನಡೆದಿತ್ತು.

ಇಂಥವರೆಲ್ಲರೂ ಕೂಡಿಕೊಂಡೇ, ನೆಹರೂರವರ ಮರಣದ ಬಳಿಕ ತಾತ್ಕಾಲಿಕವಾಗಿ ಸಂಭಾವಿತ ಶಾಸ್ತ್ರಿಗಳನ್ನು ಪ್ರಧಾನಿಪಟ್ಟಕ್ಕೆ ಆರಿಸಿದರು. ಆಡಳಿತೆಯ ಅಯೋಗ್ಯತೆ ಎಲ್ಲರಿಗೂ ಸಮಾನವಾಗಿರುವುದರಿಂದ ಅದಕ್ಕಿಂತಲೂ ಕುಲಪ್ರತಿಷ್ಠೆ ತುಸು ಹೆಚ್ಚಿನ ಯೋಗ್ಯತೆ ಎಂಬ ತಿಳುವಳಿಕೆಗೆ ಬಂದು, ಶಾಸ್ತ್ರಿಗಳ ಮರಣಾನಂತರ ಇಂದಿರಾಗಾಂಧಿಯನ್ನು ಪ್ರಧಾನಿಯನ್ನಾಗಿ ಮಾಡಿದರು. ಆಕೆಗೆ ಆರಂಭದಿಂದಲೂ ಪ್ರಜಾಪ್ರಭುತ್ವ ಬೇಕಿರಲಿಲ್ಲ. ಅವಳ ಅಭಿಪ್ರಾಯದ ಮುಂದೆ ಜನಾಭಿಪ್ರಾಯವಲ್ಲ. ಆಕೆ ಸಾಕಷ್ಟು ರಾಜ್ಯತಂತ್ರ ಕಲಿತವಳಿರಬೇಕು. ಆವಿಷಗಳನ್ನೊಡ್ಡುವಲ್ಲಿ ಅವಳು ನಿಪುಣೆ. ಅದನ್ನೊಡ್ಡಿ ಪಾರ್ಲಿಮೆಂಟಿಗೆ ಗೆದ್ದುಬಂದ ಸದಸ್ಯರ ಬೆಂಬಲ ಪಡೆಯತೊಡಗಿದಳು. ಆ ಬೆಂಬಲಕ್ಕೆ ಅಡ್ಡದಾರಿಗಳೆಲ್ಲವೂ ತೆರವಾಗಿದ್ದುವು. ಉಳಿದವರ ಭ್ರಷ್ಟಾಚಾರದ ಅಂಶಗಳನ್ನೆಲ್ಲ ತಿಳಿದುಕೊಂಡು, ತನಗೆ ಬೇಡದವರನ್ನು ಗದರಿಸುವುದಕ್ಕೂ ತನ್ನ ತಾಳಕ್ಕೆ ಕುಣಿಯಬಲ್ಲವರನ್ನು ಆರಿಸುವುದಕ್ಕೂ ಆಕೆ ಸಮರ್ಥಳಾದಳು. ತನ್ನ ನಿರಂಕುಶ ಅಧಿಕಾರಕ್ಕೆ ಏನೆಲ್ಲ ಬೇಕೋ ಹತ್ತು ವರ್ಷಗಳಲ್ಲಿ ಅಷ್ಟನ್ನು ಸಾಧಿಸಿದಳು. ಅವಳ ಸತ್ಪುತ್ರ ಅವಳ ಆತ್ಮಸಾಕ್ಷಿಯಾದ. ಈ ಪ್ರವೃತ್ತಿಯ ಫಲವೇ 1975ರ ತುರ್ತುಪರಿಸ್ಥಿತಿ. ಈ ಕಾಲದಲ್ಲಿ ಅಲ್ಲಿ ಇಲ್ಲಿ ಕೇಳಿಬರುತ್ತಿದ್ದ ಜಯಪ್ರಕಾಶ ನಾರಾಯಣರಂಥ ಕೆಲವೇ ವ್ಯಕ್ತಿಗಳ ಧ್ವನಿಯನ್ನು ಅಡಗಿಸಲು ಆಕೆ ಸರ್ವಪ್ರಯತ್ನ ಮಾಡಿದಳು. ಹಗಲನ್ನು ಕತ್ತಲೆಂದೂ ಸಾರಿದಳು. ಪ್ರಜೆಯ ಹಕ್ಕುಗಳನ್ನು ಮಣ್ಣುಗೂಡಿಸಿದಳು, ನ್ಯಾಯಾಂಗವನ್ನು ನಪುಂಸಕವನ್ನಾಗಿಸಿದಳು.

ತುರ್ತುಪರಿಸ್ಥಿತಿಯ ಅವಧಿಯಲ್ಲಿ ಆಕೆ ಈ ಕೆಲಸವನ್ನು ಯಶಸ್ವಿಯಾಗಿ ಸಾಧಿಸಿದಳು. ಆಡಳಿತೆಯ ಯಾವತ್ತು ಯಂತ್ರ ಅವಳ ತಾಳಕ್ಕೆ ಸಮನಾಗಿ ಕುಣಿಯುವ ವಿದ್ಯೆ ಕಲಿತುಕೊಂಡಿತು. ಅಂತರಿಕ ರಕ್ಷಣೆಯ ಪೋಲೀಸುದಳ, ಸಿ.ಐ.ಡಿ., ಮೊದಲಾದ ಯಂತ್ರಾಂಗಗಳು ಚಾಚೂತಪ್ಪದೆ ಅವಳ ಆಜ್ಞೆಯನ್ನು ಪಾಲಿಸತೊಡಗಿದವು. ಆಡಳಿತೆಯ ಯಂತ್ರದಲ್ಲಿ ಅವಳ ಮನೋಧರ್ಮಕ್ಕೆ ಒಪ್ಪದ ಪ್ರಾಮಾಣಿಕರನ್ನು ಗತಿಗೋತ್ರವಿಲ್ಲದಂತೆ ಮಾಡುವ ಕೆಲಸವೂ ನಡೆಯಿತು.

ಈ ಅವಧಿಯಲ್ಲಿ ಇನ್ನೊಂದೇ ಬಗೆಯ ಸಾರ್ವಜನಿಕ ಪ್ರವೃತ್ತಿ ತಲೆದೋರಿತು. ಈ ಪ್ರವೃತ್ತಿಗೆ ಕಾರಣರಾದವರು ಮೂಕ ಮತದಾರರಲ್ಲ, ವಿದ್ಯಾವಂತ ವರ್ಗ. ಯಾವ ನೀತಿಯನ್ನು ತಾವು ಅನುಸರಿಸಬೇಕೆಂಬ ಪ್ರಶ್ನೆ ಅವರನ್ನು ಒಂದಿಷ್ಟೂ ಕಾಡಲಿಲ್ಲ. ದೇಶದ ಚಿಂತೆ ಅವರಿಗೆ ಯಾವ ಬಾಧೆಯನ್ನೂ ಕೊಡಲಿಲ್ಲ. ಇಂದಿರಾಗಾಂಧಿಯ ಜಪದಿಂದ ತಾವು ಸುಲಭದಲ್ಲಿ ಮೇಲಕ್ಕೇರಬಹುದು; ಬೇಕಾದ ಸ್ವಾರ್ಥವನ್ನೆಲ್ಲಾ ಸಾಧಿಸಬಹುದು. ತಮ್ಮ ದಾರಿಗೆ ಅಡ್ಡ ಬಂದವರನ್ನು ಹೇಳಹೆಸರಿಲ್ಲದಂತೆಯೂ ಮಾಡಬಹುದು—ಎಂಬ ದಿಟ್ಟತನ ಬಹುಮಂದಿಯಲ್ಲಿ ಕಾಣಿಸಿತು. ಕೊನೆಕೊನೆಯ ದಿನಗಳಲ್ಲಿ ದೇಶದ ನ್ಯಾಯಾಂಗವೂ ತತ್ತರಿಸಿತು. ಮಾತ್ರವಲ್ಲ, ಅಲ್ಲಿಯೂ ಬೆಲೆಗೆ ಕೊಳ್ಳಬಲ್ಲ ಜನಗಳಿದ್ದರು ಎಂಬ ಭಾವನೆ ಜನರ ಮನಸ್ಸಿಗೆ ಬರತೊಡಗಿತ್ತು. ನ್ಯಾಯಾಂಗ ತಲೆಬಾಗಬೇಕಾದುದು ಕಾಯಿದೆ ಮತ್ತು ನೀತಿಗಳಿಗಲ್ಲ; ಆಳುವವರ ಧೋರಣೆಗೆ ಎಂಬ ಕೂಗು ಕೇಳಿಸಿತು.

ಒಬ್ಬಾಕೆಯ ಇಷ್ಟದಂತೆ ನಡೆದ ಆಡಳಿತೆಯೇ ತುರ್ತುಪರಿಸ್ಥಿತಿ. ಇದು ಒಂದು ಅಮಾನುಷ ಪರಿಸ್ಥಿತಿ ಎಂದಿಷ್ಟೇ ಹೇಳಲು ಬಯಸುತ್ತೇನೆ. ಅದರಿಂದ ದೇಶದ ವಿದ್ಯಾವಂತ ಜನತೆ ನಡುಗಿದ್ದನ್ನೂ ಕಾಣುತ್ತೇವೆ; ರಾಜಕೀಯ ಕ್ಷೇತ್ರದಲ್ಲಿ ಉರುಳಿದ ತಲೆಗಳನ್ನೂ ಕಾಣುತ್ತೇವೆ. ಆ ಉರುಳಿದ ತಲೆಗಳಲ್ಲಿ ಸಹ ವಿವೇಕ ಮೂಡಿದ್ದನ್ನು ಮಾತ್ರ ಕಾಣುವುದು ಕಷ್ಟವಾಯಿತು. ಈ ಅವಧಿಯಲ್ಲಿ ಇಂದಿರಾಗಾಂಧಿಗೆ ಜಗತ್ತಿನ ಮುಂದೆ 'ತಾನು ಸರ್ವಾಧಿಕಾರಿಯಲ್ಲ, ಎಂದು ಅನಿಸಿಕೊಳ್ಳುವಂಥ ಒಂದು ದುರಾಶೆ ಮೂಡಿತು. ಆ ದುರಾಶೆಯ ಸಾಧನೆಗೆ ಬೇಕಾದ ಹಣ ಅವಳಲ್ಲಿತ್ತು, ಬೆಂಬಲಿಗರು ಇದ್ದೇ ಇದ್ದರು. ಅವಳು ಒಪ್ಪಿಸಬಹುದಾದ ಮಂತ್ರಿಪಟ್ಟಕ್ಕಿಂತ ಸಾವಿರಪಾಲು ಹೆಚ್ಚಿನ ಪುಢಾರಿಗಳಿದ್ದರು. ಅಸಂಖ್ಯ ತರುಣ ನಾಯಕರು ವಿದ್ಯಾರ್ಥಿ ನಾಯಕರು ಅವಳ ಬೆಂಬಲಕ್ಕೆ ಆನೆಯಾಗಿ

ನೀತಿದ್ದರು. ಆದರೆ ಅವಳೋ, ಅವಳ ಮಗನೋ. ಉತ್ತರ ಹಿಂದೂಸ್ಥಾನದಲ್ಲಿ ನಡೆಯಿಸಿದ ಅತ್ಯಾಚಾರಗಳಿಂದಾಗಿ ಮಹಾಚುನಾವಣೆಯಲ್ಲಿ ಆಕೆಯೂ ಅವಳ ಬೃಹತ್ ಪಡೆಯೂ ಸೋಲುವಂತಾಯಿತು. ಅವಳ ಈ ಅತ್ಯಾಚಾರ ಉತ್ತರ ಹಿಂದೂಸ್ಥಾನಕ್ಕೆ ಸೀಮಿತವಾದ್ದರಿಂದ ದಖ್ಖಿಣದ ಮತ್ತು ದಕ್ಷಿಣ ಹಿಂದೂಸ್ಥಾನದ ಜನತೆ ಮಾತ್ರ ತಾವು ಉತ್ತರದವರಿಗಿಂತಲೂ ಬುದ್ಧಿವಂತರೆಂದು ತೋರಿಸಿಕೊಂಡರು.

ಇಂದಿರಾ ಪಕ್ಷದ, ವ್ಯಕ್ತಿಗತವಾಗಿ ಅವಳ ಮತ್ತು ಅವಳ ಮಗನ ಸೋಲು, ಬಹು ಜನರ ಮನಸ್ಸಿನಲ್ಲಿ ಸ್ವಾತಂತ್ರ್ಯಾಪಹರಣದ ಕನವರಿಕೆಯ ಕಾಲ ಮುಗಿಯಿತು–ಎಂಬ ಭಾವನೆಯನ್ನು ಮೂಡಿಸಿದ್ದಂತೂ ನಿಜ. ಆ ಅವಧಿಯಲ್ಲಿ ನಾನು ಕೆಲವಾದರೂ ರಾಜಕೀಯ ಪುಡಾರಿಗಳನ್ನೂ, ಅವರ ಸ್ನೇಹಿತರನ್ನೂ ಭೇಟಿಯಾಗಿದ್ದೆ. ಒಂದು ಬಹಿರಂಗ ಸಭೆಯಲ್ಲಿ ಆಗ ನನ್ನ ಮನಸ್ಸಿನ ಭೀತಿಯನ್ನೂ ತೋಡಿಕೊಂಡಿದ್ದೆ. "ಈಗ ದೊರಕಿದ ವಿಜಯಕ್ಕಾಗಿ ಗೆದ್ದ ಪಕ್ಷದವರ ಹೆಮ್ಮೆ ನಿರಾಧಾರವಾದದ್ದು. ಏಕೆಂದರೆ ತುರ್ತು ಪರಿಸ್ಥಿತಿಯ ದಿನಗಳಲ್ಲಿ ನಾವೆಲ್ಲರೂ ಇಂದಿರಾ ಗಾಂಧಿಯೊಬ್ಬಳನ್ನೇ ತೋರಿಸಿ ಆರೋಪ ಹೊರಿಸಿದ್ದೆವು. ಆದರೆ ಮರು ಚುನಾವಣೆಯ ಅವಧಿಯಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ಕೂಡ ಇಂದಿರಾಗಾಂಧಿಯನ್ನೇ ಎತ್ತಿ ಹಿಡಿದು, ಅವಳ ಆದರ್ಶಗಳನ್ನೇ ಹೊಗಳಿ ಓಡಾಡಿದ ಅವಳ ಅನುಯಾಯಿಗಳ ಸಂಖ್ಯೆ ಕಡಿಮೆಯಿರಲಿಲ್ಲ. ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದ ಜನರು ಬೇಕಷ್ಟು ಮಂದಿ ಇದ್ದಾರೆಂಬುದು ಸರ್ವವಿದಿತ. ಆ ಯಾವತ್ತೂ ಸಮೂಹ ಇರುವ ತನಕವೂ ನಮ್ಮ ಸ್ವಾತಂತ್ರ್ಯಕ್ಕೆ ಅಪಾಯ ಕಟ್ಟಿಟ್ಟದ್ದು", ಎಂಬ ವ್ಯಕ್ತಿಗತ ವಿಚಾರಸರಣಿಯನ್ನು ಪ್ರಕಟಿಸಿದ್ದೆ.

ಇಲ್ಲಿಂದ ಮುಂದೆ ಕೆಲವೇ ಮಾತುಗಳಲ್ಲಿ ಎರಡು ವರ್ಷಗಳ ಅವಧಿಯ ಜನತಾಪಕ್ಷದ ಆಡಳಿತೆ ಮತ್ತು ಅದರ ವಿಧ್ವಂಸನೆಯನ್ನು ಕುರಿತು ಹೇಳುತ್ತೇನೆ. ಜನತಾಪಕ್ಷದ ವಿಜಯ—ವ್ಯಕ್ತಿಸ್ವಾತಂತ್ರ್ಯಕ್ಕಾಗಿ ಬಹುಜನಗಳು (ಇಂದಿರಾ ಗಾಂಧಿಯ ಮೇಲಿನ ಸಿಟ್ಟಿನಿಂದ) ಆ ಪಕ್ಷದವರ ಮೇಲೆ ಇರಿಸಿದ ಒಂದು ವಿಶ್ವಾಸದ ಸಂಕೇತ. ಆ ಸಂಕೇತದ ಅರ್ಥ, ದೇಶ, ದೇಶದ ಹಿತ, ಮತ್ತು ವ್ಯಕ್ತಿ ಸ್ವಾತಂತ್ರ್ಯಗಳು ಪ್ರಾಮುಖ್ಯ–ಎಂಬುದು, ಅದು ಪ್ರಜಾತಂತ್ರವನ್ನು ಕುರಿತ ನಂಬಿಕೆ.

ಜನತಾಪಕ್ಷ ಅಧಿಕಾರಕ್ಕೆ ಬಂದ ಬಳಿಕ ತುರ್ತುಪರಿಸ್ಥಿತಿಯಲ್ಲಿ ಇಂದಿರಾಗಾಂಧಿಯ ಬಳಗದಿಂದ ಪ್ರಾಂತ್ಯಗಳಲ್ಲೂ, ಕೇಂದ್ರದಲ್ಲಿಯೂ ಎಷ್ಟೆಲ್ಲ ಅನ್ಯಾಯಗಳು ನಡೆದುವು ಎಂಬುದನ್ನು ಬಹಿರಂಗಗೊಳಿಸುವ ಪ್ರಯತ್ನ ಮಾಡಿತು. ಅದಕ್ಕಾಗಿ ಕಮಿಷನುಗಳನ್ನು ಏರ್ಪಡಿಸಿತು. ಆ ಕಮಿಷನುಗಳು ಇಂದಿರಾ ಮತ್ತು ಅವಳ ಬೆಂಬಲಿಗರು ತಮ್ಮ ಅಧಿಕಾರಕ್ಕಾಗಿ, ಮತ್ತು ಸ್ವಲಾಭಕ್ಕಾಗಿ ಮಾಡಬಾರದ ಕೆಲಸಗಳನ್ನು ಮಾಡಿದರು ಎಂಬುದರ ವಿವರಗಳನ್ನು ಜನಗಳ ಮುಂದೆ ಬಹಿರಂಗ ಪಡಿಸಿದುವು. ಇವೆಲ್ಲ ನಮ್ಮನ್ನು ತತ್ತರಿಸಬೇಕಿತ್ತು. ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡು ದ್ರವ್ಯ ಸಂಪಾದನೆ ಮಾಡಿದವರ ಬಗ್ಗೆ, ಜನಸಾಮಾನ್ಯರ ಹಕ್ಕುಗಳನ್ನು ಕಸವಾಗಿ ಎಣಿಸಿದವರ ಬಗ್ಗೆ, ನಮ್ಮ ಶಾಂತಿರಕ್ಷಕರಾದ ಪೋಲೀಸರು ಮಾಡಲಾರದ ಅನ್ಯಾಯವಿಲ್ಲ ಎಂಬ ಬಗ್ಗೆ ನಮ್ಮಲ್ಲಿಯೂ ಆಕ್ರೋಶ ಹುಟ್ಟಿಸಬೇಕಿತ್ತು. ಆ ಬಗೆಯ ಸಾರ್ವಜನಿಕ ಆಕ್ರೋಶ ಇಲ್ಲದೆ ಹೋದರೆ, ಅದು ಕಾಯಿದೆಬದ್ಧವಾಗಿ ಪ್ರಕಟನೆಗೊಳ್ಳದೆ ಹೋದರೆ, ಯಾವ ದೇಶದಲ್ಲೇ ಆಗಲಿ ಶುದ್ಧವಾದ ಆಡಳಿತೆಯನ್ನು ಕಾಣಲು ಅಸಾಧ್ಯ. ಜನತಾ ಸರಕಾರ ನೇಮಿಸಿದ ಕಮಿಷನುಗಳು ಉತ್ತರ ಹಿಂದೂಸ್ಥಾನದಲ್ಲಿ ಮಾತ್ರವಲ್ಲ ಇಂದಿರಾಪಕ್ಷ ಗೆದ್ದ ತಮಿಳ್ನಾಡಿನಲ್ಲೂ. ಕರ್ನಾಟಕದಲ್ಲೂ ದೇವರಾಜ ಅರಸರನ್ನೂ ಕರುಣಾನಿಧಿಗಳನ್ನೂ ಮಾದರಿಯಾಗಿ ತೋರಿಸಿಕೊಟ್ಟಿವೆ. ಆ ಅವಧಿಯಲ್ಲಿ ಜನತಾ ಸರಕಾರ ಮಾಡಲು ಅಂಜಿದ ಒಂದು ಕೆಲಸ—ಪೋಲೀಸ್ ಪಡೆಯಲ್ಲಿ ಬೇರೂರಿದ ಅಮಾನುಷ ವಿಧಾನಗಳ ಖಂಡನೆ ಮತ್ತು ನಿರ್ಮೂಲನ. ಅದು ಇಂದಿರಾಗಾಂಧಿಯ ವರ್ಚಸ್ಸಿಗೊಳಗಾಗಿ ಹಿಂಸಾಚಾರವನ್ನು ಎಸಗಿದ ರೀತಿ.

ಸಂವಿಧಾನದ ಮೇಲೆ ಆಕೆ ನಡೆಯಿಸಿದ ಅಪಚಾರ ತಿದ್ದುವುದನ್ನು ಜನತಾಪಕ್ಷ ಸಮರ್ಥ ರೀತಿಯಿಂದಲೇ ಮಾಡಿದೆ. ಆದರೆ ರಾಜಕೀಯದಲ್ಲಿ ಯಾವುದೇ ಪಕ್ಷದ ವತಿಯಿಂದ ಆರಿಸಲ್ಪಟ್ಟ ಪ್ರತಿನಿಧಿ ತನ್ನನ್ನು ಕಾಸು ಆರುಕಾಸಿಗೆ ಮಾರಿಕೊಂಡು ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ಪ್ರವೃತ್ತಿಯನ್ನು ತಡೆಯಲು ಏನೇನೂ ಮಾಡಲಿಲ್ಲ. ಆತ್ಮಸಾಕ್ಷಿಯಿಲ್ಲದ ಜನರನ್ನು ಕೊಳ್ಳುವುದರಿಂದಲೇ ಇಂದಿರಾ ಪಕ್ಷ ಬೆಳೆದದ್ದು. ಆ ಆಸೆಯಿಂದಲೇ ಯಾವತ್ತು ಪಕ್ಷಗಳು ಆ ವಿಷಯದಲ್ಲಿ ಮೂಕವಾಗಿ ಕುಳಿತವು. ಅವರಲ್ಲಿದ್ದ ಸಮಯಸಾಧಕರಿಗೂ ಅಂತಹ ವಾತಾವರಣ ಬೇಕಿತ್ತು.

ಇನ್ನೊಂದು ಪ್ರಾಮುಖ್ಯ ವಿಚಾರ. ಜನತಾ ಪಕ್ಷದಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಂತಹ ವ್ಯಕ್ತಿಗಳ ವಿಚಾರ. ಮೊರಾರ್ಜಿ ದೇಸಾಯಿ, ಚವ್ಹಾಣ್, ಜಗಜೀವನರಾಂ, ಚರಣಸಿಂಗ್ ಇತ್ಯಾದಿ ಇತ್ಯಾದಿ ನಾಯಕರ ವಿಚಾರ; ಎಂದರೆ ಎಷ್ಟೋ ವರ್ಷಗಳಿಂದ ಪ್ರಾಂತ್ಯಗಳಲ್ಲೂ, ಕೇಂದ್ರದಲ್ಲೂ ಅಧಿಕಾರದ ರುಚಿಯನ್ನು ಕಂಡ ಜನಗಳ ವಿಚಾರ. ಇವರು ಮುಂದಿನ ಅವಧಿಯಲ್ಲಿ ತಮ್ಮ ವರ್ತನೆಯಿಂದ ತಮಗೆ ಮುಪ್ಪು ಬಂದು ಹಲ್ಲುದುರಿದರೂ ಅಧಿಕಾರದ ದಾಹ ತಣಿಯದೆಂಬುದನ್ನು ತೋರಿಸಿಕೊಟ್ಟರು. ಅಷ್ಟು ಮಾತ್ರವಲ್ಲ; ತುರ್ತುಪರಿಸ್ಥಿತಿಯ ಪೂರ್ವ ಜೀವನದಲ್ಲಿ ಯಾವೆಲ್ಲ ಸ್ವಾರ್ಥವನ್ನೂ, ಅಡ್ಡದಾರಿಗಳನ್ನೂ ರೂಢಿಸಿಕೊಂಡಿದ್ದರೋ ಅದೇ ದಾರಿಯಲ್ಲೇ ಸಾಗಿದಂತಿದೆ. ಮೇಲಕ್ಕೇರುವ ತಮ್ಮ ಆಸೆ ಸಾಧ್ಯವಾಗದಾಗ ಅನ್ಯರನ್ನು ತೋರಿಸಿ, ತಾವು ಸಂಭಾವಿತರೆಂದು ನಟಿಸಿ, ಕಟ್ಟಕೊನೆಯಲ್ಲಿ ತಮ್ಮ ಸ್ವಾರ್ಥದಿಂದ ಪಕ್ಷವನ್ನೆ ನುಚ್ಚುನುರಿಯಾಗಿ ಮಾಡಿದ ಘಟನೆ ಈ ಮಾತನ್ನು ಋಜುಪಡಿಸುತ್ತದೆ. ಇಂದಿರಾಗಾಂಧಿ ಎಷ್ಟೇ ಪಾಪಮಾಡಿರಲಿ ಅದಕ್ಕೆ ಕಡಿಮೆಯಲ್ಲದ ಪಾಪ ಕಾರ್ಯ ಇವರದ್ದು. ಅವರದ್ದು ಪ್ರಜೆಗಳಿಗೆ ಬಗೆದ ದ್ರೋಹವೇ, ಜನರು ಅವರ ಮೇಲೆ ಇರಿಸಿದ ವಿಶ್ವಾಸಕ್ಕೆ ಮೋಸವೇ.

ಹಾಗೇಕಾಯಿತು–ಎಂಬ ಪ್ರಶ್ನೆಯನ್ನು ನಾವು ಉತ್ತರಿಸಲೇಬೇಕು. ಭಾರತದ ಸ್ವಾತಂತ್ರ್ಯದ, ಈ ದೀರ್ಘ ಅವಧಿಯಲ್ಲಿ ನಮ್ಮ ನಾಡಿನ ಚಿಕ್ಕ, ದೊಡ್ಡ ಮುಖಂಡರಲ್ಲೂ, ಸಣ್ಣ ಪುಟ್ಟ ನಾಯಕರಲ್ಲೂ ಕಾಣಿಸಿಕೊಂಡುಬಂದ ಒಂದೇ ಒಂದು ಪ್ರವೃತ್ತಿ–ಯಾವುದೇ ದಾರಿಯಿಂದ ಅಧಿಕಾರಕ್ಕೇರುವುದೇ ದೇಶ ಸೇವೆ. ಯೋಗ್ಯತೆ ಇಲ್ಲದ ಎಲ್ಲರೂ ಈ ಕಾರ್ಯಕ್ಕೆ ಪ್ರವೃತ್ತರು. ಅಂಥ ಕಾರ್ಯದಲ್ಲಿ ಯಾವ ನಾಜೂಕನ್ನೂ ಇರಿಸಿಕೊಳ್ಳಲಿಲ್ಲ. ಜನರ ಅಜ್ಞಾನವನ್ನು ಬಳಸಿದಷ್ಟೇ ಸುಲಭದಿಂದ ಬಡವರನ್ನೂ ಕ್ರಯಕ್ಕೆಕೊಂಡರು; ಶ್ರೀಮಂತರನ್ನೂ ಕ್ರಯಕ್ಕೆ ಕೊಂಡರು. ಔದ್ಯಮಿಕ ಮತ್ತು ವ್ಯಾಪಾರಿ ಡಕಾಯಿತರನ್ನೂ ಕೊಂಡರು. ಗುತ್ತಿಗೆದಾರರನ್ನೂ, ವಾಸ್ತವಿಕ ಡಕಾಯಿತರನ್ನೂ ಸ್ನೇಹಕ್ಕೆ ಪಡೆದುಕೊಂಡರು; ಜಾತಿಮತಗಳ ಲಾಭ ಪಡೆದುಕೊಡರು.

ಇಂಥ ಒಂದು ವಾತಾವರಣದಲ್ಲಿ ರಾಜಕೀಯವನ್ನು ಕೊಳಚೆಯನ್ನಾಗಿ ಮಾಡಿದ ಎಲ್ಲ ಪ್ರವೃತ್ತಿಗಳಿಗೂ, ಸುಳಿವು, ಸೆಳವುಗಳಿಗೂ ಮನ್ನಣೆ ದೊರೆಯಿತು. ಸಂಭಾವಿತರಾದವರಿಗೆ ಸಮಾಜದಲ್ಲಿ ಗೌರವ ಇಲ್ಲದಾಯಿತು. ಓಟನ್ನು ಕೊಳ್ಳಬಲ್ಲ ಮಧ್ಯವರ್ತಿಗಳಿಗೆ, ಬೆದರಿಸಬಲ್ಲ ಗೂಂಡಾಗಳಿಗೆ ಸಮಾಜದಲ್ಲಿ ಬೆಲೆ ಹೆಚ್ಚಿತು. ಆರಂಭದ ದಿನಗಳಲ್ಲಿ ಬಡಮಂದಿ ಮತದಾರರು "ಏನೋ ನಾವು ಹಿಂದಿನಿಂದಲೂ ಓಟುಕೊಟ್ಟ ಪಕ್ಷಕ್ಕೆ ಇವತ್ತಿಗೂ ಕೊಡುತ್ತೇವೆ" ಎಂದು ತಮ್ಮ ಮೌಢ್ಯದ ಲಾಭವನ್ನು ಪುಢಾರಿಗಳಿಗೆ ಅರ್ಪಿಸಿದ್ದರೆ, ಈಗ ಹೆಡ್ಡರಲ್ಲಿ ಹೆಡ್ಡನಾದವನು ಕೂಡ "ಯಾರಿಗೆ ಓಟು ಕೊಡಬೇಕೆಂಬುದು ನಮಗೆ ಗೊತ್ತಿದೆ!" ಎನ್ನುವಂತಾಯಿತು. ದೇಶದಲ್ಲಿ ಆ ಜನಗಳ ನಿರಕ್ಷರತೆ ಹೋಗಿಲ್ಲ; ತಿಳುವಳಿಕೆ ಬೆಳೆದಿಲ್ಲ. ಆದರೆ ಓಟನ್ನು ಯಾರಿಗೆ ಮಾರಿದರೆ ಸ್ವಂತ ಪ್ರಯೋಜನ ಹೆಚ್ಚು ಎಂಬುದನ್ನು ಕಲಿತಿದ್ದಾರೆ. ಇಲ್ಲಿ ದುಡ್ಡಿನ ಪ್ರಯೋಜನವಿದೆ; ಜಾತಿ, ಕೋಮುಗಳ ಆಕರ್ಷಣೆಯಿದೆ.

ಈಗ ತಿರುಗಿ ಯಾವತ್ತು ಭಾರತದಲ್ಲಿ ಇಂದಿರಾಗಾಂಧಿಯ ವರ್ಚಸ್ಸು ಉಳಿದವರನ್ನು ಮೀರಿ ಕಾಣಿಸುತ್ತಿದೆ, ಅದು ತೀರ ನಿಜ; ಅದನ್ನು ಅಲ್ಲಗಳೆಯುವಂತಿಲ್ಲ. ಆಕೆಗೆ ಅಂಥ ವರ್ಚಸ್ಸಿಲ್ಲದೆ ಹೋಗಿರುತ್ತಿದ್ದರೆ ಕೋಟಿಗಟ್ಟಲೆ ರೂಪಾಯಿಗಳು ಚುನಾವಣೆಯಲ್ಲಿ ದುಂದಾಗಲಾರದು. ಅವನ್ನು ಕೊಡಬಲ್ಲ, ಕೊಟ್ಟುದಕ್ಕೆ ನಾಳೆ ಒಂದಕ್ಕೆ ನಾಲ್ಕು ಪಾಲು ಲಾಭ ಗಿಟ್ಟಿಸಬಲ್ಲ ಉದ್ಯಮಿಗಳು ಸೃಷ್ಟಿಗೊಂಡಿರಲಾರರು. ಇನ್ನು ಆಕೆಯ ಆಡಳಿತ ಭದ್ರವಾಗಿರುವ ವಿಚಾರವನ್ನು, ಶುಚಿಯಾಗುವ ವಿಚಾರವನ್ನು ನಾವೇನೂ ಅಪೇಕ್ಷಿಬೇಕಾಗಿಲ್ಲ.

ಈ ದೇಶದಲ್ಲಿ ಯಾರೇ ಆಗಲಿ ಎಂಥ ಅಪರಾಧವನ್ನು ಮಾಡಲಿ ಅದು ಎಷ್ಟೇ ಬಹಿರಂಗವಾಗಲಿ, ನ್ಯಾಯಾಲಯಗಳಿಂದಲೇ ಸ್ವೀಕೃತವಾಗಿರಲಿ, ಅಂಥವುಗಳನ್ನು ಅಧಿಕಾರದಲ್ಲಿರುವವರು ಸಂಪೂರ್ಣವಾಗಿ ಮರೆಯಿಸಬಲ್ಲರು. ಈ ದೇಶದಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡು ಅಧಿಕಾರಕ್ಕೇರಬಲ್ಲ ಯಾವ ವ್ಯಕ್ತಿಯನ್ನೂ ತಟ್ಟಲಾರದು ಎಂದು ಬಹಿರಂಗವಾಗಿ ನಾವು ತೋರಿಸುತ್ತಿದ್ದೇವೆ. ಈ ದೇಶದ ಧ್ಯೇಯವಾದ "ಸತ್ಯಮೇವ ಜಯತೆ" ಎಂಬುವಕ್ಕೆ "ಅ" ಎಂಬ ಅಕ್ಷರ ಮೊದಲಿಗೆ ಸೇರಿಸಿಕೊಳ್ಳಬೇಕು. ಇವೆಲ್ಲವೂ ನಾವು ಸಾಧಿಸಿದ ದೊಡ್ಡ ಕೆಲಸ. ಇನ್ನೆಷ್ಟೋ ತಲೆಮಾರುಗಳ ತನಕ ಈ ವಿಷಪೂರಿತ ವಾತಾವರಣದಲ್ಲಿ ಜನಗಳೂ, ಪಕ್ಷಗಳೂ, ನಮ್ಮ ಮುಂದಿನ ಪೀಳಿಗೆಯವರೂ ಬಾಳಬೇಕಾಗಿದೆ ಎಂಬ ಕಟು ಸತ್ಯ ಮಾತ್ರ ನಮ್ಮ ನೆನಪಿನಲ್ಲಿರಬೇಕು.

ಮುಂದಿನ ಭವಿಷ್ಯವನ್ನೋ, ಉಚ್ಛ್ರಾಯವನ್ನೋ, ದರಿದ್ರರ ಉದ್ಧಾರವನ್ನೋ, ದಲಿತರ ಉತ್ಥಾನವನ್ನೋ ಕುರಿತು ನಾಳೆ ಏನಾಗಬಹುದು–ಎಂದು ಈಗ ಬೀಸುತ್ತಿರುವ ಹವೆಯ ಮೇಲಿಂದ ಯಾರೂ ಹೇಳಬಹುದು.

ಈ ಹೊತ್ತು ನಾಡಿನ ಯಾವುದೇ ಗುಂಪಿಗೆ ಅಸಮಾಧಾನವಾದರೆ—ಅಸಮಾಧಾನಗೊಂಡ ಗುಂಪಿಗೆ ತನ್ನ ಸಿಟ್ಟನ್ನು ಸಾರ್ವಜನಿಕರ ಮೇಲೆ ಮತ್ತು ಸಾರ್ವಜನಿಕ ಸೊತ್ತುಗಳ ಮೇಲೆ ತೋರಿಸಿಕೊಳ್ಳುವ ಹಕ್ಕು ಬಂದಿದೆ. ಹಾಗೆ ಸೊತ್ತುಗಳನ್ನು ನಾಶಮಾಡಿದಾಗ ಮಾತ್ರವೇ ಗಟ್ಟಿಯಾಗಿ ಕೂಗಿದವರ ಪಾಲಿಗೆ, ಕೇಳಿದಷ್ಟು ಅನುಕೂಲತೆ ದೊರಕುತ್ತದೆ. ಈ ನೀತಿ ತತ್ವವನ್ನು ನಾವು ಬಹಿರಂಗವಾಗಿ ನಡೆಯಿಸುತ್ತಿದ್ದೇವೆ.

ಓದಲು ಇಷ್ಟವಿಲ್ಲದ ವಿದ್ಯಾರ್ಥಿಗಳೆಲ್ಲರೂ ಆ ದಾರಿಗೆ ಇಳಿದಿದ್ದಾರೆ. ಓಟಿನ ಕೃಪೆಗಾಗಿ ಕಾರ್ಮಿಕ ಸಂಘಗಳು 'ಸಮಾಜದಲ್ಲಿ ಇನ್ನಾರಿಗೂ ಹಕ್ಕಿಲ್ಲ; ಇರುವ ಹಕ್ಕೆಲ್ಲ ತಮ್ಮದೇ' ಎಂದು ತೋರಿಸಿಕೊಳ್ಳುತ್ತಿದ್ದಾರೆ. ಸಾರ್ವಜನಿಕ ಜೀವನವನ್ನು ಸ್ಥಗಿತಗೊಳಿಸುವ ಎಲ್ಲ ಪ್ರವೃತ್ತಿಗಳಿಗೂ ಬಣಗಳಿಗೂ ಮನ್ನಣೆ ದೊರಕಿದೆ. ವ್ಯಕ್ತಿಗಳ 'ಘೇರಾವೋ' ನ್ಯಾಯಸಮ್ಮತವಾಗಿದೆ. ಜಾತಿ, ಕೋಮುಗಳ ಸಂಖ್ಯೆಯ ಮೇಲೆ ಅವರವರ ಶಕ್ತಿ ನೆಲೆಸಿದೆ. ಅವನ್ನು ಪಡೆಯುವುದಕ್ಕೆ ನಮ್ಮ ಘಟನೆ ಅಡ್ಡ ಬರುವುದಿಲ್ಲ. ಆ ಘಟನೆಯನ್ನು ನಾವು ಬೇಕಾದಂತೆ ಹಿಗ್ಗಿಸಬಲ್ಲೆವು. ಧಾರ್ಮಿಕ ನಡವಳಿಕೆಗೆ ನಮ್ಮ ಆಕ್ಷೇಪವೇ ಹೊರತು ಉಳಿದ ವಿಧಾನಗಳಲ್ಲಿ ಓಟು ಸಿಗುವುದಾದರೆ ಯಾವ ಜಾತಿ ಅಥವಾ ಮತದವರ ಗುಂಪಿಗೆ ನ್ಯಾಯಮೀರಿದ ಸೌಕರ್ಯವನ್ನು ಕಲ್ಪಿಸುತ್ತೇವೆ ; ಮುಸ್ಲಿಂ ಯುನಿವರ್ಸಿಟಿ, ಹಿಂದುಳಿದವರ ಯುನಿವರ್ಸಿಟಿ, ಓಟು ಕೈಯಲ್ಲಿ ಇರುವ ಎಂಥವರ ವಿಶ್ವವಿದ್ಯಾನಿಲಯಕ್ಕೂ ನಮ್ಮ ಸಮ್ಮತಿ ಇದೆ. ನಮ್ಮ ಸಂಸ್ಥೆಗಳಿಂದ ವಿದ್ಯಾಭ್ಯಾಸವನ್ನು ಊರಜನರಿಗೆ ಮಾರುವುದು ಕಷ್ಟವಾದರೆ, ಜಾಂಬಿಯಾದವರಿಗೆ, ಮಲೇಶ್ಯಾದವರಿಗೆ, ಇರಾನಿನವರಿಗೆ ಮಾರಾಟಮಾಡುವ ಭ್ರಷ್ಟಾಚಾರದ ಕೇಂದ್ರಗಳಿಗೆ ಸರಕಾರದ ಪ್ರಥಮ ಮನ್ನಣೆ ಸಿಗುತ್ತದೆ. ರಾಜಕೀಯ ಅಧಿಕಾರದಲ್ಲಿರುವವರೆಲ್ಲರೂ, ಅದಕ್ಕೆ ಒಂದಲ್ಲ ಒಂದು ರೀತಿಯಿಂದ, ಪಾಲುಗಾರರು. ಪಾಪ, ಅವರೂ ಬದುಕಬೇಡವೆ ?

ಸಾರ್ವಜನಿಕ ನ್ಯಾಯ ಸಲ್ಲಿಸುವುದರಲ್ಲಿ 2,000 ವರ್ಷಗಳ ಲೆಕ್ಕಾಚಾರ ಹಾಕಿ, ಅಲ್ಲಿಂದ ಅನ್ಯಾಯಗೊಂಡ ಜನಗಳ ಮೊಮ್ಮಕ್ಕಳಿಗೆ ಈವತ್ತು, ಈ ಕ್ಷಣ, ನ್ಯಾಯ ಸಲ್ಲಿಸುತ್ತೇವೆ. ಸರಕಾರ ಅವರನ್ನು ಈತನಕ ಕಡೆಗಣಿಸಿದಕ್ಕೆ ಇದು ಯೋಗ್ಯ ಪರಿಹಾರ. ಸರಕಾರದ ಯಾವುದೇ ನೌಕರಿ ಇರಲಿ, ಅದಕ್ಕೆ ನಿಶ್ಚಿತವಾದ ಒಂದು ಯೋಗ್ಯತೆ ಬೇಕು–ಎಂಬ ಕಲ್ಪನೆ ಕೇವಲ ಭ್ರಾಮಕ. ಅದು ಕೇವಲ ಕೆಲವೇ ಸ್ವಾರ್ಥಿಗಳು ಮಾಡಿಟ್ಟ ಒಂದು ಸೂತ್ರ. ಪ್ರಾಥಮಿಕ ಶಾಲೆಗೆ ಹೋಗದವನಿಗೂ ಮಂತ್ರಿಪಟ್ಟ ಸಿಗಬಹುದಾದರೆ—ಹೊಟ್ಟೆನೋವು, ಆಮಶಂಕೆ ಮೊದಲಾದ ಬೇನೆಗಳಿಗೆ ಗುರಿಯಾದ ವ್ಯಕ್ತಿಯೂ ಕಲಿಯದೆಯೂ ಏಕೆ ವೈದ್ಯನಾಗಬಾರದು ? ನಾಳೆ ಆತ ರೋಗಿಗಳನ್ನು ನೋಡಿ ಕಲಿಯುತ್ತಾನೆ. ಜನ್ಮಸಿದ್ಧವಾದ ಕೆಲವು ಹಕ್ಕುಗಳನ್ನು ಮನ್ನಿಸಿ ಮತ್ತು ಅವಕ್ಕೆ ಅಡಚಣೆ ಬರುವ ಯೋಗ್ಯತೆಯ ವಿಚಾರವನ್ನು ಸಂಪೂರ್ಣವಾಗಿ ಮರೆತು ಬಿಡುವುದು ನಮ್ಮ ಇಂದಿನ ಧೋರಣೆ.

ಆರ್ಥಿಕ ಕ್ಷೇತ್ರದಲ್ಲಿ ರಾಷ್ಟ್ರ ಸ್ವಾಮ್ಯದ ಉದ್ಯಮಗಳೇ ಇರಲಿ, ಖಾಸಗಿ ಉದ್ಯಮಗಳೇ ಇರಲಿ, ಅಲ್ಲಿನ ವ್ಯವಹಾರ ಒಂದೇ ಬಗೆಯದು. ಆಡಳಿತೆಯಲ್ಲಿ ಯಾರ್ಯಾರು ಇದ್ದಾರೋ ಅವರು ಎಷ್ಟು ಹಣ ಮುಕ್ಕಬಹುದು; ಆಡಳಿತೆಯ ವೆಚ್ಚ ಎಷ್ಟು ಹೆಚ್ಚಬಹುದು ; ಸಾಕಷ್ಟು ಉತ್ಪನ್ನ ಆಗಬಹುದು, ಆಗದಿರಬಹುದು; ಉತ್ಪನ್ನಕ್ಕೂ ಪರಿಶ್ರಮಕ್ಕೂ ಸಂಬಂಧ ಇರಕೂಡದು—ಇಂಥ ಹಲವು ಹೊಸ ಸೂತ್ರಗಳನ್ನು ಕಂಡುಕೊಂಡಿದ್ದೇವೆ. ಖಾಸಗಿ ಉದ್ಯಮಗಳಲ್ಲೂ ಅನೇಕ ವಿಧದ ಭ್ರಷ್ಟಾಚಾರಗಳು ತುಂಬಿಕೊಂಡಿವೆ.

ನಿಜಕ್ಕೂ ಭಾರತದ ಭವಿಷ್ಯ ಉಜ್ವಲವಾಗಿದೆ ! ಅದನ್ನು ಸುಟ್ಟು ಬೂದಿಮಾಡುವಂತಹ ಪ್ರಯತ್ನ ನಮ್ಮದು. ಭಾರತ ಉತ್–ಜ್ವಲಿಸಬೇಕಾದರೆ ನ್ಯಾಯ, ನೀತಿ, ಶುಚಿ ಮೊದಲಾದುವನ್ನು ಬಲಿಕೊಡದೆ ಹೇಗಾದೀತು ? ನಮಗೆ ಬಲಿದಾನದಲ್ಲಿ ತುಂಬ ವಿಶ್ವಾಸ ! ಆದುದರಿಂದ ಇನ್ನೊಬ್ಬರು ಬಲಿಯಾದಾಗ ತುಂಬ ತೃಪ್ತಿ.

*

ಎಸ್. ವೆಂಕಟರಾವ್

ಅಸ್ಸಾಂ ಸಮಸ್ಯೆಯನ್ನು ಕುರಿತು

ಇಂದು ಭಾರತ ಎದುರಿಸುತ್ತಿರುವ ಸಮಗ್ರ ಸಂಕೀರ್ಣ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅಸ್ಸಾಮಿನ ಸಮಸ್ಯೆಯನ್ನು ಕುರಿತು ನಾವು ಅದರ ವಿಶೇಷ ಸಂದರ್ಭವನ್ನು ಗಮನಿಸಿ ವಿಶ್ಲೇಷಿಸಬೇಕು. ಇಲ್ಲವಾದರೆ, ನಮ್ಮ ವಿವೇಚನೆ ಪೂರ್ವಗ್ರಹಯುಕ್ತವೋ ಅಥವ ಕುರುಡರು ಸ್ಪರ್ಶಿಸಿದ ಆನೆಯಂತೆ ಅಂಶಿಕವೋ ಆಗುತ್ತದೆ. ಹೀಗೆ ನಿರ್ವಿಕಾರವಾಗಿಯೂ ಸಮಗ್ರವಾಗಿಯೂ ನಾವು ವಿವೇಚಿಸಿದಾಗಲೂ ಕೂಡ ಪ್ರಾಮಾಣಿಕ ಮತಭೇದಕ್ಕೆ ಅವಕಾಶವಿದ್ದೇ ಇರ್ರುತ್ತದೆ.

ಮೊದಲು ಭಾರತದ ಆರ್ಥಿಕ ಬಿಕ್ಕಟ್ಟಿನ ಬಗೆಗೆ ಕೆಲ ಮಾತು. ಏಕೆಂದರೆ ಇದು ನಮ್ಮ ಹಲವು ಸಮಸ್ಯೆಗಳ ತಾಯಿ–ಸಮಸ್ಯೆ. 1978–79 ನೇ ಇಸವಿ ಮುಗಿದಂತೆ ಭಾರತ ಸುಮಾರು 1,20,000 ಕೋಟಿ ರೂಪಾಯಿಗಳನ್ನು 26 ವರುಷಗಳ ಕಾಲ ಯೋಜನೆಗಳ ಅನ್ವಯಕ್ಕೆ ಖರ್ಚು ಮಾಡಿದೆ. ಪ್ರಸ್ತುತ ಪಂಚವಾರ್ಷಿಕ ಯೋಜನೆಯ ಮೊತ್ತವಾದ 1,50,000 ಕೋಟಿ ರೂಪಾಯಿಗಳಿಗಿಂತ ಈ ಮೊತ್ತ ಹಿರಿದು. ಏಕೆಂದರೆ ಹಿಂದಿಗಿಂತ ಇಂದು ಹೆಚ್ಚು ಅತಿಪ್ರಸರಣವಿದೆ. ಈ ಯೋಜನೆಗಳ ಕಾರ್ಯನ್ವಯದ ವಾಸ್ತವಿಕ ಅಜಮಾಯಿಷಿ ಹೀಗಿದೆ :

1951 ರಲ್ಲಿ ಭಾರತದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 18 ಲಕ್ಷ ಉದ್ಯೋಗಾರ್ಥಿಗಳು ದಾಖಲಾಗಿದ್ದರೆ ಇವತ್ತು ಸುಮಾರು 150 ಲಕ್ಷ ದಾಖಲಿನಲ್ಲಿದ್ದಾರೆ. ನಿರುದ್ಯೋಗಿಗಳೂ ಹಾಗೂ ತೀವ್ರತರವಾದ ಅಲ್ಪ ಉದ್ಯೋಗದಿಂದ ಪೀಡಿತರೂ ಸೇರಿ ಅಂದಿನಿಂದ ಇಂದಿಗೆ 100 ಲಕ್ಷದಿಂದ 400 ಲಕ್ಷಕ್ಕೆ ಏರಿದ್ದಾರೆ. ಅನಕ್ಷರಸ್ಥರ ಒಟ್ಟುಸಂಖ್ಯೆ ಅವತ್ತು 298 ಲಕ್ಷ ಇದ್ದದ್ದು ಇವತ್ತು ಪ್ರಾಯಶಃ 420 ಲಕ್ಷ ಇದ್ದೀತು. ವಸತಿಯ ಕೊರತೆ 1974 ರಲ್ಲಿ 156 ಲಕ್ಷವಿದ್ದುದು ಈಗ ಸುಮಾರು 207 ಲಕ್ಷ ಇವೆ. ಭೂಸಹಿತ ಕೃಷಿಕರು 1961 ರಲ್ಲಿ 996 ಲಕ್ಷ ಜನರಿದ್ದು, 1971 ರಲ್ಲಿ 782 ಲಕ್ಷ ಇದ್ದರು ; ಅದೇ ಭೂರಹಿತ ಕಾರ್ಮಿಕರು ಈ ಕಾಲದಲ್ಲಿ 315 ಲಕ್ಷದಿಂದ 475 ಲಕ್ಷಕ್ಕೆ ಹೆಚ್ಚಿದರು. ದಾರಿದ್ರ್ಯ ರೇಖೆಯ ಕೆಳಗಿನವರು (ಅಂದರೆ ಕನಿಷ್ಠ ಆಹಾರ ಮಾತ್ರ ಪಡೆದು, ಬಟ್ಟೆ, ಮನೆ ಪಡೆಯಲಾರದವರು) 1960–61 ರಲ್ಲಿ 235 ಮಿಲಿಯನ್ ಇದ್ದರೆ ಇವತ್ತು 305 ಮಿಲಿಯನ್ ಇದ್ದಾರೆ. ಗ್ರಾಮೀಣರ ಪೈಕಿ ಕೆಳಗಿನ ಶೇಕಡ 10 ಮನೆಗಳವರು ಗ್ರಾಮಾಂತರ ಪ್ರದೇಶದ ಆಸ್ತಿಯ 0.1 ಪಾಲನ್ನು ಪಡೆದಿದ್ದರೆ, ಮೇಲಿನ ಶೇಕಡ 10 ಮನೆಗಳವರು ಶೇಕಡ 50 ಕ್ಕಿಂತ ಅಧಿಕಭಾಗ ಪಡೆದಿದ್ದಾರೆ. ಈ ಸ್ಥಿತಿ 1960–61 ಹಾಗೂ 1971–72 ಈ ಎರಡು ವರುಷಗಳಲ್ಲೂ ಹಾಗೇ ಇತ್ತು; ಬಹುಶಃ ಇವತ್ತೂ ಹಾಗೆಯೇ ಇದೆ. ಹಂಚಲು ಸಾಧ್ಯವಾಗುವ 2.15 ಕೋಟಿ ಎಕರೆ ಸಾಗುವಳಿಗೆ ಯೋಗ್ಯ ಜಮೀನಿನಲ್ಲಿ ಜುಲೈ 1977 ರ ವರೆಗೆ 13 ಲಕ್ಷ ಎಕರೆ ಮಾತ್ರ ಹಂಚುವಳಿಯಾಗಿತ್ತು. ನಗರಪ್ರದೇಶಗಳಲ್ಲಿರುವ ಮೇಲಿನ 20 ಔದ್ಯಮಿಕ ಮನೆತನಗಳವರ ಆಸ್ತಿ 1969 ರಲ್ಲಿ 2500 ಕೋಟಿ ರೂ. ಇದ್ದುದು 1975 ಕ್ಕೆ 4500 ಕೋಟಿ ರೂ.ಗೆ ಹೆಚ್ಚಿತ್ತು. ಇನ್ನು ಈ ಅಂಕೆ ಅಂಶಗಳನ್ನು ಸಾಕುಮಾಡಿ, ಇವರ ನಿರ್ಣಯವನ್ನು ಹೀಗೆ ನಿರೂಪಿಸಬಹುದು : ಜನರ ಜೀವನದ ದೃಷ್ಟಿಯಿಂದ ನೋಡಿದಾಗ ಯೋಜನಾಬದ್ಧವಾಗಿ ಸಾಧಿಸಿದ್ದು—ಹೆಚ್ಚು ನಿರುದ್ಯೋಗ, ಹೆಚ್ಚು ಬಡತನ, ಹೆಚ್ಚು ಅನಕ್ಷರತೆ. ಇಲ್ಲಿ ಇದೇ ಕಾಲದಲ್ಲಿ ನಮ್ಮ ತಂತ್ರ

ಜ್ಞಾನ, ತಾಂತ್ರಿಕ ಸಾಮರ್ಥ್ಯ, ತಾಂತ್ರಿಕ ಜನಬಲ ಕೂಡ ಹೆಚ್ಚಾಯಿತೆಂಬುದು ಸತ್ಯ. ಆದರೆ ಅದರ ಲಾಭ, ಸುಖ, ಸಾಮಾನ್ಯ ಜನರಿಗೆ ತಲುಪಲಿಲ್ಲ. ಆರ್ಥಿಕ ವಿಕಾಸದ ಜತೆಗೆ ಬಡತನ, ಕಂಗಾಲತನ ಹೆಚ್ಚುವುದು ಬಂಡವಾಳಶಾಹೀ ವಿಕಾಸ ಮಾರ್ಗದ ಮುಖ್ಯ ಲಕ್ಷಣ. ಇದರ ಒಂದು ಪರಿಣಾಮ—ಬಡತನಕ್ಕೆ, ಕೊರತೆಗಳಿಗೆ, ದುರ್ಗತಿಗೆ ಸಾಮಾನ್ಯ ಜನರು ಯಾರು ಯಾರನ್ನೋ ದೂರುವುದು, ಸಿಗುವ ಕೆಲವು ನೌಕರಿಗಳಿಗೆ ಜಾತಿ, ಭಾಷೆ, ಪ್ರದೇಶದ ಆಧಾರದ ಮೇಲೆ ಪೈಪೋಟಿ ಮಾಡಿ ಕಾದಾಡುವುದು ಮತ್ತು ಈ ವಿಕಾಸದ ವಕ್ರತೆ, ವ್ಯಗ್ರತೆ, ಕೊರತೆಗಳಿಗೆ ಮೂಲಕಾರಣಕರ್ತರನ್ನು ಗುರುತಿಸದಿರುವುದು— ಇದು ಸಾಮಾನ್ಯ ಅನುಭವ.

ಹೀಗೆ ವಿಕಾಸ ಕುಂಠಿತವಾದ ಭಾರತದಲ್ಲಿ ವಿಕಾಸ ಮತ್ತಷ್ಟು ಕುಂಠಿತಮಾತ್ರವಲ್ಲ, ವಕ್ರಗತಿ ಹಿಡಿದ ರಾಜ್ಯ ಅಸ್ಸಾಂ. ಜತೆಗೆ ಭೂತಕಾಲದ ದುಃಸ್ವಪ್ನಗಳು ನಿರ್ಮಿಸಿದ ಭೌತಿಕ ಏರುಪೇರುಗಳೂ ಮನೋವಿಕಾರಗಳೂ ಸೇರಿ ಅಸ್ಸಾಮನ್ನು ಭಾರತದ ಸಾಮಾನ್ಯ ಜನರ ಭಗ್ನಸ್ವಪ್ನದ ಸಚಿತ್ರ ದರ್ಪಣವನ್ನಾಗಿ ಮಾಡಿದುವು. ಅಸ್ಸಾಂ ಅಪ್ಪಟ "ಆರ್ಯದೇಶ" ವಲ್ಲ. ಆರ್ಯರು, ನೀಗ್ರಿಟೋಜನರು, ದ್ರಾವಿಡರು, ಟಿಬೆಟೋಬರ್ಮನರು—ಹೀಗೆ ಹಲವು ಬಗೆಯ ಜನರು ಸೇರಿ ಸೃಷ್ಟಿಸಿದ ನಾಡು. ಅಸಮ ಭೂಮಿಯಾದುದರಿಂದ ಅಸ್ಸಾಂ ಎಂಬ ಹೆಸರು ಸಂಸ್ಕೃತ ಜನ್ಯವಾಯಿತೆಂಬ ವಾದವಿದ್ದರೂ, 13 ನೇ ಶತಕದಲ್ಲಿ ಅಸ್ಸಾಮನ್ನು ಗೆದ್ದ ಬರ್ಮಿಯ ಷಾನ್ ಬುಡಕಟ್ಟಿನ ಅಹೋಮ್ ಜನರಿಂದ ಈ ಹೆಸರು ಬಂದದ್ದು ಹೆಚ್ಚು ಸಮಂಜಸವೆನ್ನುತ್ತಾರೆ. ಮೂಲತಹ ಸಂಸ್ಕೃತದಿಂದ ತುಂಬಾ ಪ್ರಭಾವಿತವಾದರೂ ಹಲವು ಬುಡಕಟ್ಟುಗಳ ದೇಶೀನುಡಿಗಳಿಂದ ಸಮೃದ್ಧವಾದದ್ದು ಅಸ್ಸಾಮಿ ಭಾಷೆ. 1826 ರಲ್ಲಿ ಬ್ರಿಟಿಷರು ಬರ್ಮಿಯರಿಂದ ಈ ರಾಜ್ಯವನ್ನು ಗೆದ್ದರು. ಎಲ್ಲ ಗುಡ್ಡಗಾಡಿನ ಜನರಂತೆ ಅಸ್ಸಾಮಿಯರಿಗೂ ತಮ್ಮ ನಾಡು ನುಡಿಯ ಬಗ್ಗೆ ತುಸು ಹೆಚ್ಚು ಎನ್ನಬಹುದಾದ ಮಮತೆ, ಹೆಮ್ಮೆ. ಅವರೆಗಾಗಲೇ ಇಂಗ್ಲಿಷು ಕಲಿತು ಕಾರಕೂನಿಕೆಗೆ ಸಿದ್ಧರಾಗಿದ್ದ ಬಂಗಾಳೀ ಬಾಬುಗಳನ್ನು ಆಡಳಿತದಲ್ಲಿ ಬ್ರಿಟಿಷರು ಕರೆತಂದು ಒಳಹೊಗಿಸಿದರು. ಅಸ್ಸಾಮಿ ಭಾಷೆಯನ್ನು ದಮನಮಾಡಿ ಆಡಳಿತದಲ್ಲಿ ಬಂಗಾಳೀ ಭಾಷೆಯನ್ನು ಹೇರುವ ವಿಫಲ ಪ್ರಯತ್ನವನ್ನೂ ಮಾಡಿದರು. ಅಸ್ಸಾಂ ಬಲು ಫಲವತ್ತಾದ ಭೂಮಿ; ಇಲ್ಲಿ ಆಯಾಸಕರವಾದ ಹವಾಮಾನ, ಅತಿರೇಕವಾದ ಮಳೆ, ಚೇತೋಹಾರಿಯಾದ ನಿಸರ್ಗ ಸಂಪತ್ತು ಹಾಗೂ ವಿರಳವಾದ ಜನಸಾಂದ್ರತೆ— ಹೀಗಾಗಿ ಅಸ್ಸಾಮಿಜನ ಸ್ವಭಾವತಃ ಸುಖಿ ಪುರುಷರು. ಅಸ್ಸಾಮಿನಲ್ಲಿ ಆಗಾಗ ಭೂಪದರಗಳ ವಿನ್ಯಾಸವನ್ನೇ ಬದಲಿಸುವ, ಸಾವಿರಾರು ಚದುರ ಮೈಲಿ ವಿಸ್ತಾರದಲ್ಲಿ ಸರ್ವನಾಶವನ್ನು ಬಿತ್ತರಿಸುವ ಭೂಕಂಪಗಳ ಹಾವಳಿ. ನೆರೆಗಳನ್ನು ಹುಚ್ಚುಹುಚ್ಚಾಗಿ ಹರಿಸುವ ಅತಿವೃಷ್ಟಿ, ಕ್ಷಾಮಗಳನ್ನು ನಿರ್ಮಿಸುವ ಅನಾವೃಷ್ಟಿಗಳು. ಅತಿವೃಷ್ಟಿಕಾಲದಲ್ಲಿ ನೀರನ್ನು ಒಡ್ಡುಹಾಕಿ ನಿಲ್ಲಿಸಿ ಅನಾವೃಷ್ಟಿಕಾಲದಲ್ಲಿ ನೀರಾವರಿಗೆ ಬಿಡಬಲ್ಲ ಜಲಾಶಯಗಳನ್ನು ನಿರ್ಮಿಸಲಿಲ್ಲ. ಆದರೆ ಫಲವತ್ತಾದ ಅಸ್ಸಾಮಿನ ಭೂಮಿಯನ್ನು ಬೆವರು ಸುರಿಸಿ ಸಾಗುವಳಿಮಾಡಿ ಸಮಾಜವನ್ನು ಸಾಕಲು ಪೂರ್ವಬಂಗಾಳದಿಂದ ಅಲ್ಲಿ ಹಿಂದೂಜಮೀನುದಾರರ ಕೈಕೆಳಗೆ ದುಡಿದು ಬೇಸತ್ತಿದ್ದ ಮುಸಲ್ಮಾನ ಕೃಷಿಕರನ್ನು ಕರೆಸುವುದು ಉತ್ತಮೋಪಾಯವಾಗಿ ಅಂದಿನ ಬ್ರಿಟಿಷರಿಗೂ ಅಸ್ಸಾಮಿನ ಭೂಮಾಲಿಕರಿಗೂ ತೋರಿತು. ಟೀ ತೋಟಗಳು ಪ್ರಾರಂಭವಾದಾಗ ಬ್ರಿಟಿಷರು ಮಧ್ಯಭಾರತದಿಂದ ಆದಿವಾಸಿಗಳನ್ನು – ವಿಶೇಷತಃ ಸಂತಾಲರನ್ನು – ಬಡವರನ್ನು ಆಮಿಷ ತೋರಿಸಿ, ವಂಚಿಸಿ ಕರೆತರಿಸಿದರು. ಅಲ್ಲಿನ ತೋಟಗಳಲ್ಲಿ ಮಲೇರಿಯಾದಿಂದ ತಮ್ಮವರು ಸತ್ತದ್ದು, ಸುಂದರಿಯರಾದ ತಮ್ಮ ಹೆಂಗಳೆಯರನ್ನು ಘಟಿಂಗರು ಕೆಡಿಸಿದ್ದೂ, ಹಾರಿಸಿಕೊಂಡು ಹೋದದ್ದೂ, ತಮ್ಮ ಅಪಾರದುಃಖದ ಬದುಕು—ಈ ಎಲ್ಲವನ್ನೂ ಸಂತಾಲರು ತಮ್ಮ ಜಾನಪದ ಹಾಡುಗಳಲ್ಲಿ ಸೆರೆಹಿಡಿದಿರುವುದು ಈಗಲೂ ಇದೆಯಂತೆ. ಸರ್ಕಾರದ ಆಕಾರ ಬೆಳದು ಬಂದಂತೆ ಬಂಗಾಳದಿಂದ ಬಾಬುಗಳೂ, ಅವರ ಭಾವನೆಂಟರೂ ಬರುವುದು ನಡೆದು ಬಂತು. 1940 ರ ದಶಕದಲ್ಲಿದ್ದ ಮುಸ್ಲಿಂ ಲೀಗ್ ಸರ್ಕಾರ ಹಾಗೂ ಅನಂತರ ಬಂದ ಕಾಂಗ್ರೆಸ್ ಸರ್ಕಾರ— ಓಟುಗಳ ಭಂಡಾರ ಎನಿಸಿದ ಪೂರ್ವಬಂಗಾಳಿ ಮುಸ್ಲಿಮರೈತರನ್ನು ಕರೆಸಿ ಅಲ್ಲಿ ನೆಲಸುವಂತೆ ಮಾಡುವುದು ಅನೂಚಾನವಾಗಿ ನಡೆದು ಬಂತು. ಜತೆಗೆ ನೇಪಾಳದಿಂದ ರಹದಾರಿ ಬೇಕಾಗಿಲ್ಲದ್ದರಿಂದ ಬಡಜನ ಬರತೊಡಗಿದರು. ಇವರೆಲ್ಲ ಬಂದಮೇಲೆ ಇವರಿಗೆ ನೆರವಾಗಿ ಕುಶಲಕಾರ್ಮಿಕರಾದ ನಾಯಿಂದರು, ಕಮ್ಮಾರರು, ಚಮ್ಮಾರರು, ಮೆಕ್ಯಾನಿಕರು, ಟೆಕ್ನಿಷಿಯನರು, ಬಡಗಿಗಳು, ಕಿರಾಣಿವರ್ತಕರು ಹೊರಗಿನಿಂದ ಬರತೊಡಗಿ

ಸನ್ನಿವೇಶ.

ದರು. ಇವರ ಬೆನ್ನಹಿಂದೆಯೇ ಮಾರವಾಡಿಗಳೂ ಬಂದರು. ಜತೆಗೆ, ಅಸ್ಸಾಂ ಪ್ರಾಂತ ರಚಿತವಾದಾಗ ಕೆಲವು ಬಂಗಾಳಿ ಬಹುಸಂಖ್ಯಾತ ಪ್ರದೇಶಗಳನ್ನೂ ಅದರಲ್ಲಿ ಸೇರಿಸಲಾಗಿತ್ತು. ಹೀಗಾಗಿ ಆರಾಮವಾಗಿ ತಮ್ಮ ಮಧ್ಯ ಯುಗದ ಸ್ವಪ್ನಲೋಕದಲ್ಲಿ ವಿಹರಿಸುತ್ತಿದ್ದ ಅಸ್ಸಾಮೀ ಜನತೆ ಆಧುನಿಕತೆಯ ಹೊಸಲೋಕ ಬಾಗಿಲು ತಟ್ಟಿ ಎಚ್ಚರಿಸಿದಾಗ, ಆಗಲೇ ಆಧುನಿಕ ನೌಕರಿ ಚಾಕರಿಗಳನ್ನೂ ನೆಲ, ಉದ್ಯಮ ವ್ಯವಸ್ಥೆಗಳನ್ನೂ ಪರಕೀಯರು ಹಿಡಿದು ಕೊಂಡಿದ್ದು ಕಂಡು ತತ್ತರಿಸಿತು. ವಿಶೇಷತಃ ಅಸ್ಸಾಮೀ ಮಧ್ಯಮ ವರ್ಗ ತನಗೆ ದಕ್ಕಬೇಕಾಗಿದ್ದ ಕಾರಕೂನಿ ಸ್ಥಾನಗಳೂ ಅಂಗಡಿ ಮುಂಗಟ್ಟುಗಳೂ ಅನ್ಯರ ಪಾಲಾಗಿದ್ದುದನ್ನು ಕಂಡು. ಅದೇತಾನೇ ತಲೆಯೆತ್ತುತ್ತಿದ್ದ ಕಾಂಗ್ರೆಸ್ ನಾಯಕತ್ವಕ್ಕೆ ಮನವಿಗಳನ್ನು ಸಲ್ಲಿಸಿತು. ಅದರಿಂದ ಏನೇನೂ ಉಪಯೋಗವಾಗಲಿಲ್ಲ. ಸ್ವಾತಂತ್ರ್ಯ ಹೋರಾಟದ ಜಯಕಾರ ಧಿಕ್ಕಾರಗಳಲ್ಲಿ ಈ ಹತಾಶೆ ತಲೆಮರೆಸಿ ಕೊಂಡಿತ್ತು. ಸ್ವಾತಂತ್ರ್ಯಾನಂತರ, ಈ ಆಕಾಂಕ್ಷೆಗಳು ಮತ್ತೆ ತಲೆಯೆತ್ತಿದುವು. ಆದರೆ, ತೀವ್ರತರವಾಗಿ ಆರ್ಥಿಕ ವಿಕಾಸವಾಗಿದ್ದರೆ ಎಲ್ಲರಿಗೂ ಅವಕಾಶಗಳು ಹೆಚ್ಚಿ ಈ ಹತಾಶೆ ತಹಬದಿಗೆ ಬರುತ್ತಿತ್ತು. ಆದರೆ, ಪೂರ್ವ ಬಂಗಾಳದಿಂದ ವಲಸೆ ಬರುವುದು ನಿರಂತರವಾಗಿ ನಡೆಯುತ್ತ ಅದನ್ನು ಮತಗಳ ಸಲುವಾಗಿ ಅಸ್ಸಾಮೀ ಕಾಂಗ್ರೆಸ್ ನಾಯಕತ್ವ ಪ್ರೋತ್ಸಾಹಿಸುತ್ತ ಇದ್ದುದರಿಂದ ಅಸ್ಸಾಮೀ ನಾಯಕತ್ವ ಕ್ಷುದ್ರವಾಯಿತು. ಹೀಗಾಗಿ ಒಂದು ಸಣ್ಣ ಪ್ರದೇಶದ ವಿನಾ ಬಾಕಿ ಸಿಲ್ಹೆಟ್ ಜಿಲ್ಲೆ ಪೂರ್ವಪಾಕಿಸ್ತಾನಕ್ಕೆ ಸೇರುವುದನ್ನು ಆ ಪ್ರದೇಶ ಬಂಗಾಳೀ ಬಹುಮತದ ಜಿಲ್ಲೆ ಎಂಬ ಕಾರಣದಿಂದ ಅಸ್ಸಾಮೀ ಕಾಂಗ್ರೆಸ್ ನಾಯಕತ್ವ ತಡೆಯಲಿಲ್ಲ. ಆದರೆ ಪಶ್ಚಿಮ ಬಂಗಾಳಕ್ಕೆ ತಾಗಿದಂತಿರದೆ ಪೂರ್ವಬಂಗಾಳಕ್ಕೆ ತಾಕಿದಂತೆ ಇರುವ ಬಂಗಾಳಿ ಬಹುಮತದ ಕಾಚಾರ್ ಜಿಲ್ಲೆ ಯಾವತ್ತೂ ಅಸ್ಸಾಮೀ ನಾಯಕತ್ವಕ್ಕೆ ಹಾಸಿಗೆಯಲ್ಲಿನ ಮುಳ್ಳಾಗಿದೆ. ಜತೆಗೆ ಗಾಯದ ಮೇಲೆ ಬರೆ ಎಳೆದಂತೆ 1947 ರ ಅನಂತರ ಅಸ್ಸಾಮಿನ ವಿಭಿನ್ನ ಪ್ರದೇಶಗಳು– ನಾಗಾಲ್ಯಾಂಡ್, ಮಿಜೋರಾಮ್, ಮೇಘಾಲಯ, ಅರುಣಾಚಲ ಪ್ರದೇಶ– ಹೀಗೆ ಬೇರೆ ಬೇರೆ ರಾಜ್ಯಗಳಾಗಿ ಇವತ್ತು 1947ರಲ್ಲಿದ್ದ ಅಸ್ಸಾಂ ತನ್ನ ಮೂಲ ಪ್ರದೇಶದ ಮೂರರಲ್ಲೊಂದು ಭಾಗವನ್ನು ಮಾತ್ರ ಪಡೆದಿದೆ. ಭಾರತದೊಡನೆ ಒಂದೇ ಒಂದು ಇಕ್ಕಟ್ಟಾದ ಓಣಿಯ ಮೂಲಕ ಮಾತ್ರ ಸಂಪರ್ಕ ಪಡೆದಿದ್ದು, ಹೊರನಾಡಿನಂತಿದೆ.

ಈ ಎಲ್ಲ ನೋವನ್ನೂ ವಿರಸವನ್ನೂ ವಿಕಾಸ ತೀವ್ರತರವಾಗಿ ಸಾಗಿ ನುಂಗಬಹುದಾಗಿತ್ತು. ಆದರೆ ಅಸ್ಸಾಮಿನ ವಿಕಾಸ ಒಂದು ಅಣಕವಾಯಿತು. ದೆಹಲಿಯಿಂದ ಗೌಹಾಟಿಗೆ ತಲಪಲು ಇವತ್ತೂ ಬ್ರಾಡ್‌ಗೇಜ್ ರೈಲು ಮಾರ್ಗವಿಲ್ಲ. ಕಲ್ಕತ್ತೆಯಿಂದ ರೈಲು ಮಾರ್ಗದಲ್ಲಿ 991 ಕಿ.ಮೀಟರು ದೂರದ ಬಳಸುದಾರಿಯಲ್ಲಿ ಮಧ್ಯೆ ಮೀಟರು ಗೇಜಿನ ರೈಲಿಗೆ ಬದಲಾಯಿಸಿ ಗೌಹಾಟಿಗೆ ತಲಪಲು 24 ಗಂಟೆ ಬೇಕು. ವಿಮಾನದಲ್ಲಿ ಐವತ್ತು ನಿಮಿಷ. ಬ್ರಾಡ್‌ಗೇಜ್ ರೈಲಿಗೆ ಹಣವಿಲ್ಲವಂತೆ. ಅಸ್ಸಾಮಿನಲ್ಲಿ 723 ಕಿ. ಮೀ. ದೂರ ಹರಿಯುವ ಬ್ರಹ್ಮಪುತ್ರ ನದಿಗೆ ಇರುವುದು ಒಂದೇ ಒಂದು ಸೇತುವೆ. ಅಸ್ಸಾಮಿನಲ್ಲಿ ಇಡೀ ದೇಶದ ಅರ್ಧಭಾಗ ಪೆಟ್ರೋಲು ಸಿಗುತ್ತದೆ. ಆದರೆ ಅದರ ಶುದ್ಧೀಕರಣ ಕಾರ್ಖಾನೆ ಬಿಹಾರದಲ್ಲಿ. ರಾಜ್ಯದ ಜಲವಿದ್ಯುತ್ ಸಾಧ್ಯತೆಯಲ್ಲಿ ಸಾಧಿಸಿರುವುದು ಕೇವಲ ಶೇಕಡ 1.2. ಅಸ್ಸಾಮಿನ 21995 ಗ್ರಾಮಗಳ ಪೈಕಿ ವಿದ್ಯುತ್ ಸಂಪರ್ಕವಿರುವುದು 2260 ಕ್ಕೆ —ಶೇಕಡ 10 ; ಭಾರತದಲ್ಲಿ ಶೇಕಡ40. 1961 ರಿಂದ 1971 ರವರೆಗೆ ಅಕ್ಷರಸ್ಥರ ಶೇಕಡಾವಾರು ವೃದ್ಧಿ ಬರೀ 27 ರಿಂದ 28.1 ಮಾತ್ರ. ಬರೇ ಶೇಕಡ 24 ರಷ್ಟು ಗ್ರಾಮಗಳಿಗೆ ಮಾತ್ರ ಸರ್ವಋತುರಸ್ತೆಗಳಿವೆ. 23.7 ಲಕ್ಷ ಕೃಷಿಭೂಮಿಯಲ್ಲಿ ನೀರಾವರಿ ಭೂಮಿ 1975 ರಲ್ಲಿ ಬರೇ 88300 ಹೆಕ್ಟರುಗಳು—ಅಂದರೆ ಶೇಕಡ 3.5. 1975 ರಲ್ಲಿ ಕಾರ್ಖಾನೆ ಉದ್ಯೋಗಿಗಳು ಕೇವಲ 79780 ಮಂದಿ. ಮಹಾರಾಷ್ಟ್ರಕ್ಕೆ ಹೋಲಿಸಿದರೆ (ಮಹಾರಾಷ್ಟ್ರ = 100 ಎಂಬುದು ಅಳತೆಗೋಲು) ಕಾರ್ಮಿಕರ ವೇತನ ಮಟ್ಟದಲ್ಲಿ ಅಸ್ಸಾಮಿನದು ಕಡೆಯಸ್ಥಾನ–ಶೇಕಡ 34.3%. ನೆರೆಯ ಪಶ್ಚಿಮ ಬಂಗಾಳದ್ದು 92.9. ಒಟ್ಟು 4.5 ಲಕ್ಷ ಟೀ ತೋಟದ ಕಾರ್ಮಿಕರು, ಅಧಿಕಾರಿಗಳಲ್ಲಿ ಬೆರಳೆಣಿಕೆಯಷ್ಟು ಮಂದಿ ಅಸ್ಸಾಮೀಯರು. ದೊಡ್ಡ ಟೀ ತೋಟಗಳು. ಮಾರವಾಡಿಗಳ, ಮತ್ತು ಬ್ರಿಟಿಷ್ ಮಾಲಿಕರ ಒಡೆತನದ್ದು. ಕೆಲ ಸಣ್ಣ ಕಾರ್ಖಾನೆಗಳು, ನಾಲ್ಕಾರು ಟೀ ತೋಟಗಳು, ಕಂಟ್ರಾಕ್ಟುಗಳು. ಸಾರಿಗೆ, ಸಣ್ಣವ್ಯಾಪಾರ ಮಾತ್ರ ಕೆಲಮಟ್ಟಿಗೆ ಅಸ್ಸಾಮೀಯರ ಕೈಕೆಳಗಿದೆ. ಔದ್ಯೋಗೀಕರಣ ಆಗದೆ ಅಸ್ಸಾಮೀ ಆರ್ಥಿಕ ಬದುಕು ಸ್ಥಗಿತವಾಗಿದೆ. ಬಂಗಾಳಿಗಳು ತಮ್ಮ ನಾಡು, ನುಡಿ, ಸಂಸ್ಕೃತಿ ಬಗ್ಗೆ ಬಲು

ಹೆಮ್ಮೆಯ ಜನ. ತಮ್ಮ ಭಾಷೆಯ ಶಾಲೆಗಳನ್ನು, ಸಾಂಸ್ಕೃತಿಕ ಕೇಂದ್ರಗಳನ್ನು ನಡೆಯಿಸಿಕೊಂಡು ಅಸ್ಸಾಮೀಯರಿಂದ ದೂರ ಉಳಿದುಕೊಂಡು, ಕೆಲಮಟ್ಟಿಗೆ ಎಡಪಕ್ಷಗಳಿಗೆ—ವಿಶೇಷತಃ ಕಮ್ಯೂನಿಸ್ಟ್ ಪಾರ್ಟಿ (ಮಾ) ಗೆ—ಒಲಿದವರು. ಕಾಂಗ್ರೆಸ್ಸಿಗರಿಗೆ ಬಂಗಾಳಿ ಮುಸಲ್ಮಾನರ ಓಟು, ಮಾರವಾಡಿಗಳ ಹಣ ಬಲು ಆಪ್ಯಾಯಮಾನವಾದ ಮಿಶ್ರಣ. 1962 ರಲ್ಲಿ ಚೀಣೀ ಆಕ್ರಮಣ ಮತ್ತಷ್ಟು ಮುಂದುವರೆದಿದ್ದರೆ ಭಾರತದ ಸೇನೆ ಅಸ್ಸಾಮನ್ನೇ ಅದರ ಪಾಡಿಗೆ ಬಿಟ್ಟು ಕಾಲ್ಕಿತ್ತೆಯುತ್ತಿತ್ತು ಎಂಬ ಅಪನಂಬಿಕೆಯೂ ಇದೆ. "ಈ ಬಿಕ್ಕಟ್ಟಿನ ಘಳಿಗೆಯಲ್ಲಿ ಅಸ್ಸಾಮಿನ ಜನರಿಗಾಗಿ ನನ್ನ ಹೃದಯ ಪರಿತಪಿಸುತ್ತದೆ" ಎಂದು 1962 ನೇ ನವೆಂಬರ್ 22 ರಂದು ನೆಹರೂ ಹೇಳಿದುದನ್ನು ಅಸ್ಸಾಮೀಯರು ಅರ್ಥೈಸುವುದು ಹೀಗೆ. ಹೀಗೆ ನಿರಂತರವಾಗಿ ಬರುತ್ತಿರುವ ವಲಸೆಗಾರರನ್ನು ಸರ್ಕಾರಕ್ಕೆ ತಡೆಯಲು ಸಾಧ್ಯವಿದೆ, ಇಷ್ಟವಿಲ್ಲ ಎಂಬ ಆರೋಪವೂ ಇದೆ. ಉದಾಹರಣೆಯಾಗಿ, ಅಸ್ಸಾಂ ಪೋಲೀಸರು 1974, 1975 ಮತ್ತು 1976 ರಲ್ಲಿ ಅನುಕ್ರಮವಾಗಿ 5071, 18068 ಮತ್ತು 5074 ಮಂದಿ ಅಕ್ರಮ ವಲಸೆಗಾರರನ್ನು ತಡೆದರೆ, ಕೇಂದ್ರದ ಗಡಿರಕ್ಷಣಾ ದಳ ಅದೇ ವರುಷಗಳಲ್ಲಿ ಅನುಕ್ರಮವಾಗಿ 104, 405, ಮತ್ತು 1 ಮಂದಿಯನ್ನು ಮಾತ್ರ ತಡೆ ಹಿಡಿಯಿತಂತೆ. ನೇಪಾಳಕ್ಕೆ ರಹದಾರಿ ಅನಗತ್ಯ; ಆದುದರಿಂದ ವಲಸೆಗಾರರು ಅಡೆತಡೆಯಿಲ್ಲದೆ ಬರುತ್ತಾರೆ. ಜತೆಗೆ ಕೇಂದ್ರ ಸರ್ಕಾರದಲ್ಲಿ ಅಸ್ಸಾಮೀ ಮೂಲದ ಪ್ರಭಾವೀ ಅಧಿಕಾರಿಗಳಿಲ್ಲ. ಮಂತ್ರಿಗಳಿಲ್ಲ–ಅಸ್ಸಾಮಿನಿಂದ ಹೊರಹೋಗಿ ಸಫಲರಾದವರೂ ಇಲ್ಲ. ಅಸ್ಸಾಮಿನ ಹೊರಗಿರುವ ಅಸ್ಸಾಮೀ ಭಾಷಿಕರು ಕೇವಲ 54014. ಅದರಲ್ಲೂ ಅಸ್ಸಾಮಿನ ನೆರೆಹೊರೆಯ ರಾಜ್ಯಗಳ ಆಚೆ ಇರುವವರು 5229 ಮಾತ್ರ– 1971 ನೇ ಖಾನೇಷುಮಾರಿ ಪ್ರಕಾರ. ಅಂದರೆ "ಒಂದು ಸಾಮ್ರಾಜ್ಯದಿಂದಬಿಡುಗಡೆಯಾಗಿ ಇನ್ನೊಂದಕ್ಕೆ ಸೇರಿದ್ದೇವೆ, ಅಸ್ಸಾಂ ಭಾರತದ ಆಂತರಿಕ ಕಾಲೋನಿ" ಎಂಬ ರೋಸು ಸಾರ್ವತ್ರಿಕ.

ಸರ್ಕಾರೀ ಖಾನೇಷುಮಾರಿ ಲೆಕ್ಕದ ಪ್ರಕಾರವೇ 1951 ರಿಂದ ಅಸ್ಸಾಮಿಗೆ ವಲಸೆ ಬಂದು ನೆಲಸಿದ ಪರಕೀಯರ ಸಂಖ್ಯೆ 9.9 ಲಕ್ಷ. ಅದರ ಪೈಕಿ ನೇಪಾಳೀಯರು 78268. ಆದರೆ ಅಸ್ಸಾಮೀಯರ ಪ್ರಕಾರ 1911ರಿಂದ ಬಂದಿರುವ ವಿದೇಶೀಯರು 45 ಲಕ್ಷ. 1891 ರಿಂದ 1947 ರ ವರೆಗೆ ವಲಸೆ ಬಂದವರು ಹೆಚ್ಚು ಬಂಗಾಳಿ ಮುಸ್ಲಿಮರು. 1947 ರ ನಂತರ ಬಂದವರು ಹೆಚ್ಚು ಬಂಗಾಳಿ ಹಿಂದೂಗಳು. 1956 ರಿಂದ ಅಸ್ಸಾಮೀಯರ ಸಂಖ್ಯಾಬಲ ಹೆಚ್ಚು ಕಾಣುವುದರ ಕಾರಣ ಕೆಲಕಾಲ ಬಂಗಾಳದ ಮುಸ್ಲಿಮರೂ ಇತರ ಕೆಲವು ಜನರೂ ಅಸ್ಸಾಮೀ ತಮ್ಮ ಮಾತೃಭಾಷೆಯೆಂದು ದಾಖಲು ಮಾಡಿಸುತ್ತಿದ್ದರಂತೆ. ಏಕೆಂದರೆ, 1951 ರಿಂದ ಅಸ್ಸಾಮೀ ಸರ್ಕಾರ ಅಸ್ಸಾಮೇತರರಿಗೆ ಕೆಲವು ಸೌಲಭ್ಯಗಳನ್ನು ನಿರಾಕರಿಸಿತು. ಆದರೆ 1971 ರಿಂದ ಈಚೆಗೆ ಕೆಲವು ಬಂಗಾಳಿ ಮುಖಂಡರು ಚಿತಾವಣೆ ಮಾಡಿ ತಮ್ಮ ಮಾತೃಭಾಷೆ ಬಂಗಾಳಿಯೆಂಬುದನ್ನು ದಾಖಲು ಮಾಡಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ ಎಂಬ ದೂರು ಇದೆ. ಅಲ್ಲದೆ 1981 ರ ನಿರ್ಣಾಯಕ ಖಾನೇಷುಮಾರಿಯಲ್ಲಿ ಅಸ್ಸಾಮೀಯರು ತಮ್ಮ ಸಂಖ್ಯೆ ಶೇಕಡ 60 ಇರುವುದನ್ನು ಕನಿಷ್ಟ 75 ಆದರೂ ಮಾಡಿಸಬೇಕೆಂದೂ, ಬಂಗಾಳೀಯರು ಇದನ್ನು ತಡೆಗಟ್ಟಬೇಕೆಂದೂ ಸನ್ನಾಹ ಮಾಡುತ್ತಿರುವುದು ಈ ಚಳುವಳಿಯ ಹಿನ್ನೆಲೆಯ ಒಂದು ಅಂಶ. ಕೆಲವು ನಿರ್ದಿಷ್ಟ ಘಟನೆಗಳೂ ಈ ಹಿನ್ನೆಲೆಗೆ ರಂಗೇರಿಸಿದುವು. ಉದಾಹರಣೆಗೆ 1979 ನೇ ಮಾರ್ಚಿ ತಿಂಗಳಿನಲ್ಲಿ ಮಂಗಳದೋಯಿ ಸಂಸತ್ ಉಪಚುನಾವಣೆ ನಡೆಯಲಿದ್ದಾಗ 47658 ಮತದಾರರ ಬಗ್ಗೆ ಅವರು ವಿದೇಶೀಯರೆಂದು ದೂರು ಹೂಡಲಾಯಿತು. ಪರೀಕ್ಷಿಸಲಾದ 36000 ಮತದಾರರ ಪೈಕಿ 26000 ಮಂದಿ ಬಗ್ಗೆ ದೂರುಗಳು ರುಜುವಾತಾದುವು. ಆ ಘಟ್ಟದಲ್ಲಿ ಉಚ್ಚ ನ್ಯಾಯಾಲಯ ಮುಂದಿನ ಕ್ರಮಗಳನ್ನು ತಡೆಹಿಡಿಯಿತು. ಆದರೆ ಬಂಗಾಳೀಯರ ವಿರುದ್ಧ ಅಸ್ಸಾಮಿನಲ್ಲಿ ಹಲವು ಬಾರಿ ದಂಗೆ ದಾಳಿಗಳು ನಡೆದಿವೆ: 1948, 1950, 1955, 1960 (ಬಲು ಭಾರಿ ದಂಗೆ), 1965, 1968 (ರಿಪಬ್ಲಿಕ್ ದಿನಾಚರಣೆಯ ಬಹಿಷ್ಕಾರ), 1971, 1972 ಹಾಗೂ ಈಗಿನದು. ಸರ್ಕಾರ ಈವರೆಗೂ ಏನೂ ಮಾಡಿಲ್ಲ.

ಅಸ್ಸಾಮೀಯರ ಉತ್ಪ್ರೇಕ್ಷೆ ಏನೇ ಇದ್ದರೂ ಮುಖ್ಯ ಚುನಾವಣಾ ಕಮಿಷನರರ ಈ ಉದ್ಧರಣೆ ಅರ್ಥಪೂರ್ಣ: "ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ರಾಜ್ಯದಲ್ಲಿ ಬಹುಸಂಖ್ಯಾತರಾಗಿಯೋ ಇಲ್ಲವೆ ಬಾರಿ ಪ್ರಮಾಣದಲ್ಲಿಯೋ ಪರರಾಷ್ಟ್ರೀಯರು ಇರುವಂಥ ಒಂದು ಘಟ್ಟ ಬರಬಹುದು". (ಅಸ್ಸಾಂ ಟ್ರಿಬ್ಯೂನ್ ಡಿಸೆಂಬರ್ 15,

1979). ಮತ್ತೆ, ಅವರೇ "ಚುನಾವಣಾ ಪಟ್ಟಿಗಳಲ್ಲಿ ಪರದೇಶೀಯರ ಸೇರ್ಪಡೆಯಿಂದಾಗಿ ಹುಟ್ಟಿರುವ ಗಾಬರಿಯ ಸ್ಥಿತಿ" ಕುರಿತು ಎಚ್ಚರಿಸಿದ್ದಾರೆ. ಜನವರಿ 1980 ರಿಂದ ಅಸ್ಸಾಂ ಗಣಸಂಗ್ರಾಮ ಪರಿಷತ್ತು ಹಾಗೂ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ ಪರಕೀಯರ ವಿರುದ್ಧ ಚಳುವಳಿ ಹೂಡಿವೆ.

ಭಾರತದ ರಾಜಕೀಯ ಹಂದರ ಆರೋಗ್ಯಕರವಾಗಿದ್ದರೆ, ಇಂಥ ಬಿಕ್ಕಟ್ಟನ್ನು ಸುಲಭವಾಗಿ ಬಗೆಹರಿಸಿಕೊಳ್ಳಬಹುದಿತ್ತು. ಆದರೆ ಭಾರತ ಇಂದು ತೀವ್ರತರವಾದ ರಾಜಕೀಯ ಬಿಕ್ಕಟ್ಟಿನಲ್ಲಿದೆ. ಭಾರತ ಸಂವಿಧಾನದ ಅಂಗಭೂತ ಅಂಶಗಳಾದ ಜನತಂತ್ರ ಸೆಕುಲರಿಸಂ ಸುಖೀರಾಜ್ಯ ಹಾಗೂ ಫೆಡರಲಿಸ್ಟ್‌ರಾಜ್ಯ ಅಥವಾ ಸಂಘರಾಜ್ಯದ ವ್ಯವಸ್ಥೆಗಳು ಅಣಕವಾಗುತ್ತಿವೆ. ಸಂವಿಧಾನದ ಒಂದು ಮೂಲಭೂತ ಚಹರೆ ಸಂಘರಾಜ್ಯವಾದರೂ ಕೂಡ ಹಲವು ಕಾರಣಗಳಿಂದ– ಮುಖ್ಯತಃ ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಬಹುಕಾಲ ಒಂದೇಪಕ್ಷದ ಸರ್ಕಾರ ಇದ್ದುದರಿಂದ– ತನ್ನ ಈ ಚಹರೆಯನ್ನು ಕಳೆದುಕೊಂಡು, ಕೇಂದ್ರದಲ್ಲಿ ಏಕಾಧಿಕಾರರಾಜ್ಯ ಸ್ಥಾಪಿತವಾಗಿದೆ. 1950 ರಿಂದಲೂ ಸಮಸ್ಯೆಗಳು ಉದ್ಭವಿಸಿದಂತೆಲ್ಲಾ, ಕೇಂದ್ರಸರ್ಕಾರ ರಾಜ್ಯಗಳ ಹಿತಗಳನ್ನು ಅಲಕ್ಷ್ಯ ಮಾಡಿಯೇ ನಿರ್ಣಯಗಳನ್ನು ಕೈಗೊಂಡಿದೆ. ಇವತ್ತು ಬೃಹದ್ದು ಕಾರ್ಖಾನೆಗಳನ್ನು ರಾಜ್ಯಗಳಲ್ಲಿ ತೆರೆಯುವುದು, ರಾಜ್ಯಗಳ ಪ್ರಾಚ್ಯ ಸ್ಮಾರಕಗಳ ಉಸ್ತುವಾರಿ. ಕೇಂದ್ರ ಪೋಲೀಸು ಪಡೆಯ ರವಾನೆ ಹಾಗೂ ರಾಜ್ಯಪಾಲರ ನೇಮಕಾತಿ ಇಂಥ ವಿವಿಧ ವ್ಯವಹಾರಗಳಲ್ಲಿ ಕೇಂದ್ರ ಏಕಾಧಿಕಾರ ಪಡೆದಿದೆ. ಜನರ ಮೂಲಭೂತ ಆವಶ್ಯಕತೆಗಳಾದ ಆಹಾರ, ಉದ್ಯೋಗ, ಕುಡಿಯುವ ನೀರು, ವಸತಿ, ವಿದ್ಯುತ್ತು, ನೀರಾವರಿ, ವಿದ್ಯೆ, ಆರೋಗ್ಯ ಈ ಅಂಶಗಳ ಪೂರೈಕೆ ರಾಜ್ಯದ ಹೊಣೆಯಾದರೂ ರಾಜ್ಯದ ಆದಾಯದ ಮೂಲ ಆಕರಗಳಾದ ಅಬಕಾರಿ, ವರಮಾನ ತೆರಿಗೆ, ವಿದೇಶೀವಿನಿಮಯ, ವಿದೇಶೀನೆರವು ಇತ್ಯಾದಿಗಳು ಕೇಂದ್ರದ ವ್ಯಾಪ್ತಿಯಲ್ಲಿವೆ. ಹೀಗಾಗಿ ಕೇಂದ್ರವು ರಾಜ್ಯಗಳ ವಿಕಾಸದಲ್ಲಿ ರಾಜಕೀಯ ಕೈವಾಡ, ತರಲೆ ನಡೆಸುತ್ತಿದೆ. ಇದರಿಂದ ಉಂಟಾಗುವ ವಿರಸಗಳು ಸಾಂಸ್ಕೃತಿಕ ಸಾಮಾಜಿಕ ರೂಪ ಪಡೆಯುವುದು ಸ್ವಾಭಾವಿಕ. ರಾಜ್ಯ ರಾಜ್ಯಗಳ ನಡುವೆ ಆರ್ಥಿಕ ಏರುಪೇರು, ವಕ್ರತೆಗಳುಂಟಾಗಿವೆ. ನಮ್ಮ ಅತಿಕೇಂದ್ರೀಕರಣ ಎಷ್ಟು ದೂರ ಸಾಗಿದೆಯೆಂಬುದು 1975 ರ ತುರ್ತುಪರಿಸ್ಥಿತಿಯ ಪ್ರಕರಣದಿಂದ ರುಜುವಾತಾಯಿತು. ಅಂದು ಕೇವಲ ಒಬ್ಬ ಪ್ರಧಾನಮಂತ್ರಿ ಇಡೀ ದೇಶದ ಮೇಲೆ "ಸಂವಿಧಾನಬದ್ಧವಾಗಿ" ಸರ್ವಾಧಿಕಾರ ಹೇರಿದರು. ಆದರೆ ಇಂಥ ಅತಿಕೇಂದ್ರೀಕರಣ ಭಾರತದಂಥ ಸಂಕೀರ್ಣ ವೈವಿಧ್ಯಮಯ ದೇಶಕ್ಕೆ ತಕ್ಕುದಲ್ಲ, ಮಾರಕ. ಐತಿಹಾಸಿಕವಾಗಿ ವಿಕಸಿತವಾದ ತಮ್ಮದೇ ಆದ ಭಾಷೆ, ಸಂಸ್ಕೃತಿ, ಇತಿಹಾಸ ಹಾಗೂ ಮನೋರಚನೆಯುಳ್ಳ ನಿರ್ದಿಷ್ಟ ಪ್ರದೇಶಗಳ ಸ್ಥಿರ ಸಮಾಜಗಳನ್ನು ಉತ್ತರ ಅಮೆರಿಕಾದ ಹಾಗೆ ರೇಖಾಗಣಿತದ ಇಂಚುಪಟ್ಟಿ ಹಿಡಿದು ನೇರವಾಗಿ ಗಡಿರೇಖೆಗಳನ್ನು ಎಳೆದು ರಾಜ್ಯಗಳಾಗಿ ನಿರ್ಮಿಸುವುದೂ ರಾಷ್ಟ್ರಪತಿ ಆಳ್ವಿಕೆ ಮೂಲಕ ಆಳುವುದೂ ಸಾಧ್ಯವಿಲ್ಲ. ಆದರೆ ದೆಹಲಿಯಲ್ಲಿ ವಿರಾಜಮಾನರಾದ ಪ್ರಭುಗಳಿಗೆ ಇದು ಅರ್ಥವಾಗಲಾರದು. ಆದುದರಿಂದಲೇ ದೆಹಲಿಯ ಏಕಾಧಿಕಾರಕ್ಕೆ ಪ್ರತಿಯಾಗಿ ಭಾರತದ ಸೀಮಾಂಚಲ ಪ್ರದೇಶಗಳಲ್ಲಿ ನಿಧಾನವಾಗಿ ಆದರೆ ಸತತವಾಗಿ ಪರಕೀಯತೆ ಹರಡುತ್ತಿದೆ. ಅಂತೆಯೇ ನಾವು ಕಾಶ್ಮೀರ, ಪಂಜಾಬು, ಈಶಾನ್ಯಭಾರತ, ಪಶ್ಚಿಮಬಂಗಾಳ, ಅಸ್ಸಾಂ, ಒರಿಸ್ಸಾ, ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲಿ ಪ್ರಬಲವಾದ ಪ್ರಾಂತೀಯ ಚಳುವಳಿಗಳನ್ನು, ಪಕ್ಷಗಳನ್ನು ಕಾಣುತ್ತಿದ್ದೇವೆ. ಇದುವರೆಗಿನ ಇಂತಹ ಚಳುವಳಿಗಳ ಪೈಕಿ ತುಂಬ ಸಮಗ್ರವಾದದ್ದೂ ಪ್ರಬಲವಾದದ್ದೂ ಅಸ್ಸಾಂ ಚಳುವಳಿ. ಅಸ್ಸಾಂ ಸಮಾಜದ ಎಲ್ಲ ವರ್ಗಗಳೂ–ಅಂದರೆ ಇಡೀ ಉಪರಾಷ್ಟ್ರ ಎಂದರೂ ಸಲ್ಲುತ್ತದೆ–ಸೇರಿ ಮಾಡುತ್ತಿರುವ ಚಳುವಳಿ ಇದು. ಇಡೀ ಇಂಡಿಯಾದ ಉಪಖಂಡದಲ್ಲಿ ಈ ಬಗೆಯ ಪ್ರಕ್ರಿಯೆ ಜ್ವಲಂತವಾಗಿರುವುದನ್ನು ನಾವು ಕಾಣಬಹುದು. ಪೂರ್ವಬಂಗಾಳ ಸ್ವತಂತ್ರ ದೇಶವಾದದ್ದು ಇದರ ಒಂದು ಉಗ್ರ ಉದಾಹರಣೆ. ಈ ಸಂದರ್ಭದಲ್ಲಿ ಪಾಕಿಸ್ತಾನದ ಭುಟ್ಟೋರವರ ಪುತ್ರಿ ಶ್ರೀಮತಿ ಬೇನಜಿರ್ ಭುಟ್ಟೋ ಆಡಿದ ಮಾತು ಗಮನಾರ್ಹ: "ಪಾಕಿಸ್ತಾನ ಒಂದುಸಂಘರಾಜ್ಯ. ರಾಷ್ಟ್ರೀಯ ಅಸ್ತಿತ್ವದೆಡೆಗೆ ನಮ್ಮದು ದೀರ್ಘಯಾತ್ರೆ. ನಮ್ಮ ಹಲವು ಪ್ರಶ್ನೆಗಳ ಮೂಲಕಾರಣ ಇದು." ಆದರೆ ಭಾರತವನ್ನು "ಕಂಡುಕೊಂಡ" ನೆಹರೂರವರಿಂದ ಹಿಡಿದು ತಾನೇ ಭಾರತ ಎಂದುಕೊಂಡ ನೆಹರೂಪುತ್ರಿ ಇಂದಿರಾಗಾಂಧಿ ವರೆಗೆ ಭಾರತದ ಫೆಡರಲ್ ಸ್ವರೂಪವನ್ನು ಗಟ್ಟಿ ಮಾಡಲು ಪ್ರಯತ್ನವೇನೂ ನಡೆದಿಲ್ಲ. ಇಂದು ಅದರ ವಿರೋಧಿಗಳು ಏನೇ ಹೇಳಿದರೂ ಅಸ್ಸಾಂ ಚಳುವಳಿ ಭಾರತದಿಂದ ಪ್ರತ್ಯೇಕವಾಗಲು ಬಯಸುವ ಚಳು

ವಳಿ ಅಲ್ಲ. ಆದರೆ ಕೇಂದ್ರಸರ್ಕಾರ ಹೀಗೆಯೇ ದಂಡನೀತಿ ಅನುಸರಿಸಿದರೆ, ಅದು ಪ್ರತ್ಯೇಕತಾ ಚಳುವಳಿ ಆಗಬಲ್ಲ ಅಪಾಯ ಇದೆ. ಚಳುವಳಿಯ ಅಧಿಕೃತ ಬೇಡಿಕೆಗಳು ಹೀಗಿವೆ ;

1. ಪರದೇಶೀಯರನ್ನು ಗುರುತಿಸಿ. ಹೊರದೂಡಬೇಕು. 2. ಯಾವುದೇ ಚುನಾವಣೆಗೆ ಮುಂಚೆ, ಮತದಾರರ ಪಟ್ಟಿಯಿಂದ ಪರದೇಶೀಯರ ಹೆಸರುಗಳನ್ನು ಹೊಡೆದು ಹಾಕಬೇಕು. 3. ಪರದೇಶೀಯರು ನುಸುಳದಂತೆ ಗಡಿಗಳನ್ನು ಸುಭದ್ರ ಪಡಿಸಬೇಕು. 4. ಅಸ್ಸಾಂನಲ್ಲಿರುವ ಭಾರತೀಯ ಮತದಾರರಿಗೆ ಅವರ ಫೋಟೋ ಸಹಿತ ಗುರುತಿನ ಚೀಟಿ ನೀಡಬೇಕು. 5. ಮುಂದಿನ 15/20 ವರುಷಕಾಲ, ಸ್ಥಳೀಯರ ಅಸ್ತಿತ್ವಕ್ಕೆ ಧಕ್ಕೆ ಬಾರದಂತೆ ಈಶಾನ್ಯ ಭಾರತದ ಜನರಿಗೆ ರಕ್ಷಣೆ ನೀಡಬೇಕು. 6, ತ್ರಿಪುರ ಅಥವಾ ಪಶ್ಚಿಮ ಬಂಗಾಳದ ಸರ್ಕಾರ ನೀಡುವ ನಾಗರಿಕ ಪತ್ರವನ್ನು ತಿರಸ್ಕರಿಸಲು ಅಸ್ಸಾಂ ಸರ್ಕಾರಕ್ಕೆ ಸ್ವಾತಂತ್ರ್ಯವಿರಬೇಕು. 7. ರಾಜ್ಯ ಸರ್ಕಾರಗಳು ನಾಗರಿಕ ಪತ್ರ ನೀಡುವ ಅಧಿಕಾರವನ್ನು ಕೇಂದ್ರ ಸರ್ಕಾರ ಹಿಂತೆಗೆದುಕೊಳ್ಳಬೇಕು. ಏಕೆಂದರೆ ಅಸ್ಸಾಮಿನಿಂದ ಹೊರದೂಡಲಾದ ವಿದೇಶೀಯರು ಬೇರೆ ರಾಜ್ಯಗಳಿಂದ ನಾಗರಿಕ ಪತ್ರ ಪಡೆದು ಮತ್ತೆ ಮರಳುತ್ತಾರೆ.

ಸುಪ್ರಸಿದ್ಧ ಪತ್ರಕರ್ತ ಶ್ರಿ ಬಿ. ಜಿ. ವರ್ಗೀಸ್ ಹೇಳುವಂತೆ, "ಈ ಯಾವ ಬೇಡಿಕೆಯೂ, ಪ್ರತ್ಯೇಕತಾವಾದಿ ಬಂಗಾಳಿ ವಿರೋಧಿ, ರಾಷ್ಟ್ರ ವಿರೋಧಿ ಅಥವಾ ಸಂಕುಚಿತ ಭಾವನೆಯದಲ್ಲ." ಯಾರು ವಿದೇಶೀಯರು ಎಂಬುದನ್ನು ನಿರ್ಧರಿಸಲು 1951 ನೇ ಇಸವಿಯನ್ನು ಮೂಲ ವರುಷವೆಂದು ಪರಿಗಣಿಸಬೇಕೆಂದು ಚಳುವಳಿಕಾರರ ಒಂದು ಬೇಡಿಕೆ. ಇದು ವಿಶೇಷತಃ ಮುಸ್ಲಿಮರ ವಿರುದ್ಧದ ಬೇಡಿಕೆ ಎಂಬುದಕ್ಕೆ ಅರ್ಥವಿಲ್ಲ. ಏಕೆಂದರೆ 1951 ಕ್ಕೆ ಹಿಂದೆ ಬಂದವರೆಲ್ಲ ಬಂಗಾಳಿ ಮುಸ್ಲಿಮರೂ, 1951 ಕ್ಕೆ ಅನಂತರ ಬಂದವರಲ್ಲಿ ಬಂಗಾಳಿ ಹಿಂದೂಗಳೂ ಹೆಚ್ಚು. ಇದನ್ನು ಹೇಗಾದರೂ ಮಾಡಿ ಬಂಗಾಳಿ ಮುಸ್ಲಿಮ್ ವಿರುದ್ಧ ತಿರುಗಿಸಿ, ಬಂಗಾಳಿ ಹಿಂದೂಗಳನ್ನು ಉಳಿಸುವ ಹಿಂದೂವಾದಿಗಳ ಸನ್ನಾಹ ಕೂಡ ನಿಷ್ಫಲ. ಏಕೆಂದರೆ ಯಾವ ವರುಷ ತೆಗೆದುಕೊಂಡರೂ, ಇಬ್ಬರೂ ಹೋಗಬೇಕಾಗುತ್ತದೆ. ಅಥವಾ ಇದು ರಾಷ್ಟ್ರದ ಸಮಗ್ರತೆಗೆ ಪೆಟ್ಟು ಎಂಬ ಕೆಲ ಎಡಪಕ್ಷೀಯರ ಗುಲ್ಲೂ ಕೂಡ ಅರ್ಥವಿಲ್ಲದ್ದು. ಏಕೆಂದರೆ ತಮ್ಮ ಸ್ವಂತ ನುಡಿ ಸಂಸ್ಕೃತಿ ನಾಡುಗಳ ಬಗ್ಗೆ ಒಂದು ಪ್ರದೇಶದ ಜನರಿಗಿರುವ ಮಮತೆ ಅಭಿಮಾನವನ್ನು ಅಳಿಸಲಾಗುವುದಿಲ್ಲ. ಸಮಾಜವಾದೀ ರಾಷ್ಟ್ರಗಳೂ ಕೂಡ ತಮ್ಮ ಗಡಿಗಳು, ತಮ್ಮ ರಾಷ್ಟ್ರೀಯತೆ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿರುವುದನ್ನು ನಾವು ಕಾಣಬಹುದು. ಆದುದರಿಂದ ಅಸ್ಸಾಮಿಯರ ಚಳುವಳಿ ಮೂಲತಃ ಸಾಧುವಾದದ್ದು. ಭಾರತದ ಸಮಗ್ರತೆ ಹಾಗೂ ವೈವಿಧ್ಯತೆ ಎರಡನ್ನೂ ಅಂಗೀಕರಿಸುವ ಜನತಂತ್ರ ಪ್ರೇಮಿಗಳು ಈ ಚಳುವಳಿಗೆ ಬೆಂಬಲ ನೀಡಬೇಕು. ಇದರಲ್ಲಿ ಭಿನ್ನಾಭಿಪ್ರಾಯ ಸಾಧ್ಯವಿಲ್ಲ. ಇವನ್ನು ಸೇನೆ ಪೋಲೀಸರನ್ನು ಬಳಸಿ ಹತ್ತಿಕ್ಕುವ ಪ್ರಯತ್ನ ಮುಂದುವರಿದರೆ ಚಳುವಳಿಯ ನಾಯಕತ್ವ ಪ್ರತ್ಯೇಕತಾವಾದಿಗಳ ಕೈಗೆ ಅನಿವಾರ್ಯವಾಗಿ ಹೋಗುತ್ತದೆ.

ಈ ಚಳುವಳಿಯಲ್ಲಿ ಅಲ್ಲಲ್ಲಿ ಹಿಂಸಾಕಾಂಡಗಳು ನಡೆದಿವೆ. ಕೇಂದ್ರ ಪೋಲೀಸರು ಅಸ್ಸಾಮಿ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದ್ದಾರೆಂಬ ದೂರುಗಳಿವೆ. ಹಾಗೆಯೇ ಗೋಲಿಕಾಂಡದಿಂದ ಅಸ್ಸಾಮಿಯರು ಸತ್ತಿದ್ದಾರೆಂಬ ಪ್ರಮಾಣಪೂರ್ವಕವಾದ ದೂರುಗಳಿವೆ. ಈ ಪ್ರಕರಣಗಳು ಈ ಚಳುವಳಿಗೆ ಭಾವನಾತ್ಮಕವಾದ ಬೆಸುಗೆಯನ್ನು ನೀಡಿವೆ.

ಯಾವ ಚಳವಳಿಯಲ್ಲಿಯೂ ಅದು ಜನತೆಯ ಪಾಲುಗಾರಿಕೆಯ ಸಹಿತ ನಡೆದಾಗ ಅಲ್ಲಲ್ಲಿ ಹಿಂಸಾಕಾಂಡ ಅನಿವಾರ್ಯ. ದೊಡ್ಡ ಸಾಮಾಜಿಕ ಚಳುವಳಿಗಳು ಸಭ್ಯ ಸಮೂಹದ ಜನರು ಆರತಕ್ಷತೆಗೆ ನಯನಾಜೂಕಿನಿಂದ ಸಿಂಗರಿಸಿಕೊಂಡು ಹೋಗುವಂತೆ ನಡೆಯುವುದಿಲ್ಲ, ಆದರೆ ಅಸ್ಸಾಂ ಚಳುವಳಿಯ ಕೆಲವು ಪ್ರಕರಣಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ನಡೆದ ಕೆಲ ಹಿಂಸಾಕಾಂಡಗಳು ಹಾಗೂ ಎಡಪಕ್ಷದ ಪತ್ರಕರ್ತೆ ಶ್ರೀಮತಿ ನಿರುಪಮಾ ಬಗ್ರೈನ್ ಅವರ ವಿರುದ್ಧ ನಡೆದ ದಾಂಧಲೆ ಇಂಥ ಅಹಿತಕರ ಘಟನೆಗಳ ಬಗ್ಗೆ ಚಳುವಳಿಯ ಮುಖಂಡರಿಂದ ಖಂಡನೆ ಬರಲಿಲ್ಲ, ಅಥವಾ ಹೃದಯದಾಳದಿಂದ ಬರಲಿಲ್ಲ. ಇದು ದುರದೃಷ್ಟಕರ. ಅಲ್ಲದೆ, ತಮ್ಮ ತಪ್ಪೇನೂ ಇಲ್ಲದೆ ದುಡಿಯಲು ಅಸ್ಸಾಮಿಗೆ ಬಂದು ಹತ್ತಾರು ವರುಷ ಅಲ್ಲಿ ದುಡಿದು ನೆಲಸಿದ ವಿದೇಶೀಯರ ಬಗೆಗೆ ಮಾನವೀಯ ಸಹಾನುಭೂತಿ ಅಗತ್ಯ. ಅವರು ಅಸ್ಸಾಮಿ ಭಾಷೆ ಸಂಸ್ಕೃತಿ ಒಪ್ಪಿಕೊಳ್ಳಬೇಕು. ಕೆಲವರನ್ನು ಹೊಳ ಹಾಕಿ ಕೆಲವರನ್ನು ಸ್ಥಳಾಂತರಿಸಬೇಕಾಗುವುದೂ ಅನಿವಾರ್ಯ. ಕೇಂದ್ರ ಸರ್ಕಾರ ಈ ಸಮಗ್ರ ಸಮಸ್ಯೆಯನ್ನು ಅಸ್ಸಾಮ್ ಜನರ ಆಶೋತ್ತರಗಳನ್ನು ಗೌರವಿಸಿ ಅಲ್ಪಸಂಖ್ಯಾತರ ಬಗ್ಗೆ ಮಾನವೀಯತೆ ತೋರಿ ಮಾತುಕತೆಯ ಮೂಲಕ ಬಗೆಹರಿಸಬೇಕು. ಆದರೆ ದಂಡನೀತಿ ತಿರುಗುಬಾಣವಾಗುತ್ತದೆ. ಭಾರತದ ವಿಚ್ಛಿದ್ರತೆ ಅಸ್ಸಾಮಿನಿಂದ ಪ್ರಾರಂಭವಾಗುತ್ತದೆ.

ಕೆ. ಉಲ್ಲಾಸ ಕಾರಂತ

ಇಕಾಲಜಿ ಮತ್ತು ಸಾಮಾಜಿಕ ಧೋರಣೆಗಳು

ಇಕಾಲಜಿಯ ಜನನ

"ಪ್ರಾಣಿಗಳಿಲ್ಲದೇ ಮಾನವ ಅರ್ಥಶೂನ್ಯ. ಪ್ರಾಣಿಗಳು ನಾಶವಾದಾಗ ಮಾನವ ತೀವ್ರ ಏಕಾಂಗಿತನದಿಂದ ಸಾಯುತ್ತಾನೆ. ಎಲ್ಲ ವಸ್ತುಗಳೂ ಪರಸ್ಪರ ಅವಲಂಬಿತ. ಪ್ರಾಣಿಗಳ ಪಾಡು ಮಾನವನಿಗೂ ಬಂದೇ ಬರುತ್ತದೆ. ಭೂಮಿತಾಯಿಗಾಗುವ ಅನಾಹುತ ಅವಳ ಮಕ್ಕಳ ಪಾಲಿಗೂ ಕಾದಿಟ್ಟದ್ದೇ".

ಈ ಹಿರಿತನದ ಮಾತುಗಳನ್ನು ನೂರು ವರ್ಷಗಳಿಗೂ ಹಿಂದೆ, 1855ರಲ್ಲಿ, ಅಮೆರಿಕಾದ ಆದಿವಾಸಿಗಳ ಸುವಾಮಿಷ್ ಪಂಗಡದ ನಾಯಕ ಹೇಳಿದ್ದ!

ಓದು ಬಲ್ಲವರಿಗೆ ಇಂದು "ಇಕಾಲಜಿ" "ಪರಿಸರ" ಮುಂತಾದ ಪದಗಳು ಹೆಚ್ಚುಕಡಿಮೆ ಮನೆ ಮಾತಾಗುತ್ತಿವೆ. ಕೇವಲ ಹತ್ತು ಹದಿನೈದು ವರ್ಷಗಳ ಹಿಂದಿನ ಕನ್ನಡ ದೈನಿಕಗಳನ್ನೋ, ಪತ್ರಿಕೆಗಳನ್ನೊ, ಇಂದಿನವಕ್ಕೆ ಹೋಲಿಸಿದರೆ ಪರಿಸರದ ಬಗ್ಗೆ ಓದುಗರಲ್ಲಿ ಕಾಳಜಿ ಹೆಚ್ಚುತ್ತಿರುವುದು ಎದ್ದು ಕಾಣುತ್ತದೆ. ನಮ್ಮ ಹಳೆಯ ಪರಂಪರೆಯಿಂದ ಬಂದ "ನಾಗಬನ", "ದೇವರ ಕಾಡು"ಗಳ ರಕ್ಷಣೆ, ದೇವಸ್ಥಾನಗಳ ಸುತ್ತಿನ ಬೇಟೆ ನಿಷೇಧ ಇತ್ಯಾದಿಗಳು ಇವತ್ತು ಕೇವಲ ಪಳೆಯುಳಿಕೆ ಸಂಕೇತಗಳಾಗಿದ್ದರೂ, ಈ ಕಟ್ಟುಪಾಡುಗಳ ಮೂಲವಲ್ಲಿದ್ದದ್ದು ಪರಿಸರದ ಬಗ್ಗೆ ಕಾಳಜಿ. ಈ ಕಾಳಜಿ ಕ್ರಮೇಣ ಏಕೆ ನಾಶವಾಯಿತೆಂದು ಗಮನಿಸೋಣ.

20ನೇ ಶತಮಾನದ ಅರ್ಧಭಾಗ ಕಳೆಯುವವರೆಗೆ ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ಭೂಗ್ರಹ ಅಪರಿಮಿತ ಸಂಪನ್ಮೂಲಗಳಿಂದ ತುಂಬಿ ತುಳುಕುವ ಒಂದು ಅಕ್ಷಯ ಪಾತ್ರೆ (cornucopia) ಎಂಬ ಕಲ್ಪನೆ ಆಳವಾಗಿ ಬೇರೂರಿತ್ತು. 19ನೇ ಶತಮಾನದಲ್ಲಿ, ಮಾನವ ಸಮಾಜವನ್ನು ಪ್ರಥಮ ಬಾರಿಗೆ ವೈಜ್ಞಾನಿಕವಾಗಿ ಪರಿಶೀಲಿಸಲು ಯತ್ನಿಸಿದ ಕಾರ್ಲ್ ಮಾರ್ಕ್ಸ್, ವಿಕಾಸವಾದದ ಜನಕ ಚಾರ್ಲ್ಸ್ ಡಾರ್ವಿನ್ ಮುಂತಾದವರೂ, ಸಹಜವಾಗಿ, ಈ ಕಲ್ಪನೆಗೆ ಹೊರತಾಗಿರಲಿಲ್ಲ. ಮಾರ್ಕ್ಸ್ ತನ್ನ ಸುತ್ತಿನ ಸಮಾಜ ವ್ಯವಸ್ಥೆ ಹಾಗೂ ತಂತ್ರಜ್ಞಾನ ಮಟ್ಟಗಳಿಂದ ಅತೀತನಾಗಿದ್ದ ತ್ರಿಕಾಲಜ್ಞಾನಿ ಎಂಬ ಭ್ರಮೆಯುಳ್ಳ ಕೆಲವು "ಮಾರ್ಕ್ಸ್‌ವಾದಿ"ಗಳು ಪ್ರಾಯಶಃ ಈ ವಾದವನ್ನು ಒಪ್ಪಲಾರರು.

ಮುಂದಕ್ಕೆ ಬಂಡವಾಳಶಾಹಿ ವ್ಯವಸ್ಥೆ ಅಭಿವೃದ್ಧಿ ಹೊಂದಿ ಪಶ್ಚಿಮ ರಾಷ್ಟ್ರಗಳಲ್ಲಿ ಔದ್ಯಮೀಕರಣ ಅತಿಯಾದಾಗ, ಪರಿಸರದ ಮಾಲಿನ್ಯ ಹಾಗೂ ನಾಶ ಜನಸಾಮಾನ್ಯರನ್ನೂ ಬಾಧಿಸಿದಾಗ, ಪ್ರಥಮ ಬಾರಿಗೆ "ಪರಿಮಿತ ಜಗತ್ತಿನ" ಕಲ್ಪನೆ ವಿಜ್ಞಾನಿಗಳಿಗೆ ಉಂಟಾಯಿತು. ನಮ್ಮ ಈ ಭೂಮಿಯೆಂಬ ಗ್ರಹ ಕೇವಲ ಒಂದು ಅಂತರಿಕ್ಷ ನೌಕೆ, ಅದರ ಸಂಪನ್ಮೂಲಗಳು ಮಿತವಾದವು, ಅದರ ಜನಭಾರ ಹೊರುವ ಸಾಮರ್ಥ್ಯ ಕ್ಷಯವಾಗಿದೆ ಎಂದು ರಾಚೆಲ್ ಕಾರ್ಸನ್, ಫ್ರಾಂಕ್ ಫ್ರೇಸರ್-ಡಾರ್ಲಿಂಗ್, ಬ್ಯಾರಿ ಕಾಮನರ್, ಪಾವ್ಲ್ ಉಲ್‌ರಿಕ್ ಮುಂತಾದವರು ಜನಸಾಮಾನ್ಯರಿಗೆ ತಿಳಿಪಡಿಸಿದರು. ಇದರ ಫಲವೇ 1960

ರ ಸುಮಾರಿಗೆ ಬಂಡವಾಳಶಾಹಿ ದೇಶಗಳಲ್ಲಿ ತಲೆ ಎತ್ತಿದ ವ್ಯಾಪಕವಾದ ಪರಿಸರ ಸಂರಕ್ಷಣಾ ಚಳುವಳಿ. ಈ ತಿಳುವಳಿಕೆ ಕ್ರಮೇಣ ಇತರ ದೇಶಗಳಿಗೂ ಹಬ್ಬಿತು. ಕ್ರಮೇಣ, ಸುತ್ತಲಿನ ಬರಗಾಲ, ನೆರೆಹಾವಳಿ, ಭೂಸವೆತ, ಸಂಪನ್ಮೂಲಗಳ ಕೊರತೆಗಳು ನಮ್ಮನ್ನೂ ಬಡಿದೆಬ್ಬಿಸಿ ಈ ಹೊಸ ವಿಚಾರಗಳನ್ನು ಗಮನಿಸುವಂತೆ ಮಾಡಿದವು.

ಈ ಸಂರಕ್ಷಣಾ ಚಳುವಳಿಯ ಮುಖ್ಯ ಅಂಶವೇನೆಂದರೆ ಮಾನವ ಸಮಾಜದ ಅಳಿವು ಉಳಿವುಗಳು ಸುತ್ತಲ ಪರಿಸರದ ಆರೋಗ್ಯವನ್ನು ಅವಲಂಬಿಸಿದೆ ಎಂಬುದು. ಆದುದರಿಂದ, ಈ ಚಳುವಳಿ ನಮ್ಮ ಸಮಾಜವನ್ನು, ಸುತ್ತಲಿನ ಪರಿಸರವನ್ನು, ಪ್ರಾಮಾಣಿಕವಾಗಿ, ವೈಜ್ಞಾನಿಕ ದೃಷ್ಟಿಯಿಂದ ನೋಡುವ ಯತ್ನವಾಗಿರಬೇಕೇ ಹೊರತು ಅಂಧಾನುಕರಣೆಯ ಇನ್ನೊಂದು ಹೊಸ ಮತವಾಗಬಾರದು. ಈ ವೈಜ್ಞಾನಿಕ ದೃಷ್ಟಿಯ ಹೊಸ ಶಾಸ್ತ್ರವೇ ''ಇಕಾಲಜಿ'.

ಇಕಾಲಜಿ ಎಂದರೇನು ?

ಎಲ್ಲ ಜೀವಿಗಳೂ ತಮ್ಮ ಸುತ್ತಲಿನ ಭೌತ ಪರಿಸರ ಹಾಗೂ ಇತರ ಜೀವಿಗಳೊಂದಿಗೆ ಬಹು ನಿಕಟವಾದ ಹಾಗೂ ವೈವಿಧ್ಯಮಯ ಸಂಬಂಧವನ್ನು ಹೊಂದಿಕೊಂಡಿವೆ. ಜೀವಿ–ಪರಿಸರ ಸಂಬಂಧಗಳ ವಿಶಾಲ ಮತ್ತು ಸೂಕ್ಷ್ಮವಾದ ಬಲೆಯ ಅಧ್ಯಯನವೇ ''ಇಕಾಲಜಿ''. ಪ್ರತಿಯೊಂದು ಸಸ್ಯವೂ ಪ್ರಾಣಿಯೂ ತನ್ನ ಸುತ್ತಲ ಪರಿಸರಕ್ಕೆ ಹೊಂದುವಂತೆ ಮಿಲಿಯಾಂತರ ವರ್ಷಗಳಿಂದ ನಡೆದು ಬಂದ ಮಂದಗತಿಯ ವಿಕಾಸದ ಫಲ. ಕಾರಣಾಂತರಗಳಿಂದ, ಪರಿಸರ ತೀವ್ರಗತಿಯಲ್ಲಿ ಬದಲಾದರೆ ಅದಕ್ಕೆ ಹೊಂದಿಕೊಳ್ಳಲಾರದೆ ಪ್ರಾಣಿ ಸಸ್ಯಗಳೂ ನಾಶವಾಗುತ್ತವೆ.

ಇದಕ್ಕೆ ನಿದರ್ಶನವೆಂದರೆ ಕರ್ನಾಟಕದ ಬಯಲು ಸೀಮೆಯಲ್ಲಿ ವಾಸಿಸುತ್ತಿದ್ದ ಚೀತಾ (ಸಿವಂಗಿ?) ಎಂಬ ಪ್ರಾಣಿ (ಇಂದಿಗೂ ಹಲವೆಡೆಗಳಲ್ಲಿ ಕಾಣಸಿಗುವ ಚಿರತೆ ಕಿರುಬಗಳು ಬೇರೆ). ಇದು ತಾಸಿಗೆ 70 ಮೈಲಿ ವೇಗದಲ್ಲಿ ಓಡಿ,ಅಟ್ಟಿಕೊಲ್ಲುವ ಬೇಟೆಗಾರ. ಅವರ ಗ್ರಾಸ ಬಯಲು ಸೀಮೆಯ ಕುರುಚಲುಕಾಡುಗಳಲ್ಲಿ ಎಲ್ಲೆಲ್ಲೂ ಕಾಣಸಿಗುತ್ತಿದ್ದ ಹುಲ್ಲೇಕರ (black buck) ಮತ್ತು ಚಿಂಕಾರಾ (Indian Gazelle) ಎಂಬ ಎರಳೆಗಳು. ಕೃಷಿಯ, ಜಾನುವಾರುಗಳ ಹಾಗೂ ಬೇಟೆಯ ಒತ್ತಡದಿಂದ ಕುರುಚಲು ಕಾಡು ಹಾಗೂ ಎರಳೆಗಳು ಕ್ರಮೇಣ ಹಿಮ್ಮೆಟ್ಟಿ, ಅವುಗಳನ್ನು ಅವಲಂಬಿಸಿದ್ದ ಚೀತಾಗಳು 1950 ರ ಸುಮಾರಿಗೆ ನಿರ್ನಾಮವಾಗಿ ಹೋದವು. ತುಂಗಭದ್ರಾ ಅಣೆಕಟ್ಟು ರಚನೆಯಾದಾಗ ಪ್ರಾಯಶಃ ಕರ್ನಾಟಕದ ಕೊನೆಯ ಚೀತಾ ನಾಶವಾಯಿತು.

ಸೂರ್ಯ ನಮ್ಮ ಭೂಮಿಯಲ್ಲಿರುವ ಎಲ್ಲಾ ಜೀವ ರಾಶಿಯಲ್ಲೂ ಸಂಚಯವಾಗುವ ಶಕ್ತಿಯ ಮೂಲ. ಭೂಮಿಯಲ್ಲಿರುವ ಸಸ್ಯಗಳು ವಾತಾವರಣದಿಂದ ಕಾರ್ಬನ್ ಡೈ ಆಕ್ಸೈಡ್, ನೆಲದಿಂದ ಖನಿಜಸಾರ, ನೀರು ಮತ್ತು ಸೂರ್ಯನಿಂದ ಬರುವ ಸೌರಚೇತನಗಳನ್ನು ಬಳಸಿಕೊಂಡು ಆಹಾರ ಉತ್ಪಾದಿಸಿ ಬೆಳೆದು ಹಬ್ಬುತ್ತವೆ. ಅಂತೆಯೇ ಈ ಸಸ್ಯರಾಶಿಯು ವಾತಾವರಣದಲ್ಲಿ ಆಮ್ಲಜನಕ ಸಮತೋಲವನ್ನು ಕಾಪಾಡಿ, ಮಳೆನೀರಿನ ಹೊಡೆತವನ್ನು ತಡೆದು, ನೆಲಕ್ಕೆ ತುಟುಕಿಸಿ, ಅಂತರ್‌ಜಲಕ್ಕೆ ಸೇರಿಸಿ ತೊರೆ ನದಿಗಳಿಗೆ ವರ್ಷಪೂರ್ತಿ ನೀರು ದೊರಕಿಸುತ್ತದೆ; ನೆಲಕ್ಕೆ ಸಸ್ಯಸಾರ (Humus) ಸೇರಿಸುತ್ತ ಮಳೆನೀರಿನ ಪ್ರವಾಹಗಳನ್ನು ನಿಯಂತ್ರಿಸಿ, ಭೂಮಿಯನ್ನು ರಕ್ಷಿಸುತ್ತವೆ. ಸಸ್ಯಗಳು ಸೌರಚೇತನವನ್ನು ಆಹಾರೋತ್ಪಾದನೆಗೆ ನೇರವಾಗಿ ಬಳಸಿಕೊಂಡು ಸೌರಶಕ್ತಿಯ ಉಪಯೋಗದ ಮೊದಲನೇ ಹಂತದಲ್ಲಿವೆ.

ಸಸ್ಯಾಹಾರಿ ಪ್ರಾಣಿಗಳು ಎರಡನೇ ಹಂತದಲ್ಲಿದ್ದು, ಸಸ್ಯಜನ್ಯ ಪದಾರ್ಥಗಳ ಮೂಲಕ ಸೌರಚೇತನವನ್ನು ಪಡೆದರೆ–ಅವನ್ನು ಬೇಟೆಮಾಡುವ ಮಾಂಸಾಹಾರಿ ಪ್ರಾಣಿಗಳು ಮೂರನೇ ಹಂತದಲ್ಲಿವೆ. ಈ ಎಲ್ಲಾ ಜೀವಿಗಳೂ—ಕೀಟ ಜೀವಾಣುಗಳೂ ಸೇರಿದಂತೆ—ಈ ಆಹಾರ ಸರಪಣಿಯಲ್ಲಿ ಒಂದೊಂದು ವಿಶಿಷ್ಟ ಸ್ಥಾನದಲ್ಲಿರುತ್ತವೆ. ಸಸ್ಯಾಹಾರಿಗಳು ಸಸ್ಯಗಳ ಸಂತಾನೋತ್ಪತ್ತಿಗೆ ಸಹಾಯಕವಾದರೆ—ಮಾಂಸಾಹಾರಿಗಳು ಸಸ್ಯಾಹಾರಿಗಳ ಚಲನೆ ಹಾಗೂ ಸಂಖ್ಯೆಯನ್ನು ನಿಯಂತ್ರಿಸಿ ಸಸ್ಯಗಳ ಉಳಿವಿಗೆ ಆಸ್ಪದ ನೀಡುತ್ತವೆ. ಸತ್ತ ಜೀವಿಗಳು ಮಣ್ಣುಗೂಡಿದಾಗ ಪುನಃ ಸಸ್ಯಸಾರ ಉಂಟಾಗುತ್ತದೆ. ಈ ರೀತಿ ಪರಸ್ಪರ ಸಂಬಂಧಗಳ, ಅಂದರೆ ಇಕಾಲಜಿಯ ಬಲೆಯಲ್ಲಿರುವ ಜೀವಿಗಳು ಹಾಗೂ ಅವುಗಳ ಸುತ್ತಲ ಪರಿಸರ—ಎರಡನ್ನೂ ಒಟ್ಟಾಗಿ ಜೀವಸಮುದಾಯ,ಅಥವಾ 'ಇಕೊಸಿಸ್ಟಮ್' ಎನ್ನುತ್ತಾರೆ. ಇದರಲ್ಲಿ ಮುಖ್ಯ ಅಂಶವೆಂದರೆ ಸಸ್ಯರಾಶಿ. ಸಸ್ಯಾಹಾರಿಗಳು, ಹಾಗೂ ಮಾಂಸಾಹಾರಿಗಳು ಅನುಕ್ರಮವಾಗಿ ಕಡಿಮೆ ಸಂಖ್ಯೆಯಲ್ಲಿರುತ್ತವೆ. ಈ '' ಇಕೋಸಿಸ್ಟಮ್ ''ನಲ್ಲಿ ಭಾಗವಹಿಸುವ ಜೀವಿಗಳು ಹುಟ್ಟಿ, ಬದುಕಿ, ಸಾಯುತ್ತಿದ್ದಂತೆ ಒಟ್ಟು ವ್ಯವಸ್ಥೆ ಸಮತೋಲದಲ್ಲಿರುತ್ತದೆ. ಪರಸ್ಪರ ಸಂಬಂಧಗಳ ಈ

ಇಕಾಲಜಿಯ ಬಲೆಯನ್ನು ಬಿಡಿಸಿ ನೋಡಿದಾಗ ಪ್ರತಿ ಸಸ್ಯಕ್ಕೂ ಪ್ರಾಣಿಗೂ ತನ್ನದೇ ಆದ ವಿಶಿಷ್ಟ ಜಾಗವಿದ್ದು (Ecological Niche), ಅದಕ್ಕೆ ಇನ್ನುಳಿದ ಜೀವಿ ಮತ್ತು ಪರಿಸರಗಳೊಡನೆ ಪ್ರತ್ಯಕ್ಷ ಅಥವಾ ಪರೋಕ್ಷ ಅವಲಂಬನೆಯ ಕೊಂಡಿಗಳಿವೆ. ಯಾವ ಕೊಂಡಿ ಮುರಿದರೂ ಇನ್ನೆಲ್ಲಾ ಜೀವಿಗಳಿಗೆ ಅದರ ಪರಿಣಾಮ ತಟ್ಟುತ್ತದೆ. ಯಾವ ಜೀವಿಯೂ ತನ್ನ ಪರಿಸರದ ಮಿತಿಯನ್ನು ಮೀರು ವಂತಿಲ್ಲ–ಪರಿಸರವನ್ನು ಹೆಚ್ಚಾಗಿ ಬದಲಿಸುವಂತಿಲ್ಲ. ಬೇಟೆಗಾರನಾದ ಆದಿಮಾನವ ಈ ಬಲೆಯ ಒಂದು ಕೊಂಡಿಯಾಗಿದ್ದು ತನ್ನದೇ ಆದ ವಿಶಿಷ್ಟ ಜಾಗದಲ್ಲಿದ್ದ; ಪರಿಸರದ ಅಂಗವಾಗಿದ್ದ. ಈ ಸಮಗ್ರವಾದ ಇಕಾಲಜಿಯ ವ್ಯವಸ್ಥೆಯ ಕೆಲವು ಉದಾಹರಣೆಗಳನ್ನು ನೋಡಿದರೆ ಬೆರಗಾಗುತ್ತದೆ.

ಮಲೆನಾಡಿನ ಆಗುಂಬೆ, ಕೊಲ್ಲೂರುಗಳ ಸದಾ ಹಸಿರು ಅರಣ್ಯಗಳಲ್ಲಿ 'ಸಿಂಗಲೀಕ' (Lion tailed macalsue)ವೆಂಬ ಕಪಿ ವಾಸಿಸುತ್ತದೆ. ಈ ಕಪಿಯ ಅಂಗರಚನೆ, ಆಹಾರ, ಸಾಮಾಜಿಕ ವರ್ತನೆ ಎಲ್ಲವೂ ಸದಾ ಹಸಿರು ಅರಣ್ಯದ ಜೀವ ಸಮುದಾಯಕ್ಕೆ ಹೊಂದಿಕೊಂಡಿದೆ. ಆದರೆ ಈ ಕಪಿ ಬಾಬಾಬುಡನ್ ಗಿರಿಯ ತೇವವುಳ್ಳ, ಎಲೆಯುದುರುವ ಅರಣ್ಯಗಳಲ್ಲಾಗಲಿ (Moist Deciduous forests) ಅಥವಾ ಬಂಡೀಪುರದ ಒಣ ಎಲೆಯುದುರುವ (Dry Deciduous) ಕಾಡುಗಳಲ್ಲಾಗಲಿ ಬದುಕಲಾರದು. ಇಂತಹ ಏಕರೀತಿಯ ಪರಿಸರದ ಅವಲಂಬನೆಯನ್ನು ಈ ಮೂರೂ ತರಹದ ಕಾಡುಗಳಲ್ಲಿ ಕಾಣಸಿಗುವ ಮುಸುವ (Langur Monkey)ಗಳಲ್ಲಿ ಕಾಣಲಾರೆವು. ಸಿಂಗಲೀಕ ಕೇವಲ ಒಂದು ತರಹದ ಜೀವಸಮುದಾಯಕ್ಕೆ ಹೊಂದಿಕೊಂಡಿದ್ದರೆ, ಮುಸುವ ಎರಡು ಮೂರು ತರಹದ ಜೀವಸಮುದಾಯಕ್ಕೆ ಹೊಂದಿಕೊಳ್ಳುವಂತೆ ವಿಕಾಸ ಹೊಂದಿದೆ. ಈ ರೀತಿ ಬೇರೆ ಬೇರೆ ಬಗೆಯ ಪರಿಸರಗಳಿಗೆ ಹೊಂದಿಕೊಂಡು ವಿಕಾಸವಾಗುವ ಸಾಮರ್ಥ್ಯ ಹೆಚ್ಚಾದಂತೆ ಒಂದು ಸಸ್ಯ ಅಥವಾ ಪ್ರಾಣಿ ತನ್ನ ಸಂಖ್ಯಾಬಲವನ್ನು ವೃದ್ಧಿಪಡಿಸಿ ಹೆಚ್ಚು 'ಜಯಶೀಲ'ವಾಗುತ್ತದೆ–ವಿಕಾಸವಾದದ ದೃಷ್ಟಿಯಲ್ಲಿ.

ನಾಗರಹೊಳೆಯ ಕಾಡುಗಳಲ್ಲಿರುವ ಅಪಾರ ಸಸ್ಯರಾಶಿಯಲ್ಲಿ ಅನೇಕ ಬೇರೆ ಬೇರೆ ಜಾತಿಯ ಮರ, ಪೊದರು, ಹುಲ್ಲು, ಬಳ್ಳಿಗಳಿವೆ. ಇವೆಲ್ಲಾ ಅನೇಕ ವಿಧದ ಸಸ್ಯಜನ್ಯ ಆಹಾರವನ್ನು ಒದಗಿಸುತ್ತವೆ. ಸಸ್ಯಾಹಾರಿಗಳಾದ ಆನೆ, ಕಾಟಿ (Gaur, Bison), ಕಾಡುಹದಿ, ಕಡವೆ (Sambar deer), ಸಾರಂಗ (Spotted deer) ಕಾಡುಕುರಿ (Barking deer), ಬರ್ಕ (mouse deer), ಮುಸುವ ಮೊದಲಾದವು ಇವುಗಳನ್ನು ಅವಲಂಬಿಸಿ ಬದುಕುತ್ತವೆ. ಪ್ರತಿಯೊಂದು ಸಸ್ಯಾಹಾರಿ ಪ್ರಾಣಿ ಜಾತಿಯ ಆಹಾರ ಇನ್ನೊಂದಕ್ಕಿಂತ ಸ್ವಲ್ಪಮಟ್ಟಿಗೆ ಭಿನ್ನವಾಗಿದ್ದು, ಹುಲ್ಲು, ಚಿಗುರು, ಪೊದೆ, ಎಲೆ, ಬಿದಿರು, ಹಣ್ಣು, ಹೂವು, ಬೇರು, ತೊಗಟೆ, ಗೆಡ್ಡೆ ಮುಂತಾದ ಸಸ್ಯಜನ್ಯ ಪದಾರ್ಥಗಳನ್ನು ಆಹಾರವಾಗಿ ವಿವಿಧ ರೀತಿಯಲ್ಲಿ ಅವು ಉಪಯೋಗಿಸುವುದರಿಂದ ಈ ಕಾಡುಗಳ ಜೀವ ಉತ್ಪಾಕಧಿತೆ (Biological productivity) ಹೆಚ್ಚಾಗಿದೆ. ಅಂದರೆ ಸುಮಾರು ಸಾವಿರ ಎಕರೆ ಅರಣ್ಯದಲ್ಲಿ ಸಮತೋಲದಲ್ಲಿರುವ ಸಸ್ಯಾಹಾರಿಗಳ ತೂಕ–ಜೀವರಾಶಿ (Biomass), ಅದೇ ಸಾವಿರ ಎಕರೆಯಲ್ಲಿ ಯಾವುದೋ ಒಂದೇ ಜಾತಿಯ ಸಾಕುಪ್ರಾಣಿ ಮಾತ್ರ ವೃದ್ಧಿಯಾದರೆ ಉತ್ಪಾದನೆಯಾಗುವ ಒಟ್ಟು ತೂಕಕ್ಕಿಂತ ಎಷ್ಟೋ ಹೆಚ್ಚಾಗಿದೆ!

ಇದೇ ಕಾಡುಗಳಲ್ಲಿ ಹುಲಿ, ಚಿರತೆ, ಸೀಳುನಾಯಿ (Wild dog), ಗುಳ್ಳೆನರಿ, ಕಾಡುಬೆಕ್ಕು (Jungle cat) ಮುಂತಾದ ಬೇಟೆಗಾರರಿದ್ದಾರೆ. ಹುಲಿಗಳು ಆನೆ ಮರಿ, ಕಾಟಿಗಳನ್ನು ಒಮ್ಮೊಮ್ಮೆ ಹಿಡಿದರೆ, ಕಾಡುನಾಯಿಗಳು ಕಡವೆಗಳನ್ನೂ, ಚಿರತೆಗಳು ಮುಸುವಗಳನ್ನೂ ವಿಶೇಷವಾಗಿ ಬೇಟೆಯಾಡುತ್ತವೆ. ಹೆಚ್ಚು ಸಂಖ್ಯೆಯಲ್ಲಿರುವ ಕಾಡುಹಂದಿ, ಸಾರಂಗಗಳು ಈ ಎಲ್ಲಾ ಬೇಟೆಗಾರರಿಗೂ ಗ್ರಾಸವಾಗುತ್ತವೆ. ಗುಳ್ಳೆನರಿ, ಕಾಡುಬೆಕ್ಕುಗಳು ಬರ್ಕ, ಮೊಲ, ಕಾಡುಕೋಳಿ ಮುಂತಾದ ಚಿಕ್ಕ ಬೇಟೆಯನ್ನು ಅರಸುತ್ತವೆ. ಮಾಂಸಾಹಾರಿಗಳಲ್ಲೂ ಈ ರೀತಿ ವೈವಿಧ್ಯಮಯ ಆಹಾರದ ವ್ಯವಸ್ಥೆಯಿರುವುದರಿಂದ ಆ ಪರಿಸರಕ್ಕೆ ಸಾಮರ್ಥ್ಯವಿದ್ದಷ್ಟೂ ಹೆಚ್ಚು ಬೇಟೆಗಾರ ಪ್ರಾಣಿಗಳಿರಲು ಆಸ್ಪದವಾಗುತ್ತದೆ.

ಈ ಎಲ್ಲ ಬೇಟೆಗಾರರೂ ಸಸ್ಯಾಹಾರಿಗಳ ಸಂಖ್ಯೆಯನ್ನು ನಿಯಂತ್ರಿಸಿ, ಅವುಗಳನ್ನು ಸದಾ ಚಲನೆಯಲ್ಲಿಡುತ್ತಾ ಸುತ್ತಲಿನ ಪರಿಸರಕ್ಕೆ, ಸಸ್ಯಗಳ ಪುನರಾಭಿವೃದ್ಧಿಗೆ (Regeneration) ಧಕ್ಕೆ ಬಾರದಂತೆ ವರ್ತಿಸುತ್ತವೆ. ಹೆಚ್ಚಾಗಿ ಕಾಯಿಲೆಯುಳ್ಳ, ಮುದಿ ಪ್ರಾಣಿಗಳು ಬೇಟೆಗೆ ಆಹುತಿಯಾಗುವುದರಿಂದ ಉಳಿದ ಶಕ್ತವಾದ ಪ್ರಾಣಿಗಳಿಗೂ ಆಹಾರಕ್ಕೆ ಕೊರತೆಯಾಗುವುದಿಲ್ಲ.

ಇಂತಹ ಸಮಗ್ರ ಜೀವಸಮುದಾಯ, ತನ್ನ ಅಸ್ತಿತ್ವಕ್ಕೆ

ಬೇಕಾದ ಪರಿಸರವನ್ನು ನಾಶಪಡಿಸದೇ ಬಹಳ ಸಮರ್ಪಕವಾದ ಸಮತೋಲದಲ್ಲಿರುತ್ತದೆ. ಕೇವಲ ನೂರು ವರ್ಷಗಳ ಹಿಂದೆಯೂ ಸಹ ನಮ್ಮ ಆದಿವಾಸಿಗಳಾದ ಜೇನುಕುರುಬ, ಮಲೆಕುಡಿಯ, ಸೋಲಿಗ, ಹಕ್ಕಿಪಿಕ್ಕಿ ಮುಂತಾದವರು ಇಂತಹ ವ್ಯವಸ್ಥೆಯಲ್ಲಿ ಪಾಲುದಾರರಾಗಿದ್ದು ಸುತ್ತಲ ಪರಿಸರದೊಂದಿಗೆ ಅತ್ಯಂತ ವೈಜ್ಞಾನಿಕ ಎನ್ನಬಹುದಾದ ಸಮನ್ವಯದಲ್ಲಿದ್ದರು!

ಇಂತಹ ಪ್ರಾಣಿಮಾನವ (Prehistoric man) ಸಮಾಜಗಳಲ್ಲಿ ಕಲೆ, ವಿಜ್ಞಾನಗಳ ನಡುವಿನ 'ಬಿರುಕು', 'ಅಪರಾಧ', 'ತಪ್ಪು' 'ಏಕಾಂಗಿತನ'ಗಳು ಇದ್ದಿರಬಹುದೇ?

ಮಾನವನ ಪ್ರಭುತ್ವ ; ಪರಿಸರ ನಾಶದ ಉಗಮ:

ಸಂಗ ಜೀವಿಯಾದ ಆದಿಮಾನವ ಬೆಂಕಿ, ಲೋಹಗಳ ರಹಸ್ಯವರಿತು, ಸಾಕು ಪ್ರಾಣಿಗಳನ್ನು ಪಳಗಿಸಿ, ಆದಿ ತಂತ್ರಜ್ಞಾನಿಯಾಗಿ (Primitive Technologist) ಕೊನೆಗೆ ಕೃಷಿಕನಾದುದು ಪ್ರಾಯಶಃ ಹತ್ತು ಸಾವಿರ ವರ್ಷಗಳ ಹಿಂದೆ. ಅಂದಿನಿಂದ ಆತ ಇತರ ಪ್ರಾಣಿಗಳಂತೆ ಪರಿಸರವನ್ನು ಅವಲಂಬಿಸಿರದೆ, ತನಗೆ ಅನುಕೂಲವಾಗುವಂತೆ ಪರಿಸರವನ್ನು ಮಾರ್ಪಡಿಸಲು ಶಕ್ತನಾದ; ವಿಕಾಸದ ದೃಷ್ಟಿಯಿಂದ ತನಗೆ ಪ್ರತಿಕೂಲವಾದ ಪರಿಸರಗಳನ್ನೂ ಮಾರ್ಪಡಿಸಿ, ತನ್ನ ಕುಲವನ್ನು ಎಲ್ಲೆಲ್ಲೂ ಹರಡಿದ; ತಂತ್ರಜ್ಞಾನ, ಸಂಸ್ಕೃತಿಗಳನ್ನು ಬೆಳಸಿಕೊಂಡು ಮುಂದೋಡಿದ.

ಕೃಷಿಯ ಉಗಮದ ಸ್ವಲ್ಪ ಮೊದಲೇ ಇದ್ದ ಆದಿವಾಸಿ ಸಂಸ್ಕೃತಿಗಳಲ್ಲಿನ ಜನರಿಗೆ (Primitive Cultures) ತಾವು ತಮ್ಮ ಸುತ್ತಲಿನ ನಿಸರ್ಗದ ವಿಶಾಲ "ವ್ಯವಸ್ಥೆ"ಯ ಒಂದು ಚಿಕ್ಕ ಅಂಗ ಎಂಬ ಕಲ್ಪನೆ ಬೇರೂರಿರುತ್ತದೆ. ಅಲ್ಲಿ, ಮಾನವನೇ ಸೃಷ್ಟಿಯ ಕೇಂದ್ರ ಉಳಿದೆಲ್ಲವೂ ಅವನಿಗಾಗಿಯೇ ಇವೆ ಎಂಬ ವಾದವಿಲ್ಲ. ಹಳೆಯ ಧರ್ಮವಾದ ಹಿಂದೂ ಧರ್ಮದ ಕೆಲವು ಸೆಲೆಗಳಲ್ಲೂ ಈ ವಾದವಿಲ್ಲ.

ಕೃಷಿಯ ಉಗಮದ ನಂತರ ಪರಿಸರದ ಮೇಲೆ ಸಾಕಷ್ಟು ಪ್ರಭುತ್ವ ಸ್ಥಾಪಿಸಿದ ಮಾನವ ಸಮಾಜ ಸೃಷ್ಟಿಸಿದ ಧರ್ಮಗಳಾದ ಯಹೂದಿ, ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳಲ್ಲಿ ದೇವರು ಮಾನವನಿಗಾಗಿ ಎಲ್ಲವನ್ನೂ ಸೃಷ್ಟಿಮಾಡಿದ ಎಂಬ ಕಲ್ಪನೆ ಹಾಸುಹೊಕ್ಕಾಗಿದೆ. ಚಾರಿತ್ರಿಕವಾಗಿ, ಹಳೆಯ ಮತ್ತು ಈ ಹೊಸ ಸಂಸ್ಕೃತಿಗಳ ನಡುವಣ ಕಾಲಮಾನದಲ್ಲಿ ಮನುಷ್ಯ ಪರಿಸರದ ಮೇಲೆ ಸಾಧಿಸಿದ ಹತೋಟಿಯ ಸ್ಪಷ್ಟ ಉದಾಹರಣೆ ಇದು.

ಮುಂದಕ್ಕೆ ವರ್ಗ ಸಮಾಜ, ಖಾಸಗಿ ಆಸ್ತಿ, ತಂತ್ರಜ್ಞಾನಗಳು ಬೆಳೆದು ಬಂದು, ಕೈಗಾರಿಕಾ ಕ್ರಾಂತಿ, ಬಂಡವಾಳಶಾಹಿ ಸಮಾಜಿಕ ವ್ಯವಸ್ಥೆಗಳೂ ಅಸ್ತಿತ್ವಕ್ಕೆ ಬಂದವು. ೨೦ನೇ ಶತಮಾನದ ಅದ್ಭುತ ಸಾಧನೆಗಳು ಪರಿಸರದ ಮೇಲೆ ಮಾನವ ಸ್ಥಾಪಿಸಿದ "ಪ್ರಭುತ್ವ" ಶಾಶ್ವತ ಎಂಬ ಭ್ರಮೆಯನ್ನೂ ಭದ್ರಗೊಳಿಸಿದವು: ಈ ಸಾಧನೆಗಳ ಹೊಳಪಿನ ಪ್ರಭೆಗೆ ನಮ್ಮ ಕಣ್ಣು ಕೋರೈಸಿ, ನಮ್ಮ ಸುತ್ತಲಿನ ಮಿಲಿಯಾಂತರ ವರ್ಷಗಳಿಂದ ವಿಕಾಸಗೊಂಡ ಇಕಾಲಜಿಯ 'ಬಲೆ' ಚಿಂದಿಯಾಗುತ್ತಿರುವುದು ನಮಗೆ ಕಾಣಿಸಲಿಲ್ಲವೇನೋ.

ಮಾನವ ನಾಗರಿಕತೆಯ ಸಮೃದ್ಧ ಉಗಮ ಸ್ಥಾನಗಳಾದ ಮೆಸಪೊಟೇಮಿಯ, ಹರಪ್ಪಾ, ಮೊಹೆಂಜೊದಾರೋಗಳು ಪರಿಸರ ನಾಶದಿಂದ ನಡೆದ ಮರುಭೂಮಿಕರಣದ ಫಲವಾಗಿ ಮರುಳುಗಾಡಿನ ಕೊಂಪೆಗಳಾದವು. ಇಂದು ಮರುಭೂಮಿಯಾದ ಹರಪ್ಪಾದ ಮೊಹರುಗಳಲ್ಲಿ ಜವುಗು ಪ್ರದೇಶದ ವಾಸಿಯಾದ ಖಡ್ಗಮೃಗ (Rhinoceres) ಇದ್ದದ್ದು ಕಂಡುಬರುತ್ತದೆ! ಕರ್ನಾಟಕದಲ್ಲೇ ನೋಡಿದರೂ ವಿಜಯನಗರ ಮುಂತಾದ ಬಯಲು ಸೀಮೆಯ ಹಲವು ಕೃಷಿ ಪ್ರಧಾನ ಸಂಪದ್ಭರಿತ ಸಾಮ್ರಾಜ್ಯಗಳಿದ್ದ ತಾಣ ಇಂದು ನೀರಿಲ್ಲದ ಮರಳು ಕೊಂಪೆಗಳಾಗಿರುವುದು ಕಾಣುತ್ತದೆ. ಈ ಅವನತಿಗೆ ಕಾರಣವಾದ ಪರಿಸರ ನಾಶದ ಪ್ರಾಮುಖ್ಯತೆಯನ್ನು ಕಡೆಗಣಿಸಿ, ನಮ್ಮ ಇತಿಹಾಸಕಾರರು ಎಲ್ಲದಕ್ಕೂ ಯುದ್ಧ ಕಲಹಗಳೇ ಕಾರಣವೆನ್ನುವುದು ಅಚಾರಿತ್ರಿಕವಲ್ಲವೇ?

ಇಂತಹ ಹಲವು ಉದಾಹರಣೆಗಳಿದ್ದರೂ, ಬ್ರಿಟಿಷ್ ಬಂಡವಾಳ ಭಾರತದಲ್ಲಿ ಬೇರೂರಿ ಪ್ರಭುತ್ವ ಸ್ಥಾಪಿಸುವವರೆಗೂ (19ನೇ ಶತಮಾನದ ಕೊನೆಯ ಭಾಗ) ನಮ್ಮ ಸಮಾಜವು ಪರಿಸರದೊಂದಿಗೆ ಒಂದು ಬಗೆಯ ಸ್ಥೂಲವಾದ ಸಮತೋಲದಲ್ಲಿದ್ದಿರಬಹುದು.

ಪರಿಸರ ನಾಶ ಮತ್ತು ಸಾಮಾಜಿಕ ಧೋರಣೆಗಳು:

ಪಶ್ಚಿಮ ದೇಶಗಳಲ್ಲಿ, ವಸಾಹತುಶಾಹಿಯ ಕೊಳ್ಳೆಯಿಂದ ಬಂಡವಾಳಶಾಹೀ ಔದ್ಯಮೀಕರಣ ಮಿತಿಮೀರಿ, ಸಂಪನ್ಮೂಲಗಳ ಕೊರತೆ ಹಾಗೂ ವ್ಯಾಪಕ ಪರಿಸರ ಮಾಲಿನ್ಯಗಳ ಸಮಸ್ಯೆ ತಲೆದೋರಿತು. ಒಂದು ಸೀಮೆಯೊಳಗೆ ಸಮಾಜವಾದ ("Socialism in one Country") ಸ್ಥಾಪಿಸಲು ಯತ್ನಿಸಿದ ಸೋವಿಯತ್ ರಷ್ಯಾದಲ್ಲೂ ಪರಿಸರ ಮಾಲಿನ್ಯ ತಲೆ ಹಾಕಿತು!

ಹಳೆಯ ವಸಾಹತುಗಳಾದ ಭಾರತದಂತಹ ದೇಶಗಳಲ್ಲಿ ಸಾಮ್ರಾಜ್ಯಶಾಹಿಯು ಹೊಡೆತದೊಡನೆ, ವ್ಯಾಪಕವಾಗಿ ಪರಿಸರದ ಸಮತೋಲ ನಾಶಹೊಂದಿ ಜನಸಂಖ್ಯಾ ಸ್ಫೋಟ, ಬರಗಾಲ, ಕ್ಷಾಮ, ನೆರೆಹಾವಳಿ, ಆಹಾರ ಹಾಗೂ ಸಂಪನ್ಮೂಲಗಳ ಕೊರತೆ ಮುಂತಾದ ಸಮಸ್ಯೆಗಳೂ ತಲೆ ಎತ್ತಿದವು.

ಹಿಂದುಳಿದ ದೇಶಗಳಲ್ಲಿ ಪರಿಸರನಾಶಕ್ಕೆ ಸಾಮಾಜಿಕ ಹಾಗೂ ಆರ್ಥಿಕ ಧೋರಣೆಗಳು ಹೇಗೆ ಕಾರಣವಾದುವು ಎಂಬುದನ್ನು ಪರಿಶೀಲಿಸೋಣ.

ಬ್ರಿಟಿಷ್ ಪ್ರಭುತ್ವ ಭಾರತದಲ್ಲಿ ಸ್ಥಾಪನೆಯಾದಾಗ, ರೈಲ್ವೆ ಹಾಗೂ ಕೈಗಾರಿಕೆಗಳಿಗಾಗಿ ನಮ್ಮ ಪರಿಸರದ ಅಂಗವಾದ ಅರಣ್ಯಗಳ ಹಾಗೂ ಇತರ ಸಂಪನ್ಮೂಲಗಳ ವ್ಯಾಪಕ ಬಳಕೆ ಆರಂಭವಾಯಿತು. ಜತೆಗೇ ಕೈಗಾರಿಕೆಗಳಿಂದಾಗಿ ಕೋಟಿಗಟ್ಟಲೆ ಕುಶಲಕರ್ಮಿಗಳು ಕೆಲಸ ಕಳೆದುಕೊಂಡು ನಿರ್ಗತಿಕರಾದರು. ಪಾಶ್ಚಾತ್ಯ ವೈದ್ಯಕೀಯ ಪದ್ಧತಿ ಬಳಕೆಗೆ ಬಂದು ಸಿಡುಬು, ಮಲೇರಿಯಾ, ಪ್ಲೇಗ್ ಮುಂತಾದ ಸಾಂಕ್ರಾಮಿಕ ರೋಗಗಳ ಹತೋಟಿಯಿಂದ, ಉತ್ಪಾದನೆ ಆರೈಕೆಯಿಂದ, ಜನನ ಮರಣಗಳು ಏರು ಪೇರಾಗಿ, ಜನಸಂಖ್ಯೆ ಏರತೊಡಗಿತು. ಈ ಬೆಳೆಯುತ್ತಿದ್ದ ನಿರ್ಗತಿಕರ ಸಂಖ್ಯೆ ಉದ್ಯೋಗಾವಕಾಶಗಳಿಗೆ ಒದ್ದಾಟ ನಡೆಸಿತು.

ಆದರೆ ಬ್ರಿಟಿಷ್ ಬಂಡವಾಳಶಾಹಿ ಭಾರತದಲ್ಲಿ ಔದ್ಯಮೀಕರಣ ತಂದು, ಈ ಹೆಚ್ಚುವರಿಯಾದ ಜನಸಂಖ್ಯೆಯನ್ನು ಕೈಗಾರಿಕೆಗಳಲ್ಲಿ ಹೇರಿಕೊಳ್ಳಲು ಸಾಧ್ಯತೆ ಇರಲಿಲ್ಲ. ಆಗಲೇ ಕೃಷಿಗೊಳಪಟ್ಟ ಭೂಮಿಯನ್ನು ತಮ್ಮ ಹಿಂಬಾಲಕರಾದ ಜಮೀನುದಾರರಿಂದ ಕಸಿದು ಪುನಃ ಭೂಹೀನರಿಗೆ ಹಂಚಲೂ ಅವರು ಸಿದ್ಧರಿರಲಿಲ್ಲ. ಸುಲಭೋಪಾಯವೆಂದು ಅವರು ವ್ಯಾಪಕವಾಗಿ ಅರಣ್ಯಗಳು ಮತ್ತು ಕೃಷಿಗೆ ಅಸೂಕ್ತ (Marginal ವಾಗಿದ್ದ ಬೆಟ್ಟಗಾಡುಗಳಲ್ಲಿ ಈ ನಿರ್ಗತಿಕರ ಸೈನ್ಯವನ್ನು ವ್ಯವಸಾಯಕ್ಕೆ ಹಚ್ಚಿದರು.

ಮುಂದೆ ಅಧಿಕಾರಕ್ಕೆ ಬಂದ ನಮ್ಮ ಆಳುವ ವರ್ಗಗಳೂ ಭೂಸುಧಾರಣೆಯನ್ನು ಕೇವಲ ಘೋಷಣೆಯಾಗಿಟ್ಟು ದಾರಿದ್ರ್ಯ ಹೆಚ್ಚುವಂತೆ ಮಾಡಿದರು. ಈ ಕಾರಣದಿಂದಲೂ ದೇಶದೊಳಗಿನ ಮಾರುಕಟ್ಟೆ ಸಂಕುಚಿತವಾಗಿ ಔದ್ಯಮೀಕರಣ ಕುಂಠಿತವಾಯಿತು.

ಈ ಎಲ್ಲಾ ಕಾರಣಗಳಿಂದ ಏರಿದ ಆದಾಯ, ಸಾಮಾಜಿಕ ಭದ್ರತೆ ಮತ್ತು ವಿದ್ಯಾಶಕ್ತಿಗಳ ಫಲವಾಗಿ ತನ್ನಂತೇ ನಡೆದ ಜನ ಸಂಖ್ಯಾ ಹತೋಟಿ (Demographic transition) ಪಶ್ಚಿಮ ಗರಾಷ್ಟ್ರಗಳಲ್ಲಿ ನಡೆದಂತೆ ಹಿಂದುಳಿದ ದೇಶಗಳಲ್ಲಿ ನಡೆಯಲಿಲ್ಲ. ಜನಸಂಖ್ಯಾ ಸ್ಫೋಟ ಸಂಪನ್ಮೂಲಗಳ ನಾಶದ ಇಕ್ಕುಳದಲ್ಲಿ ನಾವು ಸಿಕ್ಕಿಬೀಳುವಂತಾದುದರ ಹಿನ್ನೆಲೆಯ ಸಾಮಾಜಿಕ ವ್ಯವಸ್ಥೆಯ, ಧೋರಣೆಗಳ ಸರಳೀಕೃತ, ಸ್ಥೂಲ ವಿವರಣೆ ಇದು. ಈ ಹಿನ್ನೆಲೆಯಲ್ಲಿ ನಾವು ನಮ್ಮ ಪರಿಸರವನ್ನು ಹೇಗೆ ವಿವಿಧ ರೀತಿಗಳಲ್ಲಿ ಹಾಳುಗೆಡವುತ್ತಿದ್ದೇವೆಂಬುದನ್ನು ಕರ್ನಾಟಕದ ಉದಾಹರಣೆಗಳೊಂದಿಗೇ ಕಾಣಬಹುದು.

ಈಗಾಗಲೇ ವಿವರಿಸಿದಂತೆ ಭಾರತ 'ಸ್ವತಂತ್ರ'ವಾದ ಬಳಿಕ ಲಕ್ಷಾಂತರ ಮಂದಿ ನಿರ್ಗತಿಕರು ಅರಣ್ಯ ಹಾಗೂ, ಕೃಷಿಗೆ ಯೋಗ್ಯವಲ್ಲದ ಬೆಟ್ಟಗಾಡುಗಳನ್ನು ಒತ್ತುವರಿಮಾಡಿ ಕೃಷಿ ಆರಂಭಿಸಿದರು. ನಮ್ಮ ಮಲೆನಾಡಿನಲ್ಲಿ ಇವರೊಂದಿಗೇ ಸಾಕಷ್ಟು ಮಂದಿ ಧನಿಕ ರೈತರೂ ಪ್ಲಾಂಟರ್‌ಗಳೂ ಅರಣ್ಯದ ಒತ್ತುವರಿ ಮಾಡಿ ನಾಶ ಮಾಡಿದ್ದನ್ನು ಇಂದಿಗೂ ಕಾಣಬಹುದು. ಇಂತಹ ಕೃಷಿಯಲ್ಲಿ ಪ್ಲಾಂಟೇಶನ್ ಬೆಳೆಗಳ ಹೊರತಾಗಿ ಉಳಿದೆಲ್ಲ ಬೇಸಾಯ ಕೇವಲ ಹೊಟ್ಟೆಪಾಡಿನದೆನ್ನಬಹುದು. ತಮ್ಮ ಆದಾಯ ಹೆಚ್ಚಿಸಲಿಕ್ಕಾಗಿ ಈ ಸಾಗುವಳಿದಾರರು ಸುತ್ತಲಿನ ಅರಣ್ಯದ ಉತ್ಪನ್ನಗಳನ್ನು ಹೊರಸಾಗಿಸಿ ಮಾರಾಟ ನಡೆಸುವುದು ವ್ಯಾಪಕವಾಗಿ ನಡೆಯುತ್ತಿದೆ. ಅರಣ್ಯ ಉತ್ಪನ್ನಗಳ ಮಾರುಕಟ್ಟೆಯ ಮೇಲೆ ಯಾವ ಸಾಮಾಜಿಕ ಹತೋಟಿಯೂ ಇಲ್ಲದೇ ಅದು ಖಾಸಗಿ ವರ್ತಕರ ಕೈಯಲ್ಲಿದ್ದು ಅರಣ್ಯಗಳ ಬಳಿ ವಾಸಿಸುವ ಬಡ ಕೃಷಿಕರನ್ನು ಈ ವ್ಯಕ್ತಿಗಳು ಉಪಯೋಗಿಸಿ ಕಾಡುಗಳನ್ನು ಸೂರೆ ಮಾಡುವುದು ಇನ್ನೂ ನಡೆಯುತ್ತಿದೆ.

ನಮ್ಮ ನಾಡಿನಲ್ಲಿ ಜನಸಂಖ್ಯೆ ತೀರ ವಿರಳವಾಗಿದ್ದಾಗ ವಿಕಾಸ ಹೊಂದಿದ ಕೃಷಿ ಮತ್ತು ಪ್ರಾಣಿ ಸಾಕಾಣಿಕೆಯ ಕೆಲವು ಪದ್ಧತಿಗಳು, ಇಂದಿಗೂ ಮುಂದುವರಿದು, ನಮ್ಮ ಕಾಡು ಹುಲ್ಲುಗಾವಲುಗಳ ಅಸ್ತಿತ್ವಕ್ಕೇ ಧಕ್ಕೆತರುತ್ತಿವೆ. ಕುಮರಿ ಬೇಸಾಯ (Shifting cultivation) ಅಲೆಮಾರಿ ಎಮ್ಮೆ, ಕುರಿಸಾಕಣೆ, ಸೆಗಣಿ ಗಂಜಳಗಳಿಗಾಗಿ ಸಾವಿರಾರು ದನಕರುಗಳನ್ನು ಸಾಕಿ ಸುತ್ತಲಿನ ಅರಣ್ಯಗಳಲ್ಲಿ ಮೇಯಿಸುವುದು ಮುಂತಾದವು ಈ ಸಾಲಿಗೆ ಸೇರಿದವು. ಇಂತಹ ಪದ್ಧತಿಗಳಿಂದ ನಮ್ಮ ಕಾಡು, ಬಯಲುಗಳಲ್ಲಿ ಸಸ್ಯಗಳು ಹುಟ್ಟಿ ಪುನರಾಭಿವೃದ್ಧಿ ಹೊಂದುವುದೇ ದುಸ್ತರವಾಗಿದೆ. ಈ ರೀತಿ ನಶಿಸಿ ಹೋಗುತ್ತಿರುವ ಅರಣ್ಯಗಳನ್ನು ಮಲೆನಾಡಿನ ಪಿರಿಯಾಪಟ್ಟಣ, ಕಾಕನಕೋಟೆ,

ಲಕ್ಕವಳ್ಳಿ ಮುಂತಾದ ನಿದರ್ಶನಗಳಲ್ಲಿ ಎಲ್ಲೆಲ್ಲೂ ಕಾಣಬಹುದು.

ಜಾನವಾರು ಸಾಕಣೆಯಲ್ಲಿರುವ ಇಂತಹ ಅವೈಜ್ಞಾನಿಕ ಪ್ರವೃತ್ತಿಗಳಿಗೆ ಹಿಂದೂ ಧರ್ಮದಲ್ಲಿ ಅಡಕವಾಗಿರುವ ಗೋವುಗಳ ವಿಚಾರದ ಅಂಧಶ್ರದ್ಧೆಯೂ ಸಾಕಷ್ಟು ಸಹಾಯಕವಾಗಿದೆ. ಕಾಡಿನ ಸಸ್ಯಾಹಾರಿಗಳ ಸಂಖ್ಯೆ ಹತೋಟಿಯಲ್ಲಿದ್ದು, ಅವುಗಳ ವೈವಿಧ್ಯಮಯ ಆಹಾರ ಪದ್ಧತಿ ಸಸ್ಯರಾಶಿಯನ್ನು ಉಳಿಸಿದ್ದರೆ, ಸಾಕುಪ್ರಾಣಿಗಳು ಇಕಾಲಜಿಯ ಈ ಬಲೆಯನ್ನು ತುಂಡರಿಸಿ ನಿರ್ನಾಮಗೊಳಿಸುತ್ತಿವೆ. ನಮ್ಮ ಅವೈಜ್ಞಾನಿಕ ಮನೋಭಾವದಿಂದಾಗಿ ನಾವಿನ್ನೂ ಇದನ್ನು ಗುರುತಿಸಿಲ್ಲ.

ಅನಾದಿ ಕಾಲದಿಂದಲೂ ಮನುಷ್ಯ ಬೇಟೆಗಾರನಾಗಿದ್ದರೂ, ಬಂದೂಕು ಕೈಗೆ ಸಿಗುವ ಮೊದಲು ಬೇಟೆಯ ಶಕ್ತಿ ಸೀಮಿತವಾಗಿತ್ತು. ಹೊಟ್ಟೆಯ ಪಾಡಿಗಾಗಿ ಬೇಟೆಯಾಡುತ್ತಿದ್ದ ಆದಿವಾಸಿಗಳು ಪರಿಸರ ಸಮತೋಲವನ್ನು ಕಾಪಾಡುತ್ತಿದ್ದರು. ಬಂದೂಕು ಕೈ ಸೇರಿದ ಮೇಲೆ–ಅದೂ ಸ್ವಾತಂತ್ರ್ಯ ಸಿಕ್ಕಿದ ನಂತರದ 'ಹೆಚ್ಚು ಆಹಾರ ಬೆಳೆಯಿರಿ' (Grow more food) ಚಳುವಳಿಯ ಪರಿಣಾಮವಾಗಿ–ಬಂದೂಕುಗಳ ಸಂಖ್ಯೆ ವಿಪರೀತಕ್ಕೇರಿ ವನ್ಯಜೀವಿಗಳ ಮಾಂಸ, ಚರ್ಮ, ದಂತ ಮುಂತಾದ ವಸ್ತುಗಳಿಗಾಗಿ ನಡೆಸಿದ ಬೇಟೆ ವಿಪರೀತಕ್ಕೇರಿತು. ಇಲ್ಲೂ ಸಹ ಸ್ವಚ್ಛಂದ ಮಾರುಕಟ್ಟೆ(Free-trade)ಉಂಟುಮಾಡಿದ ಹಾನಿ ಸಾಕಷ್ಟಿದೆ. ಹೊಟ್ಟೆಪಾಡಿಗಾಗಿ ಗೌಜಲು ಹಕ್ಕಿ(Partridge) ಗಳನ್ನು ಹಿಡಿಯುತ್ತಿದ್ದ ಹುಣಸೂರಿನ ಹಕ್ಕಿಪಿಕ್ಕಿ ಜನಾಂಗ ಈಗ ಬೆಂಗಳೂರಿನ ಹೋಟೇಲಿಗರ ಕೈವಶವಾಗಿ ಗೌಜಲು ಹಕ್ಕಿಗಳ ಸಂಖ್ಯೆ ಇಳಿಮುಖವಾಗಿದೆ. ಇದೇ ರೀತಿ ಕಪ್ಪೆಕಾಲು, ಹಾವಿನ ಚರ್ಮಗಳನ್ನು ರಫ್ತುಮಾಡುವ ಮೂರ್ಖತನ, ಮುಂದುವರಿಯುತ್ತಿದ್ದು ಕೀಟಗಳ ಹಾಗೂ ಇಲಿಗಳ ಸಂಖ್ಯೆಯ ಮೇಲೆ ಇದ್ದ ನೈಸರ್ಗಿಕ ನಿಯಂತ್ರಣ ಹದಗೆಡುತ್ತಿದೆ. ಪರಿಣಾಮ, ಹೆಚ್ಚು ಹೆಚ್ಚಾಗಿ ವಿಷಯುಕ್ತವಾದ ಕೀಟ ಹಾಗೂ ಇಲಿನಾಶಕಗಳ ವ್ಯಾಪಕ ಬಳಕೆ ಎಲ್ಲಾ ಜೀವಿಗಳಿಗೂ ಅಪಾಯ ತರುವ ಸಂಭವವಿದೆ.

ಇನ್ನು ನಮ್ಮ ಅರಣ್ಯ ನಿರ್ವಹಣೆಯ ಧೋರಣೆಗಳು (Forest Management policies) ಯಾವ ತರದವು ನೋಡುವ. ಈ ಧೋರಣೆಯ ಮೊದಲ ಕೊರತೆಯೆಂದರೆ ಅರಣ್ಯ ವಸ್ತುಗಳ ಕೊಯಿಲು (Harvest); ಸಾಗಣಿಕೆ ಮತ್ತು ಮಾರುಕಟ್ಟೆ ಸಂಪೂರ್ಣವಾಗಿ ಖಾಸಗಿ ಕಾಂಟ್ರಾಕ್ಟರುಗಳ ಕೈಯಲ್ಲಿರುವುದು. ಈ ಕಾಂಟ್ರಾಕ್ಟ್ ಪದ್ಧತಿ ಹಾಗೂ ಅರಣ್ಯೋತ್ಪನ್ನಗಳ ಖಾಸಗಿ ವ್ಯವಹಾರದಿಂದ ನಮ್ಮ ಕಾಡುಗಳು ಸಾಕಷ್ಟು ಕೊಳ್ಳೆಯಾಗಿವೆ. ಹಲವು ಬಾರಿ ಅರಣ್ಯಾಧಿಕಾರಿಗಳೂ ಈ ಕೊಳ್ಳೆಯಲ್ಲಿ ಪಾಲುಗೊಳ್ಳುವುದೂ ಇದೆ. ಅರಣ್ಯೋತ್ಪನ್ನಗಳ ವ್ಯವಹಾರ ಸಾರ್ವಜನಿಕ ಹತೋಟಿಗೆ ಬರದೇ ಇವನ್ನು ತಡೆಯುವುದು ಅಸಾಧ್ಯ.

ಅರಣ್ಯ ನಿರ್ವಹಣೆ ಮಾಡುತ್ತಿರುವ ಅಧಿಕಾರಿಗಳಲ್ಲಿ, ಅದರಲ್ಲೂ ಹಳೆ ತಲೆಮಾರಿನವರಲ್ಲಿ, ಪರಿಸರದಲ್ಲಿ ಅರಣ್ಯಗಳ ಪಾತ್ರದ ಕಲ್ಪನೆಯೇ ಇದ್ದಂತಿಲ್ಲ. ಅರಣ್ಯಗಳಿಂದ ವಾರ್ಷಿಕ ಆದಾಯ ಹೆಚ್ಚು ಪಡೆಯುವ ಒಂದೇ ಗುರಿ ಅಧಿಕಾರಿಗಳ ವ್ಯಾಪಾರಿ ಮನೋಭಾವದಲ್ಲಿದೆ. ಕಾಡುಗಳು ಸದಾ ಬೆಳೆದು ಪುನರ್‌ನವೀಕೃತವಾಗುವ ಸಂಪನ್ಮೂಲಗಳು (renewable resources). ಅವುಗಳ ಬಳಕೆಯಲ್ಲಿ ಕ್ರಮೇಣ ಹೆಚ್ಚುವರಿ (Incremental growth)ಯನ್ನು ಮಾತ್ರ ಕೊಯಿಲುಮಾಡಿ ಅಸಲಿಗೇ ಏಟು ಬೀಳದಂತೆ ನಾವು ರಕ್ಷಿಸುವ ಪ್ರವೃತ್ತಿ ಇಲ್ಲ. ದಾಂಡೇಲಿ, ಭದ್ರಾವತಿಗಳಲ್ಲಿರುವ ಕಾಗದ ಕಾರ್ಖಾನೆಗಳು ಬಿದಿರನ್ನು ಕೊಯಿಲು ಮಾಡುತ್ತಿರುವ ರೀತಿ ಇದಕ್ಕೆ ಜೀವಂತ ನಿದರ್ಶನ.

ನೀಲಗಿರಿ ಮುಂತಾದ ಕೈಗಾರಿಕೆಗೆ ಉಪಯುಕ್ತವಾದ ಮರಗಳ ತೋಪುಗಳನ್ನು ಬಯಲು ಸೀಮೆಯ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಬೆಳೆಯಬಹುದಾದರೂ ಮಳೆನಾಡಿನ ವೈವಿಧ್ಯಮಯ ಅರಣ್ಯಗಳನ್ನು ನಾಶಮಾಡಿ ಇಂತಹ ಬೇಗ ಬೆಳೆಯುವ ಮರಗಳ ತೋಪುಗಳನ್ನು ಬೆಳೆಸುವುದು ಪರಿಸರ ರಕ್ಷಣೆಗೆ ಸೂಕ್ತವಲ್ಲ. ಬಿರ್ಲಾಗಳ ಸ್ವಾಮ್ಯದ "ಹರಿಹರ ಪಾಲಿಫೈಬರ್ಸ್" ಕಾರ್ಖಾನೆ, ವಿಪ್ರೋ ಬಹು ರಾಷ್ಟ್ರೀಯ ಕಂಪನಿ, ಮತ್ತಿತರ ಉದ್ದಿಮೆಗಳು ತಮಗೆ ಬೇಕಾದ ಮೆದುಮರಗಳಿಗಾಗಿ ಅರಣ್ಯಗಳನ್ನು ಆಶ್ರಯಿಸುವುದು ಏಕೆ? ನೀರಾವರಿ ಇಲ್ಲದ ಪ್ರದೇಶಗಳಲ್ಲಿ ರೈತರೊಂದಿಗೆ ದೀರ್ಘಕಾಲೀನ ಒಪ್ಪಂದ ಮಾಡಿಕೊಂಡು ಅವರು ಈ ಮರಗಳನ್ನು ಬೆಳೆಸುವಂತೆ ಉತ್ತೇಜಿಸಿದರೆ ಪರಿಸರ ರಕ್ಷಣೆಯೂ ಆಗುತ್ತದೆ, ರೈತರ ಆದಾಯವೂ ಏರುತ್ತದೆ. ಪ್ರಾಯಶಃ ಸರಕಾರವನ್ನು ಜೇಬಿನಲ್ಲಿಟ್ಟುಕೊಂಡಿರುವ ಈ ಕಂಪನಿಗಳಿಗೆ ಇದು ಕಡಿಮೆ ಲಾಭದಾಯಕವೇನೋ?

ಪೂರ್ತಿ ಕಟಾವು (Clear felling) ಪದ್ಧತಿಯನ್ನು

ಅನುಸರಿಸಿ, ಅಥವಾ ಅರಣ್ಯ ತೋಟಗಳ ಅಸಮರ್ಪಕ ನಿರ್ವಹಣೆಯಿಂದ ಭೂಮಿ ಮಳೆಗೆ ವೈಯೊಡ್ಡಿ ಸಸ್ಯಸಾರ, ಮೇಲ್ಮಣ್ಣು ತೊಳೆದು ಹೋಗಿ ಬಿಸಿಲೇಟಿಗೆ ನೆಲ ಒರಟಾಗುತ್ತಿರುವುದು(Laterization), ಸಾಮಾನ್ಯ. ಇಂತಹ ಅಸಮರ್ಪಕ ನಿರ್ವಹಣೆಯಿಂದಲೇ ಉಪದ್ರವಕಾರಿ 'ಗಾಂಧಿ ಕಳೆ' (Eupatorium-ಅಥವಾ ಕಮ್ಯುನಿಸ್ಟ್ ಕಳೆ!) ಎಲ್ಲೆಲ್ಲೂ ಹಬ್ಬುತ್ತಿರುವುದನ್ನು ಕಾಣುತ್ತಿದ್ದೇವೆ.

ಪರಿಸರದ ಇನ್ನೊಂದು ಅಂಗವಾದ ವನ್ಯಜೀವಿಗಳ ರಕ್ಷಣೆಯ ಬಗ್ಗೆ ಹೇಳದಿದ್ದರೇ ಒಳ್ಳೆಯದು. ಕಳ್ಳಬೇಟೆ, ವಿಷ ಪ್ರಯೋಗಗಳಿಂದ ನಮ್ಮ ಹೆಚ್ಚಿನ ಗುಡ್ಡಗಾಡುಗಳಲ್ಲಿ ಮತ್ತು ಬಯಲು ಸೀಮೆಯಲ್ಲಿ ವನ್ಯ ಜೀವಿಗಳು ಸಂಪೂರ್ಣವಾಗಿ ನಾಶವಾಗಿವೆ. ಅಳಿದುಳಿದ ವನ್ಯಜೀವಿಗಳು ನಾಗರಹೊಳೆ, ಬಂಡೀಪುರ, ಭದ್ರಾ ಅಭಯಾರಣ್ಯಗಳಲ್ಲಿವೆ. ಪರಿಸರದ ಬಗ್ಗೆ ಜನಸಾಮಾನ್ಯರ ಕುತೂಹಲಕೆರಳಿಸಲು ಇವುಗಳ ಉಪಯೋಗವಾಗುತ್ತಿಲ್ಲ. ಬದಲಿಗೆ ಇಸ್ಪೀಟಾಟಕ್ಕೆ, ಮೋಜಿನ ಪಿಕ್‌ನಿಕ್‌ಗಳಿಗೆ ಬರುವ ಒರಟು ಜನರ ತಂಡಗಳೇ ಅಭಯಾರಣ್ಯಗಳನ್ನು ಸೇರಿಕೊಂಡು ನಿಜವಾದ ಆಸಕ್ತರಿಗೆ ಅಥವಾ ಆಸಕ್ತಿಯುಂಟುಮಾಡಿಕೊಳ್ಳಲು ಹೋಗುತ್ತಿರುವವರಿಗೆ ಅವಕಾಶಗಳು ಕಡಿಮೆಯಾಗುತ್ತಿವೆ. ಇದೂ ಸಾಲದ್ದಕ್ಕೆ ಪಂಚತಾರಾ ವಸತಿಗೃಹಗಳನ್ನು ಅಭಯಾರಣ್ಯದ ಒಳಗೇ ಸ್ಥಾಪಿಸಲೂ ಖಾಸಗಿ ಸಂಸ್ಥೆಗಳಿಗೆ ಕಾಕನಕೋಟೆಯಲ್ಲಿ ಕರ್ನಾಟಕ ಸರ್ಕಾರ ಆಸ್ಪದ ಕೊಟ್ಟಿರುವುದು ತಿಳಿಗೇಡಿತನ.

ಪರಿಸರ ನಾಶದ ಇನ್ನೊಂದು ಮುಖ್ಯ ಕಾರಣ– ಅಭಿವೃದ್ಧಿಗಾಗಿ (Development) ನಡೆದ ಬೃಹತ್ ಯೋಜನೆಗಳು ಹಾಗೂ ಉದ್ದಿಮೆಗಳು. ಉದಾಹರಣೆಗೆ, ನಮ್ಮ ಸುತ್ತಲೇ ಕಾಳಿನದಿ, ಚಕ್ರಾ, ಶರಾವತಿ, ಕುದುರೆಮುಖ, ಕಬಿನಿ, ಹಾಸನ–ಮಂಗಳೂರು ರೈಲ್ವೇ ಮುಂತಾದ ಯೋಜನೆಗಳು. ಈ ಯಾವ ಯೋಜನೆಯನ್ನು ಕೈಗೊಳ್ಳುವಾಗಲೂ ಪರಿಸರ ನಾಶದ ಬಗ್ಗೆ ಗಮನ ಹರಿಸಿಲ್ಲ. ಈ ಯೋಜನೆಗಳಿಂದ ಬರುವ ಲಾಭ, ತಗಲುವ ಖರ್ಚು–ಇವುಗಳ ಬಗ್ಗೆ ತುಲನೆಯನ್ನು ವೈಜ್ಞಾನಿಕವಾಗಿ ಮಾಡಿಲ್ಲ. ಆದಾಯವನ್ನು ಉಬ್ಬಿಸಿ, ನಷ್ಟವನ್ನು ಕುಗ್ಗಿಸಿ, ಪರಿಸರ ನಾಶದ ಪರಿಣಾಮಗಳನ್ನು ಕಡೆಗಣಿಸಿ, ಅಸಂಖ್ಯ ಜನರನ್ನು ನಿರ್ಗತಿಕರನ್ನಾಗಿಮಾಡುವ ಇಂತಹ ಯೋಜನೆಗಳನ್ನು ಇನ್ನು ಮುಂದೆಯೂ ಉತ್ತರ ಕನ್ನಡದ ಬೇಡ್ತಿ, ಚಿಕ್ಕಮಗಳೂರಿನ ಸೋಮವಾಹಿನಿಗಳಲ್ಲಿ ಕೈಗೊಳ್ಳುತ್ತಾರಂತೆ!

ನೀರಾವರಿ ವಿದ್ಯುತ್ ಯೋಜನೆಗೆ ಜಲಾಯನ ಪ್ರದೇಶಗಳಲ್ಲಿ ಇವುಗಳಿಂದುಂಟಾದ ನಿರಾಶ್ರಿತರಿಗೆ ಪುನರ್ ವಸತಿ ಕಲ್ಪಿಸುತ್ತಿದ್ದಾರೆ! ತೀವ್ರವಾದ ಭೂಸವೆತದಿಂದ ನಮ್ಮೆಲ್ಲ ಅಣೆಕಟ್ಟುಗಳೂ ಹೂಳು ತುಂಬಿ ನಿರುಪಯುಕ್ತವಾಗುತ್ತಿರುವುದು ಅಧ್ಯಯನಗಳಿಂದ ತಿಳಿದುಬಂದಿದೆ. ಅನೇಕ ಅಣೆಕಟ್ಟುಗಳ ಉಪಯುಕ್ತ ಜೀವಮಾನ ಅರ್ಧದಷ್ಟಕ್ಕಿಳಿದಿದೆ! ಇವೆಲ್ಲಾ ನಿರುಪಯುಕ್ತವಾದರೆ, ಮುಂದೆ ನೀರಾವರಿ ಕೃಷಿಗಳ ಗತಿಯೇನು ಎಂದು ನಾವು ಯೋಚಿಸಿದ್ದೇವೆಯೇ?

ಅಂತೆಯೇ ಉದ್ದಿಮೆಗಳಲ್ಲೂ ತಮ್ಮ ಹಾನಿಕಾರಕ ಪರಿಣಾಮಗಳನ್ನು ಸುತ್ತಲಿನ ಪರಿಸರದ ಮೇಲೆ ಹೇರಿ, ಲಾಭದ ಲೆಕ್ಕಾಚಾರವನ್ನೇ ನೋಡುವ ಹರಿಹರದ ಪಾಲಿಫೈಬರ್ಸ್, ಬಿಣಗಾದ ಕಾಸ್ಟಿಕ್ ಸೋಡಾ ಫ್ಯಾಕ್ಟರಿಗಳಂತಹವೂ ಹಲವಾರು ಇವೆ. ಔದ್ಯಮೀಕರಣ, ಕೃಷಿಗಳಿಗಾಗಿ ನಡೆಯುವ ಯೋಜನೆಗಳನ್ನು ಕೂಲಂಕಷ ಪರಿಶೀಲನೆಯಿಲ್ಲದೇ ಕೈಗೊಳ್ಳುವುದು ಅಪರಾಧವಲ್ಲವೆ?

ಕುದುರೆಮುಖದಂತಹ ಯೋಜನೆಗಳು ನಮ್ಮ ಕಚ್ಚಾ ಸಂಪನ್ಮೂಲಗಳನ್ನು ರಪ್ತುಮಾಡುವಂತಹವು. ತೀರ ಅನಿವಾರ್ಯವಾದಾಗ ಮಾತ್ರ ಇಂತಹವನ್ನು ಕೈಗೊಳ್ಳಬೇಕೇ ಹೊರತು ಇಂತಹ ಯೋಜನೆಗಳು ಪ್ರಗತಿಯ ಸಂಕೇತಗಳೆಂದು ತಿಳಿಯುವುದು ಸರಿಯಲ್ಲ. ಕುದುರೆಮುಖ ಯೋಜನೆ ಮುಗಿಯೊಡನೇ ಇಂತಹ ಇನ್ನೂ ಕೆಲವು ಯೋಜನೆಗಳನ್ನು ಬಾಬಾ ಬುಡನ್‌ಗಿರಿ, ಕೊಟಚಾದ್ರಿ ಶಿಖರಗಳಲ್ಲೂ ಕೈಗೊಳ್ಳುವ ಆತುರ ತೋರಿದ್ದು–ಇದನ್ನು ನಮ್ಮ ರಾಜಕಾರಣಿಗಳು "ಮಲೆನಾಡು ಅಭಿವೃದ್ಧಿ" ಎಂದು ಸ್ವಾಗತಿಸಿದ್ದು–ನಮ್ಮ ಅವಿವೇಕದ ಚಿಹ್ನೆ. ಮುಂದೆ ಅಂತರಾಷ್ಟ್ರೀಯ ಮಾರುಕಟ್ಟೆಯ ಇಕ್ಕಟ್ಟಿನಿಂದ ಇವುಗಳನ್ನು ಕೈಬಿಡಬೇಕಾಗಿ ಬಂದದ್ದರಿಂದ ಒಳಿತೇ ಆಯಿತು ಎಂದು ನನ್ನ ಅಭಿಪ್ರಾಯ.

ನಾವು ಈವರೆಗೆ ಅನುಸರಿಸಿಕೊಂಡು ಬಂದ ಸಾಮಾಜಿಕ ಹಾಗೂ ಆರ್ಥಿಕ ನೀತಿಗಳಿಂದ, ಕೃಷಿ ಕೈಗಾರಿಕೆಗಳಲ್ಲಿ ಮುಂದೊತ್ತಿದ ಧೋರಣೆಯಿಂದ ಸ್ವಲ್ಪ ಮಟ್ಟಿನ ಪ್ರಗತಿ ಸಾಧಿಸಿದ್ದೇವಾದರೂ ಇದಕ್ಕಾಗಿ ನಾವು ನಮ್ಮ ಪರಿಸರವನ್ನು ಬಲಿಕೊಟ್ಟಿದ್ದೇವೆ. ಇದರ ಪರಿಣಾಮ ಏರುತ್ತಿರುವ ಜನಸಂಖ್ಯೆ (ದನ ಸಂಖ್ಯೆ ಸಹಾ!). ನಿರಕ್ಷರತೆ. ಬಡತನ, ನಿರುದ್ಯೋಗಗಳು. ಇವುಗಳ ಹಿನ್ನೆಲೆಯಲ್ಲಿ ಬರಗಾಲ, ಪ್ರವಾಹಗಳು, ಸೊರಗಿದ ಅರಣ್ಯ, ಹುಲ್ಲುಗಾವಲುಗಳು, ಸಾರ ಕಳೆದುಕೊಂಡ ಭೂಮಿ, ಫಲವತ್ತಾದ ಭೂಮಿಯ

ನಾಶದಿಂದ ಹೆಚ್ಚುತ್ತಿರುವ ಮರುಭೂಮೀಕರಣ (Desertification)-ಭೀಕರ ಸಮಸ್ಯೆಗಳಾಗಿ ಎದ್ದು ನಿಂತಿವೆ. ಜೊತೆಗೆ, ಪರಿಸರ ಮಾಲಿನ್ಯ, ಸಂಪನ್ಮೂಲಗಳ ಕೊರತೆ ತಲೆದೋರಿವೆ.

ಪರಿಹಾರವೇನು ?

ಪರಿಸರ ನಾಶವನ್ನು ತಡೆಗಟ್ಟಿ ನಮ್ಮ ಮಾನವ ಸಮಾಜದ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳಬೇಕಾದರೆ ನಮ್ಮ ಕೆಲವು ಮೂಲಭೂತ ಧೋರಣೆಗಳಲ್ಲಿ ಮಾರ್ಪಾಟಾಗಬೇಕು.

ಹಿಂದುಳಿದ ನಮ್ಮ ದೇಶ ಮುಂದುವರಿದು ದಾರಿದ್ರ್ಯವನ್ನು ತೊಲಗಿಸಲು ಔದ್ಯಮೀಕರಣ ಹೆಚ್ಚಬೇಕು. ಆದರೆ ಇದು ಪರಿಸರಕ್ಕೆ ಹೊಂದಿಕೊಳ್ಳುವಂತಿದ್ದು ಸೂಕ್ತ ತಂತ್ರಜ್ಞಾನ ಅಡಕವಾಗಿರಬೇಕು. ಯೋಜನೆ, ಉದ್ಯಮಗಳನ್ನು ಕಾರ್ಯಗತ ಮಾಡುವಾಗ ಪರಿಸರ ವಿಜ್ಞಾನಿಗಳು, ಜೀವಶಾಸ್ತ್ರಜ್ಞರು ಮುಂತಾದವರಿಗೆ ಇಂಜಿನಿಯರು, ನಿರ್ವಾಹಕರುಗಳಿಗಿರುವಷ್ಟೇ ಪ್ರಾಮುಖ್ಯತೆಕೊಡಬೇಕು. ಬದಲಿಗೆ, ಉದ್ದಿಮೆಗಳೇ ಬೇಡ, ಏರುತ್ತಿರುವ ಜನಸಂಖ್ಯೆಯೆಲ್ಲಾ ಕೃಷಿಯಲ್ಲೇ ನಿರತರಾಗಿರಲಿ ಎಂಬ ವಿಚಾರಸರಣಿ ಬಡತನವನ್ನೂ ಹೋಗಲಾಡಿಸದು; ಜೊತೆಗೇ, ಪರಿಸರ ನಾಶವನ್ನೂ ತೀವ್ರಗೊಳಿಸೀತು.

ಕೃಷಿಕರಲ್ಲಿ ಕುಟುಂಬದ ಗಾತ್ರ, ಜಾನುವಾರಗಳ ಸಂಖ್ಯೆ, ಮುಂತಾದುವುಗಳ ಬಗ್ಗೆ ಇರುವ ಅಂಧ ಶ್ರದ್ಧೆ ನಿವಾರಣೆಯಾಗಬೇಕು. ಭೂ ಸುಧಾರಣೆ ಪರಿಣಾಮಶಾಲಿಯಾಗಿ ಕಾರ್ಯಗತವಾಗಬೇಕು. ಈ ಧೋರಣೆಗಳು ಪರಿಸರದ ಮೇಲಿನ ಒತ್ತಡವನ್ನು ಕೆಲಮಟ್ಟಿಗೆ ನಿವಾರಿಸುತ್ತವೆ.

ನಮ್ಮ ಅರಣ್ಯ, ವನ್ಯಜೀವಿಗಳು, ಜಲಚರಗಳು, ತೈಲ, ಗಣಿಗಳು ಮುಂತಾದ ಸಂಪನ್ಮೂಲಗಳು ಸಾರ್ವಜನಿಕ ಹತೋಟಿಯಲ್ಲಿದ್ದರೆ, ಕ್ಷಣಿಕ ಲಾಭಕ್ಕಾಗಿ ಅವುಗಳು ಸೂರೆಯಾಗುವ ಸಂಭವ ಕಡಿಮೆಯಾದೀತು.

ಈ ಮೂಲಭೂತ ಧೋರಣೆಗಳನ್ನು ಕಾರ್ಯರೂಪಕ್ಕಿಳಿಸಿ, ಸಾಧಿಸಲು, ಯೋಜನಾಬದ್ಧ, ಕೇಂದ್ರೀಕೃತ ಬೆಳವಣಿಗೆ ಅಗತ್ಯ. ಈ ಕಾರ್ಯಕ್ರಮಗಳನ್ನು ನಿರ್ವಹಿಸುವ ನೌಕರಶಾಹಿ ಮತ್ತು ರಾಜಕಾರಣಿಗಳು ದೂರದೃಷ್ಟಿಯಿಂದ ಕೆಲಸಮಾಡಲು, ಅವರ ಮೇಲೆ ಜನಾಭಿಪ್ರಾಯದ ಒತ್ತಡ ಸದಾ ಇರುವಂತಹ ನೈಜ ಪ್ರಜಾಪ್ರಭುತ್ವವಾದೀ ವ್ಯವಸ್ಥೆಯೂ ಅಷ್ಟೇ ಅಗತ್ಯ.

ಇದರ ಬದಲಾಗಿ, ಸಂಪನ್ಮೂಲಗಳ ಬಳಕೆಗೆಯಾವ ನೌಕರಶಾಹಿಯ ನಿಯಂತ್ರಣ ಬೇಡ, ಅದು ಈಗಿಂದೀಗಲೇ "ಜನತೆ" ಯಿಂದಲೇ ನಡೆಯಲಿ ಎಂಬ, ಬಾಲಿಶವಾದ ತರ್ಕ ನಮ್ಮ ಸಮಾಜದ ವರ್ಗವೈರುಧ್ಯಗಳನ್ನು ಕಡೆಗಣಿಸುತ್ತದೆ. ಸಂಪನ್ಮೂಲಗಳ ಬಳಕೆಯ ಪ್ರಶ್ನೆಯಲ್ಲಿ ಇಂತಹ "ಎಲ್ಲಾರಿಗೂ ಎಲ್ಲದೂ" (Free for all) ಪರಿಸ್ಥಿತಿ ಬಂದಲ್ಲಿ, ನಮ್ಮ ಹಳ್ಳಿ ಪೇಟೆಗಳಲ್ಲಿ ಮೇಲುಗೈ ಪಡೆದ ದೊಡ್ಡ ರೈತರೂ, ಕಾಂಟ್ರಾಕ್ಟದಾರರು, ವರ್ತಕರು ಮತ್ತು ಉದ್ಯಮಿಗಳೂ ನೂರು ಪಾಲು ಕೊಳ್ಳೆಹೊಡೆದು ಬಡವರಿಗೆ ಒಂದು ಪಾಲು ಸಿಗಲಾರದು, ಎಂದು ನನ್ನ ಅಭಿಪ್ರಾಯ.

ಪರಿಸರ ನಾಶದ ಸಮಸ್ಯೆಯನ್ನೆದುರಿಸಲು ಇಂತಹ ಪರಿಣಾಮಕಾರಿ ಸಾಮಾಜಿಕ ಧೋರಣೆಗಳನ್ನು ಮುಂದೊತ್ತುವ ಸಂರಕ್ಷಣಾಚಳುವಳಿ ನಮ್ಮಲ್ಲಿ ಜನಪ್ರಿಯವಾಗುತ್ತಿದೆಯೇ ಎಂಬ ಪ್ರಶ್ನೆಯನ್ನು ಪರಿಶೀಲಿಸುವುದು ಮುಂದಿನ ಕೆಲಸ.

ಸಂರಕ್ಷಣಾ ಪ್ರಜ್ಞೆ ; ಜನಪ್ರಿಯ ಚಳುವಳಿಗಳು

ಪಶ್ಚಿಮದೇಶಗಳಿಂದ ಬೀಸಿದ ಗಾಳಿಯ ಪರಿಣಾಮವಾಗಿ ನಮ್ಮ ಮಧ್ಯಮ ವರ್ಗದ ಜನರಲ್ಲಿ ಪರಿಸರ ಸಂರಕ್ಷಣೆಯ ಪ್ರಜ್ಞೆ ಬೆಳೆಯುತ್ತಿದೆ. 'ಪ್ರಜಾವಾಣಿ' 'ಕನ್ನಡಪ್ರಭ' ಗಳಂತಹ ಜನಪ್ರಿಯ ದೈನಿಕಗಳಲ್ಲಿ 'ಕಳ್ಳಬೇಟೆ' 'ಅಭಯಾರಣ್ಯ' ಕಾಡುನಾಶ'ಗಳ ಬಗ್ಗೆ ಬರುವ ಲೇಖನ, ಪತ್ರವ್ಯವಹಾರಗಳು ಈ ದಿಕ್ಕಿನಲ್ಲಿ ಆಶಾದಾಯಕ ಸಂಕೇತಗಳಾಗಿವೆ. ವಿಶ್ವ ವನ್ಯಜೀವಿ ನಿಧಿ (World wild life fund) ಯಂತಹ ಸಂಸ್ಥೆಗಳೂ ಮಧ್ಯಮ ವರ್ಗದ ಜನರ ನಡುವೆ ಕಾರ್ಯೋನ್ಮುಖವಾಗಿವೆ. ಇವೆಲ್ಲವುಗಳ ಫಲವಾಗಿ ನಮ್ಮ ಅಧಿಕಾರಶಾಹಿಯಲ್ಲಿ ಈ ಬಗ್ಗೆ ಅಷ್ಟಿಷ್ಟು ತಿಳುವಳಿಕೆ ಉಂಟಾಗಿರುವುದು ನಿಜ. ನನ್ನ ಅನುಭವದಲ್ಲೇ, ಕಳೆದ ಹದಿನೈದು ವರ್ಷಗಳಲ್ಲಿ ಕರ್ನಾಟಕ ಅರಣ್ಯ ಇಲಾಖೆಯ ಹೊಸ ತಲೆಮಾರಿನ ಅಧಿಕಾರಿಗಳಲ್ಲಿ ಈ ಬಗ್ಗೆ ತಿಳುವಳಿಕೆ ಸಾಕಷ್ಟು ಬೆಳೆದಿದೆ.

ನಾನು ಕಂಡಂತೆ ಈ ಹೊಸ ಪ್ರಜ್ಞೆಗೆ ಆಕ್ಷೇಪಗಳೆಂದರೆ ಬುದ್ಧಿಜೀವಿಗಳೆಂದು ಪರಿಗಣಿಸಲ್ಪಟ್ಟ ಕಾಲೇಜು ಅಧ್ಯಾಪಕ ವರ್ಗವೆನ್ನಬಹುದು! ನಮ್ಮ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಜೀವಶಾಸ್ತ್ರ, ಜೆನೆಟಿಕ್ಸ್, ಪರಿಸರ ವಿಜ್ಞಾನ ಇಲಾಖೆಗಳಲ್ಲಿರುವ ಸಂಶೋಧಕರು, ಶಿಕ್ಷಕರು ಈ ಬೃಹತ್ ಸಮಸ್ಯೆಯ ಯಾವುದೇ ಅಂಶವನ್ನು ಅಭ್ಯಾಸಮಾಡಲು ಹಿಂಜರಿದು (ಬಿಸಿಲು, ಮಳೆಗಳಿಗೆ ಹೆದರಿರಬೇಕು!)-ತಮ್ಮ

ಕರ್ಚಿ ಕೊಠಡಿಗಳಿಗೆ ಅಂಟಿಕೊಂಡು ಕಪ್ಪೆ, ಇಲಿ, ಜಿರಳೆಗಳನ್ನು ಸಿಗಿಯುತ್ತಾ, ಪ್ರೌಢ ಪ್ರಬಂಧಗಳ ಉತ್ಪಾದನೆ ಮಾಡುತ್ತಿರುವುದು ವಿಷಾದನೀಯ. (ಭಾರತೀಯ ವಿಜ್ಞಾನ ಸಂಸ್ಥೆಯ ಡಾ. ಗಾಡಗೀಳ, ಸೆಯಿಂಟ್ ಜೋಸೆಪ್ಸ್ ಕಾಲೇಜಿನ ಫಾದರ್ ಸಾಲ್ಡಾನಾ ರಂತಹ ಬೆರಳೆಣಿಕೆಗೆ ಸಿಗುವಂತಹ ಕೆಲ ಮಂದಿ ಮಾತ್ರ ನೈಜಪರಿಸರ, ಇಕಾಲಜಿಗಳಲ್ಲಿ ಸಂಶೋಧನೆ ನಡೆಸಿದ್ದಾರೆ).

ಅದೇನಿದ್ದರೂ, ಪರಿಸರ ನಾಶದ ಬೃಹತ್ ಸಮಸ್ಯೆಯ ನಿವಾರಣೆಯಲ್ಲಿ ಮಧ್ಯಮ ವರ್ಗದ ಪಾತ್ರ ಸೀಮಿತ ವಾದದ್ದು. ಈ ಸಮಸ್ಯೆಗೆ ಯಾವುದೇ ಸರಳ ಪರಿಹಾರ ವಿಲ್ಲವೆಂದೇ ನನ್ನ ಅಭಿಪ್ರಾಯ. ಆದರೆ ಹಳ್ಳಿಗಾಡಿನ ಅಸಂಖ್ಯಾತ ಕೃಷಿಕರು, ಕಾರ್ಮಿಕರು ಈ ಚಳುವಳಿಯಲ್ಲಿ ಭಾಗವಹಿಸದಿದ್ದರೆ ಪರಿಸರ ರಕ್ಷಣೆ ಅಸಾಧ್ಯ. ಹಿಮಾಚಲದ ಸುಂದರಲಾಲ್ ಬಹುಗುಣರ "ಚಿಪ್ಕೋ" ಚಳುವಳಿ, ಉತ್ತರ ಕನ್ನಡದ ಬೇಡ್ತಿ ಯೋಜನೆ ವಿರೋಧಿ ಚಳುವಳಿಯಂತಹ ಜನಪ್ರಿಯ ಆಂದೋಲನಗಳು ಇದಕ್ಕೆ ನಿದರ್ಶನ.

ಪರಿಸರ ನಾಶದ ಬೆನ್ನಿಗೇ ಅಂಟಿಕೊಂಡು ಬಂದ ದಾರಿದ್ರ್ಯ ನಿರುದ್ಯೋಗಗಳ ಬಿಸಿತಟ್ಟಿ, ಇಂದು ಅನೇಕ ಜನಪ್ರಿಯ ಸಂಘಟನೆಗಳು, ಚಳುವಳಿಗಳು ತಲೆ ಎತ್ತುತ್ತಿವೆ. ರೈತರ, ಕಾರ್ಮಿಕರ, ವಿದ್ಯಾರ್ಥಿಗಳ, ಮಹಿಳೆಯರ. ಆದಿವಾಸಿಗಳ, ದಲಿತರ ಹಾಗೂ ಸಾಂಸ್ಕೃತಿಕ ಸಮಸ್ಯೆಗಳನ್ನೆದುರಿಸಿ ಹೋರಾಡುವ ಈ ಹಲವು ಸಂಘಟನೆಗಳು ಸಕ್ರಿಯವಾಗಿರುವುದು ಸ್ವಾಗತಾರ್ಹ ಹಾಗೂ ಪರಿಸರ ರಕ್ಷಣೆಯ ಆಂದೋಲನವಲ್ಲಿ ಅಗತ್ಯವಾದ ಜನ ಸಾಮಾನ್ಯರ ಪಾಲುಗಾರಿಕೆಯ ದೃಷ್ಟಿಯಿಂದ ಅನುಕೂಲಕರ.

ಆದರೆ ನನ್ನ ಅನುಭವಕ್ಕೆ ತಿಳಿದಂತೆ, ಈ ಎಲ್ಲಾ ಚಳುವಳಿಗಳ ನಾಯಕತ್ವವೂ ಪರಿಸರ ನಾಶವನ್ನು ಈಗಲಾದರೂ ತಡೆಗಟ್ಟದಿದ್ದರೆ ಮುಂದೆ ಅನಾಹುತವಾದೀತು ಎಂಬ ಬಗ್ಗೆ ಕಾಳಜಿ ವಹಿಸಿಲ್ಲ. ಪರಿಸರ ನಾಶದ ಪ್ರತಿಕೂಲ ಪರಿಣಾಮಗಳಿಗೆ ಸಿಲುಕಿ ನುಗ್ಗಾಗುವವರು ತಮ್ಮ ಹಿಂಬಾಲಕರಾದ ಜನಸಾಮಾನ್ಯರೇ ಎಂಬ ಕಟು ಸತ್ಯವನ್ನು ಅವರು ತಿಳಿಯಲೂ ಪ್ರಯತ್ನಿಸಿಲ್ಲ–ತಮ್ಮ ಬೆಂಬಲಿಗರಿಗೆ ತಿಳಿಸಲೂ ಪ್ರಯತ್ನಿಸಿಲ್ಲ. ಈ ಕಾರಣದಿಂದಲೇ ಈ ಎಲ್ಲಾ ಚಳುವಳಿಗಳು ತಮ್ಮ ಮುಂದಿರುವ ಸಮೀಪದ ಆರ್ಥಿಕ ಗುರಿಗಳನ್ನೇ ಮುಂದಿಟ್ಟು ಮುನ್ನುಗ್ಗುತ್ತಿವೆ. ಇದು ತೀರ ವಿಷಾದಕರವಾದ ಸಂಗತಿ.

ಒಂದು ಉದಾಹರಣೆಯನ್ನು ನೋಡೋಣ. ಮಲೆನಾಡಿನ ಅರಣ್ಯನಾಶದ ವಿವಿಧ ಕಾರಣಗಳನ್ನು ಈಗಾಗಲೇ ಕೂಲಂಕುಶವಾಗಿ ಪರಿಶೀಲಿಸಿದ್ದೇವೆ. ಇದರಿಂದ ಮುಂದಕ್ಕೆ ಬವಣೆ ಪಡುವವರೂ ರೈತರು. ಆದರೆ ರೈತ ಚಳುವಳಿಯ ಕೆಲವು ನಾಯಕರನ್ನು ಈ ಬಗ್ಗೆ ಪ್ರಶ್ನಿಸಿದರೆ ಎಲ್ಲಾ ಅರಣ್ಯನಾಶಕ್ಕೂ ಅಧಿಕಾರಿಗಳೂ, ಕಾಂಟ್ರಾಕ್ಟರರೂ ಕಾರಣ ಎಂಬ ಹಾರಿಕೆಯ ಉತ್ತರ ಸಿಗುತ್ತದೆ. ವಾದಕ್ಕಾಗಿ ಈ ಹುಂಬ ಉತ್ತರವನ್ನು ಒಪ್ಪಿದರೂ ಈ ಕಳ್ಳ ಸಾಗಾಣಿಕೆಯನ್ನು ತಡೆಯುವುದು ರೈತ ಚಳುವಳಿಯು, ತನ್ನ ಹಿತ ದೃಷ್ಟಿಯಿಂದಲೇ ಕೈಗೊಳ್ಳಬೇಕಾದ ಕ್ರಮವಲ್ಲವೇ? ಬದಲಿಗೆ ತಮಗೂ ಅಪರಿಮಿತ ಅರಣ್ಯ ಸೌಲಭ್ಯಗಳನ್ನು ಯಾವ ನಿಯಂತ್ರಣವೂ ಇಲ್ಲದೇ ಕೊಡಬೇಕೆಂದು ಒತ್ತಾಯಿಸುವುದು ಈ ನಾಯಕತ್ವದ ಸಂಕುಚಿತ, ದೂರದೃಷ್ಟಿಯಿಲ್ಲದ ಮನೋವೃತ್ತಿಯನ್ನು ತೋರಿಸುತ್ತದೆ. ಹೆಚ್ಚು ಕಡಿಮೆ, ಕಾರ್ಮಿಕ ಚಳುವಳಿಯೂ ಪರಿಸರ ನಾಶದ ಬಗ್ಗೆ ಹೊಂದಿರುವ ಧೋರಣೆಯೂ ಇದೇ ತರಹದ್ದು.

ಆಶ್ಚರ್ಯವೆಂದರೆ, ಈ ನಾಯಕತ್ವದಲ್ಲಿ ಭೌತ ಪರಿಸರವೇ ಎಲ್ಲ ಸಾಮಾಜಿಕ ವ್ಯವಸ್ಥೆಯ ತಳಹದಿ, ವೈಜ್ಞಾನಿಕ ಸಮಾಜವಾದವೇ ತಮ್ಮಗುರಿ ಎಂದು ಮಂತ್ರ ಪಠಣ ಮಾಡುತ್ತ, ಈ 'ತಳಹದಿ'ಯೇ ಬುಡಮೇಲಾಗುವುದನ್ನು ನಿರ್ಲಕ್ಷಿಸುತ್ತಿರುವ "ಸಮಾಜವಾದಿ"ಗಳೂ ಇದ್ದಾರೆ. ತಾವು ಮುಂದಿಡುತ್ತಿರುವ "ಸೂಕ್ತ ಬೆಂಬಲ ಬೆಲೆ", "ಹೆಚ್ಚು ವೇತನ", "ಕಡಿಮೆ ತೆರಿಗೆ" ಮುಂತಾದ ಬೇಡಿಕೆಗಳು ಪರಿಸರ ರಕ್ಷಣೆಯ ಕಾರ್ಯಕ್ರಮಗಳೊಂದಿಗೆ ಹಾಸುಹೊಕ್ಕಾಗಿರದಿದ್ದರೆ ಅವು ಕಾರ್ಯಸಾಧ್ಯವಲ್ಲದ ವಿಡಂಬನೆಗಳಾಗುತ್ತವೆ ಎಂಬ ತಿಳುವಳಿಕೆ ಮೂಡಿ ಬರುವುದು ಯಾವಾಗ?

ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆ, ಜನತಾಗಳು ಕೇವಲ ಬಾಯಿ ಮಾತಿನ ಉಪಚಾರಕ್ಕೆ ತಮ್ಮ ಪ್ರಣಾಳಿಕೆಗಳಲ್ಲಿ 'ಇಕಾಲಜಿ' 'ಪರಿಸರ'ಗಳ ಬಗ್ಗೆ ಗಮನ ಕೊಟ್ಟಿವೆ.

ಇನ್ನು ದುಡಿಯುವವರ ಕಮ್ಯೂನಿಸ್ಟ್ ಪಕ್ಷಗಳು, ದೇಶಭಕ್ತರ ಭಾ. ಜ. ಪಕ್ಷ ಮುಂತಾದವುಗಳ ಪ್ರಣಾಳಿಕೆಗಳನ್ನು ಓದಿದರೆ ಇಕಾಲಜಿ, ಪರಿಸರಗಳ ಸಮಸ್ಯೆಗಳೇ ಇಲ್ಲವೆಂಬ ಭಾವನೆ ಬರುತ್ತದೆ. ಪಕ್ಷೇತರವಾದ ಇತರ ಸಾಮೂಹಿಕ ಚಳುವಳಿಗಳ ಬೇಡಿಕೆ ಪಟ್ಟಿಗಳನ್ನು ನೋಡಿದರೂ ಇದೇ ದಿವ್ಯ ನಿರ್ಲಕ್ಷ್ಯ ಕಾಣುತ್ತದೆ!

ಇಂತಹ ತಿಳುವಳಿಕೆ ಇಲ್ಲದೇ ಹೋದಲ್ಲಿ ಇವುಗಳೆಲ್ಲಾ ಪ್ರಗತಿಗಾಗಿ, ವೈಜ್ಞಾನಿಕವಾಗಿ ಹೋರಾಟ ನಡೆಸಲಾರವು.

ಬದಲಾಗಿ, ಇವೆಲ್ಲಾ ತಕ್ಷಣದ ಬೇಡಿಕೆಗಳಿಗೆ, ಕ್ಷಣಿಕ ಜನಪ್ರಿಯತೆಗೆ ಜನ ಸಮೂಹವನ್ನು ತಪ್ಪುದಾರಿಗೆ ತಳ್ಳುವ, ದೂರ ದೃಷ್ಟಿಯಿಂದ ನೋಡಿದರೆ, ಜನ ವಿರೋಧಿ ಆಂದೋಲನಗಳಾಗಿ ಬೆಳೆದು ಬರುವ ಅಪಾಯ ಕೂಡ ಇದೆ. ಆದ್ದರಿಂದ. 'ಇಕಾಲಜಿ' ಮನೆ ಮಾತಾದರೆ ಸಾಲದು. ನಮ್ಮೆಲ್ಲರ ಎಲ್ಲ ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಅಡಕವಾಗಿದ್ದು, ಯಾವುದೇ ರಾಜಕೀಯ ನಿಷ್ಠೆಯನ್ನು ಮೀರುವ ಮೂಲಭೂತ 'ಐಡಿಯಾಲಜಿ' ಯಾಗಬೇಕು. ಇಲ್ಲವಾದರೆ, ಮೆಸಪೊಟೇಮಿಯಾ, ಹರಪ್ಪಾಗಳ ನಾಗರಿಕತೆಗೆ ಬಂದ ಪಾಡು ನಮ್ಮ ಸಮಾಜಕ್ಕೂ ಬರುತ್ತದೆ. ಪರಿಸರ ವಿಷಮವಾದಾಗ ನಶಿಸಿ ಹೋದ ಬಳ್ಳಾರಿ ಸೀಮೆಯ ಚೀತಾಗಳಂತೆ ನಾವೂ ನಿರ್ಗಮಿಸುತ್ತೇವೆ.

ಶತ ಶತಮಾನಗಳ ಹಿಂದೆ ನಮ್ಮ ಪೂರ್ವಜರಾದ ಆದಿವಾಸಿಗಳಂತೆ, ಬೆಟ್ಟಗಾಡುಗಳೂ ಹುಲಿ, ಜಿಂಕೆಗಳೂ ನಮ್ಮ ಬಂಧುಗಳೆಂದು ತಿಳಿಯುವ ಹಿರಿತನ ನಮ್ಮಲ್ಲಿ ಬೆಳೆದು ಬಂದೀತೆ ?

ಇಕಾಲಜಿ ಮತ್ತು ಅನಾರ್ಕಿಸಂ

ಜೀವ ಮಂಡಳದ ಶಾಸ್ತ್ರಜ್ಞನು ಜೀವ ವ್ಯೂಹದ ಅವಕಾಶವನ್ನು ಹೆಚ್ಚಿಸಲು ಪ್ರಯತ್ನಿಸಿ ಆ ಮೂಲಕ ಜೀವಿಗಳ ನಡುವಿನ ಸ್ವತಂತ್ರ ಕೊಡುಕೊಳ್ಳುವಿಕೆಯನ್ನು ವೃದ್ಧಿಸಲು ಆಶಿಸುವಂತೆ, ಅನಾರ್ಕಿಸ್ಟನು ಸಾಮಾಜಿಕ ಅನುಭವದ ಅವಕಾಶವನ್ನು ಹೆಚ್ಚಿಸಲೂ ಮಾನವ ಬೆಳವಣಿಗೆಯ ತೊಡಕುಗಳನ್ನು ಹೋಗಲಾಡಿಸಲೂ ಆಶಿಸುತ್ತಾನೆ. ಅನಾರ್ಕಿಸಂ ಸರ್ಕಾರವಿಲ್ಲದ ಸಮಾಜ ಮಾತ್ರವಲ್ಲ; ಸಮತೋಲದ ಸಮಾಜ. ಅದು ಗ್ರಾಮೀಣ ಮತ್ತು ಪಟ್ಟಣದ ಬದುಕಿಗೂ. ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳಿಗೂ, ದಮನಗೊಳ್ಳದ ಐಂದ್ರಿಯಕತೆಗೂ ಸ್ವನಿರ್ದೇಶಿತ ಆಧ್ಯಾತ್ಮಿಕತೆಗೂ, ಸಮುದಾಯದ ಒಗ್ಗಟ್ಟಿಗೂ ವೈಯಕ್ತಿಕ ಬೆಳವಣಿಗೆಗೂ, ದೇಸೀಯ ಅನನ್ಯತೆಗೂ ಜಾಗತಿಕ ಸೋದರಿಕೆಗೂ. ಸಹಜಸ್ಫೂರ್ತಿಗೂ ಸ್ವಶಿಸ್ತಿಗೂ, ಶ್ರಮವನ್ನು ಕಡಿಮೆ ಮಾಡುವುದಕ್ಕೂ ಕುಶಲ ಕೆಲಸದ ಪ್ರೋತ್ಸಾಹಕ್ಕೂ ಏಕಕಾಲದಲ್ಲಿ ಮನುಷ್ಯನನ್ನು ಒಳಪಡಿಸಿ ಅವನ ಬೆಳವಣಿಗೆಯನ್ನು ಪ್ರಚೋದಿಸುತ್ತದೆ. ನಮ್ಮ ಛಿದ್ರಮನಸ್ಕ ಸಮಾಜದಲ್ಲಿ ಈ ಗುರಿಗಳು ಬೇರೆ ಬೇರೆಯೆಂದೂ, ಪರಸ್ಪರ ವಿರೋಧಿಯೆಂದೂ ಸಹ ಪರಿಗಣಿಸಲ್ಪಟ್ಟಿವೆ. ಪೇಟೆ ಹಳ್ಳಿಗಳ ವಿಂಗಡನೆ, ಶ್ರಮದ ವಿಶೇಷೀಕರಣ, ಮನುಷ್ಯನ ಯಂತ್ರೀಕರಣ—ಈ ಬಗೆಯ ಆಧುನಿಕ ಸಮಾಜವ್ಯವಸ್ಥೆಯಿಂದಾಗಿ ಇವು ದ್ವಂದ್ವಗಳೆಂಬಂತೆಯೂ ಕಾಣುತ್ತಿವೆ. ಅನಾರ್ಕಿಸ್ಟ್ ಸಮಾಜದ ಭೌತಿಕ ರಚನೆ ಹೇಗಿರುತ್ತದೆಂದು ಸ್ಪಷ್ಟಗೊಳಿಸಿಕೊಳ್ಳದೆ ಈ ವಿರೋಧಗಳ ಪರಿಹಾರ ವಾಗುವುದೆಂದು ತಿಳಿಯುವುದು ಹುಚ್ಚಾಗುತ್ತದೆ........

ಅನಾರ್ಕಿಸ್ಟ್ ಸಮಾಜ ವಿಕೇಂದ್ರಿಕೃತ ಸಮಾಜವಾಗಬೇಕು: ಮನುಷ್ಯ ನಿಸರ್ಗಗಳ ನಡುವಿನ ಸಾಮರಸ್ಯಕ್ಕಾಗಿ ಮಾತ್ರವಲ್ಲ ; **ಈ ಸಾಮರಸ್ಯದಲ್ಲಿ ಹೊಸದೊಂದು ಆಯಾಮವನ್ನು ಸೇರಿಸುವುದಕ್ಕಾಗಿ ಕೂಡ**. ಒಂದು ನಗರದ ವ್ಯಾಪ್ತಿ ಮತ್ತು ಜನಸಂಖ್ಯೆ ಅದರ ಪೌರರ ನಡುವೆ ಮುಖಾಮುಖಿ ಸಂಬಂಧವನ್ನೂ, ಪರಿಚಯವನ್ನೂ ಅಸಾಧ್ಯವಾಗುವಷ್ಟು ಬೆಳೆದಲ್ಲಿ ಹಿಂದೆ ಗ್ರೀಕರು ದಂಗಾಗುತ್ತಿದ್ದರು. ಮಾನವ ಸಮುದಾಯದ ವ್ಯಾಪ್ತಿಯನ್ನು ಕಡಿಮೆ ಮಾಡುವುದು ಇಂದಿನ ಮುಖ್ಯ. ಅಗತ್ಯ ಪರಿಸರದ ಮಾಲಿನ್ಯ ಮತ್ತು ಸಾರಿಗೆಯ ಸಮಸ್ಯೆಗಳನ್ನು ಹೋಗಲಾಡಿಸಲು ಇದು ಅಗತ್ಯ ಮಾತ್ರವಲ್ಲದೆ, ನೈಜ ಸಮುದಾಯ ಸೃಷ್ಟಿಗೂ ಇದು ಅವಶ್ಯಕ.

ಮುರ್ರೆ ಬುಕ್‌ಚಿನ್ : Post-Scarcity Anarchism, 1974

ಪಿ. ನರಸಿಂಹ ಭಟ್ಟ

ಭಾರತೀಯ ಸಂವೇದನೆ

ಪ್ರಬಂಧದ ಪರಿಚಯ: ಈ ಪ್ರಬಂಧಕ್ಕೆ ಅದರದೇ ಆದ ನಿಲುವು ಮತ್ತು ಹಿನ್ನೋಟ–ಮುನ್ನೋಟಗಳಿದ್ದು ಈ ವಿಷಯದ ಕುರಿತು ಈ ತನಕ ಪ್ರಕಟವಾದ ಇತರ ಬರವಣಿಗೆಗಳೊಂದಿಗೆ ಇದನ್ನು ಹೋಲಿಸುವುದು ಅಸಮಂಜಸ. ಈ ವಿಷಯದ ಮೇಲೆ ವ್ಯಾಪಕ ಅಧ್ಯಯನ ನಡೆಸಿದ ವಿದ್ವಾಂಸರೆಂದರೆ: ತೀ.ನಂ. ಶ್ರೀಕಂಠಯ್ಯ, ಎಂ. ಹಿರಿಯಣ್ಣ, ಎಸ್. ಕುಪ್ಪುಸ್ವಾಮಿ ಶಾಸ್ತ್ರಿ, ವಿ. ಶಂಕರನ್, ವಿ. ರಾಘವನ್, ಕೆ. ಕೃಷ್ಣಮೂರ್ತಿ, ಪಿ. ವಿ. ಕಾಣೆ, ಎಸ್.ಕೆ.ದೇ— ಇಂಥವರು. ಇಂದಿನ ಪರೀಕ್ಷೆ, ಪಾಠ, ವಿಶೇಷೋಪನ್ಯಾಸ– ಮುಂತಾದುವು ಇವರ ಬರವಣಿಗೆಗಳ ಮೇಲೆಯೇ ಪ್ರಧಾನವಾಗಿ ಆಧಾರಿತವಾಗಿದ್ದು ಇವರ ನಿಲುವನ್ನು ಪ್ರಶ್ನಿಸುವ ಬರಹಗಳು ಜನಪ್ರಿಯವಾಗುವ ಸಾಧ್ಯತೆ ಸದ್ಯಕ್ಕಿಲ್ಲವೆಂಬ ಅರಿವು ಈ ಪ್ರುಂಬಧಕ್ಕಿದೆ. ಜನಪ್ರಿಯತೆ–ಜನವಿರೋಧ ಎರಡನ್ನೂ ನಿರ್ವಿಕಾರವಾಗಿ ಸ್ವೀಕರಿಸುವ ನಿಲುವು ಈ ಪ್ರಬಂಧದ್ದು.

ಮೇಲೆ ಹೆಸರಿಸಲಾದ ಪ್ರಮುಖ ವಿದ್ವಾಂಸರ ಬರವಣಿಗೆಗಳೆಲ್ಲವನ್ನೂ ಮಥಿಸಿದಾಗ ಸಿಗುವ ಅಂಶ ಇಷ್ಟು: ಪ್ರಾಚೀನ ಭಾರತೀಯ ಸಾಹಿತ್ಯವನ್ನು ಕಾವ್ಯ–ಶಾಸ್ತ್ರ ಎಂದು ಸ್ಥೂಲವಾಗಿ ವಿಶ್ಲೇಷಿಸಬಹುದು. ಈ ಪೈಕಿ ಕಾವ್ಯ ಎಂಬುದು ಸರಸವಾಗಿದ್ದು ಶಾಸ್ತ್ರಾರ್ಥವನ್ನು ರಂಜಕವಾಗಿ ನಿರೂಪಿಸಬಲ್ಲುದು. ಕಾವ್ಯಾಭ್ಯಾಸಕ್ಕೆ ಸಹಕಾರಿಯಾಗುವ ವಿಚಾರ ಸಾಹಿತ್ಯ ಕಾವ್ಯಮೀಮಾಂಸೆ, ಕಾವ್ಯಮೀಮಾಂಸೆಗೆ ನಿಷ್ಕೃಷ್ಟವಾದ ಇತಿಹಾಸವಿದ್ದು ಧ್ವನಿಪೂರ್ವ ಯುಗ–ಧ್ವನ್ಯುತ್ತರ ಯುಗವೆಂದು ಅದನ್ನು ಇಬ್ಭಾಗಿಸಬಹುದು. ಈ ಪೈಕಿ ಧ್ವನಿಪೂರ್ವಯುಗ ಕಾವ್ಯಮೀಮಾಂಸೆಯು ಅವಿಕಸಿತ ಸ್ಥಿತಿಯಾಗಿದ್ದು ಅಷ್ಟೊಂದು ಅಧ್ಯಯನಾವಶ್ಯಕವಲ್ಲ. ಧ್ವನ್ಯುತ್ತರಯುಗ ವಿಕಸಿತವೂ ಪರಿಷ್ಕೃತವೂ ಆದುದರಿಂದ ವ್ಯಾಪಕ ಅಧ್ಯಯನಕ್ಕೆ ಯೋಗ್ಯ.

ಪ್ರಸ್ತುತ ಪ್ರಬಂಧ ಈ ನಿಲುವನ್ನು ಪ್ರಶ್ನಿಸುತ್ತದೆ. ಕಾವ್ಯ–ಶಾಸ್ತ್ರಗಳ ಪ್ರತ್ಯೇಕತೆಯನ್ನು ಸಮರ್ಥಿಸುವ ಹೇಳಿಕೆಗಳನ್ನು ಗ್ರಂಥಗಳು ಮಾಡಿದ ಮಾತ್ರಕ್ಕೆ ಆ ಹೇಳಿಕೆಗಳೇ ಭಾರತೀಯ ವಿಮರ್ಶಾ ಪದ್ಧತಿಯ ಪ್ರಾತಿನಿಧಿಕ ಅಂಶಗಳಾಗುವುದಿಲ್ಲ. ಕಾವ್ಯಮೀಮಾಂಸೆ ಎಂದು ಚೀಟಿ ಅಂಟಿಸಲಾದ ಗ್ರಂಥಗಳಿಗೇ ಸೀಮಿತಗೊಂಡು ನಡೆದ ಅಧ್ಯಯನ ಸಾರ ಗ್ರಾಹಿಯೂ ಅಲ್ಲ, ತಳಸ್ಪರ್ಶಿಯೂ ಅಲ್ಲ. ಪ್ರತ್ಯೇಕತೆ ಇರುವಲ್ಲೆಲ್ಲಾ ಐಕ್ಯ ಹುದುಗಿದೆ ಮತ್ತು ಪ್ರತ್ಯೇಕತೆಯ ವ್ಯಾಪ್ತಿಗಿಂತ ಐಕ್ಯದ ವ್ಯಾಪ್ತಿ ದೊಡ್ಡದು ಎಂಬುದು ಅಖಿಲ ಭಾರತೀಯ ನಿಲು. ಇದು ಭಾರತೀಯರ ಪ್ರಾತಿನಿಧಿಕ ಗ್ರಂಥಗಳ ಸಾರವನ್ನು ಪರಸ್ಪರ ಪೂರಕವಾಗಿ ಅಧ್ಯಯನ ಮಾಡಿದಾಗ ಸಿಗುವ ಸಂವೇದನಾಂಶ.

ಧ್ವನಿಪೂರ್ವಯುಗ ಅವಿಕಸಿತ ಮತ್ತು ಧ್ವನ್ಯುತ್ತರ ಯುಗ ವಿಕಸಿತ ಎನ್ನುವುದೂ ಭಾರತೀಯರ ನಿಲುವಿನ ಅರ್ಥ ಮಾಡದಿರುವಿಕೆಯಿಂದಲೇ ಉಂಟಾದ ಕಲ್ಪನೆ. ಋಷಿ ವಚನಗಳಲ್ಲಿ ಕಾಣುವ ಸತ್ಯಸಾಕ್ಷಾತ್ಕಾರವೇ ಎಲ್ಲಾ ವೈಚಾರಿಕತೆ–ಸಂವೇದನೆಗಳ ಕೇಂದ್ರವಾಗಿದ್ದು ಅವುಗಳಲ್ಲಿ ಹುದುಗಿದ ಅಂಶಗಳ ವ್ಯಕ್ತೀಕರಣವೇ ತದನುಯಾಯಿ ಗ್ರಂಥಗಳ ಕೆಲಸ ಎಂಬುದು ಭಾರತೀಯ ನಿಲು. ಇದನ್ನು ಗಮನಿಸದೆ ಆಧುನಿಕ ವಿಕಾಸವಾದವನ್ನು ಪ್ರಾಚೀನರ ಮೇಲೆ ಹೇರುವುದು ಇಂದಿನ ಕಾವ್ಯಮೀಮಾಂಸಾಧ್ಯಯನದಲ್ಲಿನ ಒಂದು ಮುಖ್ಯ ದೋಷ.

ಕಾವ್ಯಮೀಮಾಂಸೆ ಎಂದು ಅಧ್ಯಯನ ಮಾಡ

ಲಾಗುವ ವಿಷಯ ಯಾಕೆ ಭಾರತೀಯ, ಅಂದರೆ ಭಾರತೀಯತೆಯ ಗುಣ ಲಕ್ಷಣಗಳು ಇದರಲ್ಲಿ ಹೇಗ ವ್ಯಾಪಿಸಿವೆ? ಎಂದು ಮಾಡುವ ಅಧ್ಯಯನವೇ ನಿಜವಾದ ಕಾವ್ಯಮೀಮಾಂಸಾಧ್ಯಯನ ಎಂಬ ನಿಲುವು ಈ ಪ್ರಬಂಧದ್ದು. ಇದರ ಜೊತೆಗೆ, ಕಾವ್ಯಮೀಮಾಂಸಾ ಪರಿಭಾಷೆಯ ಬೆಳವಣಿಗೆಗೂ ಕಾವ್ಯ ಸಂವೇದನೆಗೂ ಇರುವ ಅಂತರವನ್ನು ಪ್ರಬಂಧ ಅಲ್ಲಲ್ಲಿ ಸೂಚಿಸುತ್ತದೆ.

ಈ ಪ್ರಬಂಧವನ್ನು ತಯಾರಿಸುವಲ್ಲಿ ರಾಷ್ಟ್ರೀಯತೆಯಂತಹ ಸಮಕಾಲೀನ ಮೌಲ್ಯಗಳನ್ನೂ ಶಿಕ್ಷಣದಂತಹ ಪ್ರಾಯೋಗಿಕಶಾಸ್ತ್ರಗಳನ್ನೂ ವೇದಾಂತದಂತಹ ಪ್ರಾಚೀನ ದರ್ಶನಗಳನ್ನೂ ಹಿನ್ನೆಲೆಯಾಗಿ ಬಳಸಲಾಗಿದೆ. ಗ್ರಂಥಾಧ್ಯಯನಕ್ಕಿಂತ ಹೆಚ್ಚು ವಿದ್ಯಾಸಂಸ್ಥೆಗಳ ಅಧ್ಯಯನ, ವಿದ್ಯಾಕ್ಷೇತ್ರದಲ್ಲಿರುವವರೊಡನೆ ಸಂದರ್ಶನ ಇಂತಹ ಕಾರ್ಯಕ್ರಮಗಳಿಂದ ಬಂದ ಅನುಭವವನ್ನು ಬಳಸಲಾಗಿದೆ. ಕಾವ್ಯಮೀಮಾಂಸೆ ಎಂಬುದು ಅನೇಕ ಅಧ್ಯಯನ ವಿಷಯಗಳಲ್ಲಿ ಒಂದು ಎಂದು ಭಾವಿಸುವ ಬದಲು ಎಲ್ಲಾ ಅಧ್ಯಯನ ವಿಷಯಗಳನ್ನೂ ಏಕಸೂತ್ರವಾಗಿಸುವ ಒಂದು ತಾತ್ವಿಕ ಮಾರ್ಗದರ್ಶಿ ಎಂಬ ನೆಲೆಯಲ್ಲಿ ಒಂದು ದಶಕಕ್ಕಿಂತಲೂ ಹೆಚ್ಚುಕಾಲ ತದೇಕ ಚಿತ್ತದಿಂದ ಅಧ್ಯಯನ ಮಾಡಲಾಗಿದೆ. ಹೀಗೆ ಇದೊಂದು ಅಧ್ಯಯನ ಕ್ರಾಂತಿಯನ್ನೇ ಎದುರು ನೋಡುವ ಪ್ರಬಂಧವಾಗಿದ್ದು ಅಂತಹ ಕ್ರಾಂತಿಗೆ ಸಿದ್ಧವಾಗದ ಮನಸ್ಸು ಇದರ ಸ್ವಾರಸ್ಯವನ್ನು ಗ್ರಹಿಸುವ ಸಂದರ್ಭ ಇಲ್ಲ.

ಪ್ರಬಂಧವನ್ನು ನಾಲ್ಕು ವಿಭಾಗಗಳಲ್ಲಿ ರೂಪಿಸಲಾಗಿದ್ದು ಪ್ರತಿ ವಿಭಾಗವನ್ನೂ ಗ್ರಹಣ ಸೌಕರ್ಯಕ್ಕಾಗಿ ಆದಷ್ಟೂ ಸ್ವತಂತ್ರಗೊಳಿಸಲಾಗಿದೆ. ಮೊದಲನೆಯ ವಿಭಾಗ 'ವ್ಯಾಪ್ತಿ' ಭಾರತೀಯತೆಯ ಗುಣಲಕ್ಷಣಗಳನ್ನು ಅತಿ ಸಂಕ್ಷಿಪ್ತವಾಗಿ ತಿಳಿಸುತ್ತದೆ. ಎರಡನೆಯ ವಿಭಾಗ 'ಇಂದಿನ ಅಭ್ಯಾಸಕ್ರಮ'ದಲ್ಲಿ ಪಂಡಿತವರ್ಗ–ಆಧುನಿಕ ಶಿಕ್ಷಕವರ್ಗ ಎರಡನ್ನೂ ಇಂದು ಆವರಿಸುವ ದೃಷ್ಟಿದೋಷಗಳನ್ನು ತೋರಿಸಿಕೊಡಲಾಗಿದೆ. ಮುಂದಿನ ವಿಭಾಗದಲ್ಲಿ 'ಸಂವೇದನಾಪರಿಮಿತಿಯ ಮಾದರಿಗಳು' ಪ್ರಚಲಿತವಿರುವ ಕೆಲವು ಬಿಡಿ ಹೇಳಿಕೆಗಳು ಭಾರತೀಯತೆಯ ಕೊಂಡಿಯನ್ನು ಕಳೆದುಕೊಂಡು ಹೇಗೆ ತಪ್ಪುದಾರಿಗೊಯ್ಯುತ್ತವೆ ಎಂಬುದನ್ನು ತೋರಿಸಲಾಗಿದೆ. ನಾಲ್ಕನೆಯ ವಿಭಾಗ ಸಂವೇದನೆಗೂ ಪರಿಭಾಷೆಗೂ ಇರುವ ಅಂತರವನ್ನು ತೋರಿಸಿ ರಸ, ಧ್ವನಿ, ಗುಣ, ಅಲಂಕಾರಗಳೆಂಬ ನಾಲ್ಕು ಪರಿಭಾಷೆಗಳನ್ನೂ ತಾತ್ವಿಕವಾಗಿ ವಿವರಿಸುತ್ತದೆ. ರಸ ಸೂತ್ರದಲ್ಲಿ ಮುಂದಿನ ವಿವರಣೆಗಳು ಹುದುಗಿವೆ ಎಂಬುದನ್ನೂ ರಸಪರಿಭಾಷೆ ಕಾವ್ಯ ಒಂದು ಚೇತನ ತತ್ವ ಎಂದು ಪ್ರತಿಪಾದಿಸುವುದೇ ಅದರ ಮುಖ್ಯಾಂಶವೆಂಬುದನ್ನೂ ತೋರಿಸಲಾಗಿದೆ. ಧ್ವನಿ ಕಾವ್ಯದ ಅಂಶವಾಗಿರದೆ ಕಾವ್ಯ ಅತೀತವಾಗಿದ್ದು ಕವಿ–ಕಾವ್ಯ–ಸಹೃದಯರನ್ನು ಜೋಡಿಸುವ ತತ್ವ ಎಂದು ಪ್ರತಿಪಾದಿಸಲಾಗಿದೆ. ಗುಣ ಎಂಬುದು ಕಾವ್ಯದ ಕನಿಷ್ಠತಮ ಸ್ವರೂಪವನ್ನು ಮನಸ್ಸಿನ ಮೇಲೆ ಕಾವ್ಯದಿಂದಾಗುವ ಪರಿಣಾಮದ ಮೇಲೆ ಆಧಾರಿತವಾದ ವರ್ಗೀಕರಣವನ್ನು ತೋರಿಸುವ ಕಲ್ಪನೆ ಎಂದು ವಿವರಿಸಲಾಗಿದೆ. ಅಲಂಕಾರ ಅಷ್ಟು ತಾತ್ವಿಕವಲ್ಲವೆಂದೂ ಅದನ್ನು ಐತಿಹಾಸಿಕ ವಿದ್ಯಮಾನವಾಗಿ ಅಭ್ಯಾಸ ಮಾಡಬೇಕಾಗುತ್ತದೆ ಎಂದೂ ನಿರೂಪಿಸಲಾಗಿದೆ. ತಾತ್ವಿಕ ಪ್ರಾಧಾನ್ಯವಿಲ್ಲದ ಪರಿಭಾಷೆಗಳನ್ನು ಕೈಬಿಡಲಾಗಿದೆ. ಇಲ್ಲಿ ಪ್ರತಿಪಾದಿತವಾಗಿರುವುದು ಭಾರತೀಯತೆಯ ಗುಣಲಕ್ಷಣಗಳು ಕಾವ್ಯ–ಕಾವ್ಯಮೀಮಾಂಸೆಗಳಲ್ಲಿ ಹಾಸುಹೊಕ್ಕಾಗಿವೆ ಎಂಬ ಅಂಶವೇ ಹೊರತು ಇಂದಿನ ಜೀವನ ದೃಷ್ಟಿಗಿಂತ ಅದುವೇ ಉತ್ತಮ ಎಂಬ ಅಭಿಪ್ರಾಯವಲ್ಲ. ಇಂದಿನ ದೃಷ್ಟಿ ಒಂದು ವಿದ್ಯಮಾನವಾದರೆ ಪ್ರಾಚೀನರ ದೃಷ್ಟಿ ಇನ್ನೊಂದು ವಿದ್ಯಮಾನ ಎಂಬ ನೆಲೆಯಲ್ಲಿ ಅಭ್ಯಾಸಮಾಡಿ ಒಂದಕ್ಕೊಂದು ಪೂರಕವಾಗಿ ಅವುಗಳನ್ನು ಬಳಸಬೇಕು ಎಂಬ ಸೂಚನೆ ಈ ಪ್ರಬಂಧದ್ದು. ಹಾಗಾಗಿ ಆತ್ಮ, ವೇದಾಂತ–ಮುಂತಾದುವುಗಳ ಪ್ರಸ್ತಾಪ ಬಂದಾಗ ನಾವು ಇಂದು ಅವುಗಳನ್ನು ಒಪ್ಪುತ್ತೇವೆಯೋ, ಇಲ್ಲವೋ ಎಂಬುದು ಅಪ್ರಸ್ತುತ, ಒಪ್ಪಿದವರ ಸಾಹಿತ್ಯ ಯಾವರೀತಿಯದ್ದು ಆಗಿರಲೇಬೇಕು ಎಂಬುದನ್ನು ಗ್ರಹಿಸಿ ಅದರಲ್ಲಿನ ಸಾಂಗತ್ಯದ ಸೂಕ್ಷ್ಮತೆಯನ್ನು ಸುಂದರತ್ವವನ್ನೂ ಅರ್ಥಮಾಡಲು ಮಾತ್ರ ಈ ಪ್ರಬಂಧ ಸಹಕಾರಿ.

ಅಲ್ಲದೆ. ಈ ಕುರಿತು ಉದ್ದೇಶಿಸಲಾದ ಬರವಣಿಗೆಯ ಅತಿ ಸಂಕ್ಷಿಪ್ತ ರೂಪ ಈ ಪ್ರಬಂಧವಾದುದರಿಂದ ಈ ಕುರಿತು ಏಳುವ ಎಲ್ಲಾ ಸಮಸ್ಯೆಗಳಿಗೂ ಇಲ್ಲಿಯೇ ಉತ್ತರ ಇಲ್ಲ ಎಂಬುದನ್ನು ಗಮನದಲ್ಲಿಡತಕ್ಕದ್ದು.

ವ್ಯಾಪ್ತಿ :

ಒಂದು ಜನಾಂಗದ ಸಂವೇದನೆ ಮತ್ತು ಸೌಂದರ್ಯ ದೃಷ್ಟಿಯನ್ನು ಅರ್ಥೈಸಬೇಕಾದರೆ ಆ ಜನಾಂಗದ ಜೀವನ ದೃಷ್ಟಿಯನ್ನು ಸಮಗ್ರವಾಗಿ ಅರ್ಥೈಸಿ ಇಟ್ಟುಕೊಳ್ಳಬೇಕು. ವೈವಿಧ್ಯದಲ್ಲಿ ಐಕ್ಯವನ್ನೇ ಕಾಣುವ ಭಾರತೀಯರ ಮಟ್ಟಿಗೆ ಈ ಮಾತು ಇನ್ನಷ್ಟು ಸತ್ಯ. ಜೀವನದ ಭಿನ್ನಮುಖಗಳ ಬಗೆಗೆ ಚಿಂತನವನ್ನು ನಡೆಸಿದ ಬೇರೆ ಬೇರೆ ಶಾಸ್ತ್ರಗಳು ಮತ್ತು ಅವುಗಳ ಜೊತೆಗೆಯೇ ಪಾರಿಭಾಷಿಕತೆಯನ್ನು ತೊಲಗಿಸಿ ಸ್ವಯಂಪ್ರೇರಿತ ಅಭಿವ್ಯಕ್ತಿ ಎಂಬಂತೆ ಸಂಶ್ಲಿಷ್ಟವಾಗಿ ರೂಪುಗೊಂಡ ಕೃತಿರಾಶಿಗಳು (ಇಂದಿನ ಪರಿಭಾಷೆಯಲ್ಲಿ ಇವನ್ನು ಸೃಜನಶೀಲಕೃತಿಗಳೆಂದು ಹೆಸರಿಸಲಾಗುತ್ತಿದೆ) ಈ ಎರಡೂ ವರ್ಗಗಳನ್ನು ಸಮಗ್ರೀಕರಿಸಿಯೇ ನೋಡುವುದರ ಜೊತೆಗೆ ಶ್ರುತಿ–ಸ್ಮೃತಿ–ಇತಿಹಾಸ–ಪುರಾಣಗಳು ಎಂಬ ನಾಲ್ಕು ಮುಖಗಳನ್ನೂ ರೂಪಿಸಿಕೊಂಡಿರುವುದು ಭಾರತೀಯ ಸಾಹಿತ್ಯದಲ್ಲಿನ ಒಂದು ಐತಿಹಾಸಿಕ ವಿದ್ಯಮಾನ. ಮೇಲೆ ಹೇಳಲಾದ ನಾಲ್ಕು ಮುಖಗಳಲ್ಲಿ ಶ್ರುತಿ ಕೇಂದ್ರೀಯವಾಗಿದ್ದು ಸ್ಮೃತಿ – ಇತಿಹಾಸ – ಪುರಾಣಗಳಿಗೂ ಅದಕ್ಕೂ ಇರುವ ಸಂಬಂಧ ಒಂದೊಂದು ಸಂದರ್ಭದಲ್ಲಿ ಒಂದೊಂದು ರೀತಿಯದ್ದು. ಶ್ರುತಿ ಎಂಬುದು ವಸ್ತುನಿಷ್ಠ ಯೋಚನೆಯನ್ನೂ ವ್ಯಕ್ತಿಯ ದೇಶಕಾಲ ಪರಿಮಿತಿಯನ್ನೂ ಮೀರಿದ ಸಾಕ್ಷಾತ್ಕರಣರೂಪಿ ಅನುಭವ ಆದುದರಿಂದ ದೇಶಕಾಲ ಪರಿಮಿತಿಯನ್ನೂ ಸಾಕ್ಷಾತ್ಕರಣ ಸಂಬಂಧಿಯಾಗಿರುವ ಯೋಚನೆಯನ್ನೂ ಒಳಗೊಳ್ಳುವ ಸ್ಮೃತಿ–ಇತಿಹಾಸ–ಪುರಾಣಗಳಿಗೆ ಅದುವೇ ಕೇಂದ್ರ. ಈ ವಿಶ್ಲೇಷಣೆಯ ಪ್ರಕಾರ, ಭಾರತೀಯ ಸಾಹಿತ್ಯದಲ್ಲಿ ಎರಡು ವ್ಯಾಪಕಸ್ತರಗಳು: ಒಂದು ಶ್ರುತಿ ಎನ್ನಲಾಗುವ ಅ – ಪೌರುಷೇಯ ಸಾಹಿತ್ಯ; ಇನ್ನೊಂದು ಸ್ಮೃತಿ, ಇತಿಹಾಸ, ಪುರಾಣಗಳ ರೂಪದಲ್ಲಿ ಕಾಣಿಸಿಕೊಳ್ಳುವ ಪೌರುಷೇಯ ಸಾಹಿತ್ಯ. ಇನ್ನೊಂದು ವಿಶ್ಲೇಷಣೆಯ ಪ್ರಕಾರ, ಸ್ಮೃತಿ ಎಂಬುದು ಶ್ರುತಿಯ ಹಿನ್ನೆಲೆಯಲ್ಲಿ ಆಚರಣೆಯ ನಿಯಮಗಳನ್ನು ಸ್ಪಷ್ಟವಾಗಿ ತಿಳಿಸುವ ಗ್ರಂಥರಾಶಿ; ಈ ನಿಯಮಗಳನ್ನು ಕಥೆಯ ರೂಪದಲ್ಲಿ ಪರೋಕ್ಷವಾಗಿ ತಿಳಿಸುವ ಗ್ರಂಥಗಳೇ ಇತಿಹಾಸ ಪುರಾಣಗಳು. ಹಿಂದಿನ ವಿಶ್ಲೇಷಣೆಯ ಪ್ರಕಾರ ಭಾರತೀಯ ಸಾಹಿತ್ಯದಲ್ಲಿ ಎರಡು ಸ್ತರಗಳಾದರೆ ಈ ವಿಶ್ಲೇಷಣೆಯ ಪ್ರಕಾರ ಮೂರು ಸ್ತರಗಳು. ಇತಿಹಾಸ–ಪುರಾಣಗಳೊಳಗಿನ ಕೆಲವು ಪ್ರತ್ಯೇಕತೆಗಳನ್ನು ಗಮನಿಸಿ ನಾಲ್ಕು ಸ್ತರಗಳಾಗಿಯೂ ವಿಂಗಡಿಸಬಹುದು. ಈ ಸ್ಥೂಲಪ್ರಕಾರಗಳಲ್ಲಿ ಅಂತರ್ಗತವಾಗುವ ಕಾವ್ಯ-ಕಾವ್ಯಮೀಮಾಂಸೆ, ವೇದಾಂತ–ದರ್ಶನ ಮುಂತಾದ ಒಳಪ್ರಭೇದಗಳನ್ನು ಬೆಳೆಸುತ್ತಾ ಹೋಗಿ ಅನಂತಸ್ತರಗಳಾಗಿಯೂ ವರ್ಗೀಕರಿಸಬಹುದು; ಎಲ್ಲಾ ಸ್ತರಗಳನ್ನೂ ಶ್ರುತಿಯಲ್ಲಿಯೇ ಅಂತರ್ಗತಿಸಿ ಐಕಘನವಾಗಿಯೂ ನೋಡಬಹುದು. ಸ್ತರಗಳ ಸಂಖ್ಯೆಯಲ್ಲಿ ಮಾತ್ರವಲ್ಲ, ಸ್ತರ–ಸ್ತರಗಳೊಳಗಿನ ಸಂಬಂಧದಲ್ಲೂ ಅನಂತತೆ–ಐಕ್ಯಗಳೆರಡನ್ನೂ ಪ್ರತಿಪಾದಿಸಬಹುದು. ಉದಾಹರಣೆಗೆ, ಸ್ಮೃತಿ-ಇತಿಹಾಸಗಳೊಳಗಿನ ಪ್ರತ್ಯೇಕತೆಯನ್ನು ಹಿಂದಿನ ಒಂದು ವಿಶ್ಲೇಷಣೆಯಲ್ಲಿ ನೋಡಿದೆವು. ಅದೇ ಯೋಜನಾಕ್ರಮವನ್ನು ಸ್ವಲ್ಪ ಬದಲಿಸಿ ನೋಡಿದಾಗ ಈ ಪ್ರತ್ಯೇಕತೆಯ ಪರಿಮಿತಿಯನ್ನೇ ಕಾಣುತ್ತೇವೆ. ಇತಿಹಾಸಗ್ರಂಥವೆಂದು ಹೇಳಲಾಗುವ ಮಹಾಭಾರತದ ಅಂಶವಾದ ಭಗವದ್ಗೀತೆಯನ್ನು ಸ್ಮೃತಿಯೆಂದೂ ಕರೆಯಲಾಗುತ್ತದೆ. ಇದೇ ಮಹಾಭಾರತದ ಖಿಲ(supplement) ಎನ್ನಲಾಗುವ ಹರಿವಂಶವನ್ನು ಪುರಾಣ ಎನ್ನಲಾಗುತ್ತದೆ. ಹೀಗೆ ಒಂದು ಮಟ್ಟದಲ್ಲಿ ಐಕವಾಗಿದ್ದುದು ಇನ್ನೊಂದು ಮಟ್ಟದಲ್ಲಿ ಬಹುವೋ ಅನಂತವೋ ಆಗುವುದು ಸಾಧ್ಯ ಮತ್ತು ಇನ್ನೂ ಒಂದು ಮಟ್ಟದಲ್ಲಿ ಅನುಭವ ಸಂಖ್ಯಾತೀತ; ಅಲ್ಲದೇ ಮತ್ತೂ ಒಂದು ಮಟ್ಟದಲ್ಲಿ ಅನಂತತೆಯ ಅಂಶಗಳ ಪರಸ್ಪರ ಸಂಬಂಧದಲ್ಲಿಯೂ ಅನಂತತೆ ಸಾಧ್ಯ, ಎಂಬ ಏಕತ್ವ – ಅನಂತತೆ – ಸಂಖ್ಯಾತೀತತೆಗಳನ್ನು ಒಟ್ಟಿಗೇ ಗ್ರಹಿಸುವ ಸಂಕೀರ್ಣ ಸಂವೇದನೆ ಭಾರತೀಯರ ಪ್ರಾತಿನಿಧಿಕ ಸಾಹಿತ್ಯದುದ್ದಕ್ಕೂ ಹಾಸುಹೊಕ್ಕಾಗಿದೆ.

ಏಕತ್ವ-ಅನಂತತೆಗಳ ಸಾಮರಸ್ಯದ ಮೇಲೆ ಆಧಾರಿತವಾದ ಈ ಸಂಕೀರ್ಣ ಸಂವೇದನೆಯನ್ನು ವಸ್ತುಗಳ ಪ್ರತ್ಯೇಕತೆಯ ಕುರಿತಾದ ಪರಿಮಿತಿಯನ್ನು ಎತ್ತಿತೋರಿಸುವಷ್ಟರ ಮಟ್ಟಿಗೇ ಅನ್ವಯಿಸಿಕೊಂಡರೆ ಸಾಲದು. ಕಾಲಗಳ ಪ್ರತ್ಯೇಕತೆಯ ಪರಿಮಿತಿಯನ್ನು ಎತ್ತಿತೋರಿಸುವಲ್ಲಿಯೂ ಇದೇ ಸಂವೇದನೆ ಅನ್ವಿತವಾಗುತ್ತದೆ. ಅಂದರೆ, ಭೂತ ಭವಿಷ್ಯದ್ವರ್ತಮಾನಗಳೆಂಬ ಮೂರೂ ಕಾಲಗಳು ಒಂದೇ ತತ್ವದ ಭಿನ್ನಮುಖಗಳು ಎಂಬಂತೆ ಭಾರತೀಯ ಸಂವೇದನೆ ರೂಪುಗೊಂಡಿದೆ.

ವಸ್ತು-ಕಾಲಗಳ ಬಗೆಗೆ ವ್ಯಾಪಕವಾಗಿ ಬೆಳೆಸಂತೆ ವಸ್ತು ಮತ್ತು ಅದರ ಕುರಿತಾದ ಜ್ಞಾನ-ಇವುಗಳ ಬಗೆಗೂ ಭಾರತೀಯರಲ್ಲಿ ತಮ್ಮದೇ ಆದ ವ್ಯಾಪಕ ಸಂವೇದನೆ ಬೆಳೆದಿದೆ. ಭಾರತೀಯರ ಪ್ರಕಾರ, ವಸ್ತು ಮತ್ತು ಅದರ ಕುರಿತಾದ ಜ್ಞಾನ ಎಂಬೆರಡರಲ್ಲಿ ಜ್ಞಾನವೇ ಹೆಚ್ಚು ಸತ್ಯವಾದುದು ಅಂದರೆ ಸೂಕ್ಷ್ಮವಾದುದು. ಇದರ ಪರಿಣಾಮವಾಗಿ ಎಂಬಂತೆ, ದೈನಂದಿನ ಅನುಭವಕ್ಕೆ ಬರುವ ಪ್ರಪಂಚಕ್ಕಿಂತ ಹೆಚ್ಚಾಗಿ ಜ್ಞಾನಗಮ್ಯವಾದ ಆದರ್ಶ ಪ್ರಪಂಚದ ಮೇಲೆಯೇ ಅವಧರಿಸಿ ಗ್ರಂಥ ರಚನೆ ಮಾಡಲಾಗಿದೆ.

ವಸ್ತು–ಜ್ಞಾನಗಳ ಪೈಕಿ ಜ್ಞಾನವೇ ಹೆಚ್ಚು ಸತ್ಯ ಎಂಬುದನ್ನು ವ್ಯಾಪಕವಾಗಿ ಬೆಳೆಸಿದಂತೆ ಜ್ಞಾನ ಹೇಗೆ ಪ್ರಮಾಣವಾಗುತ್ತದೆ ಎಂಬುದರ ಬಗೆಗೂ ಅವರು ವ್ಯಾಪಕ ವಿಶ್ಲೇಷಣೆ ನಡೆಸಿದ್ದಾರೆ. ಒಂದು ಜ್ಞಾನ ಘಟಕ ಪ್ರಮಾಣವಾಗಿದೆಯೇ ಇಲ್ಲವೇ ಎಂದು ಭಾರತೀಯರು ನಿರ್ಣಯಿಸುವ ವಿಧಾನವೆಂದರೆ ಮೊದಲು ಆಜ್ಞಾನ ಘಟಕದ ಅವಯವಗಳೊಳಗೆ ಪರಸ್ಪರವಾಗಿ ಮತ್ತು ಅವಯವ–ಅವಯವಿಗಳೊಳಗೆ ಪರಸ್ಪರವಾಗಿ ಎಷ್ಟರ ಮಟ್ಟಿಗೆ ಹೊಂದಾಣಿಕೆ ಅಥವಾ ವಿರೋಧವಿದೆ ಎಂಬುದನ್ನು ವಿಶ್ಲೇಷಿಸಿ ಗ್ರಹಿಸುವುದು. ಹೊಂದಾಣಿಕೆ ಇದ್ದರೆ ಪ್ರಮಾಣವೆಂದೂ ವಿರೋಧವಿದ್ದರೆ ಅಪ್ರಮಾಣವೆಂದೂ ಒಂದು ಮಟ್ಟಕ್ಕೆ ನಿರ್ಣಯವಾದಂತಾಯಿತು. ಹೊಂದಾಣಿಕೆ - ವಿರೋಧಗಳೆರಡೂ ಇದ್ದರೆ ಅವುಗಳ ಬಲಾಬಲಿಕೆಯನ್ನು ಪರೀಕ್ಷಿಸಿ ಪ್ರಾಮಾಣ್ಯವನ್ನು ನಿರ್ಣಯಿಸಬೇಕು. ಒಂದು ಮಟ್ಟದ ಪ್ರಾಮಾಣ್ಯವಿರುವ ಜ್ಞಾನಘಟಕವನ್ನು ಇನ್ನೊಂದು ಜ್ಞಾನಮೂಲದಿಂದ ಪರೀಕ್ಷಿಸಿದಾಗ (ಉದಾಹರಣೆಗೆ ಸ್ವಾನುಭವವನ್ನು ಪರಂಪರೆಯಿಂದ, ಪರಂಪರೆಯನ್ನು ಸ್ವಾನುಭವದಿಂದ ಇತ್ಯಾದಿ) ಅದರ ಪ್ರಾಮಾಣ್ಯ ಬಾಧಿತವಾಗುತ್ತದೆಯೇ ಅಥವಾ ಉಳಿದುಬರುತ್ತದೆಯೇ ಎಂದು ಬೇರೆ ಬೇರೆ ಜ್ಞಾನಮೂಲಗಳಿಂದ ಪರೀಕ್ಷಿಸಿ ಅದರ ಪರಮ ಪ್ರಾಮಾಣ್ಯವನ್ನು ನಿರ್ಣಯಿಸಬೇಕು. ಹೀಗೆ ಜ್ಞಾನ ಪ್ರಾಮಾಣ್ಯವನ್ನು ಜ್ಞಾನದ ಮಟ್ಟದಲ್ಲೇ ಬೇರೆ ಬೇರೆ ಮೂಲಗಳಿಂದ ವಿಶ್ಲೇಷಿಸಿ ಮೌಲ್ಯನಿರ್ಣಯ ಮಾಡಬಹುದು ಎಂಬುದು ಭಾರತೀಯ ಸಂವೇದನೆಯ ಇನ್ನೊಂದು ಮುಖ. ಇಂದಿನವರ ಹಾಗೆ ಜ್ಞಾನವನ್ನು ವಸ್ತುವಿನ ಮೂಲಕ ಪರೀಕ್ಷಿಸಿ ಮೌಲ್ಯನಿರ್ಣಯ ಮಾಡುವುದು ಭಾರತೀಯ ಸಂವೇದನೆಯ ಪ್ರಧಾನ ಸರಣಿ ಅಲ್ಲ. ಇದರಿಂದಲಾಗಿ ಭಾರತೀಯ ಲಕ್ಷಣ ಶಾಸ್ತ್ರಗಳು ಲಕ್ಷ್ಯವಸ್ತುಗಳನ್ನು ಪ್ರಧಾನವಾಗಿ ಆಶ್ರಯಿಸದೆ ತಮ್ಮ ಶಾಸ್ತ್ರೀಯತೆಯಿಂದಲೇ ಸ್ವಯಂಪೂರ್ಣವಾಗಿ ಬೆಳೆದು ಬಂದಿವೆ.

* * * * * *

ಇಂದಿನ ಅಭ್ಯಾಸಕ್ರಮ : ಇಂದಿನ ಜೀವನದೃಷ್ಟಿ, ಯೋಜನಾಕ್ರಮ ಮತ್ತು ಶಿಕ್ಷಣಪದ್ಧತಿ- ಈ ಮೂರೂ ಭಾರತೀಯ ಸಂವೇದನೆಗೆ ವಿರುದ್ಧವಾದ ದಿಕ್ಕಿನಲ್ಲಿ ಸಾಗುತ್ತಿರುವುದರಿಂದ ಭಾರತೀಯತೆಯ ಜೀವಾಳವನ್ನು ಅರ್ಥಮಾಡುವುದು ಅಪರೂಪವಾಗಿ ಒಬ್ಬರಿಗೋ ಇಬ್ಬರಿಗೋ ಸಾಧ್ಯವಾಗುವ ಸಂಗತಿ. ಭಾರತೀಯತೆಯನ್ನು ಅರ್ಥಮಾಡುವಲ್ಲಿ ಎಡವುವುದು ಪಾಶ್ಚಾತ್ಯರಿಂದ ಬಂದ ಶಿಕ್ಷಣಕ್ಕೊಳಗಾದವರು ಮಾತ್ರ ಎಂದು ಭ್ರಮಿಸಬೇಕಾಗಿಲ್ಲ. ಪರಂಪರೆಯ ಅನುಯಾಯಿಗಳು ಎಂದು ಹೇಳಿಕೊಳ್ಳುವ ಸಂಸ್ಕೃತಾಭ್ಯಾಸಿ ಪಂಡಿತವರ್ಗ ಅದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಎಡವುತ್ತದೆ ಎನ್ನಬಹುದು. ಇದಕ್ಕೆ ಕಾರಣ, ಸಂಸ್ಕೃತಾಧ್ಯಯನಕ್ರಮ ಯಾವುದೋ ಒಂದು ಹಂತದಲ್ಲಿ ಜೀವನಕ್ಕೂ ಅಧ್ಯಯನಕ್ಕೂ ಇದ್ದ ಅವಿಭಾಜ್ಯ ಸಂಬಂಧವನ್ನು ಕಳೆದುಕೊಂಡು ಕಾವ್ಯಾಭ್ಯಾಸ - ಶಾಸ್ತ್ರಾಭ್ಯಾಸವೆಂದು ಇಬ್ಬಗೆಯಾಗಿ ರೂಪುಗೊಂಡುದು. ಈ ಎರಡರಲ್ಲಿ ಕಾವ್ಯಾಭ್ಯಾಸವೆಂಬುದು ಕೇವಲ ಭಾಷಾಭ್ಯಾಸವಾಗಿಯೂ ಶಾಸ್ತ್ರಾಭ್ಯಾಸವೆಂಬುದು ಪರಿಭಾಷೆಗಳ ಅಭ್ಯಾಸವಾಗಿಯೂ ನಿಶ್ಚಿತವಾದುದರಿಂದ ಸಂವೇದನೆ ಎಂಬುದು ಪಂಡಿತವರ್ಗದ ಅಭ್ಯಾಸಕ್ರಮದಲ್ಲಿ ಸಂಪೂರ್ಣ ನಾಶ ಹೊಂದುವಂತಾಯಿತು.

ಪಂಡಿತವರ್ಗವನ್ನು ಬಿಟ್ಟು ಆಧುನಿಕ ಶಿಕ್ಷಿತ ವರ್ಗಕ್ಕೆ ಬಂದಾಗ ಅಲ್ಲಿಯೂ ಕಾಣುವುದು ಭಾರತೀಯತೆಗೆ ವಿಕರ್ಷಕವಾದ ವಾತಾವರಣವನ್ನೇ. ತಾಂತ್ರಿಕ ಮಾದರಿಯ ಶಿಕ್ಷಣದಂಥಾದ್ದಕ್ಕೆ ಅತಿ ಅವಧಾರಣೆ ಕೊಟ್ಟುದರ ಒಂದು ದುಷ್ಪರಿಣಾಮವೆಂದರೆ ವಿದ್ಯಾರ್ಥಿಯಲ್ಲಿ–ಸ್ನಾತಕೋತ್ತರ–ಸಂಶೋಧನೆಯ ಮಟ್ಟಗಳಲ್ಲಿ ಕೂಡಾ- ತಾತ್ವಿಕತೆ-ಪ್ರಾಯೋಗಿಕತೆಗಳೆಂಬ ಎರಡು ಮುಖಗಳ ಸಮನ್ವಯ ದೃಷ್ಟಿ ಮಾಯವಾಗಿ ಕೇವಲ ಪ್ರಾಯೋಗಿಕತೆಗೇ ಪ್ರಾಧಾನ್ಯಕೊಡುವ ಏಕಮುಖತೆ ಬೇರು ಬಿಟ್ಟು ನಿಂತಿ

ಸನ್ನಿವೇಶ

ರುವುದು. ವಸ್ತು-ವಸ್ತುಗಳನ್ನೂ ವಿಷಯ-ವಿಷಯಗಳನ್ನು ಸಾಧ್ಯವಾದಷ್ಟು ಸೂಕ್ಷ್ಮವಾಗಿ ಬೇರ್ಪಡಿಸಿ ತನಗೆ ಬೇಕಾದುದನ್ನು ಆರಿಸಿಕೊಂಡು ಉಳಿದುದರ ಅಸ್ತಿತ್ವವನ್ನೇ ಮರೆತುಬಿಡುವುದು; ಅಪರಿಷ್ಕೃತವಾಗಿ ಹೇಳುವುದಿದ್ದರೆ ಪರೀಕ್ಷೆಯ ಮಾರ್ಕು-ಉದ್ಯೋಗದಲ್ಲಿ ಭಡ್ತಿ ಇಂಥವಕ್ಕೆ ಆವಶ್ಯವಲ್ಲದ ಚಿಂತನಕ್ರಮವನ್ನು ಇದ್ದೂ ಇಲ್ಲದಂತೆ ಎಂದು ಭಾವಿಸುವುದು; ತಾತ್ವಿಕತೆ-ಆದರ್ಶಗಳ ಸಾಕ್ಷಾತ್ಕಾರ-ಇಂಥವನ್ನು ಜನಸಾಮಾನ್ಯನ ಮಟ್ಟಕ್ಕೆ ಇಳಿಯದ ಶಿಷ್ಟವರ್ಗದ ಮಾತಿನ ಮೋಡಿಯಷ್ಟೇ ಎಂದು ಭ್ರಾಂತಿ ಪಡುವುದು – ಇಂಥವೆಲ್ಲಾ ತಾತ್ವಿಕತೆಯನ್ನು ಮರೆತು ಪ್ರಾಯೋಗಿಕತೆ-ವ್ಯವಹಾರ ಇಂಥವಕ್ಕೇ ಮಾರುಹೋದುದರ ದುಷ್ಪರಿಣಾಮಗಳು. ವಿಶ್ಲೇಷಣೆಯನ್ನೇ ಸರ್ವಸ್ವವಾಗಿಸಿ ಸಂಯೋಜನೆಯನ್ನು ಮರೆತು ಬಿಡುವ ಮತ್ತು ಪ್ರಯೋಗ-ವ್ಯವಹಾರಗಳನ್ನೆ ಸರ್ವಸ್ವವಾಗಿಸಿ ತತ್ವವನ್ನು ಮರೆತುಬಿಡುವ, ಮನೋವೃತ್ತಿಯ ಮುಂದೆ ಭಾರತೀಯ ಸಾಹಿತ್ಯಪ್ರಕಾರಗಳು ಒಂದೇ ತತ್ವದ ಭಿನ್ನ ಮುಖಗಳು. ಒಂದೊಂದು ಕೋನದಿಂದ ಒಂದೊಂದು ರೀತಿಯ ಪರಸ್ಪರ ಸಾಪೇಕ್ಷತೆಯುಳ್ಳವು, ಐಕ-ಅನಂತತೆಯಂತಹ ಸಂಕೀರ್ಣತೆಯ ಸಂವೇದನೆಯುಳ್ಳವು-ಎಂದು ಮುಂತಾಗಿ ನಿರೂಪಿಸಹೊರಟಾಗ ಇಂದಿನ ಅಭ್ಯಾಸಗಳಿಂದ ಬರುವ ಪ್ರತಿಕ್ರಿಯೆಯೆಂದರೆ ಈ ನಿರೂಪಣೆಯನ್ನು ಗಮನಿಸ ಹೊರಟರೆ ಅವೈಜ್ಞಾನಿಕತೆ-ಅಸ್ಪಷ್ಟತೆಗಳ ಕಂತೆಯನ್ನೇ ಎದುರಿಸಬೇಕಾಗುತ್ತದೆ. ಇದು ಹೇಗೆ ಅವೈಜ್ಞಾನಿಕ ಮತ್ತು ಅಸ್ಪಷ್ಟ ಎಂದು ಪ್ರತಿಪಾದಿಸುವುದು ವ್ಯರ್ಥಕಾಲಹರಣವೇ ಆಗಬಹುದಾದ್ದರಿಂದ ಅದರ ಅಸ್ತಿತ್ವವನ್ನೇ ಮರೆಯುವುದು ಉತ್ತಮ.

ಈ ನಿರೂಪಣೆ ಅವೈಜ್ಞಾನಿಕ-ಅಸ್ಪಷ್ಟವೇ ಇರಬಹುದೆಂದು ಬೇಕಾದರೆ ಒಪ್ಪಿಕೊಳ್ಳೋಣ. ಒಂದು ಸಾಹಿತ್ಯರಾಶಿಯ ಬಗೆಗೇ ಮಾಡಲಾದ ಅಪೂರ್ವ ಹೇಳಿಕೆಯಲ್ಲಿನ ಅಸ್ಪಷ್ಟತೆಯನ್ನು ಬಯಲಿಗೆಳೆಯುವುದು ವ್ಯರ್ಥವಾಗುವ ಸಂಭವ ಮಾತ್ರ ಇಲ್ಲ. ಬದಲಾಗಿ, ಹೊಸತಾಗಿ ಬಂದ ಒಂದು ನಿರೂಪಣೆಯಲ್ಲಿನ ಅವೈಜ್ಞಾನಿಕತೆಯನ್ನು ಎತ್ತಿತೋರಿಸಬೇಕಾದರೆ ತನ್ನ ಗೃಹೀತಗಳು ಎಷ್ಟರಮಟ್ಟಿಗೆ ವೈಜ್ಞಾನಿಕ ಎಂಬ ಅಂತರ್ಮುಖಿ ವಿವೇಚನೆ ಅಗತ್ಯವಾಗುತ್ತದೆ. ಈ ಅಂತರ್ಮುಖಿ ವಿವೇಚನೆ ಮುಂದುವರಿಸಿದಾಗ ತನ್ನ ಗೃಹೀತಗಳ ಪರಿಮಿತಿ ಹೊರಬಂದು ತನ್ನ ಸಣ್ಣತನ ತನಗೆ ಅರ್ಥವಾಗುವ ಸಂಭವ ಇದೆ. ಇದಕ್ಕೆ ಇಂದಿನ ವಿದ್ಯಾರ್ಥಿ ಹೆದರುತ್ತಾನೆ; ತನಗೆ ಅರ್ಥವಾಗದ್ದು ಅವೈಜ್ಞಾನಿಕ ಎಂದು ತಳ್ಳಿಬಿಡುತ್ತಾನೆ. ವಸ್ತು-ವಸ್ತುಗಳ ಪ್ರತ್ಯೇಕತೆ ಸತ್ಯದ ಒಂದು ಮುಖವಾದರೆ ವಸ್ತು-ವಸ್ತುಗಳ ಐಕ್ಯ ಇದೇ ಸತ್ಯದ ಇಷ್ಟೇ ಅರ್ಥಪೂರ್ಣವಾದ ಇನ್ನೊಂದು ಮುಖವಾಗುವ ಸಾಧ್ಯತೆಯನ್ನೇ ಇವನು ಅರ್ಥಮಾಡಲಾರ. ವಸ್ತುವಿನಲ್ಲಿ ಅದರ ಕುರಿತಾದ ಜ್ಞಾನವನ್ನು ಲೀನಗೊಳಿಸಿ ನೋಡುವ ದೃಷ್ಟಿಗೆ ಪೂರಕವಾಗಿ ಜ್ಞಾನದಲ್ಲಿ ವಸ್ತುವನ್ನು ಲೀನಗೊಳಿಸುವ ದೃಷ್ಟಿಯನ್ನೂ ಅರ್ಥ ಮಾಡುವ ಕುರಿತು ಅವನು ಯೋಚಿಸಲಾರ. ಲಕ್ಷ್ಯವಸ್ತು ಒಂದು ಮಟ್ಟದಲ್ಲಿ ಸ್ವಯಂಪೂರ್ಣವಾಗ ಬಹುದಾದಂತೆ ಲಕ್ಷಣಶಾಸ್ತ್ರವೂ ಒಂದು ಮಟ್ಟದಲ್ಲಿ ಸ್ವಯಂಪೂರ್ಣವಾಗಬಹುದು ಎಂಬುದು ಇವನಿಗೆ ಎಟಕದ ಸತ್ಯ. ವಸ್ತುವಿನ ಲಕ್ಷಣವೆಂದರೆ ಉಳಿದವಸ್ತುಗಳಿಂದ ಪ್ರತ್ಯೇಕತೆ, ಜ್ಞಾನವೆಂದರೆ ವಸ್ತ್ವಧೀನವಾದ ಮಾನಸಿಕ ಕ್ರಿಯೆ, ಲಕ್ಷಣ ಶಾಸ್ತ್ರವೆಂದರೆ ಲಕ್ಷ್ಯಾಧೀನವಾಗಿಯೇ ಇರುವ ವೈಚಾರಿಕತೆ ಎಂಬ ಗೃಹೀತ ಅವನಲ್ಲಿ ಹಾಸುಹೊಕ್ಕಾಗಿರುತ್ತದೆ. ಇವನು ಮಾಡುವ ತಪ್ಪು ಯಾವ ತರಹದ್ದೆಂದರೆ ಪರ್ವತವನ್ನು ಹತ್ತುವ ಕ್ರಿಯೆಯಲ್ಲಿ ತೊಡಗಿದವನು ಇದಕ್ಕೆ ಪೂರಕವಾಗಿ ಇಳಿಯುವ ಕ್ರಿಯೆಯೆಂಬುದು ಇನ್ನೊಂದಿದೆ ಎಂಬ ಭಾವನೆಯನ್ನೇ ಕಿತ್ತು ಹಾಕಿ ತಾನು ಮಾಡುವಂಥಾದ್ದೊಂದೇ ಕ್ರಿಯೆ ತಾನು ಕಂಡದ್ದೊಂದೇ ಸತ್ಯ ಎಂದು ಭ್ರಾಂತಿಪಟ್ಟಂತೆ.

ಹೀಗೆ ಪಂಡಿತವರ್ಗ ಭಾಷೆ-ಪರಿಭಾಷೆಗಳನ್ನೇ ಜ್ಞಾನಸರ್ವಸ್ವವೆಂದು ಭ್ರಾಂತಿಪಟ್ಟರೆ ಆಧುನಿಕ ಶಿಕ್ಷಕವರ್ಗ ತಾನು ಕಂಡ ಒಂದು ಮುಖವನ್ನೇ ಸತ್ಯಸರ್ವಸ್ವವೆಂದು ಭ್ರಾಂತಿಪಡುತ್ತದೆ. ಈ ಎರಡೂ ವರ್ಗ ತನ್ನ ಗೃಹೀತದ ಮೇಲಿನ ಅಭಿಮಾನವನ್ನು ಒಮ್ಮೆಗಾದರೂ ತೊಲಗಿಸಿ ಸತ್ಯಕ್ಕೆ ಆತ್ಮಾರ್ಪಣೆ ಮಾಡುವ ಮನೋಭಾವವನ್ನು ಹೊಂದದಿದ್ದಲ್ಲಿ ಭಾರತೀಯತೆಯ ಸಾಕ್ಷಾತ್ಕಾರ ಆಗುವ ಸಂಭವ ಇಲ್ಲ.

ಸಂವೇದನಾ ಶೂನ್ಯತೆಯ ಕೆಲವು ಮಾದರಿಗಳು :

ರಾಮಾಯಣ ಆದಿಕಾವ್ಯ ಎಂಬ ಮಾತು ಎಲ್ಲರಿಗೂ ಗೊತ್ತಿರುವಂಥಾದ್ದು ಮತ್ತು ಎಲ್ಲರೂ ಒಪ್ಪಿಕೊಳ್ಳುವಂಥಾದ್ದು. ಇಂಥಾದ್ದರ ಬಗೆಗೆ ಸೂಕ್ಷ್ಮ ಚಿಂತನೆಗೆ ಅವಕಾಶವೇ ಇಲ್ಲ ಎಂಬಂತೆ ಇಂದಿನ ಅಧ್ಯಾಪನ ಮುಂದುವರಿಯುತ್ತದೆ. ಇಂದು ಈ ಮಾತನ್ನು ಅರ್ಥೈಸುವ ವಿಧಾನವೆಂದರೆ: ರಾಮಾಯಣಕ್ಕಿಂತ ಹಿಂದೆ ಭಾರತದೇಶದಲ್ಲಿ ಕಾವ್ಯವೆಂಬುದೇ ಇದ್ದಿಲ್ಲ. ಇದ್ದರೂ ಅವಿಕಸಿತಸ್ಥಿತಿಯಲ್ಲಿತ್ತು. ವೇದದಲ್ಲಿ ಬರುವ ಉಷಃಸೂಕ್ತದಂಥವು ಅವಿಕಸಿತ ಕಾವ್ಯಗಳ ಉದಾಹರಣೆಗಳು. ವೇದಗಳಂತಹ ರಾಮಾಯಣ ಪೂರ್ವ ಗ್ರಂಥರಾಶಿಯಲ್ಲಿ ಪರಿಪೂರ್ಣ ಕಾವ್ಯತ್ವ ಇಲ್ಲ. ಕಾವ್ಯಾಂಶಗಳು ಮಾತ್ರ ಇರಬಹುದು. ಈ ದೇಶದ ಇತಿಹಾಸದಲ್ಲಿ ರಾಮಾಯಣದ ಆವಿರ್ಭಾವ ಒಂದು ನಿರ್ಣಾಯಕ ಮುನ್ನಡೆ. ರಾಮಾಯಣ ಪೂರ್ವ ಸಾಹಿತ್ಯದಲ್ಲಿ ವಸ್ತು-ಪಾತ್ರ-ರಸಗಳಂತಹ ಕಾವ್ಯಾಂಶಗಳ ನಿಶ್ಚಿತತೆಯಾಗಲೀ ಪರಿಪೂರ್ಣತೆಯಾಗಲೀ ಇಲ್ಲ. ಒಟ್ಟಿನಲ್ಲಿ ವೇದ ಕೂಡ ಸಾಹಿತ್ಯ ದೃಷ್ಟಿಯಿಂದ ರಾಮಾಯಣಕ್ಕಿಂತ ಕೀಳು.

ಭಾರತೀಯತೆಯ ಪ್ರಕಾರ, ವಸ್ತು-ಪಾತ್ರಗಳು ಕಾವ್ಯಮೀಮಾಂಸೆಯಲ್ಲಿ ಸ್ವತಂತ್ರತತ್ವಗಳೇ ಅಲ್ಲ. ಕಾವ್ಯ ಹೌದು–ಅಲ್ಲ–ಎಷ್ಟರ ಮಟ್ಟಿಗೆ ಎನ್ನುವುದಕ್ಕೆ ಅವು ನಿರ್ಣಾಯಕಗಳಲ್ಲ. ಅವು ರಸಕ್ಕೆ ಅಧೀನವಾಗಿ ಸಂದರ್ಭ ಸಾಪೇಕ್ಷವಾಗಿ ಕಾವ್ಯದಲ್ಲಿ ಕಾಣಿಸಿಕೊಳ್ಳುವ ಅಂಶಗಳು ಮಾತ್ರ. ರಸದ ಸಂಪರ್ಕವನ್ನು ಕಡಿದು ವಸ್ತು-ಪಾತ್ರಗಳನ್ನು ಸ್ವತಂತ್ರವಾಗಿಸಿ ವಿಶ್ಲೇಷಿಸುವ ಇಂದಿನ ದೃಷ್ಟಿ ಭಾರತೀಯತೆಗೆ ಹೇಗೆ ಅಪಚಾರವೆಂಬುದಕ್ಕೆ ಈ ಹಿಂದಿನ ನಿರೂಪಣೆಯಲ್ಲಿಯೇ ಉತ್ತರ ಇದೆ. ಪ್ರತ್ಯೇಕತೆಯನ್ನು ಸಡಿಲಿಸಿ ಐಕ್ಯವನ್ನು ಅವಧರಿಸುವುದು ಭಾರತೀಯತೆಯಲ್ಲಿನ ಪ್ರಮುಖ ವಿದ್ಯಮಾನವೆಂಬುದನ್ನು ಈ ಪ್ರಬಂಧದ ಪ್ರಾರಂಭದಲ್ಲೇ ಪ್ರಸ್ತಾಪಿಸಲಾಗಿದ್ದು ಅದು ಪ್ರಬಂಧದುದ್ದಕ್ಕೂ ಹಾಸುಹೊಕ್ಕಾಗಿ ನಿಲ್ಲಬೇಕಾದ ಹೇಳಿಕೆ. ಆದುದರಿಂದಲೇ ವಸ್ತು–ಪಾತ್ರಗಳು ಸ್ವತಂತ್ರವಾಗಿ ನಿಲ್ಲದೆ ರಸದಲ್ಲಿ ಲೀನವಾಗುತ್ತವೆ.

ಈಗ, ರಾಮಾಯಣಕ್ಕಿಂತ ಹಿಂದೆ ಕಾವ್ಯ ಪರಿಪೂರ್ಣಾವಸ್ಥೆಯಲ್ಲಿ ಇತ್ತೇ? ಎಂದು ಕೇಳುವುದೂ ರಸದ ಪರಿಪೂರ್ಣತೆಯನ್ನು ರಾಮಾಯಣಕ್ಕಿಂತ ಹಿಂದಿನವರು ಸಾಕ್ಷಾತ್ಕರಿಸಿದ್ದಾರೆಯೇ? ಎಂದು ಕೇಳುವುದೂ ಒಂದೇ. ರಸವೆಂದರೇನು? ಎಂದು ಈಗ ತಿಳಿಯಬೇಕಾಗುತ್ತದೆ. ಪದದ ಅರ್ಥವೇ ತಿಳಿಸುವಂತೆ ಅದು ಕೇವಲಾನುಭವ. ಬ್ರಹ್ಮಾನುಭವ–ಆತ್ಮಾನುಭವಗಳೆಂಬುವು ಇದರ ಪರ್ಯಾಯ ಪದಗಳೇ. ಕೇವಲಾನುಭವವನ್ನು ಅತ್ಯಂತ ಪರಿಪೂರ್ಣವಾಗಿ ಚಿತ್ರಿಸುವ ವೈದಿಕ ಸಾಹಿತ್ಯವನ್ನು ಕಾವ್ಯದ ಅವಿಕಸಿತ ಸ್ಥಿತಿ ಎಂದು ಭಾವಿಸುವುದರಷ್ಟು ದೊಡ್ಡ ಅಪಚಾರ ಭಾರತೀಯತೆಗೆ ಮತ್ತೊಂದಿಲ್ಲ.

ಹಾಗಾದರೆ ರಾಮಾಯಣ ಆದಿಕಾವ್ಯ ಎಂಬ ಮಾತನ್ನು ಒಡೆದು ಹಾಕಬೇಕೆ? ಎಂಬ ಪ್ರಶ್ನೆ ತನ್ನಿಂದ ತಾನಾಗಿಯೇ ಏಳುತ್ತದೆ. ಒಡೆದುಹಾಕಬೇಕಾಗಿಲ್ಲ; ಸಂವೇದನಾಶೀಲವಾಗಿ ಅರ್ಥೈಸಬೇಕು ಎಂಬುದು ಇದಕ್ಕೆ ಉತ್ತರ. ಭಾರತೀಯತೆಯ ಒಂದು ವಿಲಕ್ಷಣತೆಯೆಂದರೆ ಒಂದೇ ಹೇಳಿಕೆಯನ್ನು ಒಮ್ಮೆ ವಿಶಾಲಾರ್ಥದಲ್ಲಿಯೂ ಅದರ ಜೊತೆಗೇ ಎಂಬಂತೆ ಸಂಕುಚಿತಾರ್ಥದಲ್ಲಿಯೂ ಬಳಸುವುದು. ಇದಕ್ಕೆ ಪ್ರಾಚೀನರ ಸಾಮಾಜಿಕ ವ್ಯವಸ್ಥೆ-ವಿಚಾರವಿನಿಮಯ ಪದ್ಧತಿಯಂಥವು ಇಂದಿಗಿಂತ ಸಂಪೂರ್ಣ ಭಿನ್ನವಾಗಿದ್ದುದೇ ಕಾರಣವಾಗಿರಬಹುದು. ಹೇಗಿದ್ದರೂ ಇದೊಂದು ಎದ್ದು ಕಾಣುವ ವಿದ್ಯಮಾನ ಎಂಬುದು ಖಂಡಿತ. ರಾಮಾಯಣ ಆದಿಕಾವ್ಯ ಎಂಬ ಹೇಳಿಕೆಯಲ್ಲಿನ 'ಆದಿ'ಪದ—'ಕಾವ್ಯ' ಪದಗಳನ್ನು ಸೀಮಿತಾರ್ಥದಲ್ಲಿ ಗ್ರಹಿಸಬೇಕು. ಕಾವ್ಯ ಎಂದರೆ ಇಲ್ಲಿ, ಲೌಕಿಕ-ಪಾರಮಾರ್ಥಿಕಗಳೆರಡರ ಸಾಮರಸ್ಯವನ್ನು ವ್ಯವಹಾರಗಮ್ಯವಾಗುವಂತೆ ಒಟ್ಟೊಟ್ಟಿಗೇ ತೋರಿಸುವ ಕೃತಿ ಎಂದು ಸ್ಥೂಲವಾಗಿ ಇಟ್ಟುಕೊಳ್ಳಬಹುದು. ವೈದಿಕ ಸಾಹಿತ್ಯ ಪಾರಮಾರ್ಥಿಕತೆಯನ್ನೇ ಬಹಳವಾಗಿ ಅವಧರಿಸಿ ಲೌಕಿಕತೆಯನ್ನು ಅಭ್ಯಾಸಿಯ ಊಹಾಶಕ್ತಿಗೋ ತನ್ನ ವಿಕ್ಷಿಪ್ತ ಗ್ರಂಥರಾಶಿಯಲ್ಲಿ ದೂರದೂರಕ್ಕೆ ಚದರಿದ ಕೆಲವಕ್ಕೋ ಬಿಡುವ ರೀತಿಯ ಕಾವ್ಯ, ಆದುದರಿಂದ ಅದರ ಕಾವ್ಯತ್ವವನ್ನು ಗ್ರಹಿಸುವುಕ್ಕೆ ತತ್ವಚಿಂತನೆಯ ಹಿನ್ನೆಲೆ ಅಗಾಧವಾಗಿರಬೇಕು. 'ಆದಿ' ಪದವನ್ನು ಭಾರತೀಯತೆಯ ಸಂದರ್ಭದಲ್ಲಿ ಗ್ರಹಿಸಿದಾಗ . ಇದರ ಅರ್ಥ ಸಾಪೇಕ್ಷವೇ ಹೊರತು ನಿರಪೇಕ್ಷ ಅಲ್ಲ. ಭಾರತೀಯರ ಕಾಲಗತಿ–ಸೃಷ್ಟಿ ಕ್ರಮ ಮೊದಲಾದುವನ್ನು ಗ್ರಹಿಸಬಲ್ಲವನಿಗೆ ಕಾಲವೆಂಬುದು ಚಕ್ರಾಕಾರದ ಗತಿಯುಳ್ಳದ್ದು

ಮತ್ತು ಸೃಷ್ಟಿ ಎಂಬುದು ಅವ್ಯಕ್ತವಾಗಿದ್ದುದರ ವ್ಯಕ್ತೀಭವನವೇ ಹೊರತು ಹಿಂದೆ ಇಲ್ಲದಿದ್ದುದರ ನೂತನ ಉತ್ಪತ್ತಿ ಅಲ್ಲ. ಆದುದರಿಂದ ಹಿಂದೆ ಇದ್ದಿಲ್ಲವೆಂದು ತತ್ವತಃ ಯಾವುದನ್ನೂ ಹೇಳುವಂತಿಲ್ಲ. ಕಾವ್ಯದಂಥಾ ಸಂವೇದನಾವಸ್ತುವನ್ನು ಯಾವ ರೀತಿಯಲ್ಲಿಯೂ ಹೇಳುವಂತಿಲ್ಲ. ಭೂತಭವಿಷ್ಯದ್ವರ್ತಮಾನಗಳೆಂಬ ಕಾಲಿಕ ವಿಶ್ಲೇಷಣೆ ವಿಚಾರ ಸೌಕರ್ಯಕ್ಕೇ ಹೊರತು ತಾತ್ವಿಕ ಸಾಕ್ಷಾತ್ಕಾರಕ್ಕಲ್ಲ ಎಂಬುದನ್ನು ಪ್ರಾರಂಭದಲ್ಲೇ ಪ್ರಸ್ತಾಪಿಸಲಾಗಿದೆ. ಅವಿಕಸಿತತೆಯಿಂದ ವಿಕಸಿತತೆಗೆ ಎಂದು ನಾವು ಇಂದಿಗೆ ಇಟ್ಟುಕೊಂಡು ಮುನ್ನಡೆಯುವಂಥಾದ್ದು ವಿಶ್ವವ್ಯಾಪಿ-ತ್ರಿಕಾಲವ್ಯಾಪಿ ಸಂವೇದನೆಯ ಪರಿಮಿತ ಅಂಶ ಎಂಬ ಹಿನ್ನೆಲೆಯಲ್ಲಿ ಭಾರತೀಯ ಸಾಹಿತ್ಯ ರೂಪುಗೊಂಡಿದೆ. ಆದುದರಿಂದ ನಮ್ಮ ಇಂದಿನ ಹೇಳಿಕೆಗಳನ್ನಾಗಲೀ ವ್ಯವಹಾರ ಸಿದ್ಧ ಅನುಭವವನ್ನಾಗಲೀ ಹೊಡೆದು ಹಾಕಬೇಕೆಂದು ಭಾರತೀಯತೆ ಹೇಳುತ್ತದೆ ಎಂದು ಅರ್ಥ ಮಾಡುವುದು ಸರಿಯಲ್ಲ. ಬದಲಾಗಿ ಅವುಗಳ ತಾತ್ವಿಕ ಪರಿಮಿತಿಯನ್ನು ಗ್ರಹಿಸಿಕೊಳ್ಳಿ ಎಂಬ ಸೂಚನೆಯನ್ನು ಭಾರತೀಯತೆ ಆಗಾಗ ಕೊಡುತ್ತದೆ. ಹೀಗೆ ಆಧುನಿಕತೆಯನ್ನೂ ಪ್ರಾಚೀನತೆಯನ್ನೂ ಸಮತೋಲನಗೊಳಿಸುವುದರಲ್ಲಿ ಭಾರತೀಯತೆಗೆ ಅಪಚಾರ ಇಲ್ಲ. ಆಧುನಿಕತೆಯೊಂದೇ ಸತ್ಯ ಎನ್ನುವುದರಲ್ಲಿ ಅಪಚಾರ ಇದೆ. ಒಟ್ಟಿನಲ್ಲಿ ಒಂದು ಮಾದರಿಯ ಕಾವ್ಯಕ್ಕೆ ರಾಮಾಯಣ ಆದಿಯಾಗಬಹುದು ವಿನಾ ಭಾರತೀಯರ ಕಾವ್ಯ ಪ್ರಪಂಚಕ್ಕೇ ರಾಮಾಯಣ ಆದಿ ಎನ್ನುವುದು ಸರಿ ಅಲ್ಲ. ಇಂಥಾದ್ದೇ ಆದಿ ಎಂದು ಹೇಳುವುದೇ ಅಸಾಧ್ಯ ಮತ್ತು ಅನಾವಶ್ಯಕ ಎಂಬಂತೆ ಭಾರತೀಯತೆ ರೂಪುಗೊಂಡಿದೆ. ಐತಿಹಾಸಿಕತೆ-ಕಾಲಾನುಕ್ರಮ ಮುಂತಾಗಿ ನಾವು ಇಂದು ಆಗ್ರಹಪಡುವುದರಲ್ಲಿ ಸಂವೇದನಾ ಪರಿಮಿತಿ ಇದೆ ಎಂಬುದು ಭಾರತೀಯ ನಿಲು.

ಕಾವ್ಯ ಬೇರೆ-ಶಾಸ್ತ್ರಬೇರೆ ಎಂಬ ಮಾತೂ ಇಂದು ಭಾರತೀಯ ಸಾಹಿತ್ಯಾಧ್ಯಯನದಲ್ಲಿ ಹಾಸು ಹೊಕ್ಕಾಗಿದೆ. ವೇದ ಪ್ರಭುಸಂಮಿತ, ಪುರಾಣ ಮಿತ್ರಸಂಮಿತ, ಕಾವ್ಯ ಕಾಂತಾಸಂಮಿತ ಎಂಬ ವರ್ಗೀಕರಣ ಕಾವ್ಯ ಮೀಮಾಂಸಾ ಗ್ರಂಥಗಳಲ್ಲಿ ಸ್ಪಷ್ಟವಾಗಿ ಕಂಡು ಬರುವುದು, ಶಾಸ್ತ್ರವನ್ನು ಯಾರು ಬೇಕಾದರೂ ಒಂದು ನಿಶ್ಚಿತ ಅವಧಿಯೊಳಗೆ ಅಭ್ಯಾಸ ಮಾಡಿ ಬಿಡಬಹುದು-ಕಾವ್ಯ ರಚನಾ ಸಾಮರ್ಥ್ಯ ಮತ್ತು ಕಾವ್ಯಾಭ್ಯಾಸ ಸಾಮರ್ಥ್ಯ ಅಪರೂಪವಾಗಿ ಪ್ರತಿಭಾವಂತನಿಗೆ ಮಾತ್ರ ಸಿದ್ಧಿಸುವುದು ಎಂಬ ಹೇಳಿಕೆಯನ್ನು ಕಾವ್ಯಮೀಮಾಂಸಕನು ಮಾಡಿರುವುದು-ಇಂಥವು ಈ ಪ್ರತ್ಯೇಕತೆಯನ್ನು ಸಮರ್ಥಿಸುತ್ತವೆ. ಇಲ್ಲಿಯೂ ವಿದ್ಯಾರ್ಥಿ ತಪ್ಪಿ ಬೀಳುತ್ತಾನೆ. ಪ್ರಭು ಸಂಮಿತವಾದುದು ಮಿತ್ರಸಂಮಿತವೂ ಕಾಂತಾ ಸಂಮಿತವೂ ಆಗಿರಬಾರದೆಂಬ ನಿಯಮವಿಲ್ಲ. ಭಾರತೀಯರ ವರ್ಗೀಕರಣಗಳಲ್ಲಿ ವರ್ಗೀಕೃತಾಂಶಗಳು ಪರಸ್ಪರ ಒಂದನ್ನೊಂದು ಹೊರತು ಪಡಿಸಿಕೊಂಡು ರೂಪಿತವಾಗಿರುವುದಿಲ್ಲ. ನಾಲ್ಕು ಪುರುಷಾರ್ಥಗಳು, ನಾಲ್ಕು ವರ್ಣಗಳು, ನಾಲ್ಕು ಆಶ್ರಮಗಳು-ಇಂಥವುಗಳೆಲ್ಲೆಲ್ಲಾ ಪರಸ್ಪರ ಪೂರಕತನ ಇದ್ದೇ ಇದೆ. ಅಲ್ಲದೆ, ಒಂದು ಆದರ್ಶ ಸಮಾಜದಲ್ಲಿ ಪ್ರಭುವಿನ ಮಾತು ಕಠೋರವೂ ಅಶ್ರಾವ್ಯವೂ ಆಗಿರುವ ಸಾಧ್ಯತೆ ಇಲ್ಲ. ಕಾಂತೆಯ ಮಾತು ಒಂದು ರೀತಿಯಿಂದ ಆಕರ್ಷಕವಾಗಿದ್ದರೆ ಪ್ರಭುವಿನ ಮಾತು ಇನ್ನೊಂದು ರೀತಿಯಿಂದ, ಮಿತ್ರನ ಮಾತು ಮತ್ತೊಂದು ರೀತಿಯಿಂದ—ಹೀಗೆ ಸತ್ಯ ಸಾಕ್ಷಾತ್ಕಾರದ ಗುರಿ ಇದ್ದವನಿಗೆ ಎಲ್ಲಾ ಸ್ಥಾನದವರ ಮಾತೂ ಒಂದಲ್ಲ ಒಂದು ರೀತಿಯಲ್ಲಿ ಹಿತವೂ ಆಕರ್ಷಕವೂ ಆಗಿಯೇ ನಿಲ್ಲುತ್ತದೆ. ಇಷ್ಟೂ ಅಲ್ಲದೆ, ಕಾವ್ಯಮೀಮಾಂಸಕರಲ್ಲಿ ಮುನಿ ಎನ್ನಿಸಿಕೊಂಡ ಭರತನಾಗಲೀ ಕಾವ್ಯಮೀಮಾಂಸಕ-ಆಚಾರ್ಯರಲ್ಲಿ ಅತಿಶ್ರೇಷ್ಠ ಎನ್ನಿಸಿಕೊಂಡ ಆನಂದವರ್ಧನನಾಗಲೀ ಇಂತಹ ವರ್ಗೀಕರಣಕ್ಕೆ ಮಹತ್ವಕೊಟ್ಟಿದು ಕಂಡು ಬರುವುದಿಲ್ಲ.

ಶಾಸ್ತ್ರವನ್ನು ಕಡಿಮೆ ಬುದ್ಧಿಯವನೂ ಅಭ್ಯಾಸ ಮಾಡಬಹುದು; ಕಾವ್ಯರಚನೆ-ಕಾವ್ಯಾಭ್ಯಾಸಕ್ಕೆ ಪ್ರತಿಭಾವಂತನೇ ಆಗಬೇಕು-ಈ ಮಾತನ್ನು ಭಾರತೀಯರ ಪ್ರಾತಿನಿಧಿಕ ಅಭಿಪ್ರಾಯವೆಂದಾಗಲೀ ಆ ಗ್ರಂಥಕಾರನ ಪ್ರಾತಿನಿಧಿಕ ಅಭಿಪ್ರಾಯವೆಂದಾಗಲೀ ಗ್ರಹಿಸುವುದು ತಪ್ಪಾಗುತ್ತದೆ. ಯಾಕೆಂದರೆ, ಅದೇ ಗ್ರಂಥಕಾರನ ಮುಂದಿನ ಪ್ರತಿಪಾದನೆಯನ್ನು ನೋಡುತ್ತಾ ಹೋದಂತೆ ಶಾಸ್ತ್ರದ ಹಿನ್ನೆಲೆಯಿಲ್ಲದ ಕಾವ್ಯ ಹೇಗೆ ಸತ್ವಶೂನ್ಯವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಹೀಗೆ ಭಾರತೀಯ ಗ್ರಂಥಗಳನ್ನುಸಂವೇದನಾಶೀಲವಾಗಿ ಅಭ್ಯಾಸ ಮಾಡುವಾಗ ಕಾವ್ಯ-ಶಾಸ್ತ್ರ, ಕಾವ್ಯ-ವೇದ-ಪುರಾಣ ಇಂತಹ ಅನಂತ

ವರ್ಗೀಕರಣಗಳೊಳಗೆ ಪ್ರತ್ಯೇಕತೆಗಿಂತ ಪೂರಕತನವೇ ಹೆಚ್ಚು ಮೌಲಿಕ ಎಂಬುದು ಸ್ಪಷ್ಟವಾಗುತ್ತಾ ಹೋಗುತ್ತದೆ. ವೇದದಂಥಾದ್ದನ್ನು ಅರ್ಥಮಾಡುವಾಗಲೂ ಒಂದೊಂದು ಹೇಳಿಕೆಗಳಿಗೆ ಅಂಟಿಕೊಳ್ಳದೆ ಅದರ ಅಖಂಡ ಆಸ್ವಾದ ಸಾಧ್ಯವಾಗಬೇಕು ಎಂಬ ಕಾರಣದಿಂದಲೇ ಮೀಮಾಂಸಾ ಮತ್ತು ವೇದಾಂತ ದರ್ಶನಗಳು ಹುಟ್ಟಿಕೊಂಡಿವೆ. ವೇದದ ಬಿಡಿ ಹೇಳಿಕೆಗಳ ಮೌಲ್ಯ ಹೇಗೆ ಸಾಪೇಕ್ಷವಾಗಿದ್ದು ಕೇಂದ್ರೀಯ ವಿಚಾರಕ್ಕೆ ಅಧೀನವಾಗಿಟ್ಟೇ ಅವುಗಳನ್ನು ಅರ್ಥೈಸಬೇಕು ಎಂದು ಈ ದರ್ಶನಗಳು ಸಾರುತ್ತವೆ. ವೇದವನ್ನು ವಿಶ್ಲೇಷಣೆ ಮಾಡಿ ಅರ್ಥ ನಿರ್ಣಯವನ್ನು ಮಾಡುವಲ್ಲಿ ಈ ದರ್ಶನಗಳು ತೋರುವ ಕೌಶಲ ಇಡೀ ಅಭಿವ್ಯಕ್ತಿ ಪ್ರಪಂಚದ ಮೇಲೆಯೇ ಬೆಳಕುಚೆಲ್ಲಿ ಅನುಭವ–ಅಭಿವ್ಯಕ್ತಿಗಳೊಳಗೆ ಇರಬೇಕಾದ ನಿತ್ಯ ಮತ್ತು ಆದರ್ಶರೂಪಿ ಸಂಬಂಧವನ್ನು ಸ್ಪಷ್ಟಪಡಿಸುತ್ತವೆ. ವ್ಯಾಕರಣದಂತಹ ವೇದಾಂಗಗಳೂ ಇವಕ್ಕೆ ಪೂರಕವಾಗಿಯೇ ಕೆಲಸ ಮಾಡುತ್ತವೆ. ಇವುಗಳೊಳಗಿನ ಅಪಾರ ವಿರೋಧಕ್ಕೆ ಇಂದಿನ ಅಧ್ಯಯನದಲ್ಲಿ ಹೆಚ್ಚಿನ ಸ್ಥಾನ ಕೊಡಲಾಗುತ್ತದೆ ವಿನಾ ಅವುಗಳ ಪರಸ್ಪರ ಪೂರಕತನದ ಬಗೆಗೆ ಸಾಕಷ್ಟು ಗಮನ ಕೊಡಲಾಗುವುದಿಲ್ಲ. ಹಿಂದೆ ನೋಡಲಾದಂತೆ ಕಾವ್ಯಬೇರೆ ಶಾಸ್ತ್ರಬೇರೆ ಎಂಬ ಸರಣಿಯು ಮುಂದುವರಿಯುವಿಕೆಯಾಗಿ ಒಂದು ಶಾಸ್ತ್ರ ಇನ್ನೊಂದು ಶಾಸ್ತ್ರಕ್ಕಿಂತ ಬೇರೆ ಮತ್ತು ಇವು ಪರಸ್ಪರ ವಿರೋಧಿಗಳೋ ಎಂಬಂತೆ ಇಂದಿನ ಅಧ್ಯಯನ ಸಾಗುತ್ತದೆ.

ಒಟ್ಟಿನಲ್ಲಿ ಭಾರತೀಯ ಗ್ರಂಥಗಳಲ್ಲಿನ ಅಪಾರ ವಿರೋಧಗಳು, ಕಳೆದು ಹೋದ ಕೊಂಡಿಗಳು, ಸಂವೇದನೆಯ ಹೊರತಾಗಿ ಯಾವ ಬಾಹ್ಯ ಆಧಾರವೂ ಇಲ್ಲದಂತೆ ಅಭಿವ್ಯಕ್ತಿ ಮಾಧ್ಯಮ ಹೊಂದುವ ವಿಶಾಲತೆ–ಸಂಕುಚಿತತೆಗಳು–ಇಂಥವುಗಳಿಂದಲಾಗಿ ಭಾರತೀಯತೆಗೆ ಪ್ರಾತಿನಿಧಿಕವಾಗಿ ನಿಲ್ಲುವ ಅಂಶಗಳಾವುವು ಎಂದು ನಿರ್ಣಯಿಸುವಲ್ಲಿ ದೊಡ್ಡ ತೊಡಕುಗಳುಂಟಾಗಿವೆ. ಸಂವೇದನೆಯೊಂದೇ ಇದಕ್ಕೆ ತಾರಕ ಮಂತ್ರವಾಗಿದ್ದು ಅದರ ಅಭಾವದಿಂದಲಾಗಿ ಭಾರತೀಯತೆಯ ಅಧ್ಯಯನ ಇಂದಿಗೆ ಸತ್ವಶೂನ್ಯವಾಗಿದೆ. ಒಂದು ಸಂಕ್ಷಿಪ್ತ ಉದಾಹರಣೆಯನ್ನು ಕೊಡುವುದಿದ್ದರೆ: ಜಗತ್ತು ಬದಲಾಗುವುದೇ ಇಲ್ಲ ಎಂದು ಒಂದುಶಾಸ್ತ್ರ ಹೇಳಿದರೆ ದಿನದಿಂದ ದಿನಕ್ಕೆ ಅದು ದೋಷಪೂರಿತವಾಗಿ ಮಾರ್ಪಡುತ್ತದೆ ಎಂದು ಇನ್ನೊಂದು ಶಾಸ್ತ್ರ ಹೇಳುತ್ತದೆ, ಕಾಲಕ್ರಮದಲ್ಲಿ ಮುಂದೆ ಮುಂದೆ ಹೋದಂತೆ ಕೆಲವು ಮಟ್ಟಿಗಾದರೂ ತಿಳಿವಳಿಕೆಯಂಥದ್ದು ಹೆಚ್ಚುವ ಸಾಧ್ಯತೆಯ ಕುರಿತು ಮತ್ತೊಂದು ಶಾಸ್ತ್ರ ಹೇಳುತ್ತದೆ. ಈ ಮೂರು ಹೇಳಿಕೆಗಳಲ್ಲಿ ಯಾವುದು ಭಾರತಕ್ಕೆ ಪ್ರಾತಿನಿಧಿಕ ಎಂಬ ಪ್ರಶ್ನೆಗೆ ಈ ಮೂರೂ ಸತ್ಯದ ಮುಖಗಳಾಗಿದ್ದು ಈ ಮೂರರ ಸಮನ್ವಯವೇ ಜೀವನದ ಸ್ವಾರಸ್ಯವೆಂಬಂತೆ ಸಂವೇದನಾಶೀಲವಾಗಿ ಅರ್ಥೈಸುವ ಕೆಲಸವನ್ನೇ ವ್ಯಕ್ತಿಗಳಿಗೆ ಗ್ರಂಥಕಾರರು ಬಿಟ್ಟು ಕೊಟ್ಟಿದ್ದಾರೆ.

ಕಾವ್ಯಮೀಮಾಂಸಾ ಪರಿಭಾಷೆ ಮತ್ತು ಭಾರತೀಯತೆ :

ಕಾವ್ಯಮೀಮಾಂಸಾ ಗ್ರಂಥಗಳು, ಗ್ರಂಥಕರ್ತರು ಮತ್ತು ಪಾರಿಭಾಷಿಕ ಪದಗಳು—ಇಂಥವುಗಳ ಕುರಿತು ಸಾಕಷ್ಟು ಬರವಣಿಗೆಗಳು ಬೇರೆಬೇರೆ ಭಾಷೆಗಳಲ್ಲಿ ಪ್ರಕಟವಾಗಿವೆ. ಈ ಎಲ್ಲಾ ಬರವಣಿಗೆಗಳನ್ನು ಕ್ರೋಡೀಕರಿಸಿದಾಗ ಅವುಗಳಲ್ಲಿ ಒಂದು ಪರಿಮಿತಿ ಎದ್ದು ಕಾಣುತ್ತದೆ. ಅದೆಂದರೆ: ಕಾವ್ಯಮೀಮಾಂಸೆಯೆಂದು ನಾವಿಂದು ಅಭ್ಯಾಸಮಾಡುವ ವೈಚಾರಿಕಸರಣಿ ಹೇಗೆ ಮತ್ತು ಎಷ್ಟರಮಟ್ಟಿಗೆ ಭಾರತೀಯ ಎಂಬ ಪ್ರಶ್ನೆಯನ್ನು ಯಾರೂ ಎತ್ತಿ ಉತ್ತರಿಸುವ ಪ್ರಯತ್ನವನ್ನು ಮಾಡಿಲ್ಲ. ಭಾರತ ದೇಶದಲ್ಲಿ ಹುಟ್ಟಿದ ಗ್ರಂಥಕಾರರು ಕಾವ್ಯಮೀಮಾಂಸೆ ಎಂಬ ಹೆಸರಿನಲ್ಲಿ ಬರೆದ ಎಲ್ಲಾ ಗ್ರಂಥಗಳ ವಿಷಯಗಳನ್ನು ಸಂಗ್ರಹಿಸಿ ಕಲೆಹಾಕುವುದು ತಳಸ್ಪರ್ಶಿ ನಿರೂಪಣೆ ಅಲ್ಲ. ಭಾರತೀಯತೆಯ ಸಂಕೇತವಾಗಿ ಎದ್ದು ಕಾಣುವ ಲಕ್ಷಣಗಳು ಕಾವ್ಯಮೀಮಾಂಸೆಯಲ್ಲಿ ಹಾಸುಹೊಕ್ಕಾಗಿದ್ದರೇನೇ ಅದು ಭಾರತೀಯ. ಈ ತಳಸ್ಪರ್ಶಿತ್ವ ಈ ತನಕದ ಕಾವ್ಯಮೀಮಾಂಸಾಧ್ಯಯನದಲ್ಲಿ ಮೂಡಿಬಂದಿಲ್ಲ. ಇದಕ್ಕೆ ಕಾರಣ, ನಾವು ಹಿಂದೆಯೇ ಪ್ರಸ್ತಾಪಿಸಿದಂತೆ ರಾಮಾಯಣ ಆದಿಕಾವ್ಯ, ಕಾವ್ಯ ಶಾಸ್ತ್ರಕ್ಕಿಂತ ಬೇರೆ ಎಂಬಂತಹ ಹೇಳಿಕೆಗಳ ಮೇಲೆ ಅತಿಯಾದ ಅವಧಾರಣೆ, ಕಾವ್ಯಾಭ್ಯಾಸಕ್ಕೆ ರಾಮಾಯಣದಿಂದ ಹಿಂದಿನ ಯುಗ ಅಗತ್ಯ ಇಲ್ಲ, ಶಾಸ್ತ್ರಾಭ್ಯಾಸ ಕಾವ್ಯ ಸಂವೇದನೆಗೆ ಮಾರಕ ಎಂಬಂತಹ ಭ್ರಾಂತಿ, ರಾಮಾಯಣ ಪೂರ್ವಯುಗದ ಅವಿಕಸಿತ ಕಾವ್ಯ ವಾಲ್ಮೀಕಿಯಲ್ಲಿ ವಿಕಸಿತವಾಗಿ ಕಾಳಿದಾಸನಲ್ಲಿ ಇನ್ನಷ್ಟು ವಿಕಸಿತ

ಎಂಬ ಪ್ರಕಾರದ ಕಲ್ಪನೆ ಇದಕ್ಕೆ ಹಿನ್ನೆಲೆಯಾಗಿರುವುದು ಕಾಲಾನುಕ್ರಮದಲ್ಲಿ ಉತ್ತರೋತ್ತರ ವಿಕಾಸ ಹೊಂದುವುದು. ಅವ್ಯಭಿಚರಿತ ವಿಶ್ವನಿಯಮ ಎಂಬಂತೆ ಸತ್ಯದ ಉಳಿದ ಮುಖಗಳನ್ನು ಮರೆತು ಒಂದು ಮುಖದ ಮೇಲೆ ಅತಿಯಾದ ಆಗ್ರಹ.

ಕಾವ್ಯದ ಬಗೆಗೆ ಇರುವಂತೆಯೇ ಕಾವ್ಯಮೀಮಾಂಸೆಯ ಬಗೆಗೂ ಈ ವಿಕಾಸವಾದ ಒಂದೇ ಸತ್ಯ ಎಂಬ ಭ್ರಾಂತಿ ಸಮಾನಾಂತರವಾಗಿ ಪ್ರವಹಿಸುತ್ತದೆ. ಕಾವ್ಯಮೀಮಾಂಸೆ ತತ್ವಗಳು ಭರತನಲ್ಲಿ ಅವಿಕಸಿತವಾಗಿದ್ದು ಭಾಮಹ, ದಂಡಿಗಳ ಮೂಲಕ ವಿಕಾಸಪಡೆಯುತ್ತಾ ಆನಂದವರ್ಧನದಲ್ಲಿ ವಿಕಸಿತವಾಗಿ ಅವನ ನಂತರದ ಗ್ರಂಥಕಾರರಲ್ಲಿ ಇನ್ನಷ್ಟು ಪರಿಷ್ಕೃತವಾದುವು ಎಂಬುದು ಇಂದಿನ ಬರವಣಿಗೆಗಳ ಪ್ರಧಾನಸರಣಿ. ಇದರಿಂದಲಾಗಿ ವಿದ್ಯಾರ್ಥಿ ಎಷ್ಟು ತಪ್ಪಿ ಬೀಳುತ್ತಾನೆ ಎಂದರೆ ಕಾವ್ಯಮೀಮಾಂಸಾ ಪರಿಭಾಷೆಯಲ್ಲಿ ಆದ ಬೆಳವಣಿಗೆಯೇ ಈ ದೇಶದಲ್ಲಿ ಕಾವ್ಯಸಂವೇದನೆಯಲ್ಲಿಯೂ ಆದ ಬೆಳವಣಿಗೆ ಎಂದು ಭ್ರಾಂತಿಪಡುತ್ತಾನೆ. ಕಾಲಾನುಕ್ರಮದ ಉತ್ತರೋತ್ತರ ವಿಕಾಸನಿಯಮ ಭಾರತೀಯ ಸಾಹಿತ್ಯದ ಬೆಳವಣಿಗೆಗಾಗಲೀ ಸಂವೇದನೆಯ ಬೆಳವಣಿಗೆಗಾಗಲೀ ವಾಪಕವಾಗಿ ಅನ್ವಯಿಸುವುದಿಲ್ಲ. ಸೃಷ್ಟಿಯ ಬಗೆಗೆ ಅವರ ಕಲ್ಪನೆ ಏನಿತ್ತು ಅದನ್ನೇ ಅನುಸರಿಸಿ ಅವರ ಸಾಹಿತ್ಯ ಸೃಷ್ಟಿಯೂ ಆಗಿದೆ. ಅವ್ಯಕ್ತವಾದ್ದುದು ವ್ಯಕ್ತವಾಗುವುದಷ್ಟೇ ಅವರಿಗೆ ಸೃಷ್ಟಿಯೇ ಹೊರತು ಇಲ್ಲದೆ ಇದ್ದುದರ ಉತ್ಪತ್ತಿ ಅಲ್ಲ ಎಂಬುದನ್ನು ಹಿಂದೆಯೇ ನೋಡಿದ್ದೇವೆ, ಇದರಿಂದಲಾಗಿ ಹಿಂದಿನದ್ದು ಅವಿಕಸಿತವಾಗಿ ನಿಲ್ಲುವ ಬದಲು ಮುಂದಿನದನ್ನು ಗರ್ಭಿಸಿಕೊಂಡಿರುವ ಸಾಧ್ಯತೆಯೇ ಇವರ ದೃಷ್ಟಿಯಲ್ಲಿ ಸತ್ಯ ಸಮೀಪವರ್ತಿ, ಅಥವಾ, ಆದಕ್ಕಿಂತಲೂ ಮುಂದೆ ಹೋದಾಗ ಮೊದಲು - ಅನಂತರ ಎಂಬ ವಿವೇಚನೆಯೇ ಇವರ ಪ್ರಕಾರ ತಳಸ್ಪರ್ಶಿ ಅಲ್ಲ. ಬದಲಾಗಿ ಯಾವುದು ವೈಚಾರಿಕವಾಗಿ ಕೇಂದ್ರೀಯ ಮತ್ತು ಪ್ರಾತಿನಿಧಿಕ ಮತ್ತು ಯಾವುದು ಪಾರ್ಶ್ವೀಯ ಮತ್ತು ಪರೋಕ್ಷಪ್ರಾತಿನಿಧಿಕ ಎಂಬ ನಿರ್ಣಯವಷ್ಟೇ ಇವರಿಗೆ ಅರ್ಥಪೂರ್ಣ.

'ರಾಮಾಯಣ ಆದಿಕಾವ್ಯ' ಎಂಬ ಮಾತು ಎಷ್ಟರ ಮಟ್ಟಿಗೆ ಅರ್ಥಪೂರ್ಣ ಎಂಬುದನ್ನು ನಾವು ಹಿಂದೆಯೇ ವಿಶ್ಲೇಷಿಸಿದ್ದೇವೆ. 'ಆನಂದವರ್ಧನನಲ್ಲಿ ಕಾವ್ಯಮೀಮಾಂಸೆ ಅತ್ಯಂತ ವಿಕಸಿತ' ಎಂಬ ಹೇಳಿಕೆಯನ್ನು ಈಗ ಗಮನಿಸೋಣ. ಅವನ ಹೇಳಿಕೆಯ ಪ್ರಕಾರವೇ: ಧ್ವನಿತತ್ವಪ್ರತಿಪಾದನೆಯಲ್ಲಿ ಕಾವ್ಯಮೀಮಾಂಸೆ ವ್ಯಾಕರಣ ವೇದಾಂಗಕ್ಕೆ ಋಣಿ, ಅಂದರೆ. ಧ್ವನಿತತ್ವದ ಸ್ವಾರಸ್ಯ ಗ್ರಹಣಕ್ಕೆ ವ್ಯಾಕರಣಾಭ್ಯಾಸ ಅನಿವಾರ್ಯ ಮತ್ತು ಈ ತತ್ವಪ್ರತಿನಿಧಿಸುವ ಸಂವೇದನೆಯನ್ನು ವ್ಯಾಕರಣಕಾರರು ಹಿಂದೆಯೇ ಗುರುತಿಸಿದ್ದಾರೆ. ಇನ್ನೊಂದು ಕೋನದಿಂದ ನೋಡಿದಾಗ ಭರತನ ರಸಪ್ರತಿಪಾದನೆಯನ್ನು ಪೂರಕವಾಗಿ ಬಳಸದ ಹೊರತು ಧ್ವನಿತತ್ವವೇ ಸತ್ವಶೂನ್ಯ. ಮತ್ತೂ ಒಂದು ಕೋನದಿಂದ ನೋಡಿದಾಗ ಧ್ವನಿತತ್ವಕ್ಕೆ ಸಮರ್ಪಕ ಉದಾಹರಣೆ ಇರುವುದು ವಾಲ್ಮೀಕಿ–ವ್ಯಾಸ–ಕಾಳಿದಾಸರ ಕಾವ್ಯಗಳಲ್ಲಿಯೇ ಹೊರತು ತನ್ನ ಸಮಕಾಲೀನರಲ್ಲಾಗಲೀ ಹಿರಿಯ ಸಮಕಾಲೀನರಲ್ಲಾಗಲೀ ಅಲ್ಲ. ಆದುದರಿಂದ, ಧ್ವನಿಪರಿಭಾಷೆ ನಿಷ್ಕೃಷ್ಟವಾಗುವುದಕ್ಕೆ ಸಾವಿರ ವರ್ಷಗಳಷ್ಟಾದರೂ ಮೊದಲೇ ಧ್ವನಿಸಂವೇದನೆ ವೇದಾಂಗಕಾರ - ಕವಿಇತಿಹಾಸಕಾರ–ಕಲಾಮೀಮಾಂಸಕ ಶಾಸ್ತ್ರಕಾರರೆಂಬ ಋಷಿ ಮುನಿಗಳಲ್ಲಿ ನಿಷ್ಕೃಷ್ಟವಾದದನ್ನು ಒಪ್ಪಬಹುದು.

ಪ್ರಧಾನ ಪರಿಭಾಷೆಗಳು :

1. ರಸ. ಕಾವ್ಯಮೀಮಾಂಸೆಯುದ್ದಕ್ಕೂ ಪ್ರವಹಿಸುವ ಪರಿಭಾಷಾಕಲ್ಪನೆ ಎಂದರೆ ರಸ. ಕಾವ್ಯದಲ್ಲಿ ಇದರ ಪ್ರಾಧಾನ್ಯವನ್ನು ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಿಯಾಗಲೀ ಒಪ್ಪದ ಕಾವ್ಯಮೀಮಾಂಸಕನಿಲ್ಲ. ಐತಿಹಾಸಿಕವಾಗಿ ಈ ಪದದ ಸಮೀಕ್ಷೆ ನಡೆಸಿದವರು ವೇದದಲ್ಲಿ ಅಸ್ಪಷ್ಟವಾಗಿ ಕಾವ್ಯಮೀಮಾಂಸಕವಾಗಿದ್ದ ಈ ಕಲ್ಪನೆ ಭರತನಲ್ಲಿ ಸ್ಪಷ್ಟವಾಗಿ ಕಾವ್ಯಮೀಮಾಂಸಕವಾಯಿತೆಂದೂ ಆನಂದವರ್ಧನ – ಅಭಿನವಗುಪ್ತರಲ್ಲಿ ಇನ್ನಷ್ಟು ನಿಷ್ಕೃಷ್ಟವಾಗಿ ಕಾವ್ಯಮೀಮಾಂಸಕವಾಯಿತೆಂದೂ ಅಭಿಪ್ರಾಯಪಡುತ್ತಾರೆ. ಕಾವ್ಯರಸ ಬ್ರಹ್ಮಾನಂದಸಹೋದರವೆಂಬ ಕಲ್ಪನೆ ಬಂದುದು ಭರತನಿಂದ ಎಷ್ಟೋ ಅನಂತರ ಎಂಬುದೂ ಇವರ ಅಭಿಪ್ರಾಯ. ಈ ಪ್ರಬಂಧದಲ್ಲಿ ಹಿಂದೆ ನೋಡಲಾದಂತೆ, ಇಂತಹ ವಿಕಾಸವಾದ ಭಾರತೀಯತೆಯನ್ನು ಸಂವೇದನಾಶೀಲವಾಗಿ ನೋಡದಿರುವುದರಿಂದ ಮತ್ತು ಇಂದಿನ ಶಿಕ್ಷಣ

ಕ್ರಮದಲ್ಲಿ ಹಾಸು ಹೊಕ್ಕಾಗಿರುವ ನಿರೂಪಣಪದ್ಧತಿಯನ್ನು ಪ್ರಾಚೀನರ ಮೇಲೆ ಹೇರುವುದರಿಂದ ಮಾತ್ರ ಪುಷ್ಟಿಪಡೆಯಬಲ್ಲದು ಎಂಬುದನ್ನು ಇಲ್ಲಿ ಪುನಃ ನೆನೆಯಬೇಕು. ಬ್ರಹ್ಮಾನಂದ ಒಂದೇ ಸರ್ವಗ್ರಾಹಿಯಾದ ಸತ್ಯ ಎಂದು ಉಪನಿಷತ್ತುಗಳಲ್ಲಿ ನಿರೂಪಿತವಾದುದರಿಂದ ಮತ್ತು ಅನಂತರದ ಭಾರತೀಯತೆ ಅದನ್ನು ಒಪ್ಪಿಯೇ ಮುಂದುವರಿದುದರಿಂದ ಉಳಿದ ಎಲ್ಲಾ ಆನಂದಗಳೂ ಅದರ ಅಂಶಗಳೋ ಛಾಯೆಗಳೋ ಆಗದೆ ಇರುವುದು ಸಾಧ್ಯಇಲ್ಲ. ಉಪನಿಷದ್ದ್ರಷ್ಟಾರರು ಜೀವನದ ಎಲ್ಲಾ ಮುಖಗಳನ್ನು ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಸಾಕ್ಷಾತ್ಕರಿಸಿದವರೇ ಎಂಬ ಭಾರತೀಯ ಕಲ್ಪನೆಗೆ ಅವರಿಗೆ ಕಾವ್ಯಮೀಮಾಂಸೆ ಗೊತ್ತಿದ್ದಿಲ್ಲವೆಂದೂ ಅದು ಅನಂತರದವರ ಸೃಷ್ಟಿಯೆಂದೂ ಹೇಳುವುದು ಅಪಚಾರ. ಹೀಗಿರುವುದರಿಂದ ವೇದ–ವೇದಾಂಗಗಳಲ್ಲಿ ಮತ್ತು ಇತರ ಗ್ರಂಥಗಳಲ್ಲಿ ಅವ್ಯಕ್ತವಾಗಿದ್ದ ಕಾವ್ಯಮೀಮಾಂಸೆ ಅನಂತರ ವ್ಯಕ್ತವಾಯಿತು ಎಂದುಹೇಳುವುದೇ ಭಾರತೀಯತೆಯ ಪ್ರಕಾರ ಸಂವೇದನಾಶೀಲ. ಭರತನಲ್ಲಿ ಅವ್ಯಕ್ತವಾಗಿದ್ದುದು ಅಭಿನವಗುಪ್ತನಲ್ಲಿ ವ್ಯಕ್ತವಾಯಿತು ಎಂದು ಹೇಳುವುದೇ ಭರತನ ಮೂಲಕರ್ತೃತ್ವ ಅಭಿನವಗುಪ್ತನ ವ್ಯಾಖ್ಯಾತತ್ವಗಳಿಗೆ ನ್ಯಾಯ ದೊರಕಿಸುವ ವಿಧಾನ.

ರಸವೆಂದರೇನು, ರಸಗಳು ಎಷ್ಟು, ರಸಕ್ಕೂ ಭಾವಕ್ಕೂ ಇರುವ ವ್ಯತ್ಯಾಸವೇನು–ಇಂಥವು ಕಾವ್ಯಮೀಮಾಂಸಾವಿದ್ಯಾರ್ಥಿಯಲ್ಲಿ ಏಳಬಹುದಾದ ಪ್ರಶ್ನೆಗಳು. ಭರತನ ಗ್ರಂಥ ಮತ್ತು ಅದರ ಪ್ರತ್ಯಕ್ಷ–ಪರೋಕ್ಷ ವ್ಯಾಖ್ಯಾನಗಳಾದ ಅನಂತರದ ಕಾವ್ಯಮೀಮಾಂಸಾ ಗ್ರಂಥಗಳು ಈ ಪ್ರಶ್ನೆಗಳಿಗೆ ಉತ್ತರವನ್ನು ನೀಡುವಂಥವು. ‘ವಿಭಾವಾನುಭಾವ ವ್ಯಭಿಚಾರಿ ಸಂಯೋಗದಿಂದ ರಸನಿಷ್ಪತ್ತಿ’ ಎಂಬ ಮಾತು (ಸೂತ್ರ) ಎಲ್ಲರಿಗೂ ತಿಳಿದಿರುವಂಥದೇ. ಇಲ್ಲಿ ಬರುವ ‘ಸಂಯೋಗ’ ‘ನಿಷ್ಪತ್ತಿ’ ಮೊದಲಾದ ಪದಗಳನ್ನು ಸಂವೇದನಾಶೀಲವಾಗಿ ಅರ್ಥಮಾಡದೆ ತಪ್ಪಿಬಿದ್ದಿರುವುದನ್ನು ಸ್ಪಷ್ಟಪಡಿಸುವ ವ್ಯಾಖ್ಯಾನಕಾರನೇ ಅಭಿನವಗುಪ್ತ. ಅಭಿನವಗುಪ್ತನ ಈ ಸ್ಪಷ್ಟನೆಗೆ ಮುಖ್ಯ ಪ್ರೇರಕನಾದವನೇ ಧ್ವನಿತತ್ತ್ವದ ಪ್ರತಿಷ್ಠಾಪಕ ಆನಂದವರ್ಧನ. ಹೀಗಿರುವುದರಿಂದ ರಸವನ್ನು ತಿಳಿಯದೆ ಧ್ವನಿಯನ್ನು ತಿಳಿಯಲು ಅಸಾಧ್ಯ, ಧ್ವನಿಯನ್ನು ತಿಳಿಯದೇ ರಸವನ್ನು ತಿಳಿಯಲು ಅಸಾಧ್ಯ ಎಂಬಂತೆ ಈ ಕಲ್ಪನೆಗಳು ಅನ್ಯೋನ್ಯಾಶ್ರಯಿಗಳಾಗಿವೆ. ಇಂತಹ ಅನ್ಯೋನ್ಯಾಶ್ರಯ ಭಾರತೀಯತೆಯ ಅಧ್ಯಯನದಲ್ಲಿ ಆಗಾಗ ಕ್ಲಿಷ್ಟತೆಯನ್ನು ತಂದೊಡ್ಡುತ್ತದೆ. ಅದಕ್ಕೆ ಬೇಕಾದ ಸಂವೇದನೆಯನ್ನು ಬೆಳೆಸಿಕೊಳ್ಳದೆ ಆಧುನಿಕ ತರ್ಕವನ್ನು ಪ್ರಯೋಗಿಸುವವನು ಇಂಥಲ್ಲಿ ದಾರಿತಪ್ಪಿ ಅಲೆಯುತ್ತಾನ.

‘ನಿಷ್ಪತ್ತಿ’ ಎಂಬ ಪದವನ್ನು ‘ಉತ್ಪತ್ತಿ’ ಎಂದು ಅರ್ಥೈಸಿ ಮೂಲದ್ರವ್ಯದ ಬಿಡಿಘಟಕಗಳ ಕೂಡಿಸುವಿಕೆಯಿಂದ ಸಿದ್ಧವಸ್ತು ಉತ್ಪನ್ನವಾದಂತೆ ರಸ ಉತ್ಪನ್ನವಾಗುತ್ತದೆ ಎಂದು ಭರತನ ವ್ಯಾಖ್ಯಾನಕಾರರಾದ ಲೋಲ್ಲಟನಂಥವರೂ ದಂಡಿಯಂತಹ ಕಾವ್ಯಮೀಮಾಂಸಕರೂ ಭ್ರಾಂತಿಪಟ್ಟರು. ಕಾವ್ಯಾನುಭವನ್ನು ಜಡವಸ್ತುವಿನ ಮಾದರಿಯಲ್ಲಿ ಅರ್ಥಮಾಡಹೊರಟುದೇ ಇವರು ತಪ್ಪಿಬೀಳುವುದಕ್ಕೆ ಕಾರಣ. ‘ರಸ’ ಎಂಬ ಪದವೇ ತಿಳಿಸುವಂತೆ ಅದು ತತ್ತ್ವಶಃ ಕೇವಲವೂ ನಿರಪೇಕ್ಷವೂ ಆದ ಅನುಭವ. ಭಾರತೀಯತೆಯ ಪ್ರಕಾರ. ಅನುಭವವೆಂಬುದು ಚೇತನ ಸ್ವರೂಪಿ ಮತ್ತು ಚೇತನವಾದ್ದು ಅನುಭವಸ್ವರೂಪಿ, ಇದರ ಉತ್ಪತ್ತಿ – ನಾಶಗಳು ವ್ಯವಹಾರಿಕ ಕಲ್ಪನೆಗಳೇ ಹೊರತು ಪಾರಮಾರ್ಥಿಕ ಅಸ್ತಿತ್ವ ಇರುವಂಥವಲ್ಲ. ಆದುದರಿಂದ ಮೂಲಘಟಕಗಳ ಜೋಡಣೆಯಿಂದ ವಸ್ತು ಉತ್ಪನ್ನವಾಗುತ್ತದೆ ಎಂಬ ಮಾತನ್ನು ಜಡಪ್ರಪಂಚದ ಬಗೆಗಷ್ಟೇ, ಅದೂ ಒಂದು ಮಟ್ಟಿಗೆ, ಹೇಳಬಹುದೇ ವಿನಾ, ಚೇತನದ ಬಗೆಗೆ ಇಂತಹ ಮಾತುಗಳು ಅಪಚಾರ. ಇದಕ್ಕೆ ಬದಲಾಗಿ. ಪೂರ್ಣವಸ್ತು ಬಿಡಿಘಟಕಗಳ ಸ್ವರೂಪದಲ್ಲಿ ಗೋಚರವಾಗುತ್ತದೆ ಎಂಬ ದೃಷ್ಟಿಯಲ್ಲಿ ರಸವನ್ನು ಅರ್ಥೈಸಬೇಕು ಎನ್ನುವುದೇ ಅಭಿನವಗುಪ್ತನ ತಿದ್ದುಪಡಿಯ ಸಾರ. ಇದಕ್ಕೆ ಭರತನ ಸೂತ್ರದಲ್ಲೇ ಸಾಕಷ್ಟು ಸೂಚನೆಗಳಿವೆ. ವಿಭಾವ, ಅನುಭಾವ, ವ್ಯಭಿಚಾರಿಭಾವ– ಈ ಮೂರರಲ್ಲೂ ಭಾವ ಎಂಬುದು ಸಮಾನವಾದುದರಿಂದ ರಸಸೂತ್ರದ ವ್ಯಾಖ್ಯನಕ್ಕೆ ಒಂದು ಕೋನದಿಂದ ಭಾವವೇ ಪ್ರಾರಂಭಬಿಂದು ಎಂದಿಟ್ಟುಕೊಳ್ಳಬಹುದು. ‘ಭಾವ’ ಪದವನ್ನು ವಿವರಿಸುವಲ್ಲಿ ಭರತನು ಇದು ಈ ಸಂದರ್ಭ

ದಲ್ಲಿ 'ಭಾವಯತಿ' [ಇನ್ನೊಂದು ವಸ್ತುವನ್ನು (ತನ್ನಂತೆ) ಆಗುವಂತೆ ಮಾಡುತ್ತದೆ] ಎಂಬುದರಿಂದ ಉತ್ಪನ್ನವಾದ ಭಾವನಾಮವೆಂದು ವಿವರಿಸುತ್ತಾನೆ. ಅಂದರೆ, ತಾನು ಒಂದು ಹೃದಯದಲ್ಲಿ ಉಂಟಾಗುವುದರ ಜೊತೆಗೆ ಇನ್ನೊಂದು ಹೃದಯವನ್ನು ವ್ಯಾಪಿಸುವ ಸಾಮರ್ಥ್ಯವುಳ್ಳ ಸುಖದುಃಖಾದಿಹೃದಯ ವಿಕಾರಗಳೇ ಭಾವಗಳು (ಮಣ್ಣು–ನೀರುಗಳಂತಹ ಬಾಹ್ಯವಸ್ತುಗಳಲ್ಲ) ಎಂಬ ಅರ್ಥವಿವರಣೆ ಭರತನ ಮಾತುಗಳಲ್ಲೇ ಸಿಕ್ಕುತ್ತದೆ. ಆದುದರಿಂದ 'ಭಾವ' ಎಂಬುದು ಮೂಲತಃ ದೈನಂದಿನ ಜೀವನ ಸಂಬಂಧಿಯೇ ಆಗಿದ್ದು ಕಲಾಪ್ರಪಂಚಕ್ಕೆ ಹೊಸದಾಗಿ ಪ್ರವೇಶ ಪಡೆಯುವಂಥಾದ್ದು. ಅಂದರೆ, ಈ ಅವಸ್ಥೆಯಲ್ಲಿ ಹೃದಯದಿಂದ ಹೃದಯಕ್ಕೆ ದಾಟುವ ಗುಣವನ್ನು ಹೊಂದಿದ್ದರೂ ದೇಶಕಾಲಗಳ ಪರಿಮಿತಿಯನ್ನು ಸಂಪೂರ್ಣ ಕಳಚಿ ಸರ್ವಜನಸಾಧಾರಣವಾಗಿ ನಿಲ್ಲತಕ್ಕ ಕಲ್ಪನೆಯಲ್ಲ. ವೇದಾಂತದ ಪರಿಭಾಷೆಯಲ್ಲಿ ಹೇಳುವುದಾದರೆ, ಸುಖದುಃಖಾದಿಗಳು ಅಂತಃಕರಣವೃತ್ತಿಗಳಾಗಿದ್ದು (ಚೇತನ ಸ್ಪರ್ಶವಿದ್ದರೂ) ಜಡಪ್ರಪಂಚಕ್ಕೇ ಸೇರಿದವು. ಶುದ್ಧ ಚೇತನಾಂಶಗಳಾದ ಪ್ರತಿಭೆ–ಸ್ಫೂರ್ತಿಯಂಥವುಗಳ ಸ್ಪರ್ಶದಿಂದ ಜಡಪ್ರಪಂಚಕ್ಕೆ ಸೇರಿದ್ದ ಭಾವ ಚೇತನ ಪ್ರಪಂಚಕ್ಕೆ ಸೇರಿದ 'ವಿ'ಭಾವವಾಗಿ ಪರಿಣಮಿಸುತ್ತದೆ. ಅಂದರೆ, ದೇಶಕಾಲಗಳ ಪರಿಮಿತಿಯನ್ನು ಕಳೆದುಕೊಂಡು ಸರ್ವಜನಸಾಧಾರಣವಾಗುತ್ತದೆ. ಇಲ್ಲಿನ 'ವಿ' ಪದ

ಬಹುಶಃ 'ವಿಶೇಷ' ಎಂಬ ಅರ್ಥವನ್ನು ಹೊಂದಿದ್ದು ಸಾಧಾರಣತ್ವದ ದ್ಯೋತಕವಾಗಿರಬಹುದು. ಈ ಸಾಧಾರಣತ್ವ ಅನುಭಾವ–ವ್ಯಭಿಚಾರಿ ಭಾವಗಳಿಗೂ ವ್ಯಾಪಿಸುತ್ತದೆ. ಈ ಅವಸ್ಥೆಯಲ್ಲಿ ಸ್ಫೂರ್ತಿ–ಪ್ರತಿಭೆಗಳ ಮೂಲವಾಗಿ, ಕೇವಲಾನುಭವವಾಗಿ, ವಿಶ್ವವ್ಯಾಪ್ತಿ ಚೇತನ ಸ್ವರೂಪವಾಗಿ ಇದ್ದ ರಸ ಸಾಮಾನ್ಯ ಬುದ್ಧಿಗ್ರಾಹ್ಯವಾಗಿ ಗೋಚರವಾಗುತ್ತದೆ. ಅಂದರೆ, ಕಲಾಮಾಧ್ಯಮದ ಮೂಲಕ ಪ್ರವಹಿಸಿ ಸಂವಾದಿ ಹೃದಯಗಳನ್ನು ಆವರಿಸುತ್ತದೆ. ಹೀಗೆ ಆವೃತವಾದ ಹೃದಯಾನುಭವ ಗಾತ್ರದಲ್ಲಿ ಪರಿಮಿತವಾಗಿ ಕಂಡರೂ ಗುಣಮಟ್ಟದಲ್ಲಿ ಅಪರಿಮಿತ ಕೇವಲಾನುಭವವೇ ಆಗಿರುತ್ತದೆ. ಇದು ಭಾರತೀಯರ ಪ್ರಕಾರ ಆದರ್ಶಕವಿ–ಆದರ್ಶಕಾವ್ಯ–ಆದರ್ಶ ಸಹೃದಯ ಇವರೊಳಗಿನ ಸಂಬಂಧ. 'ಪೂರ್ಣಮದಃ ಪೂರ್ಣಮಿದಂ' ಎಂಬ ಉಪನಿಷದ್ವಾಕ್ಯ ಹೇಳುವಂತೆ ಈ ಮೂರೂ ಒಂದು ಮಟ್ಟದಲ್ಲಿ ಸ್ವಯಂಪೂರ್ಣ ತತ್ತ್ವಗಳಾದರೆ ಇನ್ನೊಂದು ಮಟ್ಟದಲ್ಲಿ ಒಂದು ತತ್ತ್ವದ ಭಿನ್ನ ಮುಖಗಳು. 'ಸಂಯೋಗ' ಪದವನ್ನು ಇದೇ ಮಾದರಿಯಲ್ಲಿ ಅರ್ಥಮಾಡಬೇಕು.

ರಸಗಳ ಸಂಖ್ಯೆ–ರಸಗಳ ಪರಸ್ಪರ ಸಂಬಂಧ ಇಂಥವುಗಳ ಬಗೆಗೂ ಕಾವ್ಯಮೀಮಾಂಸಕರ ವಿವರಣೆಇದೆ. ಇವೆಲ್ಲವನ್ನೂ ಮಥಿಸಿ ತಳಸ್ಪರ್ಶಿಯಾದ್ದನ್ನು ಹೆಕ್ಕುವುದಾದರೆ, ಭಾರತೀಯರು ಲೌಕಿಕ-ಪಾರಮಾರ್ಥಿಕಗಳೆಂದು ರಸವನ್ನು ವಿಶ್ಲೇಷಿಸಿದಂತಿದೆ. ರಸಗಳಲ್ಲಿ 'ಶಾಂತ' ಪಾರಮಾರ್ಥಿಕತೆಯನ್ನು ಪ್ರತಿನಿಧಿಸುವುದಿದ್ದರೆ 'ಶೃಂಗಾರ' ಲೌಕಿಕತೆಯನ್ನು ಪ್ರತಿನಿಧಿಸುತ್ತದೆ ಎಂದು ಸ್ಥೂಲವಾಗಿ ಹೇಳಬಹುದು. ಈ ಎರಡರ ಪ್ರತ್ಯಕ್ಷ ಅಥವಾ ಪರೋಕ್ಷ ಸಾಮರಸ್ಯಗಳೇ ಭಾರತದಲ್ಲಿ ಕಾವ್ಯದ ಉತ್ಕೃಷ್ಟತೆಯನ್ನು ನಿರ್ಣಯಿಸಿವೆ ಎಂದು ಇನ್ನೊಂದು ಕೋನದಿಂದ ನಿರ್ಣಯಿಸಿಕೊಂಡಲ್ಲಿ ಕಾವ್ಯಮೀಮಾಂಸೆಯ ಅರ್ಥ ಇನ್ನಷ್ಟು ಸ್ಪಷ್ಟವಾಗುತ್ತದೆ.

2. ಧ್ವನಿ. ರಸಸೂತ್ರದಲ್ಲಿ ಬರುವ 'ನಿಷ್ಪತ್ತಿ', 'ಸಂಯೋಗ', 'ವಿಭಾವ' ಇಂತಹ ಪದಗಳೆಲ್ಲ ರಸದ ಚೇತನತ್ವವನ್ನು ಸಮರ್ಥಿಸುತ್ತವೆ ಎಂದು ನೋಡಿದೆವು ಆದುದರಿಂದಲೇ ರಸದ ಉತ್ಪತ್ತಿ ಮೊದಲಾದ ಹೇಳಿಕೆಗಳು ಅದರ ಸೂಕ್ಷ್ಮತೆಯನ್ನೂ ಸುಂದರತ್ವವನ್ನು ತಲಪದೇ ಇರುವುದರಿಂದ 'ರಸದ ಧ್ವನಿ' ಎಂಬ ಹೇಳಿಕೆ ಮಾತ್ರ ಸಮರ್ಪಕ ಎಂಬ ನಿಲುವು ಕಾವ್ಯಮೀಮಾಂಸೆಯದ್ದು. ಅಂದರೆ, ರಸ ಇಲ್ಲದೆ ಧ್ವನಿ ಇಲ್ಲ, ಎಂಬ ಅವಿನಾಭಾವ ಸಂಬಂಧ ಈ ಎರಡು ಕಲ್ಪನೆಗಳದ್ದು. ರಸಪ್ರಕ್ರಿಯೆಯ ಬಗೆಗೆ ಸೂತ್ರಿಸಿ ವಿವರಿಸಿದ ಭರತ ಧ್ವನಿ ಎಂಬ ಪರಿಭಾಷೆಯನ್ನು ಬಳಸಲಿಲ್ಲ. ರಸಕ್ಕೆ ಲಕ್ಷ್ಯ ಒದಗಿಸಿದವನೆನ್ನಲಾಗುವ ವಾಲ್ಮೀಕಿಯೂ ಧ್ವನಿಯನ್ನು ಪ್ರಸ್ತಾಪಿಸಿಲ್ಲ. ಆದರೂ ಧ್ವನಿತತ್ತ್ವ ವ್ಯಾಕರಣ ವೇದಾಂತದಲ್ಲಿ ಪರಿಪುಷ್ಟವಾಗಿ ಬೆಳೆದಿತ್ತು. ಹೀಗಾಗಿರುವುದು ಅರ್ಥಪೂರ್ಣ. ಯಾಕೆಂದರೆ, ವ್ಯಾಕರಣವೆಂಬುದು ಭಾರತದಲ್ಲಿ ಆಖ್ಯೆ - ಆಖ್ಯಾತ, ಪ್ರಕೃತಿ-ಪ್ರತ್ಯಯ,

ಪ್ರಯೋಗದ ಸಾಧುತ್ವ-ಅಸಾಧುತ್ವ ಇಷ್ಟರ ವಿಶ್ಲೇಷಣೆಗೆ ಸೀಮಿತವಾಗಿರದೆ ಅಭಿವ್ಯಕ್ತಿ-ಅನುಭವಗಳೆಂಬ ವ್ಯಾಪಕ ತತ್ವಗಳನ್ನು ಅಧ್ಯಯನ ಮಾಡಿತ್ತು. ವೇದಗಳೆಂಬ ಸೃಜನಶೀಲಕೃತಿಯನ್ನು ವಿವರಿಸುವ ವಿಮರ್ಶಾಶಾಸ್ತ್ರವೇ ಅದು ಬಹುಮಟ್ಟಿಗೆ ಆಗಿತ್ತು. ಅಭಿವ್ಯಕ್ತಿ-ಅನುಭವಗಳ ಒಳಗೆ ಮೀಮಾಂಸಾ-ನ್ಯಾಯ ಮೊದಲಾದ ದರ್ಶನಗಳೂ ವಿಶ್ಲೇಷಣೆ ಮಾಡಿವೆ. ಆದರೂ ಭಾರತೀಯರ ತಾತ್ವಿಕ ನಿಲುವಿಗೆ ಸರಿಹೊಂದುವ ಪ್ರಾತಿನಿಧಿಕ ಕೊಡುಗೆ ವ್ಯಾಕರಣದ್ದೆಂದೇ ಹೇಳಬಹುದು. ಸಂಕ್ಷಿಪ್ತವಾಗಿ ಹೇಳುವುದಿದ್ದರೆ, ಪೂರ್ಣ-ಅಂಶಗಳಲ್ಲಿ ಯಾವುದು ಸತ್ಯ ಎಂಬ ಪ್ರಶ್ನೆಗೆ ಭಾರತೀಯರ ಉತ್ತರ: ಪೂರ್ಣವೇ ಸತ್ಯವಾಗಿದ್ದು ಅಂಶ ಎಂಬುದು ಕಾಲ್ಪನಿಕ. ಇದಕ್ಕೆ ಸಮ್ಮತವಾದ ವೈಯಾಕರಣರ ಅಭಿಪ್ರಾಯವೆಂದರೆ: ಅನುಭವ ಹೇಗೆ ತತ್ವತಃ ಪೂರ್ಣವೋ ಅಭಿವ್ಯಕ್ತಿಯೂ ಹಾಗೆಯೇ ಪೂರ್ಣ. ಅಂದರೆ, ಯಾವ ಸಣ್ಣಗಾತ್ರದ ಅಭಿವ್ಯಕ್ತಿಬೇಕಾದರೂ ಅಖಂಡ ಅನುಭವವನ್ನು ಕೊಡಬಲ್ಲದು. ಯಾವ ಬಿಡಿ ವರ್ಣವೂ ದೊಡ್ಡ ವರ್ಣಸಮುಚ್ಚಯ ಮಾಡುವ ಕೆಲಸವನ್ನೇ ಮಾಡಬಲ್ಲುದು. ಹಾಗಿದ್ದರೆ, ಇಂತಹ ವರ್ಣಸಮುಚ್ಚಯವೇ ಪದ ಅಥವಾ ವಾಕ್ಯ ಅನ್ನಿಸಿಕೊಂಡು ಇಂತಹ ಅರ್ಥವನ್ನು ಕೊಡಬಲ್ಲುದು ಎಂಬ ನಿಯಮ ಹೇಗೆ? ಎಂಬ ಪ್ರಶ್ನೆಗೆ ಇವರ ಉತ್ತರ: ಅದು ನಮ್ಮ ವ್ಯಾವಹಾರಿಕ ಪರಿಮಿತಿಯ ದ್ಯೋತಕವೇ ಹೊರತು ವರ್ಣದ ಅಸಾಮರ್ಥ್ಯ ಅಲ್ಲ. ಎಲ್ಲೆಲ್ಲೂ ಇರುವ ಆತ್ಮವನ್ನು ನಾವು ಕೆಲವೇ ಕಡೆ ಗುರುತಿಸುವ ಹಾಗೆ. ಅನುಭವ ಅಭಿವ್ಯಕ್ತಿಯನ್ನು ದಾಟಿ ಅಥವಾ ಗರ್ಭಿಸಿ ನಿಲ್ಲುವುದು ಒಂದು ಮಟ್ಟವಾದರೆ ಅನುಭವ-ಅಭಿವ್ಯಕ್ತಿಗಳು ಸ್ವಯಂಪೂರ್ಣವಾಗಿರುವುದು ಇನ್ನೊಂದು ಮಟ್ಟ. ಅನುಭವ-ಅಭಿವ್ಯಕ್ತಿಗಳು ಪೂರಕವಾಗಿ ಅಥವಾ ಸಮರಸವಾಗಿ ಕೆಲಸಮಾಡುವುದು ಇನ್ನೂ ಒಂದು ಮಟ್ಟ. ವ್ಯಾಕರಣಕಾರರ ಇಂತಹ ಮಟ್ಟಗಳಲ್ಲಿ ಕಾವ್ಯಮೀಮಾಂಸಕರು ಮೆಚ್ಚಿಕೊಂಡುದು ಮೂರನೆಯ ಮಟ್ಟವನ್ನು: ವಾಗರ್ಥಾವಿವ ಸಂಪೃಕ್ತೌ. ಇಲ್ಲಿ ಧ್ವನಿತತ್ವದ ಸ್ಥೂಲಬಿಂದುವನ್ನು ಗುರುತಿಸಬಹುದು. ಇಂತಹ ಸಾಮರಸ್ಯ ಸಾಮಾನ್ಯ ಮಾತುಗಳಲ್ಲೂ ಇರಬಹುದಲ್ಲಾ ಎಂಬುದಕ್ಕೆ ಇದು ರಸಧ್ವನಿಲ್ಲದ ಕಾರಣ ನಿಜವಾದಧ್ವನಿ ಅಲ್ಲ ಎನ್ನುತ್ತಾರೆ. ರಸಧ್ವನಿ ಅನ್ನಿಸಬೇಕಾದರೆ, ಅಭಿವ್ಯಕ್ತಿ-ಅನುಭವಗಳ ಸಾಮರಸ್ಯದ ಜೊತೆಗೆ ಅಪೂರ್ವತೆಯೂ ಇರಬೇಕು; ಅನುಭವ ಅನನ್ಯ ಅನ್ನಿಸಬೇಕು. ಈ ಅಪೂರ್ವತ್ವದ ಪ್ರಸ್ತಾಪ ಕಾವ್ಯಮೀಮಾಂಸಕರಲ್ಲಿ ಮಾತ್ರವಲ್ಲ; ದಾರ್ಶನಿಕರ ಪ್ರಾಮಾಣ್ಯ ವಿವೇಚನೆಯಲ್ಲಿಯೂ ಪ್ರಮುಖ ಸ್ಥಾನ ಪಡೆಯುತ್ತದೆ. ಶ್ರುತಿ ಪ್ರಾಮಾಣ್ಯಕ್ಕೆ ಭಾರತೀಯರು ಅಷ್ಟೊಂದು ಮಹತ್ವ ಕೊಡುವುದಕ್ಕೆ ಕಾರಣ ಅದು ಕೊಡುವ ಜ್ಞಾನ ಅನುಭವ ಸಂವಾದಿ ಮಾತ್ರವಲ್ಲ ಅಪೂರ್ವ (ಅಲೌಕಿಕ) ಎಂಬ ಕಾರಣದಿಂದ. ವಾಲ್ಮೀಕಿಯ ಶೋಕ ಶ್ಲೋಕವಾದ ಸನ್ನಿವೇಶವನ್ನು ಧ್ವನಿಗೆ ಅತ್ಯುತ್ತಮ ಉದಾಹರಣೆ ಎಂಬಂತೆ ಆನಂದವರ್ಧನ ಪ್ರಸ್ತಾಪಿಸುವಲ್ಲಿ ಈ ತಾತ್ಪರ್ಯ ಸಿಗುತ್ತದೆ. ವಾಲ್ಮೀಕಿಯ ಶೋಕರೂಪವಾದ ಅನುಭವ, ಅದಕ್ಕೆ ಅತ್ಯಂತ ಸಮರ್ಪಕವಾಗಿ ಅವನಿಂದ ಅಭಿವ್ಯಕ್ತಿಪಡೆದ ಶ್ಲೋಕ ಇವುಗಳೊಳಗಿನ ಸಾಮರಸ್ಯ ಮತ್ತು ವಾಲ್ಮೀಕಿಯಲ್ಲುಂಟಾಗಿ ಸಹೃದಯನವರೆಗೆ ಶ್ಲೋಕದ ಮೂಲಕ ಪ್ರವಹಿಸಿ ವ್ಯಾಪಿಸುವ ಅಪೂರ್ವ ಅನುಭವ ಇದೇ ಧ್ವನಿಗೆ ಅತ್ಯುತ್ತಮ ಉದಾಹರಣೆ. ಇಲ್ಲಿ ಶ್ಲೋಕ ಎಂದರೆ 'ಮಾನಿಷಾದ...' ಎಂಬ ಶ್ಲೋಕವಷ್ಟೇ ಅಲ್ಲ. ಇಡೀ ರಾಮಾಯಣವೇ ಒಂದು ಶ್ಲೋಕ. ಶೋಕ ಎಂದರೆ ಕ್ರೌಂಚ ಪಕ್ಷಿಯ ಸಾವಿನಿಂದುಂಟಾದ ಶೋಕವಷ್ಟೇ ಅಲ್ಲ; ಜೀವನದ ಒಂದು ಮಟ್ಟದಲ್ಲಿನ ಶೋಕಮಯತ್ವ (ಇನ್ನೊಂದು ಮಟ್ಟದಲ್ಲಿ ಅದನ್ನು ದಾಟಿ ನಿಲ್ಲುವ ಆನಂದಮಯತ್ವವನ್ನು ಸೂಚ್ಯವಾಗಿಟ್ಟು)ವನ್ನು ನಿರ್ವಿಕಾರವಾಗಿ ಚಿತ್ರಿಸುವ ಮಾನಸಿಕತೆಯೇ ಇಲ್ಲಿ ಶೋಕ.

ಇಷ್ಟು ವಿಶಾಲವಾದ ಜೀವನವ್ಯಾಪಿತತ್ವವನ್ನು ಒಂದು ಬಿಡಿ ಶ್ಲೋಕದಲ್ಲಿಯೋ ಶ್ಲೋಕಭಾಗದಲ್ಲಿಯೋ ಕಾಣಸಿಗುವ ರೂಢಿಯ ಅರ್ಥಕ್ಕಿಂತ ಸ್ವಲ್ಪ ಭಿನ್ನವೂ ಸೂಕ್ಷ್ಮವೂ ಆದ 'ಅರ್ಥ'ದ ಮಟ್ಟಕ್ಕೆ ಇಳಿಸುವುದು ಇಂದಿನ ಕಾವ್ಯಮೀಮಾಂಸಾಬೋಧನಕ್ರಮದಲ್ಲಿ ಎದ್ದು ಕಾಣುವ ಸಂಗತಿ. ಈ ತಪ್ಪು ತಿಳಿವಳಿಕೆಗೆ ಗ್ರಂಥಕಾರರೂ ಕೆಲವು ಮಟ್ಟಿಗೆ ಹೊಣೆಯಾಗುತ್ತಾರೆ. ಸ್ವಾರಸ್ಯಾಂಶಗಳಿಗೆ ಗ್ರಂಥದ ಸ್ವಲ್ಪ ಭಾಗವನ್ನು ಮಾತ್ರ ಮೀಸಲಾಗಿಸಿ ಪರಿಭಾಷಾಸೂಕ್ಷ್ಮತೆಗೆ ಗ್ರಂಥದ ಬಹು ಭಾಗವನ್ನು ಬಳಸುವುದು ಸಂಸ್ಕೃತ ಗ್ರಂಥಕಾರರಲ್ಲಿ ಕೊನೆಕೊನೆಗೆ

ಬೆಳೆದ ಒಂದು ವಿಕ್ಷಿಪ್ತತೆ. ಹಿಂದೆ ಪಂಡಿತವರ್ಗದ ಬಗೆಗೆ ಎತ್ತಲಾದ ಆಕ್ಷೇಪವನ್ನು ಕೆಲವು ಮಟ್ಟಿಗೆ ಗ್ರಂಥರಚನಾ ವಿಧಾನದ ಬಗೆಗೂ ವಿಸ್ತರಿಸಿಕೊಳ್ಳಬಹುದು. ಈ ವಿಕ್ಷಿಪ್ತತೆ-ವಿಲಕ್ಷಣತೆಯಿಂದಲಾಗಿ ಅಭ್ಯಾಸಗಳು ಗ್ರಂಥದ ಸ್ವಾರಸ್ಯಭಾಗವನ್ನು ಮರೆತೇ ಅಭ್ಯಾಸ ಮುಂದುವರಿಸುವುದಕ್ಕೆ ಅವಕಾಶವಾಯಿತು. ವ್ಯಾಸ-ವಾಲ್ಮೀಕಿ ಕಾಳಿದಾಸ-ವೇದಾಂಗಕಾರ ಮುಂತಾದವರ ಬಗೆಗೆ ಆನಂದವರ್ಧನನಲ್ಲಿ ಬರುವ ಸಂಕ್ಷಿಪ್ತ ಹೇಳಿಕೆಗಳ ಸ್ವಾರಸ್ಯವನ್ನು ಅಷ್ಟೊಂದು ಗಮನಿಸದೆ ಪ್ರತಿಪಕ್ಷಖಂಡನೆಗೂ ಧ್ವನಿಪ್ರಭೇದಗಳ ಗುರುತಿಸುವಿಕೆಗೂ ಅವನು ದೀರ್ಘವಾಗಿ ಬೆಳೆಸುವ ಗ್ರಂಥಭಾಗವನ್ನೇ ಅವನ ಹೃದಯವೆಂದು ನಾವಿಂದು ಭ್ರಾಂತಿಪಡುತ್ತೇವೆ. ಸಂವೇದನೆಗೂ ಪರಿಭಾಷೆಗೂ ಅಂತರವಿವೆ ಎಂದು ಹಿಂದೆ ಹೇಳಿದ್ದನ್ನು ಇಲ್ಲಿ ಪುನಃ ನೆನೆಯಬೇಕು.

ಧ್ವನಿಗೆ ಇರುವ ಪ್ರಧಾನ ಆಕ್ಷೇಪ ಬಿಂದು: ಧ್ವನಿಯನ್ನು ಪ್ರತ್ಯೇಕ ಅನುಭವಸ್ತರವಾಗಿಸುವ ಬದಲು ರೂಢಿಯ ಅರ್ಥದ ಒಂದು ವಿಸ್ತರಣೆಯೆಂದೇ ಯಾಕೆ ಇಟ್ಟುಕೊಳ್ಳಬಾರದು? ಅದಕ್ಕೆ ಉತ್ತರ ಇಷ್ಟೆ: ಭಾರತೀಯ ಸಂವೇದನೆಯ ಪ್ರಕಾರ, ಪೂರ್ಣವೂ ಆದರ್ಶರೂಪಿಯೂ ಆದುದೇ ಸತ್ಯವಾಗಿದ್ದು ಅಂಶ ಎಂಬುದೇ ಕಾಲ್ಪನಿಕ. ಇದಕ್ಕೆ ಸಂವಾದಿಯಾಗಿ ಅನುಭವ ಅಭಿವ್ಯಕ್ತಿ ಪ್ರಪಂಚದಲ್ಲಿಯೂ ಸುಂದರವೂ ಅಪೂರ್ವವೂ ಆದುದೇ ಸತ್ಯವಾಗಿದ್ದು ರೂಢಿ–ದೈನಂದಿನ ವ್ಯವಹಾರಗಳು ಕಾಲ್ಪನಿಕ. ಆದುದರಿಂದ ಧ್ವನಿಯೇ ನಿಜವಾದ ಅರ್ಥವಾಗಿದ್ದು ವಾಚ್ಯ–ಲಕ್ಷ್ಯ ಮುಂತಾದ ಅರ್ಥಗಳು ಅದರ ಕಾಲ್ಪನಿಕ ಛಾಯೆಗಳು, ವಿಚಾರ ಸೌಕರ್ಯಕ್ಕಾಗಿ ವ್ಯವಹಾರವನ್ನೂ ತತ್ವವನ್ನೂ ಎರಡು ಪೂರಕಸ್ತರಗಳಾಗಿ ರೂಪಿಸಿಕೊಂಡು ಈ ಹೇಳಿಕೆಯನ್ನು ನೋಡಿದಾಗ ರೂಢಿ ಅಥವಾ ವಾಚ್ಯ ಎಂಬುದು ಆರೋಹಣ ಪ್ರವೃತ್ತಿಯಾದರೆ ಧ್ವನಿ ಎಂಬುದು ಅವರೋಹಣದ ಸಾಕ್ಷಾತ್ಕಾರ. ದಾರ್ಶನಿಕರಲ್ಲಿ ಪ್ರತ್ಯಕ್ಷಕ್ಕೂ ಸ್ಮೃತಿಗೂ ಇರುವ ಪರಸ್ಪರ ಸಂಬಂಧವೂ ಇದೇ.

ಹೀಗೆ ಸತ್ಯ ಸಾಕ್ಷಾತ್ಕಾರತತ್ವವಾದ ಧ್ವನಿಯ ಬೇರೆ ಬೇರೆ ಮುಖಗಳನ್ನು ಪ್ರತೀತಿ, ವ್ಯಂಜನೆ ಮೊದಲಾದ ಪದಗಳು ಸೂಚಿಸುತ್ತವೆ. 'ಪ್ರತೀತಿ' ಎಂಬಲ್ಲಿ ಸಾಕ್ಷಾತ್ಕರಣವೇ ಮುಖ್ಯಾಂಶ. 'ವ್ಯಂಜನೆ' ಎಂಬಲ್ಲಿ ಯೋಜನಾತೀತತೆ ಮತ್ತು ಸ್ಫುರಣರೂಪಿತ್ವವೇ ಮುಖ್ಯಾಂಶ. 'ಧ್ವನಿ' ಎಂಬಲ್ಲಿ ವ್ಯಾಪನಶೀಲತೆಯೇ ಮುಖ್ಯವಾದ ಅರ್ಥಚ್ಛಾಯೆ. ಧ್ವನಿ ಎಂಬುದು ಇಂತಹ ಆದರ್ಶ ಕಲ್ಪನೆಯಾದುದರಿಂದಲೇ ಪರಿಪೂರ್ಣಾವಸ್ಥೆಯಲ್ಲಿ ಅದು 'ಅಲಕ್ಷ್ಯಕ್ರಮ'ವಾಗಿರುತ್ತದೆ; ಅಂದರೆ, ರೂಢಿಯ ಸಂವೇದನೆಗೂ ಸೌಂದರ್ಯ ಸಂವೇದನೆಗೂ ಅಂತರವೇ ಕಾಣದಂತೆ ರೂಢಿಯ ಸಂವೇದನೆಯನ್ನು ಸೌಂದರ್ಯ ಸಂವೇದನೆ ಆವರಿಸುತ್ತದೆ. ಇಂತಹ ವ್ಯಾಪನಶೀಲತತ್ವದ ವ್ಯವಹಾರ ಮಾಧ್ಯಮದ ಬಗೆಗೆ ಹೇಳುವಾಗ ಮಾಧ್ಯಮವೂ ಸಾಕಷ್ಟು ವ್ಯಾಪಕವೇ ಆಗಬೇಕೆಂದು ಆನಂದವರ್ಧನ ಅಭಿಪ್ರಾಯಪಡುತ್ತಾನೆ. ತತ್ವತಃ ಜೀವನವ್ಯಾಪ್ತಿಯಾದ ಧ್ವನಿಯ ಒಂದು ಮಟ್ಟಿನ ಸಾಕ್ಷಾತ್ಕಾರವಾದರೂ ಆಗಬೇಕಿದ್ದರೆ ಒಂದು ಬಿಡಿ ಹೇಳಿಕೆಗಿಂತ 'ಕೃತಿ' ಹೆಚ್ಚು ಸಮರ್ಪಕವಾದ ಮಾಧ್ಯಮ ಎಂಬುದು ಇವನ ಅಭಿಪ್ರಾಯ. ಕೃತಿರಾಶಿಯನ್ನೇ ಮಾಧ್ಯಮವಾಗಿಸುವುದು ಭಾರತೀಯತೆಗೆ ಇನ್ನಷ್ಟು ನ್ಯಾಯವಾಗಬಹುದು. ಆದುದರಿಂದ ಅಭಿವ್ಯಕ್ತಿ–ಅನುಭವಗಳ ಸಾಮರಸ್ಯ, ಅಪೂರ್ವತೆ, ರೂಢಿಸಂವೇದನೆಗೂ ಸೌಂದರ್ಯಕ್ಕೂ ಅಂತರ ಕಾಣದಂತಿರುವಿಕೆ, ವ್ಯಾಪಕ ಮಾಧ್ಯಮದ ಮೂಲಕ ಪ್ರಕಟೀಭವನ-ಇಂಥವು ಧ್ವನಿಯ ನಿಜವಾದ ಲಕ್ಷಣಗಳು. ಧ್ವನಿಗೆ ತತ್ವತಃ ಪ್ರಭೇದಗಳು ಎಂದಿಲ್ಲ. ಆದರೂ ತಮ್ಮ ಪರಿಸರಕ್ಕೆ ಹೊಂದಿಕೊಳ್ಳುವ ದೃಷ್ಟಿಯಿಂದ ಗ್ರಂಥಕಾರರು ಧ್ವನಿಪ್ರಭೇದಗಳ ರೂಪದಲ್ಲಿ ಪರಿಭಾಷೆಯನ್ನು ಬೆಳೆಸಿದ್ದಾರೆ. ತತ್ವಸಂವೇದನೆಯ ದೃಷ್ಟಿಯಿಂದ ಇವು ಗುಣ–ಅಲಂಕಾರಗಳ ಮಟ್ಟದಿಂದ ಮೇಲಕ್ಕೇರುವುದಿಲ್ಲ.

3 ಗುಣ. ಕಾವ್ಯಗುಣಗಳು ಹತ್ತು, ಮೂರು ಮುಂತಾಗಿ ಚರ್ಚೆ ನಡೆದಿದೆ. ಹತ್ತು ಎಂದಿಟ್ಟುಕೊಳ್ಳುವುದು ಒಂದು ಮಟ್ಟವೆಂದೂ ಮೂರು ಎಂದಿಟ್ಟುಕೊಳ್ಳುವುದು ಇನ್ನೊಂದು ಮಟ್ಟವೆಂದೂ ಇವುಗಳ ಪೈಕಿ ಮೂರು ಎನ್ನುವುದು ಹೆಚ್ಚು ತಳಸ್ಪರ್ಶಿ ಎಂದೂ ಈ ಪಕ್ಷಗಳನ್ನು ಸಮನ್ವಯಗೊಳಿಸಲಾಗಿದೆ. ಅಲ್ಲದೆ, ಇನ್ನೂ ಒಂದು ಕೋನದಿಂದ ಸಂಖ್ಯೆಯೇ ಅಗತ್ಯ ಇಲ್ಲವೆಂದೂ ಆಯಾ ಸಂದರ್ಭವನ್ನು ಹೊಂದಿಯೇ ಗುಣದೋಷಗಳನ್ನು ನಿರ್ಣಯಿಸಬೇಕೆಂಬ ಪ್ರತಿಪಾದನೆಯೂ ಇದೆ. ಗುಣವೆಂದರೆ ಕೇವಲ ದೋಷಾಭಾವವೇ ಅಥವಾ ಅದಕ್ಕಿಂತ ಹೆಚ್ಚು ಅನುಭವಸೀಮಿತವಾದದ್ದು ಏನಾದರೂ ಇದೆಯೇ ಎಂಬ ಕುರಿತೂ ಚರ್ಚೆ ನಡೆದಿದೆ.

ಕೇವಲ ದೋಷಾಭಾವವಷ್ಟೇ ಅಲ್ಲ; ಗುಣವೆಂಬುದು ಒಂದು ಸಾಕಾರ ಕಲ್ಪನೆಯೇ ಎಂಬ ಅಭಿಪ್ರಾಯಕ್ಕೆ ಗ್ರಂಥಕಾರರು ಬಂದಂತಿದೆ. ಒಟ್ಟಿನಲ್ಲಿ ಗುಣವೆಂಬುದು ಕಾವ್ಯದ ಪೂರ್ಣತ್ವದ ಸೂಚಕವೆಂದೂ ಕಾವ್ಯ ರಸ ಸಂಬಂಧಿಯಾಗಿ ಸಹೃದಯನ ಮನಸ್ಸಿನ ಮೇಲೆ ಮಾಡುವ ಪರಿಣಾಮವನ್ನು ಸೂಚಿಸುವಂಥಾದ್ದೆಂದೂ ಇದರ ಮೂಲಕ ಕಾವ್ಯವರ್ಗೀಕರಣಕ್ಕೆ ಸಹಕಾರಿ ಎಂದೂ ಸಾರಗ್ರಾಹಿಯಾಗಿ ನಿರೂಪಿಸಬಹುದು. ಪೂರ್ಣತತ್ವದ ಸೂಚಕವಾಗುವ ಸಂದರ್ಭವೆಂದರೆ, ರಸಸಂದರ್ಭ ಯಾವುದೇ ಆಗಿದ್ದರೂ ಕಾವ್ಯದಲ್ಲಿ ಪ್ರಸಾದಗುಣ ಇರಲೇಬೇಕೆಂದು ಶ್ರೇಷ್ಠ ಗ್ರಂಥಕಾರರ ಹೇಳಿಕೆ ಇದೆ. ಅನುಭವ–ಅಭಿವ್ಯಕ್ತಿಗಳ ಸಾಮರಸ್ಯವೆಂದು ಒಂದೆ ನಾವು ಹೇಳಿದ್ದನ್ನೇ ಈ ಪ್ರಸಾದಗುಣ ಪ್ರತಿನಿಧಿಸುತ್ತದೆ. ಒಂದು ಮಟ್ಟದಲ್ಲಿ ಪ್ರಸಾದಗುಣ ಕಾವ್ಯತ್ವದ ಪೂರ್ಣತೆಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದ ಹಾಗಾಯಿತು. ಆದರೆ, ಪ್ರಸಾದಗುಣ ಅಸ್ತಿತ್ವದಲ್ಲಿರಬೇಕಾದರೆ ಅದಕ್ಕೆ ಇನ್ನೊಂದು ಗುಣ ಸೇರಬೇಕಾಗುತ್ತದೆ. ಅನುಭವ–ಅಭಿವ್ಯಕ್ತಿಗಳ ಸಾಮರಸ್ಯ ಸಹೃದಯನ ಮೇಲೆ ಪರಿಣಾಮ ಮಾಡುವ ಶಕ್ತಿಯನ್ನಿಟ್ಟುಕೊಂಡೇ ಇರುತ್ತದೆ. ಈ ಪರಿಣಾಮ ಮನಸ್ಸನ್ನು ಕರಗಿಸುವುದೆಂದೂ ವಿಸ್ತಾರ–ವಿಕಾಸಾದಿಗಳಿಗೆ ಕಾರಣವಾಗುವುದೆಂದೂ ಎರಡು ವಿಧ. ಕರಗಿಸುವ ಶಕ್ತಿ ಇರುವಲ್ಲಿ ಕಾವ್ಯದ್ದು ಮಾಧುರ್ಯ ಗುಣ. ವಿಕಾಸಾದಿಗಳನ್ನು ಉಂಟುಮಾಡುವಲ್ಲಿ ಓಜೋಗುಣ. ಶೃಂಗಾರದಂತಹ ರಸ ಇರುವಲ್ಲಿ ಮಾಧುರ್ಯ ಗುಣವೆಂದೂ ವೀರದಂತಹ ರಸ ಇರುವಲ್ಲಿ ವಿಕಾಸಾದಿ ಪರಿಣಾಮಗಳೆಂದೂ ವರ್ಗೀಕರಣ ಇದೆ. ಗ್ರಂಥಕಾರರು ಈ ವಿವರಣೆಯನ್ನು ಹೆಚ್ಚು ಮುಂದುವರಿಸಿಲ್ಲ. ಭಾರತೀಯತೆಯ ಬಲದಿಂದ ನಾವು ಮುಂದವರಿಸುವುದಿದ್ದರೆ, ವಿಕಾಸಾದಿಗಳು ದ್ರವೀಭವನದಷ್ಟು ತಳಸ್ಪರ್ಶಿ ಕ್ರಿಯೆಗಳಲ್ಲ. ಯಾಕೆಂದರೆ, ಮನಸ್ಸು ತನ್ನ ವ್ಯಕ್ತಿಗಳ ಮೂಲಕ ಘನವಸ್ತುಗಳಿಗಿಂತ ಹೆಚ್ಚು ದ್ರವವಸ್ತುವನ್ನು ಹೋಲತಕ್ಕದ್ದು. ಭಾರತೀಯರ ಪ್ರಾತಿನಿಧಿಕ ಗ್ರಂಥಗಳಲ್ಲಿನ ಸೃಷ್ಟಿಕ್ರಮವನ್ನು ಗಮನಿಸಿದಾಗಲೂ ಧ್ರುವ ವಸ್ತು ಹೆಚ್ಚು ಮೌಲಿಕ ಎಂಬಂತೆ ನಿರೂಪಣೆ ಇದೆ. 'ರಸ' ಪದದ ಮೌಲಿಕ ಅರ್ಥವಿವೇಚನೆಯನ್ನು ಮಾಡಿದಾಗಲೂ ದ್ರವತ್ವದ ಛಾಯೆಯೇ ಸ್ಪಷ್ಟವಾಗಿ ಕಾಣುತ್ತದೆ. ಈ ಎಲ್ಲವನ್ನೂ ಹೋಲಿಸಿದಾಗ ದ್ರವತ್ವವನ್ನು ಉಂಟುಮಾಡುವ ರಸಗಳು ವಿಕಾಸಾದಿಗಳನ್ನುಂಟು ಮಾಡುವ ರಸಗಳಿಗಿಂತ ಹೆಚ್ಚು ಮೌಲಿಕ. ಇದೆಲ್ಲವನ್ನು ಬಿಟ್ಟು ಸೇರಿಸಿ ನೋಡಿದಾಗ ರಸಗಳ ಪಟ್ಟಿಯಲ್ಲಿ ಶೃಂಗಾರಕರುಣ ಶಾಂತಗಳು ವೀರರೌದ್ರಾದ್ಭುತಗಳಿಗಿಂತ ಹೆಚ್ಚು ಮೌಲಿಕ. ಹಾಸ್ಯ ಭೀಭತ್ಸಗಳ ವ್ಯಾಪ್ತಿ ಬಹಳ ಪರಿಮಿತ. ಹೀಗೆ ಗುಣತತ್ವ ರಸದ ರೂಢಿ ಪಟ್ಟಿಯೊಳಗೆ ಒಂದು ವ್ಯವಸ್ಥೆಯನ್ನು ತರುತ್ತದೆ. ಈ ವ್ಯವಸ್ಥೆಯನ್ನು ಅಖಿಲ ಭಾರತೀಯ ವ್ಯಾಪ್ತಿಯ ಲೌಕಿಕತೆ–ಪಾರಮಾರ್ಥಿಕತೆಗಳ ಹಿನ್ನೆಲೆಯಲ್ಲಿ ಇನ್ನಷ್ಟು ಮೌಲಿಕಗೊಳಿಸಿದಾಗ ಶಾಂತರಸ ಪಾರಮಾರ್ಥಿಕತೆಯ ಪ್ರತಿನಿಧಿಯಾಗಿದ್ದು ಭಾರತೀಯತೆಯಲ್ಲಿ ಅತ್ಯಂತ ವ್ಯಾಪಕ, ಶೃಂಗಾರಕರುಣಗಳು ಅದೇ ಗುಣಗಳನ್ನು ಹೊಂದಿರುವುದರಿಂದ ಅವುಗಳಿಗೇ ಅನಂತರದ ಸ್ಥಾನ. ವೀರಾದಿಗಳಿಗೆ ಅನಂತರದ ಸ್ಥಾನ. ಲಕ್ಷ್ಯಗಳಿಗೆ ಈ ತತ್ವವನ್ನು ಅನ್ವಯಿಸಿ ನೋಡಿದಾಗಲೂ ಪ್ರಾತಿನಿಧಿಕರಾದ ವೇದಮಂತ್ರದ್ರಷ್ಟೃ ಋಷಿ, ವ್ಯಾಸ, ವಾಲ್ಮೀಕಿ, ಕಾಳಿದಾಸರು ಆರಿಸಿದ್ದು ಶಾಂತಕರುಣ ಶೃಂಗಾರ ರಸಗಳನ್ನೇ. ಆದರೆ ಯಾವ ರಸನ್ನಾದರೂ ಪುನಃ ಪುನಃ ಬಳಸುವುದರಿಂದ ಸಹೃದಯರಲ್ಲಿ ಜುಗುಪ್ಸೆ ಉಂಟಾಗುತ್ತದೆ ಎಂಬ ಗ್ರಂಥಕಾರರ ಮಾತಿನ ಪ್ರಕಾರ, ವೀರಾದಿ ಪ್ರತಿಪಾದಕ ಸಾಹಿತ್ಯಕ್ಕೂ ಶಾಂತಶೃಂಗಾರಪೂರಕ ಎಂಬ ದೃಷ್ಟಿಯಿಂದ ಉತ್ತಮ ಸ್ಥಾನ ಇದೆ. ಹೀಗೆ ಗುಣತತ್ವ ಪರೋಕ್ಷವಾಗಿ ರಸಪಟ್ಟಿಯ ವ್ಯವಸ್ಥೆಗೂ ಲಕ್ಷ್ಯಕಾರರ ಸಾಪೇಕ್ಷ ಮೌಲ್ಯ ನಿರ್ಣಯಕ್ಕೂ ಸಹಕಾರಿ ಆಗುತ್ತದೆ.

4 ಅಲಂಕಾರ. ಗುಣತತ್ವ ಕಾವ್ಯದ ಪೂರ್ಣತ್ವಕ್ಕೇ ಸೂಚಕವಾಗಿದ್ದು ಸಹೃದಯನ ಮೇಲಿನ ಪರಿಣಾಮದ ಮೂಲಕ ಕಾವ್ಯ ವರ್ಗೀಕರಣಕ್ಕೆ ಸಹಕಾರಿ ಎಂಬುದನ್ನು ನೋಡಿದೆವು. ಅಲಂಕಾರ ಎಂಬುದು ಗುಣತತ್ವದಲ್ಲೇ ಹುದುಗಿದ್ದು ಸಂದರ್ಭಾನುಸಾರವಾಗಿ ಎದ್ದು ಕಾಣುವ ಒಂದು ವಿಕ್ಷೇಪ. ಇದು ಕಾವ್ಯಮಾಧ್ಯಮದ ಸಹಜತೆ–ಸಾಂಪ್ರದಾಯಿಕತೆಗಳ ನೆಲೆಯಲ್ಲಿ ಕಾವ್ಯವನ್ನು ವರ್ಗೀಕರಿಸುವುದಕ್ಕೆ ಸಹಾಯ ಮಾಡುತ್ತದೆ. ಅಲಂಕಾರಗಳ ಪಟ್ಟಿ ಬಹಳ ದೊಡ್ಡದಿದ್ದರೂ ಸ್ವಭಾವೋಕ್ತಿ – ವಕ್ರೋಕ್ತಿ

ಗಳೆಂಬ ವಿಶಾಲಕಲ್ಪನೆಗಳು ಅವೆಲ್ಲವನ್ನೂ ಅಂತರ್ಗತಿಸುತ್ತವೆ. ಸ್ವಭಾವೋಕ್ತಿ ಸಹಜತೆಯ ದ್ಯೋತಕವಾಗಿದ್ದು ವಕ್ರೋಕ್ತಿ ಸಾಂಪ್ರದಾಯಿಕತೆಯನ್ನು ಪ್ರತಿನಿಧಿಸುತ್ತದೆ. ಸ್ವಭಾವೋಕ್ತಿ ಎಂಬುದು ವಕ್ರೋಕ್ತಿಯ ಅಂಶ ಮಾತ್ರ ಆಗಬಲ್ಲುದಾದರಿಂದ ವಕ್ರತೆಯೇ ಕಾವ್ಯದ ಜೀವಾಳ ಎಂಬಂತೆ ಒಂದು ಪಂಥದವರು ಪ್ರತಿಪಾದಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ವಕ್ರೋಕ್ತಿ ಎಂಬುದು ಸ್ವಭಾವೋಕ್ತಿಯ ವಿಕ್ಷೇಪ ಎಂಬಂತೆ ಧ್ವನಿವಾದ ಪ್ರತಿಪಾದಿಸಿ ವೈಚಾರಿಕವಾಗಿ ಗೆದ್ದಿದೆ. ಆದರೂ ಐತಿಹಾಸಿಕವಾಗಿ ನೋಡಿದರೆ, ಅನುಭವ–ಅಭಿವ್ಯಕ್ತಿಗಳ ಸಾಮರಸ್ಯವನ್ನು ಪುನಃ ಎತ್ತಿಹಿಡಿಯುವುದರ ಮೂಲಕ ವಕ್ರೋಕ್ತಿಪಂಥ ತನ್ನದೇ ಆದ ಕೊಡುಗೆಯನ್ನು ಮಾಡಿದೆ. ಈ ಪಂಥಗಳು ತಮ್ಮ ಪ್ರತಿಪಾದನೆಯನ್ನು ಮುಂದೆ ತರುತ್ತಿದ್ದ ಕಾಲದಲ್ಲಿ ಭಾರತೀಯತೆಯ ಅವನತಿಯೂ ಒಂದು ಐತಿಹಾಸಿಕ ವಿದ್ಯಮಾನವಾಗಿ ತಲೆಹಾಕಿದುದರಿಂದ ಇವುಗಳ ಮೌಲ್ಯನಿರ್ಣಯ-ಲಕ್ಷ್ಯಲಕ್ಷಣ ಸಮನ್ವಯ ಮುಂತಾದುದು ಇಂದಿಗೆ ಕಷ್ಟವಾಗಿದೆ.

ಒಟ್ಟಿನಲ್ಲಿ: ಅನುಭವ, ಅಭಿವ್ಯಕ್ತಿ, ಅಪೂರ್ವತೆ, ಸಹೃದಯಹೃದಯಾಹ್ಲಾದ, ಸಹಜತೆ, ಸಾಂಪ್ರದಾಯಿಕತೆ, ಲೌಕಿಕ, ಪಾರಮಾರ್ಥಿಕ–ಇಂಥವು ಭಾರತೀಯ ಸಂವೇದನೆಯ ಮೂಲ ಘಟಕಗಳು. ಇವನ್ನೇ ಪಾರಿಭಾಷಿತವಾಗಿ ರಸ–ಧ್ವನಿ–ಗುಣ-ಅಲಂಕಾರ ಮುಂತಾದ ಪದಗಳಿಂದ ಒಮ್ಮೊಮ್ಮೆ ಒಂದೊಂದು ಕೋನಕ್ಕನುಸಾರವಾಗಿ ನಿರ್ದೇಶಿಸಲಾಗುತ್ತದೆ. ಭಾರತೀಯ ಸಂವೇದನೆಯ ಅರಿವಿಗೆ 'ಕಾವ್ಯಮೀಮಾಂಸೆ' ಎಂಬ ಶೀರ್ಷಿಕೆಗೆ ಒಳಪಟ್ಟ ಗ್ರಂಥಗಳಿಗೆ ಸೀಮಿತವಾದ ಅಧ್ಯಯನ ಯಾವ ಮಟ್ಟಿಗೂ ಸಾಕಾಗುವುದಿಲ್ಲ. ನಾಟ್ಯಶಾಸ್ತ್ರದಲ್ಲಿ ಸ್ಪಷ್ಟವಾಗಿ ಹೇಳಿರುವಂತೆ, ಒಂದು ನಾಟಕಪ್ರದರ್ಶನದ ಮೌಲ್ಯನಿರ್ಣಯಕ್ಕೆ ಯಾವ ಒಂದು ಗ್ರಂಥವಾಗಲೀ ಶಾಸ್ತ್ರವಾಗಲೀ ಸಾಕಾಗುವುದಿಲ್ಲ. ಎಲ್ಲಾ ಶಾಸ್ತ್ರಗಳಲ್ಲಿ ಪಾರಂಗತನಾದವನೂ ಒಬ್ಬನೇ ವ್ಯಕ್ತಿ ಮೌಲ್ಯನಿರ್ಣಯ ಮಾಡಲು ಹೊರಟಾಗ ತನ್ನ ದೃಷ್ಟಿಸೀಮಿತತೆಯ ದೋಷಕ್ಕಾಗಿ ಇತರ ಸಹೃದಯರನ್ನೂ ಕೂಡಿಸಿಕೊಂಡು ಅಗತ್ಯವಿದ್ದಲ್ಲಿ ಗ್ರಂಥಗಳನ್ನು ಉಪಯೋಗಿಸಿಕೊಂಡು ಮುನ್ನಡೆಯಬೇಕೆಂದು ಉಲ್ಲೇಖ ಇದೆ. ಇದರ ಪ್ರಕಾರ, ನಿಜವಾದ ಸಹೃದಯತೆ ಎಂಬುದು ಗ್ರಂಥಾತೀತ, ಶಾಸ್ತ್ರಾತೀತ, ವ್ಯಕ್ತ್ಯತೀತ ತತ್ವವಾಗಿದ್ದು ಇದರ ಸಾಕ್ಷಾತ್ಕಾರಕ್ಕಾಗಿ ಜೀವನವ್ಯಾಪಿ ಪ್ರಯತ್ನ ಮಾಡಬೇಕಾಗಿರುವುದು ವ್ಯಕ್ತಿಯ ಗುರಿ ಎಂದು ಹೇಳಿದಂತಾಗುತ್ತದೆ. ಕಾವ್ಯ–ಕಾವ್ಯಾನುಭವದಂಥವೂ ಭಾರತೀಯರ ಪ್ರಕಾರ ಜೀವನ ವ್ಯಾಪಿ ಅನುಸರಣೀಯ ತತ್ವಗಳೇ ಹೊರತು ಇಲ್ಲಿ ಇದೆ, ಅಲ್ಲಿ ಇದೆ, ವಾಲ್ಮೀಕಿಯಲ್ಲಿದೆ – ಕಾಳಿದಾಸನಲ್ಲಿದೆ ಎಂಬ ಮಾತುಗಳು ವ್ಯಾವಹಾರಿಕ ಸೀಮಿತ ಸತ್ಯಗಳು ಮಾತ್ರ. ಆದುದರಿಂದ 'ಕಾವ್ಯಮೀಮಾಂಸೆ' ಎಂದು ಕರೆಯಲಾಗುವ ಗ್ರಂಥಗಳ ಅಭ್ಯಾಸದ ಜೊತೆಗೆ ಭಾರತೀಯತೆಯನ್ನು ಪ್ರತಿನಿಧಿಸುವ ಇತರ ಗ್ರಂಥಗಳನ್ನೂ ಪೂರಕವಾಗಿ ಅಭ್ಯಾಸ ಮಾಡಿದಾಗ ಮಾತ್ರ ಪರಿಭಾಷಾ ನಿರೂಪಣೆಯಿಂದ ಮೀರಿದ ನಿಜವಾದ ಸಂವೇದನೆಯ ಅರಿವಾಗುವುದು ಸಾಧ್ಯ.

ಇಂದಿನ ಅಭ್ಯಾಸಕ್ರಮದ ದೋಷಗಳನ್ನು ಹಿಂದೊಮ್ಮೆ ಪ್ರಸ್ತಾಪಿಸಲಾಗಿದ್ದರೂ ಇಲ್ಲಿ ಪುನಃ ಸ್ಪಷ್ಟಪಡಿಸುವುದು ಅಗತ್ಯ. ಸಂಸ್ಕೃತ ವಿದ್ಯಾರ್ಥಿಗಳಾಗಿರುವವರು ಕಾವ್ಯಾಭ್ಯಾಸ–ಶಾಸ್ತ್ರಾಭ್ಯಾಸ ಎಂಬ ಎರಡು ಬಗೆಯ ಅಭ್ಯಾಸವನ್ನು ಪ್ರಧಾನವಾಗಿ ಮಾಡುತ್ತಾರೆ. ಕಾವ್ಯಾಭ್ಯಾಸವೆಂಬುದು ಇಲ್ಲಿ ಕೇವಲ ಭಾಷಾಭ್ಯಾಸವಾಗಿರುತ್ತದೆ. ಶಾಸ್ತ್ರಾಭ್ಯಾಸ ಪ್ರೌಢವಿಚಾರಗಳ ಅಭ್ಯಾಸ ಎಂದು ಕರೆಸಿಕೊಳ್ಳುತ್ತಿದ್ದರೂ ವಸ್ತುತಃ ಪರಿಭಾಷಾ ಸೂಕ್ಷ್ಮತೆಯ ಅಭ್ಯಾಸವಾಗಿರುತ್ತದೆ. ಕಾವ್ಯಮೀಮಾಂಸೆ ಎಂಬುದು ಈ ಎರಡರ ಮಧ್ಯದಲ್ಲಿ ಬರುವ ಒಂದು ಲಘು ಶಾಸ್ತ್ರಾಭ್ಯಾಸ. ಇತರ ಶಾಸ್ತ್ರಗಳಷ್ಟು ಪ್ರೌಢವಲ್ಲದ ಸೀಮಿತ ಮೌಲ್ಯದ ಒಂದು ಶಾಸ್ತ್ರ ಎಂದು ಇದನ್ನು ಅಭ್ಯಾಸಮಾಡಲಾಗುತ್ತದೆ ವಿನಾ ಇತರ ಶಾಸ್ತ್ರಗಳಿಗೂ ಇದಕ್ಕೂ ಮತ್ತು ಕಾವ್ಯಗಳಿಗೂ ಇರುವ ಪರಸ್ಪರ ಪೂರಕತನದ ಕಡೆಗೆ ಗಮನ ಹರಿಸಲಾಗುತ್ತಿಲ್ಲ. ಇಲ್ಲಿ ವಿದ್ಯಾರ್ಥಿ ಎಡವುತ್ತಾನೆ.

ಸಂಸ್ಕೃತೇತರ ವಿದ್ಯಾರ್ಥಿಗಳಲ್ಲಿ ಎರಡು ಬಗೆಯ ಕುತೂಹಲ ಇರುತ್ತದೆ: 1. ಪಾಶ್ಚಾತ್ಯ ಕಾವ್ಯ ಮೀಮಾಂಸೆಯೊಂದಿಗೆ ಭಾರತೀಯ ಕಾವ್ಯಮೀಮಾಂಸೆಯನ್ನು ಹೋಲಿಸುವುದು. ಇಂತಹ ಹೋಲಿಕೆ ಆರೋಗ್ಯಕರವಾಗಬೇಕಾದರೆ ಎರಡೂ ಪದ್ಧತಿಗಳ ನಿಷ್ಕೃಷ್ಟ

ಜ್ಞಾನ ಎರಡರ ಬಗೆಗೂ ಸಮಾನಸಂವೇದನೆ ಇಂಥಾದ್ದು ಅಗತ್ಯ. ಅಷ್ಟನ್ನು ಸಾಧಿಸುವುದು ಇಂದಿನ ವಾತಾವರಣದಲ್ಲಿ ಬಿಡಿ ವ್ಯಕ್ತಿಗಳಿಗೆ ಕಷ್ಟವಾಗಿದೆ. ಸಮಾನಾಭಿರುಚಿಯವರೂ ಅಧ್ಯಯನಶೀಲರೂ ಸಂವೇದನಾಶೀಲರೂ ಆಗಿರುವವರ ಕೂಟ ರಚನಾತ್ಮಕವಾಗಿ ಕೆಲಸಮಾಡಿದಲ್ಲಿ ಮಾತ್ರ ಅಂತಹ ತುಲನೆ ಸಾಧ್ಯವಾಗಬಹುದು. ಇದಕ್ಕೆ ಬದಲಾಗಿ, ಯಾವುದೋ ಬಿಡಿ ಅಂಶಗಳನ್ನು ಅಥವಾ ಬಿಡಿ ಗ್ರಂಥಕಾರರನ್ನು ತೆಗೆದುಕೊಂಡು, ಭರತನನ್ನು ಅರಿಸ್ಟಾಟಲನಿಗೆ ಹೋಲಿಸುವುದು, ರಸವನ್ನು ಕೆಥಾರ್ಸಿಸ್‌ಗೆ ಹೋಲಿಸುವುದು, ಇಂತಹ ಪ್ರಯತ್ನದ ಬಹುಭಾಗಗಳು ವ್ಯರ್ಥ. 2. ಇನ್ನೊಂದು ಬಗೆಯ ಕುತೂಹಲವೆಂದರೆ, ಭಾರತೀಯ ಕಾವ್ಯಮೀಮಾಂಸೆಯನ್ನು ಲಕ್ಷ್ಯ ಗ್ರಂಥಗಳ ಮೇಲೆ ಪ್ರಯೋಗಿಸಲು ಸಾಧ್ಯವೇ ಎಂದು ನೋಡುವುದು. ಕೆಲವರ ಪ್ರಕಾರ, ಇಂತಹ ಪ್ರಾಯೋಗಿಕತೆಗೆ ಯಾವ ಅಡ್ಡಿಯೂ ಇಲ್ಲ. ಇನ್ನು ಕೆಲವರ ಪ್ರಕಾರ ಭಾರತೀಯ ಕಾವ್ಯಮೀಮಾಂಸೆಗೆ ಪ್ರಾಯೋಗಿಕ ಮೌಲ್ಯವೇ ಇಲ್ಲ. ಅದು ಸೂಚೀಪತ್ರದಂತೆ ಕಲ್ಪನೆಗಳ ಪಟ್ಟಿಮಾತ್ರ.

ಯಥಾರ್ಥವಾಗಿ ನೋಡುವುದಿದ್ದರೆ, ಭಾರತೀಯ ಕಾವ್ಯಮೀಮಾಂಸೆಯನ್ನು ಲಕ್ಷ್ಯಗಳ ಮೇಲೆ ನೇರ ಪ್ರಯೋಗಿಸುವುದು ಆಗದ ವಿಚಾರ. ಯಾಕೆಂದರೆ, ಇತರ ಶಾಸ್ತ್ರಗಳಿಗೆ ಪೂರಕವಾಗಿ ಬೆಳೆದುದರಿಂದ ಅದು ಸ್ವಯಂಪೂರ್ಣವಲ್ಲ ಎಂಬ ಕಲ್ಪನೆ ಅದಕ್ಕೇ ಇದೆ. ವಸ್ತು–ಪಾತ್ರಗಳ ಬಗೆಗೆ ನೀತಿಶಾಸ್ತ್ರ, ರಸದ ಬಗೆಗೆ ವೇದಾಂತ, ಧ್ವನಿಯ ಬಗೆಗೆ ವ್ಯಾಕರಣ–ಹೀಗೆಯೇ ಇತರ ಶಾಸ್ತ್ರಗಳನ್ನೂ ತನಗೆ ಪೂರಕವಾಗಿ ಅಭ್ಯಾಸ ಮಾಡಿಕೊಂಡು ಕಾವ್ಯವನ್ನು ಅರ್ಥಮಾಡಬೇಕೆಂದು ನಿರೀಕ್ಷಿಸುವ ಶಾಸ್ತ್ರವಾದುದರಿಂದ ಲಕ್ಷ್ಯವಿವೇಚನೆಯಲ್ಲಿ ಅದರ ಪಾತ್ರ ಇದ್ದರೂ ಅವರದ್ದೊಂದೇ ಪಾತ್ರವಲ್ಲ. ಹಾಗೆಂದು ಪ್ರಾಯೋಗಿಕ ಮೌಲ್ಯವೇ ಅದಕ್ಕಿಲ್ಲ ಎನ್ನುವುದೂ ಸರಿಯಲ್ಲ. ಲಕ್ಷ್ಯಾಧ್ಯಯನಕ್ಕೆ ಬೇಕಾದ, ಇಡೀ ಲಕ್ಷ್ಯಪ್ರಪಂಚಕ್ಕೇ ಅನ್ವಯಿಸುವ, ಮಾನಸಿಕ ಹಿನ್ನೆಲೆಯನ್ನು ಅದು ಕೊಡಬಲ್ಲದು. ವೇದಾಂತ ಶಾಸ್ತ್ರಜ್ಞಾನವೇ ಬ್ರಹ್ಮಜ್ಞಾನ ಅಲ್ಲ, ಆದರೂ ಬ್ರಹ್ಮಜ್ಞಾನ ಸಾಧನ ಮಾರ್ಗವನ್ನು ಅದು ತೋರಿಸಬಲ್ಲುದು. ಹಾಗೆಯೇ ಕಾವ್ಯಮೀಮಾಂಸೆ ಲಕ್ಷ್ಯಾಭ್ಯಾಸಿ ಮುನ್ನಡೆಯಬೇಕಾದ ಮಾರ್ಗವನ್ನು ಸ್ಪಷ್ಟವಾಗಿ ತೋರಿಸಬಲ್ಲುದು. ಅಲ್ಲದೆ, ಯಾವ ಲಕ್ಷ್ಯಗ್ರಂಥಕ್ಕೂ ಕನಿಷ್ಠ ನ್ಯಾಯ ಒದಗಿಸುವಂತೆ ಅಭ್ಯಾಸಿಯನ್ನು ರೂಪಿಸಬಲ್ಲುದು; ಲಕ್ಷ್ಯವನ್ನು ಹೊರತಾಗಿಯೇ ಲಕ್ಷ್ಯಸಂಬಂಧಿ ವೈಚಾರಿಕತೆಯನ್ನು ಸಮರ್ಪಕವಾಗಿ ಬೆಳೆಸುವಂತೆ ಅವನನ್ನು ಪೂರ್ಣಗೊಳಿಸಬಲ್ಲುದು. ಒಟ್ಟಿನಲ್ಲಿ ಇಂದು ಜನಪ್ರಿಯವಾಗಿರುವ ಪ್ರಾಯೋಗಿಕ ವಿಮರ್ಶೆಗೆ ಪೂರಕವಾಗಿ ತಾತ್ವಿಕ ಹಿನ್ನೆಲೆಯನ್ನು ಒದಗಿಸಬಲ್ಲುದು.

* * * *

* * * *

“ನಿನಗೆ ತುಂಬ ಕಲ್ಪನಾ ಸಾಮರ್ಥ್ಯವಿದೆ .... ಆ ಸಾಮರ್ಥ್ಯವನ್ನು ಮಾನವ ಜೀವಿಗಳ ಆತ್ಮಗಳನ್ನು ಸೃಷ್ಟಿಸಲು ಬಳಸಬೇಕೇ ಹೊರತು — ವಾಸ್ತವದಲ್ಲಿ ಆಕಸ್ಮಿಕ ಎನಿಸಿಕೊಳ್ಳುವ ಘಟನೆಗಳನ್ನು ಸೃಷ್ಟಿಸಲು ಅಲ್ಲ. ಇದನ್ನು ಸಾಧಿಸಲು ನೀನು ನಿನ್ನ ಕಾವ್ಯಶಕ್ತಿಯನ್ನು ಸಂಸ್ಕೃತಿಸಿಕೊಳ್ಳಬೇಕು. ನಿನ್ನ ಭಾವನೆಗಳಿಗೆ ನೀನೆ ಕೊಟ್ಟುಕೊಳ್ಳಬೇಕು (ಅದೇನೂ ಸುಲಭಸಾಧ್ಯವಲ್ಲ). ಸಂಕೋಚವನ್ನಾಗಲೀ, ಮರುಕವನ್ನಾಗಲೀ ತೋರಿಸದೆ, ಪ್ರತಿ ಇಂದ್ರಿಯಾನುಭವದ ಜ್ಞಾನವನ್ನು, ವಿಚಾರವನ್ನು, ಪ್ರತಿ ಪ್ರತಿಮೆಯನ್ನು ನಿಷ್ಕರುಣೆಯಿಂದ ನಿನ್ನಿಂದ ನೀನು ಹಿಂಡಿ ತೆಗೆಯಬೇಕು; ನಿನ್ನ ಹೃದಯದ ಮೂಲೆಗಳಲ್ಲಿ, ಮಿದುಳಿನ ಗುಪ್ತಸಂದುಗಳಲ್ಲಿ — ಸರಿಯಾದ ಪ್ರತಿಮೆಗಾಗಿ, ಸಮ್ಮೋಹಕತೆಗಾಗಿ, ಸರಿಯಾದ ಅಭಿವ್ಯಕ್ತಿಗಾಗಿ —— ಹುಡುಕಾಡಬೇಕು; ಮತ್ತಿದನ್ನು ಕೃತ್ರಿಮವಿಲ್ಲದೆ, ಯಾವುದೇ ಬೆಲೆತೆತ್ತಾದರೂ ನಡೆಸಬೇಕು. ಇದನ್ನು ಹೇಗೆ ಮಾಡಬೇಕೆಂದರೆ, ದಿನದ ಕೆಲಸ ಮುಗಿದಾಗ, ನಿನ್ನಿಂದ ಪ್ರತಿಯೊಂದು ಕಲ್ಪನೆ, ವಿಚಾರ ಬಸಿಯಲ್ಪಟ್ಟು, ಮಿದುಳೇ ಖಾಲಿಯಾದಂತನಿಸಬೇಕು. ಹೃದಯ ನೋಯುವಂತೆ ಭಾಸವಾಗಬೇಕು — ನಿನ್ನೊಳಗೆ ಮತ್ತೇನೂ ಉಳಿದಿಲ್ಲವೆಂಬಂತನಿಸಬೇಕು. ನಿಜವಾದ ಯಶಸ್ಸು ಸಾಧಿಸಲು ಇದೊಂದೇ ದಾರಿ ಎಂದು ನನಗನಿಸುತ್ತದೆ.”

—— ಜೋಸೆಫ್ ಕಾನ್ರಾಡ್ (ಎಡ್ವರ್ಡ್ ನೋಬೆಲ್‌ಗೆ ಬರೆದ ಪತ್ರವೊಂದರಿಂದ)

ಎಸ್. ಜಿ. ವಾಸುದೇವ್

ಈ ನನ್ನ ವೃಕ್ಷ

ಕಲೆಗೆ ತನ್ನದೇ ಆದ ಪಾವಿತ್ರ್ಯವಿದೆ. ಅದು ಸ್ವತಂತ್ರವಾದ್ದು ಕೂಡ ಸಮಾಜದ ಸದ್ಯದ ಧೋರಣೆಗಳು, ಆಚಾರ ವ್ಯವಹಾರಗಳು, ಮಾರುಕಟ್ಟೆಯ ನಿಯಮಗಳು, ಮನಸ್ಸಿನ ನೆಮ್ಮದಿಗೋ ಶುಶ್ರೂಷೆಗೋ ಆಯಾ ವ್ಯವಸ್ಥೆಗಳು ಏರ್ಪಡಿಸಿಕೊಂಡಿರುವ ವಿಧಾನಗಳು— ಈ ಎಲ್ಲದರಿಂದಲೂ ಕಲೆ ಸ್ವತಂತ್ರವಾದ್ದು. ಅದರ ಪಾವಿತ್ರ್ಯವಿರುವುದು ಕಲಾವಿದನ ನಿಷ್ಠೆಯಲ್ಲಿ; ಈ ನಿಷ್ಠೆ ಇರುವುದು ತನ್ನ ಕಾಣ್ಕೆಯನ್ನು ಎಷ್ಟು ಸಹಜವಾಗಿ ಕಲಾವಿದ ವ್ಯಕ್ತಪಡಿಸುತ್ತಾನೆ ಎಂಬುದರಲ್ಲಿ. ಮುಖ್ಯವಾದ್ದು: ಅವನ ಆತ್ಮ ಅಲ್ಪವಾದ್ದಾಗಿರಕೂಡದು; ದೊಡ್ಡದನ್ನು ಧಾರಣ ಮಾಡಬಲ್ಲ ಶಕ್ತಿ ಅದಕ್ಕಿರಬೇಕು; ಹೀಗೆ ಧಾರಣ ಮಾಡಿದ್ದನ್ನು ಅಭಿವ್ಯಕ್ತಿಸಲು ಅಗತ್ಯ ಸಾಮರ್ಥ್ಯ ಪಡೆದ ತಾಂತ್ರಿಕಪಟು ಅವನಾಗಿರಬೇಕು. ಅಂದರೆ ಮಾತ್ರ ಅವನು ಸಲ್ಲುತ್ತಾನೆ - ಈಗ, ಅಲ್ಲದಿದ್ದರೆ ಮುಂದೆ. ಅಥವಾ ಎಲ್ಲ ಕಾಲದಲ್ಲೂ.

ಕಲೆಯ ಮೂಲದ್ರವ್ಯ ಪುರಾಣವೆನ್ನುತ್ತಾರೆ. ಈ ಪುರಾಣ ಅಂತರ್ಗತವಾದ್ದು– ಪೂರ್ಣ ಬಹಿರಂಗವಾಗುವಂಥದಲ್ಲ. ನಮ್ಮ ಆಸಕ್ತಿಯನ್ನು ಉಳಿಸಿಕೊಳ್ಳಬಲ್ಲ, ಹಾಗಾಗಿ ಕಾಲದಲ್ಲಿ ಸಜೀವವಾಗಿ ಉಳಿಯಬಲ್ಲ ಈ ಪುರಾಣ ಅಂತರ್ಗತವಾದ್ದರಿಂದಲೇ ರಹಸ್ಯಮಯವಾಗಿರುತ್ತದೆ. ಪುರಾಣದ ಜೀವಾಳ ಈ ರಹಸ್ಯ.

ನನ್ನ ವರ್ಣಚಿತ್ರಗಳಲ್ಲಿ, ಲೋಹದ ಕೆತ್ತನೆಗಳಲ್ಲಿ ಈ ಗುಣವಿದೆಯೆಂದು ನಾನು ತಿಳಿದಿರುವೆ.

ಪ್ರಪಂಚದ ಹಲವು ಧರ್ಮಗಳಲ್ಲಿ, ಆದಿಮಾನವನ ಪುರಾಣಗಳಲ್ಲಿ., ಜಾನಪದದಲ್ಲಿ ಜೀವನ ವೃಕ್ಷ ಸಾರ್ವತ್ರಿಕವಾಗಿ ಸಾಂಕೇತಿಕವಾದ್ದು; ಈ ಬ್ರಹ್ಮಾಂಡದ ಒಳಪ್ರಕ್ರಿಯೆಯನ್ನೂ, ಗುರಿಯನ್ನೂ, ಪ್ರಪಂಚ ಮತ್ತು ಮನುಷ್ಯನ ಹಾಸುಹೊಕ್ಕಿನ ಸಂಬಂಧದ ಕೇಂದ್ರವನ್ನೂ ಈ ಜೀವನ ವೃಕ್ಷ ಸಂಕೇತಿಸುತ್ತದೆ. ಮನುಷ್ಯ ಭಯಪಡುವ ಹಾಗೂ ಪೂಜಿಸುವ ಅತೀತವಾದೊಂದು ಶಕ್ತಿಯನ್ನು 'ವೃಕ್ಷ' ಸೂಚಿಸುತ್ತದೆ. ಋತು ಋತುವಿಗೂ ಬದಲಾಗುತ್ತ, ಪುನರ್ಜನ್ಮ ಪಡೆಯುತ್ತ ಹೋಗುವ ಈ ಪವಿತ್ರ ವೃಕ್ಷದಲ್ಲಿ ಮೈಪಡೆಯುವುದು ಜಗತ್ತಿನ ಮೂಲದಲ್ಲಿರುವ ಶಕ್ತಿ. ಆದ್ದರಿಂದ ಇವತ್ತಿಗೂ ಈ ಸಂಕೇತ ಜೀವಂತವಾಗಿ ಉಳಿದಿದೆ. ಆಧುನಿಕ ಮನುಷ್ಯನ ಪ್ರಜ್ಞಾತೀತ ವಲಯದಲ್ಲಿ ಅನುರಣಿಸುತ್ತ ಇದು ಅವನ ಕಲ್ಪನೆಯನ್ನು ಕ್ರಿಯಾಶೀಲವಾಗಿಸುತ್ತದೆ. ಅವನ ಕಲೆಯಲ್ಲಿ, ಅವನ ಕನಸುಗಳಲ್ಲಿ ಮೂಲ ಸಂಕೇತವಾಗಿ ಇದರ ರಹಸ್ಯಮಯಶಕ್ತಿ ಪ್ರತ್ಯಕ್ಷವಾಗುತ್ತದೆ.

ನಾನು ಈ ವೃಕ್ಷದಿಂದ ಆವಾಹಿತನಾಗಿದ್ದೇನೆ. ಸ್ವರ್ಗ ಮರ್ತ್ಯ ಪಾತಾಳಗಳನ್ನು ವೃಕ್ಷ ಆವರಿಸಿದೆ; ಕೊಂಬೆಗಳನ್ನು ಸ್ವರ್ಗದಲ್ಲಿ ಚೆಲ್ಲಿದೆ, ಪಾತಾಳದಲ್ಲಿ ಬೇರುಗಳನ್ನು ಇಳಿಸಿದೆ. ವೃಕ್ಷದಂತೆಯೇ ಕಲ್ಪನೆಯೂ ಸ್ವರ್ಗವನ್ನೂ ಮರ್ತ್ಯಲೋಕವನ್ನೂ ಕೂಡಿಸುತ್ತದೆ; ಅದರ ಬೇರುಗಳು ಮೇಲೂ ಇವೆ, ಕೆಳಗೂ ಇವೆ. ಪ್ರಭೆಯಿಂದ ತೊಯ್ದ ಪ್ರಜ್ಞೆಯ ಹೊಂವಲಯವನ್ನೂ, ಪ್ರಜ್ಞಾತೀತದ ಕಾಳ

ಅಧೋಲೋಕವನ್ನೂ ವೃಕ್ಷ ಬಂಧಿಸುತ್ತದೆ; ಅಮರ್ತ್ಯದ ಅಮೂರ್ತವಾದ ಅರ್ಥಪೂರ್ಣತೆಯಿಂದಲೂ, ಮರ್ತ್ಯದ ಐಂದ್ರಿಯಕ ತಿಳಿವಿನಿಂದಲೂ ತನ್ನ ಸಾರವನ್ನು ಪಡೆಯುತ್ತದೆ. ಈ ಮೂಲಕ ಮಾಂತ್ರಿಕವಾದ ವ್ಯಕ್ತ ಮಧ್ಯದ ಪ್ರತೀಕಗಳನ್ನು ಸೃಷ್ಟಿಸುತ್ತದೆ. ಈ ಪರಸ್ಪರ ಎದುರುಬದುರಿನ ಜಗತ್ತುಗಳ ನಡುವಿನ ಚುರುಕಾದ ಮಧ್ಯಸ್ಥಿಕೆಯಿಂದಾಗಿ ವೃಕ್ಷ ತನ್ನ ಸಾಂಕೇತಿಕ ಶ್ರೀಮಂತಿಕೆಯನ್ನೂ ಬಾಹುಳ್ಯವನ್ನೂ ಪಡೆಕೊಂಡಿದೆ. ಆದ್ದರಿಂದಲೇ ಈ ಒಂದೇ ಒಂದು ವೃಕ್ಷದಂಥ ಅಸಲು ಸಂಕೇತ ಎಲ್ಲಕಾಲದಲ್ಲೂ ದೇಶದಲ್ಲೂ ಇಷ್ಟೊಂದು ಸಂಕೇತಗಳ ಕೊಂಬೆಗಳೂ ಹೂಗಳೂ ಆಗಿ ಹರಡಿಕೊಂಡಿರುವುದು.

ವೃಕ್ಷದಂತೆಯೇ ಕಲ್ಪನೆಯೂ ಅನಂತ ಮರುಹುಟ್ಟುಗಳನ್ನು ಪಡೆಯಬಲ್ಲ ಮೂಲಾಧಾರ ಶಕ್ತಿ. ಇದು ಎಷ್ಟು ಪ್ರಾಚೀನವೋ, ಅಷ್ಟೇ ಎಳೆಯದು; ಇದಕ್ಕೆ ಶರದೃತುವೂ ಇದೆ ವಸಂತವೂ ಇದೆ. ಇಂದ್ರಿಯಗಳು ಸಾಂಪ್ರದಾಯಿಕ ರೂಪಗಳಲ್ಲಿ ಸಿಕ್ಕಿಬಿದ್ದು ತಟಸ್ಥವಾಗಿ ಜಡಯಾಗಿಬಿಟ್ಟಲ್ಲಿ ಕಲ್ಪನಾಶಕ್ತಿ ಮುರುಟಿಹೋದೀತು. ಆದ್ದರಿಂದ ಕಲ್ಪನೆ ಸಕಲಾದ ಅರ್ಥಗಳನ್ನು ವರ್ಜಿಸುತ್ತದೆ; ಪ್ರತಿಷ್ಠಿತ ಮತಗಳನ್ನು ಬೇಧಿಸುತ್ತದೆ; ಸನಾತನ ಸತ್ಯಗಳನ್ನು ಚಿಗುರಿಸುತ್ತದೆ; ಹೊಸ ಬೆಳಕನ್ನು ಈ ಸತ್ಯಗಳಿಗೆ ಉಡಿಸುತ್ತದೆ.

ವೃಕ್ಷ ನನ್ನ ಪಾಲಿಗೆ ಭೂವ್ಯೋಮಗಳನ್ನು ಕೂಡಿಸುವ, ಪ್ರಕೃತಿಯ ಎಲ್ಲ ಅಂಶಗಳನ್ನೂ ಬೆಸೆಯುವ ಕೇಂದ್ರವಾಗಿದೆ.

ವೃಕ್ಷಗಳನ್ನು ತಿಳಿಯದವರು ಯಾರು? ಅವು ಭೂಮಿಯ ಉಸಿರು; ಅವು ಹಕ್ಕಿಗಳ ಮನೆಯಾಗಿ ಹೂಗಳನ್ನೂ ಹಣ್ಣನ್ನೂ ಕೊಡುತ್ತವೆ. ಅವು ಮನುಷ್ಯನ ಅನುಭವಕ್ಕೆ ದ್ಯೋತಕವಾಗುವಂತೆ ಸೃಷ್ಟಿಸಲ್ಪಡುತ್ತವೆ. ಸೃಜನಶೀಲ ಶಕ್ತಿಯ ವರ್ಧಮಾನದ ಸಂಕೇತಗಳು ಅವು.

ನನ್ನ ಒಳಜೀವನದ ಅನುಭವದಲ್ಲಿ ಈ ವೃಕ್ಷಗಳು ಊರಿವೆ. ನನಗೆ ಬೆಳೆಯುವ ಆಸೆ; ನನ್ನ ಹೊರಗಿನದನ್ನು ಕಾಣುವ ಆಸೆ. ನನ್ನೊಳಗೆ ಈ ವೃಕ್ಷ ಪುರಾಣ, ಕರ್ಮಕಾಂಡ, ಸಂಕೇತಗಳನ್ನು ಸಾವಯವ ಬೆಸೆಯುವಷ್ಟು ಬೆಳೆಯುತ್ತದೆ. ನನ್ನದು ಜಂತು ಪ್ರಪಂಚ–ಅದು ಹಕ್ಕಿ, ಹಾವು, ಮೀನು, ಕೋಳಿ, ಬೀಜ, ಹೂವು, ಹಣ್ಣು, ಆನೆ, ಸವಾರ, ಗಂಡು ಹೆಣ್ಣುಗಳು, ನೈಜ ಹಾಗೂ ಕಾಲ್ಪನಿಕ ಜೀವಿಗಳು, ನೈಸರ್ಗಿಕ ಹಾಗೂ ಕೃತಕ ವಸ್ತುಗಳು– ಈ ಎಲ್ಲವನ್ನೂ ಮೋಡಗಳ ಕೆಳಗೆ ಏರಿಳಿವ ದಿಣ್ಣೆ ಬೆಟ್ಟಗಳಂತೆ ಹರಡಿಕೊಂಡಿರುವ ಜೀವ ಗಿಜುಗುಟ್ಟುವ ಪ್ರದೇಶವಾಗಿದೆ. ರಂಗದ ಮಧ್ಯೆ ವೃಕ್ಷವಿದೆ; ಸಮಸ್ತ ಜೀವವೂ ಅದರ ಫಲವಾಗಿದೆ.

ಹಲವು ವರ್ಷಗಳ ಕಾಲ ನನ್ನ ವಸ್ತು 'ಮಿಥುನ' ವಾಗಿತ್ತು. ಮಾನವರೂಪಗಳನ್ನು ಹಿಡಿದಿಡಲೆಂದು ಈ ವಸ್ತುವನ್ನು ನಾನು ಬೆಳೆಸಿದೆ. ಮಿಥುನ ನನ್ನ ಪಾಲಿಗೆ ಗಂಡು–ಹೆಣ್ಣುಗಳ ಪ್ರಣಯಕ್ರಿಯೆ ಮಾತ್ರವಾಗಿರಲಿಲ್ಲ; ಗ್ರಹ ಮತ್ತು ಭೂಮಿ, ಬೆಟ್ಟ ಮತ್ತು ಸಮುದ್ರ, ಮರ ಮತ್ತು ಹಕ್ಕಿ, ಸೂರ್ಯ ಮತ್ತು ಚಂದ್ರ, ಆಕಾಶ ಮತ್ತು ನಕ್ಷತ್ರ – ಈ ಎಲ್ಲ ರೂಪಗಳ ನಡುವಿನ ಪ್ರೇಮವಾಗಿತ್ತು ಅದು ನನಗೆ.

ನನ್ನ ಕಲೆಯಲ್ಲಿ ಪ್ರತೀಕಗಳು ಮತ್ತು ವಿವರಗಳು ತಾವೇ ಹುಟ್ಟುತ್ತವೆ, ಅವಯವ ಪಡೆಯುತ್ತ ಬೆಳೆಯುತ್ತವೆ. ನನಗೆ ಇದು ಜೀವ ತುಳುಕುವ ಮನೋಹರ ಪ್ರಪಂಚ. ನನ್ನದು ವೈಯಕ್ತಿಕವಾದ ಭಾವಲಿಪಿ; ಅಂತಃಪ್ರೇರಣೆಯಿಂದ ನನ್ನ ಚಿತ್ರಗಳ ಪ್ರತಿ ವಿವರ ಹುಟ್ಟಿಕೊಳ್ಳುತ್ತದೆ. ಅರ್ಧಒಣಗಿದ ಬಣ್ಣದ ಮೇಲೆ ಮೂಡುವ ಕಲೆ, ಉಬ್ಬುಬಟ್ಟು, ಉಳಿಕೆಗಳು ನಾನು ಬಳಸುವ ವಿಧಾನಗಳು, ನನ್ನ ತಂತ್ರ ವಿಶೇಷಗಳು.

ಕೆಲವು ವರ್ಷಗಳ ಹಿಂದೆ ಉಬ್ಬುಚಿತ್ರದ ವಿಚಾರ ನನಗೆ ಹೊಳೆಯಿತು. ಈ ಮಾಧ್ಯಮವನ್ನು ನಾನು ಪೂರ್ಣ ದುಡಿಸಿಕೊಂಡೆ. ನನ್ನ ಚಿತ್ರಗಳ ಸಂಕೇತಗಳೇ ಇಲ್ಲೂ ಇವೆ; ಆದರೆ ಇಲ್ಲಿನ ವಿನ್ಯಾಸದಲ್ಲಿ ಹೆಚ್ಚು, ಸ್ಪಷ್ಟತೆ, ನಿಷ್ಕೃಷ್ಟತೆಗಳಿವೆ. ರೂಪದ ಸರಳತೆಯನ್ನೂ, ಅದರ ವೈಶಿಷ್ಟ್ಯವನ್ನೂ ಸಮತೋಲದಲ್ಲಿಡಲು ಈ ಮಾಧ್ಯಮದ ಸೂಕ್ಷ್ಮಗಳನ್ನು ನಾನು ಉಳಿಸಿಕೊಳ್ಳಲು ಪ್ರಯತ್ನಿಸಿದ್ದೇನೆ.

ಲೋಹದ ಮೈಯನ್ನು ಕುಳಿಮಾಡಿ, ಕೊರೆದು, ಉಬ್ಬಿಸಿ, ಶಬಲೀಕರಿಸುವುದರ ಮುಖಾಂತರ, ಕೊನೆಯಲ್ಲಿ ಕೃತಕವಾಗಿ ಕಿಲುಬು ಗೊಳಿಸಿ ಅದಕ್ಕೆ ತಕ್ಕ ಅಂದ ತರುವುದರ ಮೂಲಕ ನನ್ನ ಉದ್ದೇಶಗಳನ್ನು ಸಾಧಿಸುತ್ತೇನೆ. ✧

(ಅನುವಾದ : ಅ. ಮೂ.)

ರಾಮಚಂದ್ರ ದೇವ

ಬರಿವ ಕೆಲಸ ಬದುಕುವ ಕೆಲಸ

ಕಮಿಟ್‌ಮೆಂಟು ಇವೊತ್ತು ಭಾಳ ಮಾತಿಗೆ ಬಿದ್ದ ಮಾತು. ಕಮಿಟ್‌ಮೆಂಟು, ಪ್ರಜ್ಞೆ. ಕೆಲವರು ಹೇಳ್ತಾರೆ: ಬರೆಹಗಾರ ಅಂಬೋನಿಗೆ ಸಾಮಾಜಿಕಪ್ರಜ್ಞೆ ರಾಜಕೀಯ ಪ್ರಜ್ಞೆ ಬೇಕು. ಕಮಿಟ್‌ಮೆಂಟು ಬೇಕು. ಬೇರೆ ಕೆಲವರು ಹೇಳ್ತಾರೆ: ಹೀಗೆಲ್ಲಾ ಎಂಥದೂ ಬೇಡ, ಬರಹಗಾರ ತನ್ನ ಅನುಭವ ಬರ್ಕೊಂಡ್ರೆ ಸಾಕು. ಆದರೆ ಬರಹದವನ ಪರಿಸ್ಥಿತಿ ಇದ್ರಿಂದ ಇಕ್ಕಟ್ಟೆಂದು ಅನಿಸ್ತದೆ. ಯಾಕೆ ಅಂದ್ರೆ, ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೇಲಿ ಬರಿಯೋದು ಅಂತ ಆಯ್ಕೆ ಮಾಡ್ಕಂಡು ಬರವಣಿಗೆ ಸುರುಮಾಡುವ ಆಯ್ಕೆ ಸ್ವಾತಂತ್ರ್ಯ ಇವೊತ್ತಿನ ಬರವಣಿಗೆಯವ್ನಿಗೆ ಇಲ್ಲ. ನಾವು ಸಾಮಾಜಿಕ, ರಾಜಕೀಯ ಬಿಟ್ಟು ಬರಿಯೋದಕ್ಕೇ ಸಾಧ್ಯವೇ ಆಗದ ಅನಿವಾರ್ಯ ಈಗ ಬಂದದೆ. ದೂರದ ಮೂಲೇಲಿರುವ ಒಂದು ಗ್ರಾಮ ತಕ್ಕೊಳ್ಳಿ. ಅಲ್ಲಿ ವಿದ್ಯುಚ್ಛಕ್ತಿಯೂ ಇಲ್ಲ ಅಂತಿಟ್ಕೊಳ್ಳೋಣ. ಆದ್ರೆ, ಗ್ರಾಮಸೇವಕ ಇರ್ತಾನೆ. ಅವನ ಮೂಲಕ ಬೆಂಗಳೂರು ಬ್ಯೂರೋಕ್ರೆಸೀದು ಒಂಚೂರು ಈ ಗ್ರಾಮಕ್ಕೂ ಬಂದಿರ್ತದೆ. ಅಥವಾ ಈ ಗ್ರಾಮದ್ದೊಂದು ಸಂಭೋಗ ತಗೊಳ್ಳೋಣ. ಗಂಡ-ಹೆಂಡ್ತಿದೇ ಸಂಭೋಗ. ಈ ಸಂಭೋಗದ ಮಧ್ಯೆ ಡೆಲ್ಲಿ ನಿರೋಧವಾಗಿ ಹಾಜರಿರ್ತದೆ. ವ್ಯಾಸೆಕ್ಟಮಿ ಟ್ಯೂಬೆಕ್ಟಮಿ ಆಗಿ ಹಾಜರಿರ್ತದೆ. ಅಥವಾ ನಿರೋಧ ಇತ್ಯಾದಿ ಹಾಜರಿರ್ಲಿಲ್ಲ ಅನ್ನಿ. ಹುಟ್ಟುವ ಹೆಚ್ಚು ಮಕ್ಳು ಉಂಬೋದಕ್ಕಿಲ್ಲದೆ, ಅಪೌಷ್ಟಿಕರಾಗಿ, ಜನಸಂಖ್ಯೆ ಹೆಚ್ಚಿ ದೇಶಕ್ಕೆ ಸಮಸ್ಯೆ ಆಗ್ತದೆ. ಒಂದು ಗುಡಿಸಲು, [illegible] ಇಂಥಾ ಕೆಲ ಗುಡಿಸಲು ದೇಶಕ್ಕೆ ಹಬ್ಬಿಕೊಳ್ತದೆ. ಇದು ಸಾಮಾಜಿಕ ಸಮಸ್ಯೆ ಅಂತ ಸರಳ ಮಾಡೋದು ಬೇಡ. ಸರಳ ಮಾಡಿದ್ರೆ ಲೇಖಕನ ಕತೆ ಮುಗೀತು. ಆದ್ರೆ ಸಂಭೋಗ ಮಾಡುವಾಗ ಡೆಲ್ಲಿ ನಿರೋಧ ಆಗಿ ಹಾಜರಿದ್ರೆ, ನಾನು ಮೂರು ಮಕ್ಳಿಗಿಂತ ಹೆಚ್ಚು ಮಾಡಿದ್ರೆ ನನ್ನ ಇಂಕ್ರೀಮೆಂಟ್ ನಿಂತರೆ, ಖಾಯಮ್ಮಾಗಿ ಹೆಂಡ್ತಿ ಮಕ್ಳ ಹೊಟ್ಟೆ ಬಟ್ಟೆ ಚಿಂತೇಲಿ ನಾನು ಬದುಕಿನ ಮಜ ಕಳ್ಕೊಂಡು—ಸದಾ ಪೆಟ್ರೋಲು ಕೇಳುವ ಸ್ಕೂಟರ್ ಥರ ಆದಾಗ – ಚಿಂತೇಲಿ ಹುಟ್ಟುವ ಭಯ ಇನ್‌ಸೆಕ್ಯೂರಿಟಿ ಇದ್ಯಲ್ಲ – ಅದು ಸಾಮಾಜಿಕಕ್ಕಿಂತ ಆಳಕ್ಕೆ ಹೋದ ಮನುಷ್ಯನ ಅಸ್ತಿತ್ವಕ್ಕೆ ಸಂಬಂಧಪಟ್ಟ ಪ್ರಶ್ನೆ. ತನ್ನ ಬಗ್ಗೆ ಮಾತ್ರ ಬರ್ಕೊಳ್ಳೋಣ ಅನ್ನೋರಿಗೂ ಹಾಗೆ ಬರ್ಕಳ್ಳೋಕೆ ಆಗಲ್ಲ. ಒಂದು ಪ್ರೇಮಗೀತೆ ಬರಿಯೋಕೆ ಹೊರಡಿ – ಜಾತಿ ಪ್ರೇಮಕ್ಕೆ ಅಡ್ಡಿ ತರ್ತದೆ, ಅಥ್ವಾ ಪ್ರೇಮಿಸುವಾಗ್ಲೂ ಸೂಕ್ಷ್ಮವಾಗಿ ಜಾತಿ ಹಾಜರಿರ್ತದೆ ಅಂಬ ಅನುಭವ ಮೂಲೆಗೊತ್ತಿ ಹೇಗೆ ಬರೀತೀರ? ಹೆಂಡತಿ ಬೆಳಿಗ್ಗೆ ಆರುಗಂಟೆಗೆ ಆಫೀಸಿಗೆ ಹೋಗ್ತಾಳೆ, ಸಂಜೆ ಆರುಗಂಟೆಗೆ ಬರ್ತಾಳೆ; ಗಂಡಂಗೆ ಸಂಜೆ ಮೂರು ಗಂಟೆಗೆ ಷಿಫ್ಟ್ ಇರ್ತದೆ, ರಾತ್ರಿ ಹನ್ನೆರಡು ಗಂಟೆಗೆ ಬರ್ತಾನೆ – ಕಾರ್ಖಾನೆ ಟೈಮಿಂಗ್ಸ್ ಮನೆ ಒಳಕ್ಕೆ ಬಂತೋ?—ಈ ಗಂಡ ಹೆಂಡ್ರ ಮಧ್ಯೆ ಪ್ರೇಮ ಎಂಥಾ ಸ್ಪಾಂಟೇನಿಯಸ್ ಆಗಿ ಇರೋದಕ್ಕೆ ಸಾಧ್ಯ? ನಮ್ಮ ಎರಡು ಮಾರು ಉದ್ದ ಒಂದು ಮಾರು ಅಗಲದ ಚಾಪೇಲಿ ದೇಶದ ರಾಜಕಾರಣ, ಸಾಮಾಜಿಕ ಸ್ಥಿತಿ, ಜಾತಿ, ಯಂತ್ರ, ಗ್ರಾಮಕ್ಕೂ ಬಂದ

ಬ್ಯೂರೋಕ್ರೆಸಿ ಇರುವ ಕಾಲದಲ್ಲಿ, ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ ಅನ್ನೋದು ಆಯ್ಕೆಗೆ ಬಿಟ್ಟ ಪ್ರಶ್ನೆಯೇ ಅಲ್ಲ; ಅನಿವಾರ್ಯದ ಪ್ರಶ್ನೆ.

ಮಾತು ಮುಂದುವರಿಸೋದಾದ್ರೆ, ಸಾಮಾಜಿಕ ತಾತ್ವಿಕ ಅಂತ ವಿಂಗಡ ಮಾಡೋದಕ್ಕೂ ಬರೂದಿಲ್ಲ. ಯಾಕೆ ಹೇಳಿದ್ರೆ, ಅನುಭವ ಇರ್ತದಲ್ಲ, ಈ ನರಮನುಷ್ಯ ಅಂಬೋನಿಗೆ ಸಂಬಂಧಪಟ್ಟ ಅನುಭವ, ಅದು ಸಾಮಾಜಿಕಾನೂ ಆಗಿರ್ತದೆ, ರಾಜಕೀಯಾನೂ ಆಗಿರ್ತದೆ, ತಾತ್ವಿಕಾನೂ ಆಗಿರ್ತದೆ. ಇನ್ನೊಂದು ಉದಾಹರಣೆ ನೋಡೋಣ: ಜಾತಿ ಒಂದು ಚಕ್ರ ಅಂತಿಟ್ಕೊಳ್ಳಿ. ನಿಂತ ಹಾಗೆ ನಿಂತ ಚಕ್ರ. ನಮ್ಮಲ್ಲಿ ಭಾಳ ಮಂದಿ ಅದಕ್ಕೊಂದು ನೇಮಿಯೋ ಪಟ್ಟೆಯೋ ತ್ರಿಜ್ಯವೋ ಆಗಿರ್ತೇವೆ. ಚಕ್ರದ ಜೊತೆ ಪಟ್ಟೆ ನೇಮಿ ತ್ರಿಜ್ಯಗಳೂ ಹಾಗೇ ಇದ್ಕೊಂಡು ಜೀವನ ಕಳೀತದೆ. ಚಕ್ರ ಒಂಚೂರು ಚಲಿಸೋದಕ್ಕೆ ಸುರುವಾಯ್ತು ಅನ್ನಿ. ಅದು ಒಂದು ಸುತ್ತು ಸುತ್ತಿ ಮುಗಿಸೋ ಸಮಯಕ್ಕೆ ನಮ್ಮ ಬ್ಯೂರೊಕ್ರೆಸಿ ಸಮಾಜದಲ್ಲಿ ಈ ಚಕ್ರ ಯಂತ್ರದ ಚಕ್ರ ಆಗ್ಬಿಟ್ಟಿರ್ತದೆ. ಗ್ರಾಮದಿಂದ ಪೇಟೆಗೆ ಬಂದು ಕಾರ್ಖಾನೇಲಿ ಕೆಲಸ ಸೇರಿಕೊಂಡವ್ನಿಗೆ ಇದು ಆಗಿದ್ದೀತು. ಪೇಟೆಗೆ ಬಂದ್ರೆ ಒಂಚೂರು ಜಾತಿ ಬಿಡಬಹುದು. ಆದರೆ, ಈ ಜಾತಿ ಚಕ್ರ ಇವನ ಮಟ್ಟಿಗೆ ಚಲಿಸಿ ಆದ್ದು ಯಂತ್ರದ್ದೊಂದು ಚಕ್ರ. ಈ ಯಂತ್ರಾನ ಮುಟ್ಟೋ ಹಾಗೇ ಅದು ನಮ್ಮ ತೋಳು ಎಳ್ಕೋತದೆ, ದೇಹ ಎಳ್ಕೋತದೆ. ಎಳ್ಕೊಂಡು. ಎಲುಬನ್ನ ಪುಡಿ ಮಾಡಿ ಅದನ್ನು ಒಂದು ಕೇಜಿ ಗೋಧಿ ಅಂತ ಮನೆಗೆ ಹೋಗುವಾಗ ಕೊಡ್ತದೆ. ದೇಹ ಅರೆದು ನೆತ್ತರು ಹರಿದಾಗ ಅದನ್ನು ಒಂದು ಕಪ್ಪು ಕಾಫಿ ಅಂತ ಕುಡಿಯೋದಕ್ಕೆ ಕೊಡ್ತದೆ. ನಿಂತ ಹಾಗೇ ನಿಂತ ಜಾತಿಚಕ್ರದಲ್ಲೂ ಹೀಗೇ ಆಗ್ತದೆ: ಅಪ್ಪಾ, ದೊರೆ, ನೀನು ಮಹಾಚಕ್ರದ ಪಟ್ಟೆಯೋ ನೇಮಿಯೋ ಆಗಿ ಇದ್ದಲ್ಲೇ ಇರು. ಆಗ ನಿನ್ನ ಮನಸ್ಸಿನ ನೆಣ ಕರಗಿಸೋದು ಸುಲಭ. ಕರಗಿಸಿ ನಿನಗೆ ಅದನ್ನ ಪಂಚಗವ್ಯ ಮಾಡ್ಕೊಡ್ತೀನಿ ಅಂತ. ನಿಂತ ಹಾಗೆ ನಿಂತ ಜಾತಿ ಚಕ್ರ ಯಂತ್ರದ ಚಕ್ರ ಆಗದೆ ಉರುಳೋದಕ್ಕೆ ನಮ್ಮಲ್ಲಿನ್ನೂ ಪ್ರಾರಂಭವೇ ಆಗಿಲ್ಲ. ಈ ಯಂತ್ರದ ಚಕ್ರ ನನ್ನ ನೆತ್ರನ್ನೇ ಕಾಫಿ ಮಾಡಿ ಕೊಡ್ತದಲ್ಲೋ ಮಾರಾಯಾ ಅಂತ ಮನುಷ್ಯನಿಗೆ ಗೊತ್ತಿರ್ತದೆ. ಸಂಗಾತಿಗಳು ಯಂತ್ರ ಅನ್ನೋದು ಗೊತ್ತಿರ್ತದೆ. ಕಟ್ಕೊಳ್ಳೋಹಾಗಿಲ್ಲ, ಬಿಡೋಹಾಗಿಲ್ಲ. ಈ ಅನುಭವಾನ್ನ ಸಾಮಾಜಿಕ ಅಂತೀಯೋ ತಾತ್ವಿಕ ಅಂತೀಯೋ? ಎರಡೂ ಒಟ್ಟಿಗೆ ಸೇರಿಕೊಂಡ ಇವತ್ತಿನ ನಮ್ಮ ದುರಂತ ಅಂತೇನೆ. ಬರಹದವ ಇವನ್ನೆಲ್ಲಾ ಬಿಟ್ಟು ಬರಿಯೋದು ಹೇಗೆ?

ಮುದ್ದಣನೇ ನಮ್ಮಲ್ಲಿ ರಾಜಕೀಯ, ಸಮಾಜ ಅಂತ ತಲೆಕೆಡಿಸ್ಕೊಳ್ಳದೆ ಬರಿಯೋದಕ್ಕೆ ಸಾಧ್ಯ ಆದ ಕೊನೇ ಲೇಖಕ. ಬಿ ಎಂ ಶ್ರೀ ಇಂದ ಹಿಡಿದು ಇನ್ನು ಯಾರಿಗೂ ಸಮಾಜ, ರಾಜಕೀಯ ಬಿಟ್ಟು ಬರಿಯೋದಕ್ಕೆ ಸಾಧ್ಯ ಆಗ್ಲಿಲ್ಲ. ಕನ್ನಡ ಅಂದ್ರು, ಬ್ರಿಟೀಷರು ಅಂದ್ರು, ವಿಷಮ ಸಮಾಜ ಅಂದ್ರು – ಕಾದಂಬರೀನೂ ಅದಕ್ಕೇ ಇಪ್ಪತ್ತನೇ ಶತಮಾನದ ಹೊತ್ತಿಗೆ ಪ್ರವರ್ಧಮಾನಕ್ಕೆ ಬಂತು. ಆದ್ರೆ ಭಾಳ ಜನ ಲೇಖಕರು ಒಟ್ಟು ಮನುಷ್ಯನ ಸಮಸ್ಯೆ ಸರಳ ಮಾಡ್ಕೊಂಡ್ರು ಅಂತ ಕಾಣತ್ತೆ. ವಚನಕಾರರಿಗೂ ಹೀಗೇ ಮೊದ್ಲಿನ ಪ್ಯಾರಾಗಳಲ್ಲಿ ಹೇಳಿದ ದುರಂತ ಸ್ಥಿತಿ ಎದುರಾಗಿತ್ತು. ಅಧ್ಯಾತ್ಮ ಮೂಲಕ ಅವರಿಗೆ ಪರಿಹಾರದ ದಿಕ್ಕು ಕಾಣಿಸ್ತು.

ಅಂಥಾ ಪರಿಹಾರ ಇಲ್ದೆ ಇಷ್ಟೆಲ್ಲಾ ಭಾವಿಸ್ಕೊಂಡು, ಜವಾಬ್ದಾರಿ ಹೊತ್ಕೊಂಡು ಬರಿಯೋದು ಥಾಲೇಜಿಂಗ್ ಕೆಲಸ. ಆದರೆ, ತಪ್ಪಿಸ್ಕೊಳ್ಳೋಕೆ ಆಗಲ್ಲ ಅಂದ್ಮೇಲೆ ಎದುರಿಸೋದೊಂದೇ ಮಾರ್ಗ. ಮತ್ತೆ ಈ ಕಾಲದ ದುರಂತ ಎದುರಿಸಿ ಬರೆದಷ್ಟೂ ಬರೆವಣಿಗೆಗೆ ಒಂದು ತಾಖತ್ತು ಬರ್ತದೆ. ಬರೆವಣಿಗೆ ಅಷ್ಟಕ್ಕೇ ಅಲ್ಲ; ಬರಿಯೋ ಕ್ರಿಯೆಯಿಂದ್ಲೇ ಬರಹಗಾರ ಈ ದುರಂತದ ಮಧ್ಯೆ ಸೃಷ್ಟಿಯ ಸ್ವಾತಂತ್ರ್ಯ ಸಾಧ್ಯ ಅಂತ ಎತ್ತಿ ತೋರಿಸ್ತಿದಾನೆ. ಯಾಕೆ ಅಂದ್ರೆ ಸೃಷ್ಟಿ ಕೆಲಸ ಮೂಲದಲ್ಲಿ ಎತ್ತಿ ಹಿಡಿಯೋದು ಈ ದುರಂತಕ್ಕೂ ಸಿಕ್ಕೊಂಡು ಉಳಿದಿರುವ ಮನುಷ್ಯತ್ವವನ್ನು. ಮನುಷ್ಯತ್ವ ಕಾಣೆಯಾಗ್ತಿರೋದನ್ನು ಹೇಳ್ತಾ ಹೇಳ್ತಾ ಹೀಗಾಗೋದು ಎಂಥಾ ಭಯಂಕರ ಮಾರಾಯ ಅಂತ ಹೇಳೋದು. ಮನುಷ್ಯ ಎಲ್ಲೋ ಕೆಲವು ಕ್ಷಣಕ್ಕಾದ್ರೂ ಮನುಷ್ಯ ಆಗಕ್ಕೆ ಸಾಧ್ಯವಾ, ಆ ಕ್ಷಣ ಯಾವುದು ಅಂತ ನೋಡೋದು. ಹಾಗೆ ಮನುಷ್ಯ ಆಗಕ್ಕೆ ಏನೇನು ಬೇಕು ಅಂತ ತಿಳಿಯೋದು. ಓದೋರಿಗೆ ಹಾಗೆ ತಿಳ್ಕೊಳ್ಳೋಕೆ ಒಂಚೂರು ಸಹಾಯ ಮಾಡೋದು.

ಸನ್ನಿವೇಶ

ಅಂದ್ರೆ, ಸೃಷ್ಟಿಸ್ಬೇಕಾದ್ರೆ, ಈ ದುರಂತ ಎಲ್ಲಾ ಗೊತ್ತಿರೋ ಹಾಗೇನೇ ಸೃಷ್ಟೀಲಿ ನಂಬಿಕೇನೂ ಬೇಕಾ ಗುತ್ತೆ. ಅಂದ್ರೆ, ಮನಷ್ಯತ್ವದಲ್ಲಿ. ಅದನ್ನು ಉಳಿ ಸ್ಕೊಂಡಿರುವ. ಅಥವಾ ಉಳಿಸ್ಕೊಳ್ಳುವ ಪೊಟೆನ್ಷಿ ಯಾಲಿಟಿ ಆದ್ರೂ ಇರುವ ಸಾಮಾನ್ಯ ಜನರಲ್ಲಿ. ಅದಕ್ಕೇ ಲೇಖಕ ಮಹಾಡೆಮಾಕ್ರಾಟ್ ಕೂಡಾ ಆಗಿರ್ತಾನೆ ಅಂತ ಅನ್ನೋದು ಕಾಣುತ್ತೆ. ಮನುಷ್ಯನ ಧಿಕ್ಕರಿಸುವ ಶಕ್ತೀಲಿ ನಂಬಿಕೆ ಕಳಕೊಂಡ್ರೂ, ಬಹುಶಃ ಬರಿಯೋಕಾಗಲ್ಲ. ಬ್ಯೂರೋಕ್ರಾಟ್‌ಗಳ ಅಸಂಬದ್ಧ ನ್ಯಾಯಕ್ಕೆ ಸಿಕ್ಕಿ ಹಾಕ್ಕೊಂಡ ಕಾಫ್ಕಾನ ಟ್ರಯಲ್ ಕಾದಂಬರಿಯ ಜೋಸೆಫ್ ಕೆ. ಕೊನೆಯವರೆಗೂ ಹೊರಾಡ್ತಾನೇ ಇರ್ತಾನೆ. ಯಂತ್ರಚಕ್ರಕ್ಕೆ ಸಿಕ್ಕಿಹಾಕ್ಕೊಂಡು. ಕೊನೆಗೆ ಯಾರೋ ಇಬ್ರು—ಒಂದು ಮಟ್ಟದಲ್ಲಿ ಅವರು ಗುಪ್ತ ಪೋಲಿಸ್‌ದಳದವರು ಅಂತ ನಾನೊಂದು ಅರ್ಥ ಇಟ್ಕೊಂಡಿದ್ದೇನೆ– ಚೂರಿ ಹಾಕಿದಾಗ಼್ೂ ಧಿಕ್ಕರಿಸುವ ಸ್ವಾತಂತ್ರ್ಯ ಅತ ಕಳ್ಕಂಡಿರಲ್ಲ. ದುರಂತಕ್ಕೆ ಸಿಕ್ಕಿ ಹಾಕ್ಕೊಂಡು ಪ್ರಾಣ ಹೋಗೋ ಹೊತ್ತಿಗೂ ಒಂದು ವ್ಯಕ್ತಿ ಮನುಷ್ಯನಾಗಿ ಉಳಿದಿರ್ತದಲ್ಲ – ಸೃಷ್ಟಿಕ್ರಿಯೆ ಮೂಲಕ ಕೊನೆಗೂ ಎತ್ತಿ ಹೇಳೋಕಾಗೋದು ಅದನ್ನೇ. ಆ ಮೂಲಕ ದುರಂತಕ್ಕೆ ಕಾರಣವಾದ್ದನ್ನೇ ಧಿಕ್ಕರಿಸೋದು.

ಅದಕ್ಕೆ ಸರ್ವಾಧಿಕಾರಿ ಮೊದಲು ಕಣ್ಣು ಹಾಕೋದು ಲೇಖಕರು, ಬುದ್ಧಿ ಜೀವಿಗಳ ಮೇಲೆ. ಯಾಕಂದ್ರೆ ಲೇಖಕ ಮನುಷ್ಯನ ಸ್ವಾತಂತ್ರ್ಯಕ್ಕಾಗಿ ವ್ಯವಸ್ಥೇನ ಧಿಕ್ಕರಿಸ್ತಾನೆ ಅಂತ ಅವನಿಗೆ ಗೊತ್ತು. ಸರ್ವಾಧಿಕಾ ರೀದು ತದ್ವಿರುದ್ಧ: ವ್ಯವಸ್ಥೇಗಾಗಿ ಮನುಷ್ಯನ ಸ್ವಾತಂತ್ರ್ಯ ಧಿಕ್ಕರಿಸೋದು; ಮನುಷ್ಯತ್ವ ಧಿಕ್ಕರಿ ಸೋದು. ಮನುಷ್ಯನ ಮನುಷ್ಯತ್ವ, ಸ್ವಾತಂತ್ರ್ಯ ಉಳೀಬೇಕು ಅನ್ನೋರ್ಗೆಲ್ಲಾ ಸಾಹಿತ್ಯದ ಪ್ರಾಮುಖ್ಯತೆ ಗೊತ್ತಿರ್ತದೆ.

ಹೀಗಾಗಿ ಯಾರಾದ್ರೂ ಸಾಹಿತ್ಯ ಲಕ್ಷುರಿ ಅಂದಾ ಗೆಲ್ಲಾ ಅವರ್ನ ಎಳ್ಕೊಂಡು ಬಂದು ಈ "ಲಕ್ಷುರಿ ಬಸ್ಸಲ್ಲೇ" ಕೂರ್ಸಿ ಸಾಹಿತ್ಯದ ದೇಶಗಳನ್ನೆಲ್ಲಾ ಸುತ್ತಿ ಸೋಣ ಅನ್ಸುತ್ತೆ. ದುರಂತದ ಮಧ್ಯೆ ಮನುಷ್ಯನ ಮೂಲ ಸ್ವಾತಂತ್ರ್ಯ ಎತ್ತಿ ಹಿಡಿಯೋ ಸಾಹಿತ್ಯ ಲಕ್ಷುರಿ ಆಗೋದು ಹೇಗೆ? ಆದರೆ, ಸಾಹಿತ್ಯ ಲಕ್ಷುರಿ ಅಂತ ಒಬ್ಬ ಲೇಖಕನೋ ವಿಮರ್ಶಕನೋ ಅಂದಾಗ ಅನುಮಾನ ಬರ್ತದೆ: ಈ ಮನುಷ್ಯ ಸಾಹಿತ್ಯದಲ್ಲಿ ನಂಬಿಕೆ ಕಳ್ಕೊಂಡಿದ್ದಾನೆ ಅಂತ. ತಮ್ಮಲ್ಲೇ ನಂಬಿಕೆ ಕಳ್ಕೊಂಡಿರೋಕೂ ಸಾಧ್ಯ. ಯಾಕಂದ್ರೆ ಕನ್ನಡದಲ್ಲಿ– ಅದೂ ಬೆಂಗಳೂರಿನಂಥಾ ಊರಿನಲ್ಲಿ – ನಮ್ಮ ಮೇಲೆ ನಮಗಿದ್ದ ನಂಬಿಗೆ ಭಾಳ ಬೇಗ ಹೊರಟು ಹೋಗುತ್ತೆ. ವಿಮರ್ಶೆಯಿಂದಾಗಿ ಹೋಗುತ್ತೆ ಅಂತಲ್ಲ. ಹಾಗೆ ಹೋದ್ರೆ ಒಳ್ಳೇದೇ; ಮತ್ತಷ್ಟು ವಿಗರ್ ಹೊತ್ಕೊಂಡು ಪುನಃ ಬರುತ್ತೆ. ಆದ್ರೆ ಸ್ಕ್ಯಾಂಡಲ್‌ಗಳು, ಚಿಲ್ರೆ ಮಾತುಗಳಿಂದ ನಮಗೆ ನಮ್ಮ ಮೇಲೆ ನಂಬಿಕೆ ಹೊರಟು ಹೋಗೋ ಹಾಗೆ ಆಗ್ಬಿಡುತ್ತೆ. ಅವನ ಸ್ನೇಹಿತರು ಇಂಥವ್ರು ಆದ್ರಿಂದ ಅವನು ಇಂಥಾ ಲೇಖಕ, ಅವನು ಇನ್ನೆಲ್ಲೋ ಹೋದ ಅದ್ರಿಂದ ಅವನು ಹಲ್ಕಾ ರಿಯಾ ಕ್ಷನರಿ ಅಂತ ಮಾತು ಬಂದ್ರೆ ಏನು ಹೇಳೋದು? ಆಗ ತಾನೇ ಹೆಸರು ಮಾಡೋದಕ್ಕೆ ಸುರುಮಾಡಿದ ಲೇಖಕನ ಮೇಲೆ ಇಂಥಾ ಮಾತು ಬಂದ್ರೆ ಆತ್ಮವಿಶ್ವಾಸವೇ ಅಲ್ಲಾಡಿಹೋಗುತ್ತೆ. ಮನಸ್ಸಿಗೆ ಹುಳ ಹಿಡಿಯೋದಕ್ಕೆ ಸುರುವಾಗುತ್ತೆ. ಆತ್ಮವಿಶ್ವಾಸ ಇಲ್ಲದಿದ್ರೆ ಎಂಥಾ ಮಣ್ಣಂಗಟ್ಟಿ ಬರೆಯೋದಕ್ಕೆ ಸಾಧ್ಯ? ಹೇಗಾದರೂ acceptable ಆಗೋಣಪ್ಪಾಂತ ಏನೇನೋ ಥಿಯರಿ ಮಾಡೋದಕ್ಕೆ ಸುಳ್ಳುಸುಳ್ಳಾಗೋದಕ್ಕೆ ಪ್ರಾರಂಭವಾ ಗುತ್ತೆ. ಮಹಾ anti-creative ಪರಿಸ್ಥಿತಿ ಇದು. ನನಗೂ ಹೀಗೇ ಎಂಟೊಂಭತ್ತು ವರ್ಷದ ಕೆಳಗೆ ನನ್ನ ಮೇಲೇ ನಂಬಿಕೆ ಹೋಗೋ ಪರಿಸ್ಥಿತಿ ಬಂದಿತ್ತು. ಬರಿ ಯೋದಕ್ಕೆ ಹೊರಟ್ರೆ ಮನಸ್ಸು ಮುದುಕರ ಥರ ನಡುಗೋದು. ನನ್ನ ಧ್ವನಿ ಕೇಳಿಸ್ಕೊಳ್ಳೋಣ ಅಂತ ಹೊರಟ್ರೆ ಸ್ಕ್ಯಾಂಡಲ್ ಗದ್ದಲದಲ್ಲಿ ಧ್ವನೀನೇ ಕೇಳಿ ಸ್ತಿರಲಿಲ್ಲ. ಕೇಳಿಸಿದ್ರೂ ನಂದೇ ಅಂತ ಗೊತ್ತಾಗ್ತಿರ್ಲಿಲ್ಲ. ಮತ್ತೆ ನಾನು ನನ್ನ ಆತ್ಮವಿಶ್ವಾಸ ಮರಳಿ ಪಡೆದಿದ್ದು ಕರ್ನಾಟಕದ ಹೊರಗೆ, ಡೆಲ್ಲೀಲಿ–ಎಲಿಸ್ ಜೀನ್ ಸ್ಮಿಥ್*

---

* ಈ ಸ್ಮಿಥ್ ಅಂಬೋರು ದೊಡ್ಡ ಟಿಬೆಟಾಲಜಿಸ್ಟ್. ಈಗ ಪ್ರಕಟವಾಗುತ್ತಿರುವ ಹೆಚ್ಚು ಪಾಲು ಟಿಬೆಟಿಯನ್ ಪ್ರಕಾಶನ ಪುಸ್ತಕಗಳು, ಅವುಗಳ ಮೂಲಕ ಪುನಃ ರಚನೆ ಆಗುತ್ತಿರುವ ಹಳೆಯ, ಕಳೆದು ಹೋದ ಸಂಸ್ಕೃತ ಗ್ರಂಥ ಗಳು ಇವರು ಟಿಬೆಟ್ ಗುಡ್ಡ ಬೆಟ್ಟ ಅಲೆದು ಹಸ್ತಪ್ರತಿ ಹುಡುಕಿದ್ದರ ಫಲ. ಅರೇಬರೆ ಕನ್ನಡ ಓದಬಲ್ಲರು.

ಎಂಬೊಬ್ಬ ಅಮೇರಿಕನ್, ಕೆ. ಸುಬ್ರಮಣ್ಯನ್ ಎಂಬೊಬ್ಬ ತಮಿಳರ ಮೂಲಕ. ಕೆಲವರಿಗೆ ಗದ್ದಲದ ಮಧ್ಯೆ ಆತ್ಮವಿಶ್ವಾಸ ಮರಳಿ ಪಡೆಯೋದಕ್ಕೆ ಸಾಧ್ಯ ಆಗದೆ ಹೋಗಬಹುದು. ಇಂಥಾ anti-creative ಪರಿಸ್ಥಿತಿ ಇರಬಾರದು.

ಅಥವಾ ಸಾಹಿತ್ಯ ಲಕ್ಷುರಿ ಅನ್ನೋರು ಯಾವುದೇ ಥಿಯರಿ ನಂಬಿಕೊಂಡು ಹಾಗೆ ಹೇಳ್ತಿರಬಹುದು. ಸರ್ವಾಧಿಕಾರಿಗಳೂ ಇದನ್ನ ಅಂತಾರೆ. ಹೊಟ್ಟೆ ಮಾತ್ರ ಸಾಕು, ಮನಸ್ಸಿಂದು ಲಕ್ಷುರಿ ಅಂತಾದ್ರೆ ನಮ್ಮ ದಕ್ಷಿಣ ಕನ್ನಡದ ಬಡವ್ರು ಮಹಾದ್ಭುತ ಕಲೆ ಯಕ್ಷಗಾನ ಯಾಕೆ ಮಾಡ್ತಿದ್ರು? ಮನುಷ್ಯಂಗೆ ಹೊಟ್ಟೆ ಇರೋ ಹಾಗೇ ಮನಸ್ಸೂ ಇರ್ತುತೆ– ಆದ್ರಿಂದ.ಒಂದಕ್ಕಾಗಿ ಇನ್ನೊಂದನ್ನ ಬಿಟ್ಟುಕೊಟ್ರೆ ಮನುಷ್ಯ ಅರೆಬರೆ ಆಗ್ತಾನೆ, ಅಷ್ಟೆ. ಹೀಗಾಗಿ ಕ್ರಾಂತಿ ಮುಗಿದ ಕೂಡಲೇ ಸಾಹಿತ್ಯದ ಉಪಯೋಗಾನೂ ಮುಗಿಯಲ್ಲ. ವ್ಯವಸ್ಥೆಗೆ ವಿರೋಧಿಯಾದ್ದು ಸದಾ ಜೀವಂತವಾಗಿ ಇರುತ್ತೆ, ಇರ್ಬೇಕಾಗುತ್ತೆ. ಅದಕ್ಕೇ ಸಾಹಿತ್ಯ ಇನ್ನೊಂದರ ಆಡಿಯಾಳಾದ ಕೂಡಲೇ ಸಾಯ್ತದೆ. ಎಮರ್ಜೆನ್ಸಿ ಟೈಮಲ್ಲಿ ಇಂದಿರಾಗಾಂಧಿ ಇಪ್ಪತ್ತಂಶ ಹೊಗಳಿ ನಾಟಕ ಬರೀರಯ್ಯಾ, ಬುದ್ಧಿಜೀವಿಗಳೇ ನಾಟ್ಯಕಲಾಕೋವಿದರೇ, ಎರಡು ಸಾವಿರ ಕೊಡ್ತೀನಿ ಅಂದ್ರು. ಆಗಲ್ಲಮ್ಮಾ ತಾಯಿ, ನಿಮ್ಮ ಇಪ್ಪತ್ತಂಶದಿಂದ ನಮ್ಮನ್ನ ಮೃಗ ಮಾಡಿದೀರಿ,ಅದನ್ನ ವಿರೋಧಿಸಿಯೇ ಬರೀತೀವಿ ಅಂದವ್ರು ಬದ್ಕೊಂಡ್ರು. ನಾಳೆ ಇನ್ನು ಯಾರೋ ಬಂದು ಇನ್ನೊಂದು ಬರೀರಿ ಅನ್ನ ಬಹುದು. ನಿನ್ನ ಮೆದುಳು ಕ್ಯಾಬೇಜಿನ ಹಾಗೆ ಭಾಳ ಮುದ್ದಾಗಿದೆ, ಅದನ್ನು ಪಲ್ಯ ಮಾಡಿ ಎಲ್ಲರಿಗೂ ಹಂಚಿ ನಿನ್ನ ಹುತಾತ್ಮ ಮಾಡ್ತೀನಿ ಅನ್ನಬಹುದು. ಬೀಸುಕಲ್ಲಿನ ಚಕ್ರದ ಸುತ್ತ ಸಿಳ್ಳಕ್ಕಿ ಹಾಕ್ಕೊಂಡ ಹೆಂಗಸರು ಒಂದು ಜಾನಪದ ಹಾಡು ಕಟ್ಟಿ ನಮಗೆ ಬೇರೆ ಒಂದು ಮನಸ್ಸಿದೆ ಅಂತ ತೋರಿಸಿ ಬಿಡ್ತಾರೆ. ವ್ಯವಸ್ಥೆಗೆ ಅಡಿಯಾಳಾಗದಿದ್ರೆ ಮನುಷ್ಯನ ಪರವಾಗಿ ಬರಿಯೋದಕ್ಕೆ ಸಾಧ್ಯ ಆಗ್ತದೆ. ಅಡಿಯಾಳಾದ್ರೇ ಹುಳ ಹಿಡಿಯುತ್ತೆ.

ಕೊನೇದಾಗಿ: ಹೇಳಿಕೇಳಿ ಬರಿಯೋದು ಒಂದು ಕಲೆ. ಅದನ್ನು ಕಲೀಬೇಕಾಗ್ತದೆ ಅಂತ ನಾನು ತಿಳ್ಕೊಂಡಿದ್ದೇನೆ. ಆದ್ರೆ ಬರಿಯೋದು ಇಡೀ ವ್ಯಕ್ತಿತ್ವ ಆದ್ರಿಂದ ಬರಿಯೋ ಹೊತ್ತಿಗೆ ಮಾತ್ರ ಮನಸ್ಸಿಗೆ ಕಲಿಸಿದ್ರೆ ಸಾಕಾಗಲ್ಲ. ಇಡೀ ವ್ಯಕ್ತಿತ್ವಕ್ಕೆ ಕಲಿಸ್ಬೇಕಾಗುತ್ತೆ. ಆಗ ಬರವಣಿಗೆ ಕಲೆ ಹೂಗಿಡ ಬಿಟ್ಟ ಹಾಗೆ ಬಂದೀತು. ಆದ್ರೆ ಗಿಡ ಹೂಬಿಡೋದಕ್ಕೆ ಮೊದ್ಲು ನೆಲದಲ್ಲಿ ಬೇರು ಕಚ್ಚಬೇಕಾಗುತ್ತೆ. ಹುಳ ಹಿಡೀದ ಹಾಗೆ ನೋಡ್ಕೊಳ್ಬೇಕಾಗುತ್ತೆ. ಯಾಕಂದ್ರೆ, ಬಿರುಗಾಳಿ ಬೀಸಿದ್ರೂ ಬೇರು ಗಟ್ಟಿ ಇದ್ರೆ ಒಂದಷ್ಟು ರೆಂಬೆಗೆಲ್ಲು ಮುರಿದು ಗಾಯ ಉಳಿಸಿ ಅಂತೂ ಮತ್ತೆ ಹಾಗೆ ಬೀಸಿಕೊಂಡು ಇನ್ನೊಂದು ಮೂಲೆ ಹೊರಟು ಹೋದೀತು. ಹುಳು ಹಿಡಿದ್ರೆ ಹೋಗಲ್ಲ.

◈

"ಈ ಎರಡರಲ್ಲಿ ಒಂದು ನಿಜ: ಜನರು ವಿಚಾರಶೀಲರು ಅಥವಾ ಅವಿಚಾರಿಗಳು. ಅವರು ಅವಿಚಾರಿಗಳಾದ್ದಲ್ಲಿ, ಅವರ ಎಲ್ಲ ವಿಷಯಗಳೂ ಹಿಂಸೆಯಿಂದಲೇ ನಿರ್ಧಾರವಾಗುತ್ತವೆ, ಮತ್ತು ಅವರಲ್ಲಿ ಕೆಲವರಿಗೆ ಮಾತ್ರ ಈ ಹಿಂಸೆ ಮಾಡುವ ಹಕ್ಕು ಯಾಕಿರಬೇಕೆಂಬುದರಲ್ಲಿ ತಥ್ಯವಿಲ್ಲದೇ ಹೋಗುತ್ತದೆ. ಆದ್ದರಿಂದ ರಾಜ್ಯಶಕ್ತಿ ಪಡೆದಕೊಂಡು ಕೆಲವರು ಮಾಡುವ ಹಿಂಸೆಯಲ್ಲಿ ಯಾವ ನ್ಯಾಯವೂ ಇರುವುದಿಲ್ಲ. ಬದಲಾಗಿ, ಜನರು ವಿಚಾರಶೀಲರೆಂದು ಒಪ್ಪಿದಲ್ಲಿ ಅವರ ನಡುವಿನ ಸಂಬಂಧಗಳು ವೈಚಾರಿಕ ವಿವೇಕದಿಂದ ನಿರ್ಧರವಾಗಬೇಕೇ ವಿನಾ, ರಾಜ್ಯಶಕ್ತಿಯ ಅಧಿಕಾರವನ್ನು ಕಸಿದು ಕೊಂಡ ಕೆಲವರ ಹಿಂಸೆಯ ಮೇಲಲ್ಲ. ಈ ಕಾರಣದಿಂದಲೂ ಸರ್ಕಾರೀ ಹಿಂಸೆ ಅಸಮರ್ಥನೀಯ."

ಲಿಯೋ ಟಾಲ್‌ಸ್ಟಾಯ್

(The Slavery of our Times ನಿಂದ)

ಸಂಗ್ರಹ

ಸಾಹಿತಿಗಳೋ, ಆಸ್ಥಾನಿಕರೋ?

"ನಿಮ್ಮ ಬಳಿ ನಾವೇಕೆ ಬರಬೇಕು? ಅದು ನಮಗೆ ವೃಥಾ ಶ್ರಮವೆನ್ನಿಸುತ್ತದೆ."
(ಛತ್ರಪತಿ ಶಿವಾಜಿಯ ಆಹ್ವಾನಕ್ಕೆ ತುಕಾರಾಂ ಕೊಟ್ಟ ಉತ್ತರ.)

ಮಹಾರಾಷ್ಟ್ರದ ಸರ್ಕಾರ ಅದು ನೇಮಿಸಿದ್ದ ತಜ್ಞ ಸಮಿತಿಯೊಂದು ಸಲಹೆ ಮಾಡಿದ ಎರಡು ಪುಸ್ತಕಗಳಿಗೆ ಆ ವರ್ಷದ ಅತ್ಯುತ್ತಮ ಬಹುಮಾನವನ್ನು ಕೊಡಲು ನಿರಾಕರಿಸಿದ್ದರಿಂದ ದೇಶದ ವಿದ್ವಾಂಸರೂ ಸಾಹಿತಿಗಳೂ ವ್ಯಗ್ರರಾಗಿದ್ದಾರೆ. ವಿನಯ್ ಹರ್ಡೀಕರ್ ಬರೆದ 'ಜನಾಂಚ ಪ್ರವಾಹೋ ಚಾಲಿಲಾ' ಮತ್ತು ಅರುಣ್ ಸಾಧು ಬರೆದ 'ಸಿಂಹಾಸನ್' ಈ ಪುಸ್ತಕಗಳು. ಪ್ರಜಾಸತ್ತೆಗಾಗಿ ಎಮರ್ಜನ್ಸಿಕಾಲದಲ್ಲಿ ಘೋಷಣೆಗಳನ್ನು ಕೂಗಿ ಜೈಲಿಗೆ ಹೋಗಬೇಕಾಗಿ ಬಂದ ಘಟನೆಗೆ ಪ್ರತಿಕ್ರಿಯೆಯಾಗಿ ಒಬ್ಬ ಸೂಕ್ಷ್ಮಜ್ಞ ಯುವಕ ಬರೆದ ಆತ್ಮವೃತ್ತ ವಿನಯ್ ಹರ್ಡೀಕರರ ಪುಸ್ತಕ. ರಾಜಕೀಯ ಕುತಂತ್ರ, ದುರಾಚಾರ, ಅಪರಾಧಗಳ ಮುಖಾಂತರ ತನ್ನ ಸ್ಥಾನಭದ್ರವಾಗಿಸಿಕೊಂಡು ತನ್ನ ಎದುರಾಳಿಗಳನ್ನು ಷಂಡರನ್ನಾಗಿ ಮಾಡುವ ಕಥೆ ' ಸಿಂಹಾಸನ್ ' ಕಾದಂಬರಿಯವಸ್ತು. ಕಥೆ ಜರುಗುವುದು ಮಹಾರಾಷ್ಟ್ರದಲ್ಲಿ. 'ಸಿಂಹಾಸನ್' ಚಿತ್ರವಾಗಿ ರಾಷ್ಟ್ರೀಯ ಬಹುಮಾನವನ್ನೂ ಪಡೆದಿದೆ...

ಎಮರ್ಜನ್ಸಿ ಕಾಲದಲ್ಲೂ, ಮಹಾರಾಷ್ಟ್ರ ಸರ್ಕಾರ ಬೌದ್ಧಿಕ ಸಾಂಸ್ಕೃತಿಕ ಕ್ಷೇತ್ರಗಳ ಸ್ವಾತಂತ್ರತೆಗೆ ಈಗಿಗಿಂತ ಹೆಚ್ಚಿನ ಗೌರವ ತೋರಿಸಿತ್ತು. ಉದಾಹರಣೆಗೆ ಕರಾಡ್‌ನಲ್ಲಿ ಡಿಸೆಂಬರ್ 1976 ರಲ್ಲಿ ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ ಜೋಷಿಗಳು ಮರಾಠಿ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಭಾಷಣ ಮಾಡುತ್ತ ದೇಶದ ನಾಯಕರ ಸೆನ್ಸಾರ್ ನೀತಿಯನ್ನು ಖಂಡಿಸಿದ್ದರು. ಆ ಸಮಯದಲ್ಲಿ ಅವರು ಸಾಹಿತ್ಯ ಮತ್ತು ಸಂಸ್ಕೃತಿಯ ಸರ್ಕಾರೀ ಇಲಾಖೆಯ ಅಧ್ಯಕ್ಷರಾಗಿದ್ದರು. ಅಲ್ಲದೆ ಶ್ರೀಮತಿ ಗಾಂಧಿಯವರ ಮಂತ್ರಿಮಂಡಳದಲ್ಲಿದ್ದ ಶ್ರೀ ವೈ. ಬಿ. ಚವಾನರ ಎದುರಿನಲ್ಲಿ ಹೀಗೆ ಅವರು ಮಾತಾಡಿದ್ದರು. ಈಗ ಕೇಂದ್ರದ ವಿದ್ಯಾಮಂತ್ರಿಗಳಾದ ಶ್ರೀ ಎಸ್. ಬಿ. ಚವಾನರು ಆಗ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದರು. ಆದರೆ ಅವರು ಈಗಿನ ಮುಖ್ಯಮಂತ್ರಿ ಶ್ರೀ ಅಂತುಳೆಯಂತೆ ವರ್ತಿಸಲಿಲ್ಲ; ತರ್ಕತೀರ್ಥರ ಭಾಷಣವನ್ನು ಗಮನಕ್ಕೇ ತೆಗೆದುಕೊಳ್ಳಲಿಲ್ಲ; ಸರ್ಕಾರಿ ಇಲಾಖೆಯೊಂದರ ಅಧ್ಯಕ್ಷರಾಗಿ

ಅವರು ಯಾಕೆ ಹಾಗೆ ಮಾತಾಡಿದರೆಂದು ಕೇಳಲಿಲ್ಲ. ಆದ್ದರಿಂದ ಶ್ರೀ ಅಂತುಳೇ ಅವರ ವರ್ತನೆ ಇನ್ನಷ್ಟು ಕೆಟ್ಟದಾಗಿ ಕಾಣುತ್ತಿದೆ. ಈಗಿನ ಸಾಮಾನ್ಯ ಸನ್ನಿವೇಶ ದಲ್ಲೆ ತಾನೇ ನೇಮಕ ಮಾಡಿದ್ದ ತಜ್ಞರ ಸಮಿತಿಯ ಶಿಫಾರಸನ್ನು ಸರ್ಕಾರ ಕಡೆಗಣಿಸುವುದು ಸಾಧ್ಯವಿದ್ದಲ್ಲಿ, ವಿರೋಧದ ಉಸಿರನ್ನು ಹತ್ತಿಕ್ಕಲು ಎಮರ್ಜನ್ಸಿ ಯಾದರೂ ಯಾಕೆ ಅಗತ್ಯ?

* * * * *

ಆಧುನಿಕ ಸಮಾಜದ ಅತ್ಯಂತ ಶ್ರೀಮಂತ ಮತ್ತು ಶಕ್ತಿಯುತ ಏಜನ್ಸಿಯಾಗಿ ಸರ್ಕಾರಕ್ಕೆ ಸಾಂಸ್ಕೃತಿಕ ರಂಗವನ್ನು ಉತ್ತೇಜಿಸಿ ಬೆಳೆಸುವುದರ ಜವಾಬ್ದಾರಿ ಯಿದೆ. ಆದರೆ ಇದನ್ನು ಕಾರ್ಯಗತಗೊಳಿಸಬೇಕಾದ ಮಾರ್ಗ ಆಳುವ ಪಕ್ಷದ ಇಷ್ಟ ಅನಿಷ್ಟಗಳನ್ನು ಸಾಹಿತಿ ಗಳ ಮೇಲೆ ಹೇರುವುದಲ್ಲ. ಸರ್ಕಾರ ತನ್ನ ಸಾಂಸ್ಕೃತಿಕ ಜವಾಬ್ದಾರಿಯನ್ನು ನಿರ್ವಹಿಸುವ ಕೆಲಸವನ್ನು ಸ್ವಾಯತ್ತ ಸಂಸ್ಥೆಗಳಿಗೆ ಬಿಟ್ಟುಕೊಡಬೇಕು. ವಿದ್ಯಾ ಭ್ಯಾಸ, ವಿಜ್ಞಾನ, ಟೆಕ್ನಾಲಜಿಗಳ ವಿಷಯದಲ್ಲಿ ಕೂಡ ಇದೇ ಸರಿಯಾದ ನೀತಿ. ಪಕ್ಷಾತೀತವಾದ ಉದಾರ ವಾದ ಧೋರಣೆಯ ಕೆಲವು ನಿಯಮಗಳನ್ನು ಮಾಡಿ ಇಂಥ ಸ್ವಾಯತ್ತ ಸಂಸ್ಥೆಗಳ ನಿರ್ವಹಣೆಗೆ ಈ ಮುಖ್ಯ ಬೌದ್ಧಿಕ ಸಾಂಸ್ಕೃತಿಕ ವಿಷಯಗಳನ್ನು ಬಿಡಬೇಕು. ಆಗಲೂ ತಪ್ಪುಗಳು ಆಗುವುದಿಲ್ಲವೆಂದಲ್ಲ; ಆದರೆ ತಪ್ಪುಗಳನ್ನು ತನ್ನಲ್ಲೆ ತಿದ್ದಿಕೊಳ್ಳಬಹುದಾದ, ಹೆಚ್ಚು ಅನ್ಯಾಯಕ್ಕೆ ಅವಕಾಶವಿಲ್ಲದಂತಹ ವಿಕೇಂದ್ರಿಕೃತ ವ್ಯವಸ್ಥೆ ಅದಾಗಿರುತ್ತದೆ. ಇದು ಸಾಧ್ಯವಾಗುವ ತನಕ ನೈತಿಕ ಪ್ರಜ್ಞೆಯುಳ್ಳ ಯಾವ ವಿಮರ್ಶಕನೂ ಸಾಹಿತಿಯೂ, ವಿದ್ವಾಂಸನೂ ತನ್ನ ಸಲಹೆಯನ್ನು ನಿರಾಕರಿಸ ಬಹುದಾದ ಸರ್ಕಾರಕ್ಕೆ ಕೇವಲ ಸಲಹೆ ಕೊಡುವ ಸಮಿತಿಯ ಸದಸ್ಯನಾಗಿ ಕೆಲಸ ಮಾಡಲು ಒಪ್ಪಬಾರದು. ತಜ್ಞರು ಇಂಥ ಸಮಿತಿಗಳಲ್ಲಿ ಸಲಹೆ ಗಾರರಾಗಲು ಒಪ್ಪದಿದ್ದಲ್ಲಿ, ಸರ್ಕಾರದ ಪೋಷಣೆಗೆಂದು ತಮ್ಮ ಪುಸ್ತಕಗಳನ್ನು ಲೇಖಕರು ಕಳುಹಿಸದಿದ್ದಲ್ಲಿ ವಿನಯ್ ಹರ್ಡೀಕರ್ ಮತ್ತು ಅರುಣ್ ಸಾಧು ರವರನ್ನು ರಾಜಕೀಯ ಬಲಿಗಳಾಗಿ ಮಾಡಿದ ಈ ಘಟನೆ ಸಾಹಿತ್ಯ ಮತ್ತು ಸೃಜನಶೀಲ ಚಿಂತನೆಗಳ ಸ್ವಾಯತ್ತೆಯ ಉದ್ದೇಶ ಸಾಧನೆಯ ದಿಕ್ಕಲ್ಲಿ ಇಟ್ಟ ದಿಟ್ಟ ಹೆಜ್ಜೆಯಾಗ ಬಹುದು.

ಇಂಥ ಸರ್ಕಾರದ ಪೋಷಣೆಯಿಂದ ಹುರಿದುಂಬ ಪವರು ಆಸ್ಥಾನಿಕರೇ ಹೊರತು ಲೇಖಕರಲ್ಲ.

(ಎ. ಬಿ. ಶಾರವರ ಸಂಪಾದಕೀಯದಿಂದ, New Quest, 24, Nov-Dec 1980.
ಅನುವಾದ : ಅ. ಮೂ.)

ರುಡಾಲ್ಫ್ ಬಾಹ್ರೋನ ವಿಚಾರಗಳು

ಸೋವಿಯತ್ ಮತ್ತು ಪೂರ್ವ ಯೂರೋಪಿನ 'ಸಾಮ್ಯವಾದೀ' ದೇಶಗಳು ವಿಜ್ಞಾನ, ತಂತ್ರಜ್ಞಾನ ಮತ್ತು ಉತ್ಪಾದನಾಶೀಲತೆಯಲ್ಲಿ ಬಹಳ ಪ್ರಗತಿ ಸಾಧಿಸಿವೆಯಾದರೂ, ಮಾರ್ಕ್ಸ್, ಎಂಗಲ್ಸ್ ಮತ್ತು ಲೆನಿನ್‌ರು ಆಲೋಚಿಸಿದ್ದ ಕ್ರಾಂತ್ಯೋತ್ತರ ಸಮಾಜ ವನ್ನು ರೂಪಿಸುವುದರಲ್ಲಿ ವಿಫಲವಾಗಿವೆ. ಮಾತ್ರವಲ್ಲ, ಅಂತಹ ಸಮಾಜವನ್ನು ರೂಪಿಸುವ ಉದ್ದೇಶವನ್ನೂ ಕೈಬಿಟ್ಟಿವೆ. ಉದಾಹರಣೆಗೆ, ಅಂತಹ ಕನಸಿನ ಸಮಾಜವೊಂದಕ್ಕೆ ಸ್ಥಿತ್ಯಂತರ ಎಂದು ಭಾವಿಸಲಾಗಿದ್ದ ಸಮಾಜವಾದವನ್ನು ಪೂರ್ವಜರ್ಮನಿಯಲ್ಲಿ ಮಾಡಿದ ಹಾಗೆ ಸ್ವತಂತ್ರ, ಸ್ಥಿರ (ಸ್ಥಿತ್ಯಂತರವಲ್ಲ) ಸಮಾಜ ರಚನೆ ಎಂದು ಘೋಷಿಸಲಾಯಿತು. ನಂತರ ಪೂರ್ವ ಯೂರೋಪಿನ ದೇಶಗಳು ತಮ್ಮ ತಮ್ಮ ಛಾಪುಗಳು ಸಮಾಜವಾದಕ್ಕೂ, ಮಾರ್ಕ್ಸ್ ಮೊದಲಾದವರ ಕಲ್ಪನೆಗೂ ನಡುವೆ ಇದ್ದ ವ್ಯತ್ಯಾಸವನ್ನು ಗುರುತಿಸಲು ಇಷ್ಟಪಡದೆ ತಮ್ಮ ಸಮಾಜವಾದವನ್ನು ಯಥಾರ್ಥ

ಸಮಾಜವಾದ' (actually existing socialism) ಎಂದು ಕರೆಯುತ್ತಿದರು.

ಕಮ್ಯುನಿಸ್ಟ್ ದೇಶಗಳ ವೈಫಲ್ಯವನ್ನು ರುಡಾಲ್ಫ್ ಬಾಹ್ರೊ ತನ್ನ ದಿ ಆಲ್ಟರ್‌ನೇಟಿವ್ ಎಂಬ ಗ್ರಂಥದಲ್ಲಿ ವಿವರವಾಗಿ ಚರ್ಚಿಸುತ್ತಾನೆ. ಬಾಹ್ರೊ ಮೊದಲು ಪೂರ್ವ ಜರ್ಮನಿಯ ಸರಕಾರ ಮತ್ತು ಕಮ್ಯುನಿಸ್ಟ್ ಪಕ್ಷಗಳಲ್ಲಿ ವಿವಿಧ ಪ್ರಮುಖ ಜವಾಬ್ದಾರಿಗಳನ್ನು ಹೊಂದಿದ್ದ. ಮೇಲೆ ಪ್ರಸ್ತಾಪಿಸಿರುವ ಪುಸ್ತಕ ಪ್ರಕಟವಾದ ಬಳಿಕ ಆತನನ್ನು ಕಮ್ಯುನಿಸ್ಟ್ ಸರಕಾರ ಬಂಧಿಸಿತು. ಟ್ರಾಟ್ಸ್ಕಿ, ಜಿಲಾಸ್‌ರ ನಂತರ ಕಮ್ಯುನಿಸ್ಟ್ ವ್ಯವಸ್ಥೆಯ ಒಳಗಿನ ವ್ಯಕ್ತಿಯಾಗಿ, ಅದರ ವಿಫಲತೆಯ ಬಗ್ಗೆ ಮಹತ್ವಪೂರ್ಣ ಚರ್ಚೆ ನಡೆಸಿದವನೆಂದರೆ, ಬಾಹ್ರೊ.

ಕ್ರಾಂತಿಯಾದ ಬಳಿಕ ಸ್ಥಾಪಿತವಾಗುವ ಹೊಸ ಸಮಾಜವು ಸಮಾಜವಾದಿಯಾಗುವ ಸಾಧ್ಯತೆಯನ್ನು ತನ್ನೊಳಗೆ ಹೊಂದಿರುವಂಥದ್ದು. ಸಮಸಮಾಜ ಸ್ಥಾಪನೆಗೆ ಅವಶ್ಯವಾದ ಘಟ್ಟ ಇದು. ಈ ಘಟ್ಟದಲ್ಲಿ ರಾಜ್ಯವು ಆಡಳಿತಶಾಹಿ ಸರ್ವಾಧಿಕಾರವಾಗಿರುತ್ತದೆ. ಮಾರ್ಕ್ಸ್, ಎಂಗಲ್ಸ್ ಮತ್ತು ಲೆನಿನ್‌ರ ಕನಸಿನ ಸಮಾಜದ ಸಾಧನೆಯ ದೃಷ್ಟಿಯಿಂದ ನಿಜವಾದ ಪ್ರಾಮಾಣಿಕ ಸಾಮ್ಯವಾದಿಗಳು ಈ ಸ್ಥಿತಿಯಿಂದ ಮುಂದೆ ತುಳಿಯ ಬೇಕಾದ ದಾರಿ ಮತ್ತು ಕ್ರಿಯಾವಿಧಾನಗಳ ವಿವರಗಳನ್ನು ಬಾಹ್ರೋ ಆಲೋಚಿಸುತ್ತಾನೆ. ಮಾರ್ಕ್ಸ್ ಮೊದಲಾದವರ ಕಾಲಿಕ ವಿಚಾರಗಳು ಸ್ವಯಂಸಿದ್ಧ ಎಂದು ಬಾಹ್ರೋ ಭಾವಿಸಲಾರ. ಈ ಚಿಂತಕರ ಅಸಮರ್ಪಕ ಅಂಶಗಳನ್ನು ಹೆಸರಿಸಲು ಬಾಹ್ರೋ ಹಿಂಜರಿಯುವುದಿಲ್ಲ. ಇಂತಹ ಅಂಶಗಳಿಗೆ ಬದಲಿ ಸಲಹೆಗಳನ್ನು ನೀಡುವ ಜವಾಬ್ದಾರಿಯನ್ನು ಬಾಹ್ರೋ ನಿರ್ವಹಿಸುತ್ತಾನೆ. ಈ ಪುನರ್‌ವ್ಯಾಖ್ಯಾನದ ಸಂದರ್ಭದಲ್ಲಿ ಕೊಂಕು ಮತ್ತು ತೆಗಳಿಕೆಗಳಲ್ಲಿ ಅವನು ಕಾಲಹರಣ ಮಾಡುವುದಿಲ್ಲ. ಮಾರ್ಕ್ಸ್‌ನಂತೆಯೇ ಕ್ರಾಂತಿಯ ಹಂಬಲದ ನಿಲುವಿನೊಡನೆ ಈ ವಿಶ್ಲೇಷಣೆ ನಡೆಸಲು ಬಾಹ್ರೋ ಬಯಸುತ್ತಾನೆ.

ಮಾರ್ಕ್ಸ್‌ನ ವಿಚಾರಗಳ ಪ್ರಕಾರ, ದೊಡ್ಡ ಉದ್ಯಮದ ಆಧಾರವಿಲ್ಲದ ಸಮಾಜವಾದೀ ಸಮಾಜ ನಿರ್ಮಾಣ ಸಾಧ್ಯವಿಲ್ಲ. ಆದರೆ 1917ರ ರಷ್ಯಾ, ಉದ್ಯಮದ ಬೆಳವಣಿಗೆ ಸಮರ್ಪಕವಾಗಿ ಆಗದಿದ್ದ, ಹಿಂದುಳಿದ ಏಷಿಯಾದ ದೇಶವಾಗಿತ್ತು. ಬೋಲ್ಷೆವಿಕ್ಕರು ರಷ್ಯಾವನ್ನು ಆಧುನಿಕ ರೀತಿಯಲ್ಲಿ ಯಂತ್ರೀಕರಣಗೊಳಿಸುವುದು ಅತ್ಯಗತ್ಯ ಎಂದು ಭಾವಿಸಿದರು. ರಷ್ಯಾದಲ್ಲಿ ಆಗ ಬಂಡವಾಳಶಾಹಿ ಸಮಾಜಗಳು ನೇರ ಉತ್ಪಾದಕರ ಮೇಲೆ ವಿಧಿಸುವ ಶಿಸ್ತು ಇರಲಿಲ್ಲ. ಏಕೆಂದರೆ, ದೊಡ್ಡ ಉದ್ಯಮಗಳ ಮೂಲಕ ಬಂಡವಾಳ ವ್ಯವಸ್ಥೆ ಅಲ್ಲಿ ಬೇರು ಬಿಟ್ಟಿರಲಿಲ್ಲ. ಕಠಿಣಶಿಸ್ತು ಮತ್ತು ನಿಷ್ಠುರವಾದ ಕರ್ತವ್ಯಶೀಲತೆ ಇಲ್ಲದೆ ಯಂತ್ರೀಕರಣ ಅಸಾಧ್ಯ. ಆದ್ದರಿಂದ ಬೋಲ್ಷೆವಿಕ್ಕರು ಜನತೆಯನ್ನು ಶಿಸ್ತಿನಿಂದ ಕರ್ತವ್ಯಶೀಲರನ್ನಾಗಿ ಮಾಡಲು ಬಲಾತ್ಕಾರವಾಗಿ ಪೀಡಿಸಬೇಕಾಗಿಬಂದದ್ದು ಅನಿವಾರ್ಯ ಸಂಕಟ ಎಂದು ಬಾಹ್ರೋ ವಿವರಿಸುತ್ತಾನೆ. ಈ ವಿವರಣೆಯ ಕ್ರಮದಲ್ಲಿ ಲೆನಿನ್ ಬರಹಗಳನ್ನು ವಿಪುಲವಾಗಿ ಉಲ್ಲೇಖಿಸುತ್ತಾನೆ. ಬೋಲ್ಷೆವಿಕ್ಕರು ಆಡಳಿತಶಾಹಿಗಳಾಗಿ ರೂಪುಗೊಳ್ಳುವುದಕ್ಕೆ ಈ ವಾಸ್ತವಿಕ ಅಗತ್ಯವೇ ಕಾರಣ. ಆಗಲೇ ಸರಕಾರ ಮತ್ತು ಅರ್ಥವ್ಯವಹಾರ ಆಡಳಿತಶಾಹಿಯಾಗಿ ಮಾರ್ಪಟ್ಟಿದ್ದು ಮತ್ತು ರಷ್ಯಾ ಕೃಷಿ ನಿರಂಕುಶತೆಯಿಂದ ಯಂತ್ರನಿರಂಕುಶತೆಗೆ ಬದಲಾವಣೆಗೊಂಡದ್ದು ಎಂದು ಬಾಹ್ರೋ ಭಾವಿಸುತ್ತಾನೆ.

ಈ ವಿವರಣೆ, ಬೇರೆ ಪರ್ಯಾಯಕ್ರಮಗಳು ಸಾಧ್ಯವಿರಲಿಲ್ಲವೆಂಬ ನಿಯತಿವಾದಿಯಾದದ್ದು; ಏಕೆಂದರೆ, ತೃತೀಯ ವಿಶ್ವ ಮತ್ತು ಯೂರೋಪಿನ ಬಡರಾಷ್ಟ್ರಗಳಲ್ಲಿ ಸಮಸಮಾಜ ಸ್ಥಾಪನೆಯ ಯತ್ನಗಳು ಇದೇ ರೀತಿ ವಿಫಲವಾದಾವೆಂದು ಅರ್ಥ ಹೊರಡಿಸುವಂತದ್ದು. ಕಮ್ಯುನಿಸ್ಟ್ ಪಕ್ಷ ಮತ್ತು ಜನತೆಯ ನಡುವಿನ ಸಂಬಂಧ ಮಧುರವಾದದ್ದೂ ಪರಸ್ಪರ ನಂಬಿಕೆ ವಿಶ್ವಾಸಗಳನ್ನು ಅವಲಂಬಿಸಿರುವುದೂ ಆಗಿರುವುದು ಸಾಧ್ಯ. ಚೈನಾ ಈ ಆಶಯಗಳನ್ನು ಪುಷ್ಟೀಕರಿಸುವ ಅನುಭವಗಳನ್ನು ಕಂಡಿದೆ.

ರಷ್ಯಾದಲ್ಲಿನ ಕ್ರಾಂತ್ಯೋತ್ತರ ಹಿಂಸಾತ್ಮಕ ಬೆಳವಣಿಗೆಗಳು ಅನಿವಾರ್ಯಪೀಡನೆ ಎನ್ನುವ ಮಾತು ಒಪ್ಪುವುದು ಸಾಧ್ಯವಿಲ್ಲ; ಇವು ಅನಿವಾರ್ಯವಾದದ್ದು, ಸಾಮ್ಯವಾದೀ ಚಳುವಳಿಯಲ್ಲಿ 'ಅರ್ಥವಾದ' (economism)

ಬೆಳೆದ ಕಾರಣದಿಂದ. ಹಳೆಯ ಸಮಾಜದ, ಪಾರಂಪರಿಕ ಪುರೋಹಿತಶ್ರೇಣಿ ಮತ್ತು ಅಧಿಕಾರಶಾಹಿ ಧೋರಣೆಗಳನ್ನು ಎದುರಿಸದೇ ಅದನ್ನು ಉಳಿಸಿಕೊಂಡು ಬೆಳಸಿಕೊಳ್ಳುವ ಯಾವುದೇ ಕ್ರಾಂತಿಯ ನಂತರದ ಸಮಾಜದಲ್ಲಿ ರಷ್ಯದಲ್ಲಿ ಆದಂತಹ ಬೆಳವಣಿಗೆಗಳನ್ನು ಕಾಣಬಹುದು.

ಆರಂಭಿಕ ಹಂತದಲ್ಲಿ ಬೋಲ್ಷೆವಿಕ್ಕರು ಬಲಾತ್ಕಾರ ಮತ್ತು ಜನತಂತ್ರವಿರೋಧೀ ಒತ್ತಾಯಗಳು ತಾತ್ಕಾಲಿಕ ಎಂದು ನಿಜವಾಗಿ ಭಾವಿಸಿದ್ದರು. ಪರಿಸ್ಥಿತಿ ಉತ್ತಮವಾದೊಡನೆ, ಈ ಕ್ರಮಗಳನ್ನು ಹಿಂತೆಗೆದುಕೊಳ್ಳುವುದೆಂದು ಅವರು ತಿಳಿದಿದ್ದರು. ಅಪ್ರಬುದ್ಧತೆಯ ಮಜಲಿನಲ್ಲೇ ಸ್ಟಾಲಿನ್ ಸಮಾಜವಾದೀ 'ಸಂವಿಧಾನ'ವನ್ನು ಘೋಷಿಸಿ, ಹಳೆಯ ಕ್ರಾಂತಿಕಾರಿಗಳನ್ನೆಲ್ಲಾ ನಿವಾರಿಸಿ ಈ ತಿಳಿವನ್ನು ನಾಶಪಡಿಸಿದ ಎಂದು ಬಾಹ್ರೋ ಭಾವಿಸುತ್ತಾನೆ. ಒಂದು ಇಡೀ ಪೀಳಿಗೆಯ ತಿಳುವಳಿಕೆಯನ್ನು ಇಷ್ಟು ಸುಲಭವಾಗಿ, ಸಂಪೂರ್ಣವಾಗಿ ನಾಶ ಮಾಡಲು ಸಾಧ್ಯವೆ ಎಂಬ ಪ್ರಶ್ನೆಯನ್ನು ಬಾಹ್ರೋ ಎತ್ತುವುದಿಲ್ಲ. ಆ ಪ್ರಶ್ನೆಗೆ ಅವನು ಉತ್ತರ ಕೊಡಲೂ ಸಾಧ್ಯವಿಲ್ಲ. ಏಕೆಂದರೆ, ಕ್ರಾಂತಿಯಾದ ನಂತರದ ಸಮಾಜದಲ್ಲಿ ಒಂದು ಹೊಸ ಬೂರ್ಜ್ವಾಸೀ, ಜನರ (masses) ಮೇಲೆ ಸರ್ವಾಧಿಕಾರ ಸ್ಥಾಪಿಸುತ್ತಿರುವ ಅಂಶವನ್ನು ಅವನು ಪರಿಗಣಿಸುವುದಿಲ್ಲ. ಯಾಕೆಂದರೆ ಅವನ ಪ್ರಕಾರ ಕಮ್ಯೂನಿಸ್ಟರು ಆಡಳಿತಶಾಹಿಗಳಾದರೂ ಅವರಲ್ಲಿ ಪರಿವರ್ತನೆ ಸಾಧ್ಯ; ಆದರೆ ಪಟ್ಟಭದ್ರ ವರ್ಗ ಹಿತಗಳನ್ನು ಬೆಳಸಿಕೊಂಡ ಬೂರ್ಜ್ವಾಸೀ ಬದಲಾಗುವುದಿಲ್ಲ. 'ರಾಜಕೀಯ ಕಾರ್ಯಕರ್ತರು' ಮತ್ತು 'ಪರಿವಾರ' ಹೆಚ್ಚುವರಿ ಉತ್ಪಾದನೆಯ ದೊಡ್ಡ ಪಾಲನ್ನು ಹಂಚುವ ಅಧಿಕಾರ ಹೊಂದಿರುವುದು ಬಾಹ್ರೋಗೆ ಗೊತ್ತಿದೆ. ಈ ಹಂಚಿಕೆಯ ಅಧಿಕಾರ ಆಡಳಿತಗಾರರ ಕೃಪೆಗಾಗಿ ಕಾದಿರುವವರಿಗೋ ಅಥವಾ ತಮ್ಮದೆ ಪೂರಕ ಅವಶ್ಯಕತೆಗಳ ಪೂರೈಕೆಗೋ ದುರುಪಯೋಗವಾಗುತ್ತದೆ ಎಂದು ಬಾಹ್ರೋ ಹೇಳುತ್ತಾನೆ.

... ಪೂರ್ವ ಜರ್ಮನಿಯ ಮೇಲಾದಾಯ ಮತ್ತು ಕೆಳ ಆದಾಯಗಳ ಅಂತರವು 1500 ರಿಂದ 500 ಮಾರ್ಕ್‌ಗಳು ಇದನ್ನು ಮೀರಿದ ಎಲ್ಲ ಆದಾಯವೂ ಈಗಾಗಲೇ ಸವಲತ್ತುಳ್ಳ ಜನರ ಜೇಬು ತುಂಬುತ್ತದೆ ... ನಮ್ಮ ಸರಕಾರಿ ಆದಾಯ —3000 ಮಾರ್ಕ್‌ಗಳು. ಇದಕ್ಕಿಂತ ಹೆಚ್ಚಿನ ಆದಾಯ ಅಥವಾ ವೇತನವು ಬೇರೆ ಜನಗಳ ದುಡಿಮೆಯ ಸುಲಿಗೆಯನ್ನಾಧರಿಸಿದ್ದು.

ಆದರೂ ಬಾಹ್ರೋ ಇದನ್ನು ಒಂದು ಇಡೀ ಆಳುವ ವರ್ಗದಿಂದ ನಡೆಯುವ ನೇರ ಉತ್ಪಾದಕರ ಸುಲಿಗೆ ಎನ್ನದೇ, ಕೇವಲ ಭ್ರಷ್ಟಾಚಾರ ಅಥವಾ ಅಧಿಕಾರದ ದುರುಪಯೋಗ ಎಂದು ಗಣಿಸುತ್ತಾನೆ.

ಕ್ರಾಂತ್ಯೋತ್ತರ ಸಮಾಜ ಬಾಹ್ರೋನ ಪ್ರಕಾರ ವರ್ಗಸಮಾಜವಲ್ಲ; ಮೇಲುಚಲನೆಯು ಇನ್ನೂ ಕಷ್ಟವಾಗಿಯೇ ಉಳಿದಿರುವ ಶ್ರೇಣೀಕೃತ ಸಮಾಜ. ಆದರೂ ಆತನ ಆಡಳಿತಶಾಹಿಯ ಖಂಡನೆ ಅತ್ಯುಗ್ರವಾದದ್ದು. ಉದಾಹರಣೆಗೆ ಅವನ ಈ ಮಾತುಗಳನ್ನು ನೋಡಿ:

ರಾಜಕೀಯ ಶಿಕ್ಷಕರು ಜನತೆಗೆ ಒಂದೇ ಗಂಟಲಿನಿಂದ ಹೇಳುತ್ತಾರೆ: ಜನರೇ, ನೀವು ಮುಗ್ಧರಾಗಿಯೇ ಉಳಿಯುವ ಹಾಗೇ ನಾವು ನಿಮಗೆ ರಾಜಕೀಯವನ್ನು ಕಲಿಸುತ್ತೇವೆ.

...... ಜನರ ತಿಳಿವು ಬೆಳೆಯುವುದರ ಸೂಚನೆಯು ಅವರು ತಮ್ಮ ನಿಷ್ಠೆಯನ್ನು ಪ್ರದರ್ಶನಗಳಲ್ಲಿ ಎಷ್ಟು ಗಟ್ಟಿಯಾಗಿ ಕೂಗುತ್ತಾರೆ ಎನ್ನುವುದರಲ್ಲಿರುವಂತಿದೆ.

'ನೀವು ಚೆನ್ನಾಗಿ ಕೆಲಸ ಮಾಡುತ್ತಿರಿ, ನಾವು ಆಳುತ್ತಿರುತ್ತೇವೆ' ಎಂಬ ಮಾತಿನಲ್ಲ ಪೋಲಿಷ್ ಡಿಸೆಂಬರ್ ಬಿಕ್ಕಟ್ಟಿನ ನಂತರದ ಘೋಷಣೆಯನ್ನು ಸಂಗ್ರಹಿಸಿದ ಎಡ್ವರ್ಡ್ ಗೈರೆಕ್‌ನ ನೇರ ಮಾತುಗಳಿಗೆ ಅವನಿಗೆ ಧನ್ಯವಾದ ಹೇಳಬೇಕು.

ಪಾರ್ಟಿ ಮೆಂಬರುಗಳು ತಮ್ಮ ಸಾಮರ್ಥ್ಯದಿಂದ ಕಮ್ಯುನಿಸ್ಟರಾಗಿಲ್ಲ. ಅವರನ್ನು ಕಮ್ಯುನಿಸ್ಟರೆಂದು ಕರೆಯಲಾದರೂ ಅವರ ಸಾಮರ್ಥ್ಯದ ಬಗೆಗಿನ ಮಾತುಗಳು ಅವರ ಸೈನಿಕ ಶಿಸ್ತನ್ನು ಕುರಿತು ಆಡುವಂತಹವು. ಈ ಪಾರ್ಟಿ ಯಂತ್ರದಿಂದ ಯಾವ ಹೊಸ ಹಾದಿ ತುಳಿಯುವುದೂ ಅಸಾಧ್ಯ. ಈ ಯಂತ್ರ ಇರುವುದೇ ತಪ್ಪಲ್ಲ. ಆದರೆ, ಯಂತ್ರವೇ ಎಲ್ಲವೂ ಆಗಿದೆ. ಪಕ್ಷವು ಈ ಯಂತ್ರದ ಹೊರತಾಗಿ ಬೇರೇನೂ ಅಲ್ಲದಿರುವುದೇ ಈ ತಪ್ಪಿಗೆ ಮೂಲಕಾರಣ ... ಕಮ್ಯುನಿಸಂನಲ್ಲಿ ಕಡೆಗೆ ಉಳಿಯುವುದು ಸಂಸ್ಥೆಯ ಒಳಗೆ ಚದುರಿದ ಕಾಮ್ರೇಡ್‌ಗಳ ವೈಯಕ್ತಿಕ ತಿಳಿವಿನ ಘರ್ಷಣೆ ಮಾತ್ರ

ಇವು, ಇಂತಹ ಆಡಳಿತಶಾಹಿಯ ದೆಸೆಯಿಂದ ಕಮ್ಯುನಿಸ್ಟರಿಗೆ ಆಗಿರುವ ಗತಿಯನ್ನು ಬಾಹ್ರೋ ವ್ಯಕ್ತಪಡಿಸುವ ರೀತಿ.

ಸನ್ನಿವೇಶ

'ಯಥಾರ್ಥ ಸಮಾಜವಾದಿ' ವ್ಯವಸ್ಥೆಯಲ್ಲಾಗಲೀ, ಅಥವಾ ಬಂಡವಾಳಶಾಹೀ ನಂತರದ ಸಮಾಜದಲ್ಲಾಗಲೀ, ಕಾರ್ಮಿಕವರ್ಗ (proletariat) ಹೊಸಹಾದಿ ತುಳಿದು ಸಮಸಮಾಜದೆಡಗೆ ಮುನ್ನಡೆಯಬಹುದೆಂಬ ನಂಬಿಕೆ ಬಾಹ್ರೋಗೆ ಇಲ್ಲ. ಬಾಹ್ರೋ ಇಂತಹ ನಾಯಕತ್ವ ವಹಿಸುವುದಕ್ಕೆ ಕಾರ್ಮಿಕ ವರ್ಗ ಅಸಮರ್ಥ ಎಂದು ಭಾವಿಸುತ್ತಾನೆ. ಯಾಕೆಂದರೆ, ಅವನ ಪ್ರಕಾರ ಕಾರ್ಮಿಕ ವರ್ಗ ಯಾವ ಕ್ರಾಂತಿಕಾರೀ ಚಳುವಳಿಯನ್ನೂ ಮುನ್ನಡೆಸಿದ್ದಿಲ್ಲ. ಆಕ್ಟೋಬರ್ ಚಳುವಳಿಯನ್ನು ಮುನ್ನಡೆಸಿದ್ದು ಕ್ರಾಂತಿಕಾರಿ ಧಿಮಂತವರ್ಗ. ಕಾರ್ಮಿಕರು ಈ ಕ್ರಾಂತಿಯ ಸೈನ್ಯ ಮಾತ್ರ ಆಗಿದ್ದರು. ಬಾಹ್ರೋ ಲೆನಿನ್‌ನನ್ನು ಪ್ರತಿಧ್ವನಿಸುತ್ತಾ ಹೀಗೆನ್ನುತ್ತಾನೆ:

"ಸಾಮಾನ್ಯ ಕಾರ್ಮಿಕ ವರ್ಗವು ತನ್ನ ವರ್ಗಹಿತಗಳ ಟ್ರೇಡ್ ಯೂನಿಯನ್ ಅಭಿವ್ಯಕ್ತಿಯನ್ನು ಮಾತ್ರ ಕಂಡುಕೊಂಡಂತದ್ದು. ಕಾರ್ಮಿಕ ವರ್ಗ ಎಂದಿಗೂ ಸಾರ್ವತ್ರಿಕ ಬಿಡುಗಡೆಯ ಗುರಿ ಹೊಂದಿರಲಾರದು. ಉಚ್ಚ ಶಿಕ್ಷಣವಿಲ್ಲದೆ, ಕಾರ್ಖಾನೆ ಕೆಲಸದ ಏಕತಾನದಿಂದ ಅವರ ಸಾರ್ವತ್ರಿಕ ಹಿತಗಳನ್ನು ಅರಿಯುವ ಶಕ್ತಿ ಸೀಮಿತವಾದದ್ದು. ಕಾರ್ಮಿಕರು — ವೈಯಕ್ತಿಕ ಅಪವಾದಗಳನ್ನು ಹೊರತುಪಡಿಸಿ — ಎಂದೂ ನಿಜವಾದ ಅರ್ಥದಲ್ಲಿ ಮಾರ್ಕ್ಸ್‌ವಾದಿಗಳಾಗಿರಲಿಲ್ಲ. ಮಾರ್ಕ್ಸ್‌ವಾದ — ಆ 'ಕಾರ್ಮಿಕ ವರ್ಗ'ದ ಅಸ್ತಿತ್ವವನ್ನು ಆಧರಿಸಿದ ಒಂದು ತತ್ವ; ಕಾರ್ಮಿಕರದೇ ತತ್ವವಲ್ಲ. ಯಾವಾಗಲೂ ಎಡಧೋರಣೆಯ ಚಿಂತಕರಷ್ಟೇ ಮಾರ್ಕ್ಸ್‌ವಾದವನ್ನು ತಿಳಿವ ಶಕ್ತಿ ಹೊಂದಿದ್ದರವರು. ಬಿಡುಗಡೆಯ ಸಮರವನ್ನು — ಸಿದ್ಧಾಂತಿಗಳು, ಆರ್ಥಿಕ, ಸಾಮಾಜಿಕ, ತಾಂತ್ರಿಕ, ವೈಜ್ಞಾನಿಕ ತಜ್ಞರು ಮುಂತಾದ ಧೀಮಂತರು ಮಾತ್ರ ಮುನ್ನಡೆಸಬಲ್ಲರು. ವಿದ್ಯಾರ್ಥಿಗಳು ಮುನ್ನಲೆಯಲ್ಲಿರುವ ಈ ಸಮರವು ಏಕಕಾಲದಲ್ಲಿ ಬಂಡವಾಳವನ್ನೂ, ವ್ಯವಸ್ಥೆಯನ್ನೂ ವಿರೋಧಿಸುತ್ತದೆ."

ಕೈಗಾರಿಕಾ ಸಮಾಜಗಳಲ್ಲಿ ಧೀಮಂತರಷ್ಟೇ ಜನಸಮುದಾಯದ ಎಲ್ಲ ಭಾಗಗಳೂ ಅಗತ್ಯಕ್ಕಿಂತ ಹೆಚ್ಚಿನ ಅರಿವನ್ನು ಹೊಂದಿರುತ್ತವೆ. ಈ ಅಧಿಕ ತಿಳಿವನ್ನು ಆಯಾ ವ್ಯವಸ್ಥೆಗಳು ಉಪಯೋಗಿಸಿಕೊಳ್ಳಲಾರವು; ಆದ್ದರಿಂದ ಭೌತಿಕ ಅವಶ್ಯಕತೆಗಳನ್ನು ಒದಗಿಸಿರುವಂತ ಕೈಗಾರಿಕಾ ಸಮಾಜಗಳಲ್ಲಿ, ಈ ತಿಳಿವಿನ ಹೆಚ್ಚಳದ ಬಳಕೆಯು ಬಿಡುಗಡೆಗೆ ಸಾಧಕವಾದ ಅಗತ್ಯ ಮತ್ತು ತುರ್ತುಗಳನ್ನು ಉಂಟುಮಾಡುತ್ತದೆ ಎಂದೂ, ಈ ವಾಸ್ತವಿಕ ಶಕ್ತಿಯು ವ್ಯಕ್ತಿತ್ವ ಮತ್ತು ಸ್ವಾತಂತ್ರ್ಯದ ಬೆಳವಣಿಗೆಗೆ ಒತ್ತಡ ಹಾಕುತ್ತದೆ ಎಂದೂ ಬಾಹ್ರೋ ನಂಬುತ್ತಾನೆ.

'ಯಥಾರ್ಥ ಸಮಾಜವಾದ'ದ ಅತಿ ಮುಖ್ಯ ವಿರೋಧಾಭಾಸವೆಂದರೆ ಅಧಿಕಾರದಲ್ಲಿರುವ ರಾಜಕೀಯ ಆಡಳಿತಶಾಹಿಯ 'ಸ್ಥಿರ' ಹಿತಗಳು ಮತ್ತು ಬಹುಪಾಲು ಜನತೆಯ ಮುಕ್ತ ಬಯಕೆಗಳ ನಡುವಿನದು. ಸಮಾಜದ ಎಲ್ಲ ಶ್ರೇಣಿಗಳಿಂದ ಬರುವ ಜನ, ಬಾಹ್ರೋ ಪ್ರಕಾರ, ರಾಜಕೀಯ ಆಡಳಿತ ಶಾಹಿಯ ಸರ್ವಾಧಿಕಾರದ ವಿರುದ್ಧ ಕೈಕೂಡಿಸುತ್ತಾರೆ. ಅತೃಪ್ತ ಧೀಮಂತರು ವಿಮೋಚನೆಯ ಈ ಸಮರದಲ್ಲಿ ಮುಂದಿರುತ್ತಾರೆ. ಯಾಕೆಂದರೆ, ಧೀಮಂತರು ಆಡಳಿತಶಾಹಿಯ ಒಳಗೂ ಇರಬಹುದೆಂದು ಬಾಹ್ರೋ ಹೇಳುತ್ತಾನೆ. ಆಡಳಿತಶಾಹಿಯಲ್ಲಿರುವ ನಿಜವಾದ ಕಮ್ಯುನಿಸ್ಟರ ಪ್ರಜ್ಞೆ ಪ್ರಸ್ತುತದಲ್ಲಿ ಒಡೆದಿದೆ, ಮತ್ತು ಧೀಮಂತರು ಅಸ್ಥಿರ ಪ್ರವೃತ್ತಿ ಹೊಂದಿದ್ದಾರೆ. ಈ ನಿಜವಾದ ಕಮ್ಯುನಿಸ್ಟರು ಆಡಳಿತಶಾಹಿಯ ತಿರುಳು. ಆದರೆ ಧೀರ್ಘಕಾಲದಲ್ಲಿ ಇವರು ಸಹ ವೈಯಕ್ತಿಕ ಬದ್ಧತೆಯ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದಿಲ್ಲ. ಸಿದ್ಧಾಂತಪಟುಗಳು ತಮ್ಮ ಕಾರ್ಯದ ಸಂದರ್ಭದಲ್ಲಿ ಮಾರ್ಕ್ಸ್ ಮತ್ತು ಲೆನಿನ್‌ರ ಕ್ರಾಂತಿಕಾರಕ ಕೃತಿಗಳನ್ನು ಓದಿರುತ್ತಾರೆ, ಮತ್ತು ಪ್ರಭಾವಿತರಾಗಿರುತ್ತಾರೆ. 'ಯಥಾರ್ಥ ಸಮಾಜವಾದ' ವ್ಯವಸ್ಥೆಗಳಲ್ಲಿ ಅವರನ್ನು ಹೋರಾಟ ಮತ್ತು ಪ್ರಚಾರಗಳನ್ನು ನೇರವೇರಿಸುವ ಮತ್ತು ಸಾಮಾಜಿಕ ಅರಿವನ್ನು ಸಮಯಕ್ಕೆ ತಕ್ಕ ಹಾಗೆ ಹೊಸೆಯುತ್ತಾ ಹೋಗುವ ತಜ್ಞರನ್ನಾಗಿ ಮಾಡಿಕೊಂಡು ಕೀಳುಗಳೆಯಲಾಗಿದೆ, ಆದರೂ ವಿಮೋಚನೆಯ ಹೋರಾಟದಲ್ಲಿ ಅವರು ಮಾತ್ರ ಮುನ್ನುಗ್ಗಬಲ್ಲರು ಎಂದು ಬಾಹ್ರೋ ವಿವರಿಸುತ್ತಾನೆ. ಆತ ಧೀಮಂತ ವರ್ಗದ ಬಗ್ಗೆ ತೀರಾ ಆಶಾವಾದಿಯಾಗಿರುವಂತೆ ಕಾಣುತ್ತದೆ; ಕಾರ್ಮಿಕ ಶಕ್ತಿಯ ಬಗ್ಗೆ ಆತನ ತಿಳುವಳಿಕೆ ಹಂಗೇರಿ, ಪೋಲಾಂಡ್‌ನಲ್ಲಾದ ಬೆಳವಣಿಗೆಗಳ ದೃಷ್ಟಿಯಿಂದ ನೋಡಿದಾಗ ಸಮರ್ಪಕವೆನ್ನಲಾಗುವುದಿಲ್ಲ. ಆತ 'ಸಾಂಸ್ಕೃತಿಕ ಕ್ರಾಂತಿ ಎಂದು ಕರೆಯಬಯಸುವ ಒಂದು ದೃಢವಾದ ಕನಸಿನ ಲೋಕದ ಕೆಲವು ಅತಿ ಮಹತ್ವದ ಕಲ್ಪನೆಗಳು ಹೀಗಿವೆ:

1 ನಿಸರ್ಗ, ತಂತ್ರಜ್ಞಾನ ಸಮಾಜ, ಕಲಾಶಾಸ್ತ್ರ, ತತ್ವಜ್ಞಾನ, ಸಿಬೆರ್‌ನಿಟಕ್ಸ್‌ಗಳನ್ನೊಳಗೊಂಡ ಅತ್ಯುಚ್ಚ ಮಟ್ಟದ ಶಿಕ್ಷಣಕ್ಕೆ ಎಲ್ಲರಿಗೂ ಯಾವ ಮಿತಿಯೂ ಇಲ್ಲದ ಅವಕಾಶದ ಸೃಷ್ಟಿ.

2 ಎಲ್ಲರೂ ವಿವಿಧ ಕಾರ್ಯಮಟ್ಟದಲ್ಲಿರುವ ವಿಭಿನ್ನ ಕಾರ್ಯಕ್ರಮಗಳಲ್ಲಿ ಪಾಲು ಹೊಂದಿರುವಂತಹ ಕೆಲಸದ ಪುನರ್ವಿತರಣೆ. ಇದು ಮೊದಲ ಕಲ್ಪನೆಯ ಯಶಸ್ಸನ್ನು ಅವಲಂಬಿಸುತ್ತದೆ.

3 ಕೇವಲ ಪಾರಂಪರಿಕ ಸ್ಪರ್ಧಾತ್ಮಕ ಸಮಾಜಗಳ ಸಮುದಾಯೀಕರಣದ ಬದಲಾಗಿ, ಹೊಸ ರೀತಿಯ ಶಿಕ್ಷಣ ಮತ್ತು ಮಕ್ಕಳನ್ನು ಸಮುದಾಯದ ಮುತುವರ್ಜಿಯಲ್ಲಿ ಬೆಳಸುವುದು.

4 ವ್ಯಕ್ತಿಗಳ ಒಂಟಿತನಗಳನ್ನು ಕೊನೆಗೊಳಿಸುವಂತಹ, ಪರಿಪೂರ್ಣ ಮಾನವೀಯ ಸಂಬಂಧಗಳನ್ನು ಒಡಮೂಡಿಸಬಲ್ಲ ಹಲವು ಸ್ವಾಯತ್ತ ಸಮುದಾಯಗಳ ಚಟುವಟಿಕೆಗಳ ಆಧಾರದ ಮೇಲೆ ಹೊಸ ಜೀವನದ ಸೃಷ್ಟಿ.

5 ಸಮಾಚಾರ ವಿತರಣೆಯಲ್ಲೂ ಮತ್ತು ಎಲ್ಲ ಬಗೆಯ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಗಳಲ್ಲೂ ಜನರು ಪಾಲಾಗುವುದನ್ನು ಸಾಧ್ಯವಾಗಿಸುವುದು.

ಬಾಹ್ರೋ ಹಂಗರಿಯನ್ ಮಾದರಿಯ ಬಂಡಾಯವನ್ನು ಮುಂಗಾಣುವುದಿಲ್ಲ. ಅಸಂಘಟಿತ ದಿಢೀರ್ ಬೆಳವಣಿಗೆಗಳನ್ನು ಅವನು ನಂಬುವುದಿಲ್ಲ. ಸಂಸ್ಥೆ ಅಥವ ಸಂಘಟನೆ ತೀರಾ ಮುಖ್ಯವಾದುದು. ವಿರೋಧೀ ಶಕ್ತಿಗಳು ಮತ್ತು ಪ್ರಾಮಾಣಿಕ ಕಮ್ಯುನಿಸ್ಟರು ಕಾನೂನಿಗೆ ಹೊರತಾದ ಜನತಾಂತ್ರಿಕ ಸಂಘಟನೆಯೊಂದನ್ನು ರಚಿಸಿಕೊಳ್ಳಬೇಕು. ಇದನ್ನು ಆತ ಲೀಗ್ ಆಫ್ ಕಮ್ಯುನಿಸ್ಟ್ಸ್ ಎಂದು ಕರೆಯುತ್ತಾನೆ: ಈ ಲೀಗ್ ಅವಕಾಶವಿರುವಷ್ಟೂ ಸಂವಿಧಾನದ ಉಪಯೋಗವನ್ನು ಮಾಡಿಕೊಂಡು ವರ್ತಮಾನದ ಸ್ಥಿತಿಯ ಬಗ್ಗೆ ಟೀಕೆಗಳನ್ನು ಮತ್ತು ಭವಿಷ್ಯದ ಬಗ್ಗೆ ತನ್ನ ವಿಚಾರಗಳನ್ನು ಹರಡಬೇಕು. ಅಧಿಕೃತ ಪಕ್ಷದಲ್ಲಿ ಒಡಕು ಉಂಟಾಗುವವರೆಗೂ ಈ ಲೀಗ್ ಒತ್ತಡ ಸೃಷ್ಟಿಸಬೇಕು. ಈ ಲೀಗ್‌ಗೆ ಪಾರ್ಟಿ ಮತ್ತು ಪಾಲಿಟ್‌ಬ್ಯೂರೋದಲ್ಲೂ ಗೆಳೆಯರು ದೊರೆಯುತ್ತಾರೆಂದು ಬಾಹ್ರೋ ಆಶಿಸುತ್ತಾನೆ. ಸೈನ್ಯ ನಿರ್ಣಾಯಕ ಘಟ್ಟದಲ್ಲಿ ನಿಷ್ಪಕ್ಷಪಾತವಾಗಿರುತ್ತೆಂದು ಬಾಹ್ರೋ ಭಾವಿಸುತ್ತಾನೆ. ಇದಕ್ಕೆ ಆತ 1968 ರಲ್ಲಿ ಝೆಕೋಸ್ಲವಾಕಿಯಾದ ಘಟನೆಗಳ ಉದಾಹರಣೆ ನೀಡುತ್ತಾನೆ. ಕ್ರುಶ್ಚೇವ್ ಪಾಲಿಟ್‌ಬ್ಯೂರೋನಲ್ಲಿ ಸೋತು ಹೋದಾಗ ಝುಕೋವ್ ಆತನನ್ನು ಮೇಲೆತ್ತಲು ಸೈನ್ಯದ ಮೇಲೆ ತನಗಿದ್ದ ಹತೋಟಿಯನ್ನು ಬಳಸಿದ್ದು ಬಾಹ್ರೋ ಗಮನಿಸುವುದಿಲ್ಲ. "ರಾಜಕೀಯ ಪೋಲಿಸ್"ನ ಪಾತ್ರದ ಬಗ್ಗೆ ಸಹ ಆತ ಮಾತಾಡುವುದಿಲ್ಲ.

ಕಮ್ಯುನಿಸಂ, ಬಾಹ್ರೋನ ಪ್ರಕಾರ, ದೂರ ಭವಿಷ್ಯದ ಸಂಗೀತವಲ್ಲ. ಇದು ಅಗತ್ಯವಷ್ಟೇ ಅಲ್ಲ, ಸಾಧ್ಯಕೂಡ ಎಂದು ಸಾಬೀತು ಪಡಿಸಬೇಕಾಗಿದೆ. ಶೋಷಣೆಯನ್ನು ನಿವಾರಿಸಬೇಕು ನಿಜ. ಆದರೆ, ಮನುಷ್ಯ ಮನುಷ್ಯನ ಮೇಲೆ ಬಲವಂತವಾಗಿ ಹೇರುವ ವ್ಯವಸ್ಥೆಯನ್ನು ನಾಶಮಾಡಬೇಕೆನ್ನುವುದನ್ನು ಬಾಹ್ರೋ ಒತ್ತಿ ಹೇಳುತ್ತಾನೆ. ಇದಕ್ಕಾಗಿ, ಕಾರ್ಮಿಕರ ಹೊಸ ಸಂಘಟನೆಯನ್ನು ವಿಕೇಂದ್ರೀಕರಿಸಲು ಸಲಹೆ ಮಾಡುತ್ತಾನೆ. ಇದು, 'ಯಥಾರ್ಥಸಮಾಜವಾದ' ವ್ಯವಸ್ಥೆಯಂತೆ ಮಧ್ಯವರ್ತಿ ಕೆಲಸಗಾರರಿಗೆ ಹೆಚ್ಚಿನ ಅಧಿಕಾರ ನೀಡಬಾರದು; ತಳ ಮಟ್ಟದ ಸಾಮಾಜಿಕ ಶಕ್ತಿಗಳಿಗೆ ಸ್ವಾಯತ್ತತೆ ನೀಡಬೇಕು. ಸಾಮಾಜಿಕ ಸುಧಾರಣೆ ಸಹ ಆರ್ಥಿಕ ಸುಧಾರಣೆಯಷ್ಟೆ ಮುಖ್ಯವಾದದ್ದು. ಯೋಜನೆ, ಮಾರುಕಟ್ಟೆ, ಬಳಕೆ ಮೌಲ್ಯ ಅಥವಾ ಬದಲಿ ಮೌಲ್ಯಗಳ ಬಗೆಗಿನ ಚರ್ಚೆಗಿಂತ, ಬಾಹ್ರೋಗೆ ರಾಜಕೀಯ ಜನತಂತ್ರ ನಿರ್ಣಾಯಕ ಮಹತ್ವ ಹೊಂದಿರುವಂತೆ ಕಾಣುತ್ತದೆ.

ಯಜಮಾನಿಕೆಯ ಸಂಬಂಧಗಳಿಂದ ಮನುಷ್ಯನನ್ನು ಬಿಡುಗಡೆ ಮಾಡುವುದೇ ಅಂತಿಮಗುರಿಯಾದುದರಿಂದ ಬಹ್ವುತ್ಪಾದನೆಯ ಗುರಿ ಒಂದು ಶ್ರೀಮಂತ ವ್ಯಕ್ತಿತ್ವವನ್ನು ರೂಪಿಸುವುದೇ ಆಗಿರಬೇಕು. ಅಂದರೆ, ಆರ್ಥಿಕ ಬೆಳವಣಿಗೆ ಮತ್ತು ಹೆಚ್ಚುತ್ತಾ ಹೋಗುವ ಉತ್ಪಾದನೆ ಪ್ರಾಥಮಿಕವಾದ ಸ್ವಯಂಮಹತ್ವದ ಅಂಶಗಳೆಂಬ ವಿಚಾರವನ್ನು ಕೈಬಿಡಬೇಕು. ಆದ್ದರಿಂದ ಮುಂದಕ್ಕೆ ಏರುತ್ತಾ ಹೋಗದಂತೆ ಉತ್ಪಾದನಾಸ್ಥಿತಿಯನ್ನು ಸ್ಥಗಿತಗೊಳಿಸುವುದು ಸಹಜಕ್ರಮವಾಗುತ್ತದೆ. ಇಂದಿನ ಕೈಗಾರಿಕಾಸಮಾಜ ಮನುಷ್ಯನ ಪ್ರಾಥಮಿಕ ಅವಶ್ಯಕತೆಗಳನ್ನೂ ಪೂರೈಸುವುದರಿಂದ, ಅದು ಮನುಷ್ಯನ

ಸನ್ನಿವೇಶ

ಸಿಗಬಹುದಾದ ರಕ್ಷಣೆ ತಾತ್ಕಾಲಿಕ ಹೊಸನೆಲದ ಪ್ರತಿಕೂಲತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಅವರು ಬಲಿಯಾಗಿಬಿಡುತ್ತಾರೆ. ಸಾಲದ್ದಕ್ಕೆ, ಅವರ ಜಾಡುಗಳನ್ನು ಪತ್ತೆ ಹಚ್ಚಿ ಅವರ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳಲು ಆಧುನಿಕಮಾನವನಿಗೆ ಉಪಾಯಗಳು ಇದ್ದೇ ಇವೆ. ಕೇರಳದ ಚೋಳನಾಯ್ಕರು ಇಂತಹ ದುರಂತಕ್ಕೆ ಸಿಕ್ಕ ಒಂದು ಆದಿಜನಾಂಗ.

ಬೇಟೆ ಮತ್ತು ಆಹಾರ ಆರಿಸುವುದರ ಮೂಲಕವೆ ಬದುಕುವ ಜನಾಂಗವಾಗಿ ಈ ದೇಶದ ಭೂ ಭಾಗದಲ್ಲಿ ಇನ್ನೂ ಉಳಿದಿರುವವರು ಚೋಳನಾಯ್ಕರು ಮಾತ್ರ. ಇವರು ಕೇರಳದ ನೀಲಾಂಬರ್ ಕಣಿವೆ ಎ.ಕರುಳೈ ಮತ್ತು ಚುಂಗತಾರಾ ಪ್ರದೇಶಗಳಲ್ಲಿ ನೆಲೆಯೂರಿದ್ದಾರೆ. ದುರ್ಗಮವಾದ ಈ ಕಾಡಿನಲ್ಲಿ ಆನೆಗಳ ಸಂಖ್ಯೆ ಕಡಿಮೆ ಇಲ್ಲ. ಆದ್ದರಿಂದ, ಮಿತವ್ಯಾಪ್ತಿಯುಳ್ಳ ಈ ಕಾಡನ್ನು ಚೋಳನಾಯ್ಕರು ಕಾಡಾನೆಗಳೊಂದಿಗೆ ಹಂಚಿಕೊಂಡು ಬದುಕಬೇಕು. ಇವರ ವಾಸ ಪ್ರಕೃತಿಯಿಂದಲೇ ನಿರ್ಮಿತವಾದ ಗುಹೆಗಳಲ್ಲಿ. ಇವರು ನಾಗರಿಕತೆಯಿಂದ ಇಷ್ಟು ದೂರ ಇರುವರಾದರೂ, ನಮ್ಮ ಸಂತೆಗಾರಿಕೆಯ ಅರ್ಥಿಕ ವ್ಯವಸ್ಥೆ ಇವರತ್ತ ಬಲೆ ಬೀಸಿದೆ. ಈಗ ಇವರು ಕಾಡುತ್ಪತ್ತಿಯಾದ ಕರಿಮೆಣಸು, ಏಲಕ್ಕಿ, ಸೀಗೆಕಾಯಿ (soap-seeds), ಜೇನುತುಪ್ಪ, ಶುಂಠಿ ಮತ್ತು ತರಹಾವರಿ ಬೀಜಗಳನ್ನು ಸಂಗ್ರಹಿಸಿ, ಕಾಡಿನ ಅಂಚಿಗೆ ತಂದು, ಇವರಿಗಾಗಿ ಕಾದು ಕೂಡುವ ಕಾಡಿನ ಕಂಟ್ರಾಕ್ಟರುಗಳಿಗೆ ಕೊಡುತ್ತಾರೆ. ಇದಕ್ಕೆ ಪ್ರತಿಯಾಗಿ ಅವರಿಗೆ ಸಿಗುವುದು – ಜಹಾದ ಎಲೆ, ತಂಬಾಕು, ಅಕ್ಕಿ, ಒಣ ಮೀನು, ಮುಂತಾದುವು. ಈ ಕೊಡುಕೊಳ್ಳುವಿಕೆಯೆಲ್ಲಾ ಮೌನವಾಗಿ ನಡೆಯುತ್ತದೆ. ಯಾರಿಗೆ ಎಷ್ಟು ಯಾವ ರೀತಿಯಲ್ಲಿ ಕೊಡಬೇಕೆಂದು ನಿರ್ಧರಿಸುವುದು ವ್ಯಾಪಾರೀ –ಕಂಟ್ರಾಕ್ಟರುಗಳೇ. ಈ ಕಂಟ್ರಾಕ್ಟರುಗಳು ಕೊಡುವ ಜುಜುಬಿ ವಸ್ತುಗಳಿಗಿಂತ ಚೋಳನಾಯ್ಕರು ತರುವ ವನ್ಯಸಂಪತ್ತಿನ ಮೌಲ್ಯ ಹೆಚ್ಚಿನದ್ದಾದರಿಂದ ಈ ಇಡೀ ವ್ಯಾಪಾರದಿಂದ ಕಂಟ್ರಾಕ್ಟರುಗಳಿಗೇ ಲಾಭ ಎಂದು ಬೇರೆ ಹೇಳಬೇಕಿಲ್ಲ.

ನಾಗರಿಕತೆಯ ಇನ್ನೂ ಭಯಂಕರ ದುಷ್ಪರಿಣಾಮಗಳ ಹೋಲಿಕೆಯಲ್ಲಿ ಚೋಳನಾಯ್ಕರಿಗೆ ಮೇಲೆ ಹೇಳಿರುವ ವ್ಯಾಪಾರದಿಂದಾಗುವ ನಷ್ಟ ಅತ್ಯಲ್ಪ ಎನ್ನುವುದು ಮನದಟ್ಟಾಗುತ್ತದೆ. ಕಾಡಿನ ಕಂಟ್ರಾಕ್ಟರರೊಂದಿಗಿನ ವ್ಯಾಪಾರದಿಂದ ಚೋಳನಾಯ್ಕರು ಟೀ, ತಂಬಾಕು, ಬಟ್ಟೆ ಮುಂತಾದ ವ್ಯಸನಗಳಿಗೆ ಸಿಕ್ಕಿಬಿಟ್ಟಿದ್ದಾರೆ. ಇವುಗಳನ್ನು ಪಡೆಯಲು ಅವರು ಪ್ರಾಣಾಪಾಯ ಲೆಕ್ಕಿಸದೇ ಇಡೀ ಕಾಡು ಅಲೆಯುತ್ತಾರೆ. ಈ ಚಟುವಟಿಕೆಯಿಂದಾಗಿ ಅವರು ತಮ್ಮ ವಿರಾಮವನ್ನು ಕಳೆದುಕೊಂಡಿದ್ದಾರೆ. ಅವರ ಆಹಾರದಲ್ಲಿನ ಪೌಷ್ಟಿಕಾಂಶ ಕಡಿಮೆಯಾಗಿರುವುದಲ್ಲದೆ ಅದಕ್ಕೆ ತಂಬಾಕಿನಂತಹ ವಿಷಸಾಮಗ್ರಿಯೊಂದು ಸೇರಿಬಿಟ್ಟಿದೆ. ಇದು ಸಾಲದು ಎನ್ನುವಂತೆ ಇಬ್ಬರು ಚೋಳನಾಯ್ಕರು ‘ಆಧುನಿಕ ಕೊಡುಗೆ’ಯಾದ ಲೈಂಗಿಕವ್ಯಾಧಿಯಿಂದ ನರಳುತ್ತಿರುವುದು ಇತ್ತೀಚಿಗಿನ ಸ್ಥೂಲ ವೈದ್ಯಕೀಯ ಪರೀಕ್ಷೆಯಿಂದ ತಿಳಿದುಬಂದಿತು. ಬಲವಂತದಿಂದ ಅವರನ್ನು ಆಸ್ಪತ್ರೆಗೆ ಸಾಗಿಸಿದ್ದಾಯಿತು. ಅವರ ಖಾಯಿಲೆ ಗುಣವಾಗಬಹುದೇನೊ; ಆದರೆ ಮತ್ತೆ ಅವರಿಗೆ ಆ ವ್ಯಾಧಿ ತಟ್ಟದಂತೆ ಮಾಡುವುದು ಹೇಗೆ?

ಚೋಳನಾಯ್ಕರು ತಮ್ಮ ಬದುಕಿನ ಕೊನೆಯಂಚಿಗೆ ಬಂದು ನಿಂತಿದ್ದಾರೆ. ಚೋಳನಾಯ್ಕರ ಕ್ಷೇಮಾಭಿವೃದ್ಧಿ ಅಧಿಕಾರಿಗಳು ಅವರ ಬಗ್ಗೆ ತೀವ್ರ ಕಾಳಜಿ ವ್ಯಕ್ತಪಡಿಸುತ್ತಿದ್ದಾರೆ. ಆದರೆ ಇವರ ಕಾಳಜಿ ಸಹ ಅಭಿವೃದ್ಧಿಯ ಏಜೆಂಟರು ಆದಿವಾಸಿಗಳ ಬಳಿಗೆ ಇನ್ನೂ ಸಲೀಸಾಗಿ ಹೋಗಲು ಸಾಧ್ಯವಾಗುವಂತೆ ರಸ್ತೆಗಳನ್ನು ಅಗಲ ಮಾಡಿಬಿಡುತ್ತದೆ. ಇದರಿಂದಾಗಿ ಚೋಳನಾಯ್ಕರ ಮೇಲೆ ಅರ್ಥಿಕಧಾಳಿ ಇನ್ನಷ್ಟು ಹೆಚ್ಚುತ್ತೆ; ಅವರ ಪ್ರದೇಶದಿಂದ ಇನ್ನಷ್ಟು ಸರಕು ಹೊರಗೆ ರಫ್ತಾಗುತ್ತೆ; ಇನ್ನಷ್ಟು ಅಭಿವೃದ್ಧಿಯೋಜನೆಗಳು ಜಾರಿಗೆ ಬರುತ್ತವೆ — ಮೊದಲು ರೋಗ ಬರಿಸಿ ನಂತರ ಗುಣಪಡಿಸು, ಎನ್ನುವಂತೆ. ಚೋಳನಾಯ್ಕರ ಜನಸಂಖ್ಯೆ ಕ್ಷೀಣಿಸುತ್ತಿದೆ. 1875ರ ಜನಗಣತಿಯ ಪ್ರಕಾರ ಕರುಳೈನಲ್ಲಿ ಅವರ ಸಂಖ್ಯೆ 159 1978ರ ಜನಗಣತಿಯ ಪ್ರಕಾರ ಇದೇ ಪ್ರದೇಶದಲ್ಲಿ ಅವರ ಸಂಖ್ಯೆ 111. ಸತ್ತ 48 ಜನರಲ್ಲಿ ಕಾಡಾನೆಗಳ ತುಳಿತಕ್ಕೆ ಸಿಕ್ಕಿ ಸತ್ತವರ ಸಂಖ್ಯೆ 4; ಉಳಿದ 44 ಮಂದಿ ಯಾವುದೋ ಕಾಣದ ಜ್ವರಕ್ಕೆ ತುತ್ತಾದರು.

ಚೋಳನಾಯ್ಕರು ಇಡೀ ಮಾನವ ಜನಾಂಗಕ್ಕೇ ಅಮೂಲ್ಯವಾದ ಆಸ್ತಿ ಎನ್ನುವುದನ್ನು ನಾವು

ಮುನ್ನ ನೋಡಿ

ಯನ್ನೇನೂ ನಿರ್ಣಯಿಸಿಲ್ಲ. ಉದಾಹರಣೆಗೆ ಇವತ್ತಿಗೂ ಕುಟುಂಬ ಸಂತಾನೋತ್ಪತ್ತಿಯ ಹಾಗೂ ಸಾಮಾಜಿಕ ಜೀವನದ ಏಕಾಂಶವಾಗಿ ಉಳಿದುಕೊಂಡಿದೆ. ಆದಿವಿ ಮಾನವನ ತಿಳುವಳಿಕೆಗಿಂತ ಆಧುನಿಕ ಮಾನವನ ತಾಂತ್ರಿಕ ಜ್ಞಾನ ಸಂಕೀರ್ಣವಿರಬಹುದು; ಆದರೆ ಸ್ವಗೋತ್ರ ಸಂಬಂಧದ ಅಥವಾ ವಿವಾಹದ ಬಗೆಗಿನ ನೈತಿಕನಿಯಮ ಗಳಲ್ಲಿ ಗಮನಾರ್ಹ ಬದಲಾವಣೆ ಕಂಡುಬರುವುದಿಲ್ಲ.

ಕಳೆದ ಅರ್ಧಶತಮಾನದ ತಾಂತ್ರಿಕ ಬೆಳವಣಿಗೆ ಮಾನವನಿಗೆ ಅದುವರೆವಿಗೂ ಅವನ ಕೈಗೆಟುಕದೆ ಉಳಿದಿದ್ದ ನೆಲಗಳನ್ನು ಕಬಳಿಸಲು ಅವಕಾಶ ಮಾಡಿಕೊಟ್ಟಿತು. ಇದರಿಂದಾಗಿ ಅಂಥ ಪ್ರದೇಶಗಳ ಸಸ್ಯಗಳ, ಮೃಗಗಳ, ಮೂಲನಿವಾಸಿಗಳ ವರ್ಗಾವಣೆಯಾಗಿದೆ, ಇಲ್ಲವೆ ನಾಶ ಆಗಿದೆ. ಈ ಆಧುನಿಕತೆ ತಲೆಹಾಕುವ ಮೊದಲೇ ದುರ್ಗಮ ಕಾಡುಗಳಲ್ಲಿ, ಮರಳುಗಾಡುಗಳಲ್ಲಿ ಅಲ್ಲಿನ ಮೂಲನಿವಾಸಿಗಳು ಸುಖವಾದ, ಸಂಕೀರ್ಣವಾದ ಜೀವನಕ್ರಮವನ್ನು ರೂಪಿಸಿಕೊಂಡಿದ್ದರು. ಶೋಷಣೆಯನ್ನು ಮೂಲಮಂತ್ರವನ್ನಾಗಿ ಮಾಡಿಕೊಳ್ಳದೆ, ಆಧುನಿಕ ಮಾನವನಂತೆ ಪ್ರಕೃತಿಯನ್ನು ಬಗ್ಗಡಕ್ಕಿಳಿಸದೇ ಈ ಆದಿಜನಾಂಗದವರು ತಮ್ಮ ಮತ್ತು ಇತರ ಜನಾಂಗಗಳ, ಹಾಗೂ ಪ್ರಕೃತಿಯ ನಡುವೆ ಸಾಮರಸ್ಯ ಸ್ಥಾಪಿಸಿದ್ದರು; ಈ ಸಾಮರಸ್ಯವನ್ನು ಉಳಿಸಿಕೊಳ್ಳಲು ಬೇಕಾಗುಷ್ಟು ತಾಂತ್ರಿಕತೆಯನ್ನು ಮಾತ್ರ ಅವರು ಬೆಳೆಸಿಕೊಂಡಿದ್ದರು. ಆದರೆ ಆಧುನಿಕ ಮಾನವ ಪ್ರಗತಿಯ ಹೆಸರಿನಲ್ಲಿ ಈ ಸಾಮರಸ್ಯವನ್ನು ನಾಶಮಾಡಿದ್ದಾನೆ. ಜೀವನ ಮೌಲ್ಯಗಳನ್ನು ನಿರ್ಧರಿಸುವ ಇವನ ವಿಧಾನ ಆದಿಮಾನವನ ಮೌಲ್ಯನಿರ್ಣಯದ ಕ್ರಮದಿಂದ ಬೇರೆಯಾಗಿರುವುದೇ ಇದಕ್ಕೆ ಕಾರಣ. ಪ್ರಕೃತಿಯ ಸಂಪತ್ತನ್ನು ತನ್ನದಾಗಿಸಿಕೊಳ್ಳುವ ಬೇಜವಾಬ್ದಾರಿ ಆತುರದಲ್ಲಿ ಪ್ರಕೃತಿಯ ಕೂಸಾದ ಇಂದಿನ ಮಾನವ ಭೂಮಿಯ ಸಮಸ್ತ ಜೀವರಾಶಿಯನ್ನು ನಿರ್ನಾಮ ಮಾಡಬಲ್ಲ ಮಾರಕಾಸ್ತ್ರಗಳನ್ನು ಹಿಡಿದುಬಿಟ್ಟಿದ್ದಾನೆ. ಇದರ ವಿರುದ್ಧ ಅಲ್ಲೊಂದು ಇಲ್ಲೊಂದು ದನಿ ಎದ್ದರೂ ಗುಂಪಿನಲ್ಲೇ ಅದು ಕರಗಿಹೋಗುತ್ತದೆ.

ನಾಗರಿಕತೆಯ ಈ ಹೊಡೆತವನ್ನು ಕೆಲವು ಜನಾಂಗಗಳು ಆಶ್ಚರ್ಯವೆನಿಸುವ ಹಾಗೆ ತಪ್ಪಿಸಿಕೊಂಡಿವೆ. ಈ ಜನಾಂಗಗಳ ಇಂದಿನ ಸಮಸ್ಯೆ ಪ್ರಕೃತಿ ಅಲ್ಲ; ಆಧುನಿಕತೆಯ ಒತ್ತಡದಿಂದ ಬಚಾವಾಗುವುದು ಹೇಗೆ ಎನ್ನುವುದು. ಇಲ್ಲಿಯವರೆಗೂ ಆಧುನಿಕತೆಯನ್ನು ನಿರಾಕರಿಸಿರುವ ಇವರು ಅಸಾಧಾರಣ ಸಾಮರ್ಥ್ಯಗಳನ್ನು ಹೊಂದಿರಬೇಕು. ಆಧುನಿಕ ಮಾನವ ಇವರ ಚೈತನ್ಯದ ಮೂಲದ ಬಗ್ಗೆ ಕುತೂಹಲಿಯಾಗಿದ್ದಾನೆ, ನಿಜ. ಆದರೆ ಅವನದು ಈ ಜನಾಂಗಗಳ ಬದುಕನ್ನು ಚರಿತ್ರೆಯಲ್ಲಿ ದಾಖಲುಗೊಳಿಸುವ ಮಟ್ಟಿಗೆ ಮಾತ್ರ ಇರಬಹುದಾದ ವಕ್ರಕುತೂಹಲ; ಆ ಕೆಲಸ ಮುಗಿಯುತ್ತಿದ್ದಂತೆ ಅವರನ್ನು ನಾಗರಿಕತೆಯ, ಅಭಿವೃದ್ಧಿಯ ಗಾಳಿಗೆ ಒಡ್ಡಲು ಪ್ರಯತ್ನಿಸುತ್ತಾನೆ. ಈ 'ಹಿಂದುಳಿದವರ' 'ಅಭಿವೃದ್ಧಿ'ಯ ಜವಾಬ್ದಾರಿ ಅವರದ್ದಲ್ಲ, ತನ್ನದು ಎನ್ನುತ್ತಾನೆ. ಎಲ್ಲ ಕಾಲದಲ್ಲೂ ಈ 'ಅಭಿವೃದ್ಧಿ' ಕಾರ್ಯಕ್ರಮಗಳು ಒಂದೇ ಮಾದರಿಯಲ್ಲಿ ನಡೆಯುತ್ತವೆ:

ಪ್ರಕೃತಿಯ ಸಂಪನ್ಮೂಲಗಳನ್ನು ಅರಸುತ್ತಾ ಆಧುನಿಕ ಮಾನವ ಭೂಮಿಯ ಮೂಲೆ ಮೂಲೆಗೆ ಹೋಗುತ್ತಾನೆ; ಎಲ್ಲಾದರೂ ನಿಧಿಯ ಸುಳಿವು ಸಿಕ್ಕಿದ ಕೂಡಲೆ ಮೊದಲು ಸ್ಥಳೀಯರಿಗೆ ತಮ್ಮ ಸಂಪನ್ಮೂಲಗಳ ಮೇಲಿರುವ ಅಧಿಕಾರವನ್ನು ಕಸಿಯುತ್ತಾನೆ; ನಂತರ ತನ್ನ ನಾಗರಿಕತೆಯ ಪಬ್ಬುವಿಕೆಗೆ ಸ್ಥಳೀಯರ ಶ್ರಮದ ಅಗತ್ಯ ಇರುವುದರಿಂದ ಅವರನ್ನು 'ಅಭಿವೃದ್ಧಿ' ಗೊಳಿಸುವ ನೆಪದಲ್ಲಿ ತನ್ನ ಶ್ರೇಣಿಬದ್ಧ ನಾಗರಿಕತೆಯ ಅತ್ಯಂತ ಕೀಳು ವರ್ಗದಲ್ಲಿ ಸೇರಿಸಿಬಿಡುತ್ತಾನೆ. ಪ್ರಗತಿ, ಶೋಷಕ– ಶೋಷಿತ ಸಂಬಂಧ, ಮುಂತಾದ ಮಾನವ– ಪ್ರಕೃತಿಯ ಸಾಮರಸ್ಯ ತಪ್ಪಿಸುವ ತತ್ತ್ವಗಳನ್ನು ಆಧರಿಸಿರುವ ಈ ಪ್ರಗತಿಯ ಕಲ್ಪನೆಯೊಂದಿಗೆ ಕಳೆದ ಶತಮಾನದ ಮಾನವತೆಯ ಸಿದ್ಧಾಂತದಿಂದ ಬಂದಿರುವ 'ಜನಹಿತ' ದ ಕಲ್ಪನೆಯನ್ನೂ ಸಹ ಮಿಲಾಯಿಸಲಾಗಿದೆ.

ಈ 'ಅಭಿವೃದ್ಧಿ'ಯ ಹಿಂದಿರುವ ಕುತಂತ್ರವನ್ನು ಅನೇಕ ಆದಿವಾಸಿಗಳು ಗುರುತಿಸಿದರೂ ಅದನ್ನು ಎದುರಿಸುವ ಬಗೆ ತಿಳಿಯದೆ ಕಕ್ಕಾವಿಕ್ಕಿಯಾಗಿದ್ದಾರೆ. ಅವರನ್ನಾವರಿಸುತ್ತಿರುವ ನಾಗರಿಕತೆ ಅವರ ಜೀವಸತ್ವವನ್ನೇ ನೆಕ್ಕಿಬಿಡುತ್ತಿದೆ. ಇದರಿಂದ ತಪ್ಪಿಸಿಕೊಳ್ಳಲು ಅವರು ತೀರಾ ದುರ್ಗಮವೆನಿಸುವ ಜಾಗಗಳಲ್ಲಿ ತೂರಿಕೊಳ್ಳಲು ಯತ್ನಿಸಿದ್ದಾರೆ. ಆದರೆ ಇದರಿಂದ ಅವರಿಗೆ

ಮುಂದೆ ಈ ಶಕ್ತಿಯನ್ನು ಮಿತಿಗೊಳಿಸಿಕೊಳ್ಳಬೇಕಾಗಿದೆ. ಬಾಹ್ರೋ ಮೂರನೇ ಜಗತ್ತಿನ ದೇಶಗಳ ಬಗ್ಗೆ ಬರೆಯುತ್ತಾನೆ: ಅವು ವಿಷಮ ಬೆಳವಣಿಗೆಯ ಕಂದಕವನ್ನು ಆದಷ್ಟು ಬೇಗ ದಾಟಬೇಕು, ಎಂದು. ಆದರೆ ಬೆಳವಣಿಗೆಯ ಕಂದಕವನ್ನು ಹಾಯುವುದಕ್ಕೆ ಈ ದೇಶಗಳಿಗೆ ಇನ್ನು ಸಾಧ್ಯವಾಗುವುದಿಲ್ಲ ಎನುವುದನ್ನು ಆತ ಗಮನಿಸಿಲ್ಲ. ಈ ದೇಶಗಳು, ಆತ ತನ್ನ ಕಾರ್ಯಕ್ರಮದಲ್ಲಿ ಹೇಳುವ ಉದಾರ ಮತ್ತು ಪ್ರಾಮಾಣಿಕ ಸಹಾಯ ಪಡೆದರೂ ಈ ಕೆಲಸ ಅಸಾಧ್ಯವೇ. ಮೊದಲ ಜಗತ್ತಿನ ದೇಶಗಳೊಡನೆ, 'ಅದೇ ಮಟ್ಟ' ಮತ್ತು 'ಅದೇ ರೀತಿ'ಯ ಬೆಳವಣಿಗೆಗೆ ಹಾತೊರೆದು ಮೂರನೇ ಜಗತ್ತಿನ ರಾಷ್ಟ್ರಗಳು ಏಗಲು ಯತ್ನಿಸುವುದು ಅರ್ಥಹೀನ, ಇನ್ನೊಂದು ಮಾತು: ಬಾಹ್ರೋನ ತರ್ಕ ಹೊರಡಿಸುವ ಅರ್ಥದಂತೆ ಈ ದೇಶಗಳು ಎಂದಿಗೂ ಸಮಸಮಾಜ ಹೊಂದಲಾರವು; ಇದಕ್ಕೆ ಬಾಹ್ರೋನ ಕನಸಿನ ಸಮಾಜದ ಆಧಾರ ಕೈಗಾರಿಕೀಕೃತ ಸಮಾಜವಾಗಿರುವುದೇ ಕಾರಣ.

ಬಾಹ್ರೋನ ಚಿಂತನೆಯ ಕೆಲ ಅಂಶಗಳು ಸಮರ್ಪಕವಲ್ಲ, ನಿಜ. ಚೈನಾ ಖಂಡಿತಾ ಅಂಥ ಹೆಚ್ಚಿನ ಮಟ್ಟದ್ದಲ್ಲದ ಕೈಗಾರಿಕೀಕರಣ ಮತ್ತು ವಿದ್ಯಾಭ್ಯಾಸದ ಆಧಾರದ ಮೇಲೂ ಸಾಮ್ಯವಾದೀ ಸಮಾಜವಾದೀ ಸಮಾಜ ಕಟ್ಟುವುದು ಅಸಾಧ್ಯವಲ್ಲ ಎಂದು ತೋರಿಸುತ್ತಿದೆ. ಆದ್ದರಿಂದ ಬಾಹ್ರೋ ಶ್ರೀಮಂತ ಉತ್ಪನ್ನವನ್ನೆ ಆಧರಿಸಿದ, ಗತಿಸಿಹೋದ ಕಾಲದ ಸಾಂಪ್ರದಾಯಿಕ ಮಾರ್ಕ್ಸಿಸ್ಟ್ ನಾಗಿಯೇ ಉಳಿಯುಕೊಳ್ಳುತ್ತಾನೆ.

ನಮ್ಮ ಈ ಬಾಹ್ರೋ ವಿಮರ್ಶೆಯನ್ನು ಜರ್ಮನ್ ಬರಹಗಾರ ಅಟ್ಟೊ ಉಲ್ರಿಚ್ ಹೇಳಿದ ಮಾತಿನಿಂದ ಮುಗಿಸುವುದು ಸಮರ್ಪಕವೆನಿಸುತ್ತದೆ. ಉಲ್ರಿಚ್ ಹೀಗೆ ಹೇಳುತ್ತಾನೆ:

ಸಮಾಜವಾದ ವ್ಯವಸ್ಥೆ ಜನತೆಯ ಉತ್ಪಾದನಾ ಸಾಮರ್ಥ್ಯದ ಮತ್ತು ಉತ್ಪಾದಕ ಸಾಧನಗಳ ಪ್ರತಿಹಂತದಲ್ಲೂ ಸಾಧ್ಯವಲ್ಲವೇ, ಎಂದು ಮೊದಲು ಕೇಳಿಕೊಂಡ ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟ್ಟದ್ದೆವು. ಆದರೆ ಇನ್ನೂ ಮುಂದೆ ಹೋಗಿ ಬಹು ಮುಖ್ಯವಾದ ಒಂದು ತಿದ್ದುಪಡಿಯನ್ನು ಈ 'ಹೌದು'ಗೆ ಸೇರಿಸಬೇಕಾಗಿದೆ. ಸಾಂಪ್ರದಾಯಿಕ ಮಾರ್ಕ್ಸಿಸ್ಟ್ ಅಭಿಪ್ರಾಯಕ್ಕೆ ನಮ್ಮ ಈ ತಿದ್ದುಪಡಿ ಸಂಪೂರ್ಣ ವಿರೋಧವಾದದ್ದು: ಉತ್ಪಾದನಾಶಕ್ತಿ ಎಷ್ಟೇ ಕೆಳ ಹಂತದಲ್ಲಿದ್ದಾಗಲೂ ಸಮಾಜವಾದಿ ವ್ಯವಸ್ಥೆಯ ನಿರ್ಮಾಣಸಾಧ್ಯ; ಆದರೆ ಅದು ತೀರಾ ಮೇಲಿನ ಮಟ್ಟದವರೆಗೆ ಬೆಳೆದು ಬಿಟ್ಟ ಕಡೆಗಳಲ್ಲಿ ಸಮಾಜವಾದೀ ವ್ಯವಸ್ಥೆ ಅಸಾಧ್ಯವೆಂದೇ ಹೇಳಬೇಕು. ಉದಾಹರಣೆಗೆ ಇವತ್ತು ಪೂರ್ವ ಮತ್ತು ಪಶ್ಚಿಮ ಜರ್ಮನಿಗಳಲ್ಲಿ ಬೆಳೆದ ಟೆಕ್ನಾಲಜಿಯಿಂದಾಗಿ ಯಾವ ಮಟ್ಟದ ಯಂತ್ರೀಕರಣ ನಡೆದಿದೆ ಎಂದರೆ, ಮನುಷ್ಯ ಮನುಷ್ಯರ ನಡುವಿನ ಸಂಬಂಧವನ್ನು ಸಮಾಜವಾದೀ ವ್ಯವಸ್ಥೆಯ ಆಧಾರದ ಮೇಲೆ ಕಟ್ಟುವುದು ಅಸಾಧ್ಯ, ಎನ್ನಿಸುವಷ್ಟು.

ಕೃಪೆ: Economic and Political Weekly (Vol XV, No. 40, Oct. 4, 1980) ಯಲ್ಲಿ ಬಂದ ಸರಲ್ ಸರ್ಕಾರರ ಲೇಖನ: Alternative in East Europe

(ಸಂಗ್ರಹಾನುವಾದ : ಎ. ಪುರುಷೋತ್ತಮ)

ಪುಟ್ಟ ಮಾನವನ ಅದ್ಭುತ ಚೈತನ್ಯ

ಬೇಟೆಯಾಡಿ, ಅಥವಾ ಆಹಾರವನ್ನು ಆರಿಸಿಕೊಂಡು ಬದುಕುವುದು ಪ್ರಕೃತಿಯೊಂದಿಗೆ ಮಾನವನು ಮಾಡಿಕೊಂಡ ಮೊದಲ ಸಂಧಾನ. ಇದು ಎಷ್ಟು ಯಶಸ್ವಿಯಾಯಿತೆಂದರೆ ಅವನು ಬಹಳ ಕಾಲ ಆಹಾರವನ್ನು ಆಯ್ದುಕೊಂಡೇ ಬದುಕಿದ. ಆದರೆ ಈ ದಿನ ಹೀಗೆ ಬದುಕುವ ಜನಾಂಗಗಳು ಪ್ರಪಂಚದಲ್ಲಿ ಅತಿ ವಿರಳ.

ಮಾನವನು ವ್ಯವಸಾಯ ಮತ್ತು ಜಾನುವಾರು ಸಾಕಣೆಯನ್ನು ಕಲಿತಂದಿನಿಂದ ಶೀಘ್ರಗತಿಯಲ್ಲಿ ಅವನ ತಾಂತ್ರಿಕಜ್ಞಾನದ ಬೆಳವಣಿಗೆಯಾಯಿತು. ಆದರೆ ಅವನ ತಾಂತ್ರಿಕ ಕುಶಲತೆಯ ಪ್ರಗತಿ ಅವನ ಸಮಾಜದ ರಚನೆ

ಸಮಗ್ರ ಬೆಳವಣಿಗೆ ಕಡೆ ಗಮನ ನೀಡ ಬೇಕಾಗುತ್ತದೆ. ಬಳಕೆ ವಸ್ತುಗಳ ಅಗತ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುವುದರ ಬಗ್ಗೆ ಬಾಹ್ರೋ ಹೀಗೆ ಹೇಳುತ್ತಾನೆ:

> ಪದಾರ್ಥಗಳ ಬಗ್ಗೆ ನಮ್ಮ ತೀರದ ಆಸೆ ನಮ್ಮ ಮುಂದಿನ ಬೆಳವಣಿಗೆಯನ್ನು ತಡೆಹಿಡಿಯುತ್ತವೆ. ಈ ಆಸೆ ಚಟವಾಗಿ ಮನಸ್ಸು ಕೆಲವು ಚಾಡುಗಳಿಗೆ ಸಿಕ್ಕಿಹಾಕಿಕೊಳ್ಳುತ್ತದೆ.
>
> ಆದರೂ ವ್ಯಕ್ತಿಗಳು ಈಗಿರುವ ನಾಗರಿಕತೆಯಿಂದ ಬೇಸತ್ತಿದ್ದಾರೆ ಈ ಅತೃಪ್ತಿ ಬೆಳೆಯುತ್ತಲೇ ಇದೆ. ಭೂಮಿಯ ಸಂಪತ್ತಿನ ಮಿತಿಯಿಂದಾಗಿ ನಾವು ನಮ್ಮ ಬಯಕೆಗಳನ್ನು ಕಡಿಮೆ ಮಾಡಿಕೊಳ್ಳಬೇಕಾದ ಅಗತ್ಯ ಬೀಳದಿದ್ದರೂ ಕೂಡ ಈ ಜೀವನ ಕ್ರಮದಿಂದಲೇ ಹುಟ್ಟಿರುವ ಬೇಸರದಿಂದ ಈ ನಾಗರಿಕತೆಯನ್ನು ವಿರೋಧಿಸುವ ಒಂದು ಅಂಶ ಮನುಷ್ಯನಲ್ಲಿ ಬೆಳೆಯುತ್ತಿದೆ. ಆದ್ದರಿಂದ ಮುಂದುವರಿದ ದೇಶದ ಜನರ ಬಯಕೆಗಳ ವಿಸ್ತರಣೆಯಾಗಬೇಕಾಗಿಲ್ಲ: ಅವರಿಗೆ ತಮ್ಮತನದ ಅನುಭವ ಬೇಕಾಗಿದೆ; ವೈಯಕ್ತಿಕವಾದ ಕ್ರಿಯಾಶೀಲತೆ ಬೇಕಾಗಿದೆ; ಮನುಷ್ಯಸಂಬಂಧಗಳ ಸುಖ ಬೇಕಾಗಿದೆ. ಒಟ್ಟಿನಲ್ಲಿ ಮೂರ್ತಜೀವನದ ಅನುಭವ ಬೇಕಾಗಿದೆ.

ದೊಡ್ಡ ಕುಟುಂಬಗಳು, ಹಲವಾರು ಜನ ಮತ್ತು ಅವರ ಮಕ್ಕಳು ಒಟ್ಟಿಗೇ ಇರುವಂಥ ಕಮ್ಯೂನ್ ನಂತಹ ಮನೆಗಳು, ಹೊಸಶಿಕ್ಷಣದ ವ್ಯವಸ್ಥೆ– ಇವು ಹೊಸ ವಿಧದ ಸಮುದಾಯೀಕರಣದ ರೇಖಾಚಿತ್ರ. ನಿಸರ್ಗ ಮತ್ತು ಉತ್ಪಾದನೆಯ ನಡುವೆ ಸಾಮರಸ್ಯ; ನಿಸರ್ಗದ ಶೋಷಣೆಯ ಬದಲಿಗೆ ಉತ್ಪಾದನೆಯನ್ನು ನಿಸರ್ಗ ಚಕ್ರಕ್ಕೆ ಹೊಂದಿಸುವುದು – ಈ ಮೂಲಕ ವಿಸ್ತೃತ ಪುನರುತ್ಪಾದನೆಯ ಬದಲಿಗೆ, ಸರಳ ಪುನರುತ್ಪಾದನೆಯನ್ನು ಸ್ಥಾಪಿಸಬೇಕು. ಇಂಥದೊಂದು ಅರ್ಥನೀತಿ, ಅಗತ್ಯಶ್ರಮಸಮಯವನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಿ-ಮಾರ್ಕ್ಸ್ ಹೇಳಿದಹಾಗೆ – ಎಲ್ಲರ ಸಮಯವನ್ನು ಅವರ ಸ್ವಯಂವೃದ್ಧಿಗೆ ಉಳಿಸಬಲ್ಲುದು. ಮನರಂಜನೆ, ವಿಶ್ರಾಂತಿ ಮುಂತಾದ ಸಮಯ ಕಳೆಯುವ ವಿಧಾನವೆಲ್ಲ ಈಗ ವ್ಯಾಪಾರೀಕೃತವಾಗಿವೆ. ಇವನ್ನು ಜನರಿಗೆ ಸಿದ್ಧ ವಸ್ತುವನ್ನು ಹಂಚುವಂತೆ ಹಂಚಲಾಗುತ್ತಿದೆ. ಆದ್ದರಿಂದ ಮನರಂಜನೆ ಅಥವಾ ವಿಶ್ರಾಂತಿ, ಮನುಷ್ಯನ ಶ್ರಮಶಕ್ತಿಯನ್ನು ಮುಂದಿನ ಪುನರುತ್ಪಾದನಾ ವೃತ್ತಕ್ಕಾಗಿ ಪುನರುತ್ಪಾದಿಸುವುದಕ್ಕಿಂತ ಬೇರೆ ಯಾವ ಉದ್ದೇಶವನ್ನು ಈಗ ಹೊಂದಿಲ್ಲವೆನ್ನಬಹುದು.

ಬಾಹ್ರೋ 'ಅಗತ್ಯಶ್ರಮ ಮತ್ತು ಸ್ವತಂತ್ರ ಚಟುವಟಿಕೆಗಳ ನಡುವಿನ ಭೇದವನ್ನು ಅಳಿಸಲಾಗದಿದ್ದರೂ ಕನಿಷ್ಠಗೊಳಿಸಬೇಕು' ಎಂದು ಭಾವಿಸುತ್ತಾನೆ. 'ಅಗತ್ಯ ಶ್ರಮದ ಚೌಕಟ್ಟಿನಲ್ಲಿ ಮಾನಸಿಕವಾಗಿ ಲಾಭದಾಯಕವಲ್ಲದ ದುಡಿಮೆ ಶ್ರಮವನ್ನು ಇಳಿಸುವುದ ಅಗತ್ಯ' ಎಂಬ ವಿಚಾರವನ್ನು ಅವನು ಮಂಡಿಸುತ್ತಾನೆ ಇದು ಸಾಧ್ಯವಾಗುವುದು ಸಮಯವನ್ನು ಕುರಿತ ಹೊಸ ಆರ್ಥಿಕ ತತ್ವದಿಂದ. ಇಂಥ ಆರ್ಥಿಕ ತತ್ವವನ್ನು ಅರ್ಥಶಾಸ್ತ್ರಜ್ಞರು ಇಲ್ಲಿಯವರೆಗೆ ಪರಿಗಣಿಸದೆ ಇದ್ದುದರಿಂದಲೇ ಆರ್ಥಿಕ ವಿಷಯಗಳಲ್ಲಿ ಜನತಂತ್ರದ ವಿಧಾನದಿಂದ ನಿರ್ಣಯಗಳನ್ನು ಮಾಡಲು ಸಾಧ್ಯವಾಗದೆ ಇರುವುದು. ಬಂಡವಾಳಶಾಹಿಯನ್ನು ಅಳಿಸಬೇಕಾಗಿರುವುದು, ಅದು ಉತ್ಪಾದನಾಶಕ್ತಿಗಳನ್ನು ಕುಗ್ಗಿಸುತ್ತಿದೆ ಎಂಬ ಕಾರಣಕ್ಕಾಗಲ್ಲ; ಬದಲಿಗೆ ಅದು ಉತ್ಪಾದನಾ ಶಕ್ತಿಗಳನ್ನು ಎಷ್ಟು ಬೆಳೆಸಿಬಿಟ್ಟಿದೆ ಎಂದರೆ, ಈಗ ಅದನ್ನು ನಿರ್ನಾಮಗೊಳಿಸದಿದ್ದಲ್ಲಿ ಅದು ಇಡೀ ವಿಶ್ವವನ್ನೇ ನಾಶಮಾಡುತ್ತದೆ ಎಂಬುದಕ್ಕಾಗಿ.

ಬಾಹ್ರೋನ ವಿಶ್ಲೇಷಣೆ, ಕೈಗಾರಿಕೀಕರಣಗೊಂಡ ದೇಶಗಳು ಮತ್ತು ಮೂರನೇ ಜಗತ್ತಿನ ನಡುವಿನ ಸಂಬಂಧವನ್ನು ಗುರುತಿಸಿಲ್ಲ. ಬೆಳೆದ ದೇಶಗಳ ಸಂಪದಭಿವೃದ್ಧಿಗೆ, ಬೆಳೆಯದ ದೇಶಗಳ ಅಗ್ಗದ ಶ್ರಮ ಮತ್ತು ನಿಸರ್ಗದ ಶೋಷಣೆಯೇ ಆಧಾರ. ಅತ ತನ್ನ ಕಾರ್ಯಕ್ರಮಗಳಲ್ಲಿ ಶೂನ್ಯ ಬೆಳವಣಿಗೆಯ ವಕಾಲತ್ತು ವಹಿಸುತ್ತಾನೆ. ಆದರೂ ಕೆಳಗಿರುವ ದೇಶಗಳು ಮೇಲಿರುವ ದೇಶಗಳಲ್ಲಿನ ಜನರ ಬಳಕೆಯ ಪ್ರಮಾಣ ಮುಟ್ಟುವವರೆಗೂ ಈಗಿನ ಬೆಳವಣಿಗೆಯ ಪ್ರಕ್ರಿಯೆಯನ್ನು ನಿಲ್ಲಿಸಲು ಹೇಳುವುದಿಲ್ಲ. ಆತನ ಕಲ್ಪನೆಯಲ್ಲಿ ಸಮಾಜಕ್ಕೆ ಈಗ ಕೈಗಾರಿಕಾ ಸಮಾಜಗಳಲ್ಲಿರುವ ಮೇಲಿನಸ್ತರದ ಬೆಳವಣಿಗೆ ಆಧಾರ. ಮೂರನೇ ಜಗತ್ತಿನ ಶೋಷಣೆಯನ್ನು ಮುಂದುವರಿಸದೇ ಈ ಬೆಳವಣಿಗೆ ಸಾಧ್ಯವಿಲ್ಲ ಎನ್ನುವುದು ಅವನ ಗಮನಕ್ಕೆ ಬಂದಿಲ್ಲ. ಬಳಕೆಯನ್ನು ಕಡಿಮೆ ಮಾಡದೇ ಕೆಲಸದ ದಿನಗಳನ್ನು ಕಡಿಮೆ ಮಾಡುವುದು ಅಸಾಧ್ಯ. ಯಾಕೆಂದರೆ, ನಾವು ಈಗ 'ಪಳೆಯುಳಿಕೆ ಇಂಧನ' ಬಳಸುತ್ತಿದ್ದೇವೆ. ಇನ್ನು

ಮನಗಾಣಬೇಕು. ನಮ್ಮ ಜೀವನಕ್ರಮವನ್ನು ಅವರ ಮೇಲೆ ಹೇರುವ ಉದ್ದೇಶವಾಗಲಿ, ಅವರ ಜೀವನಕ್ರಮದಿಂದ ನಾವು ಕಲಿಯಬೇಕಾದ್ದಿಲ್ಲ ಎನ್ನುವ ಧೋರಣೆಯಾಗಲಿ, ಧಿಮಾಕಿನ ವಿಷಯವಾಗುತ್ತದೆ. ಅವರ ಸ್ವಂತಜೀವನಕ್ರಮದಿಂದ ಆದಿವಾಸಿಗಳನ್ನು ಭ್ರಷ್ಟರನ್ನಾಗಿ ಮಾಡುವುದನ್ನು ಡಾ|| ಸಿನ್ಹಾರವರು "ಎರಡನೆಯ ಅಸಂಸ್ಕೃತೀಕರಣ" ಎಂದು ಕರೆಯುತ್ತಾರೆ. ಕೇವಲ ಆಹಾರವನ್ನು ಆಯ್ದು ಬದುಕುವವರು ತಮ್ಮ ಜೀವನಕ್ರಮವನ್ನು ಬಿಡಬೇಕಾಗಿ ಬಂದಾಗ ಅತ್ಯಂತ ಶೋಚನೀಯ ಸ್ಥಿತಿಗಿಳಿದುಬಿಡುತ್ತಾರೆ. ಬಿರ್ಹೋರ್ ಮತ್ತು ಜೇನುಕುರುಬ ಜನಾಂಗದವರು ಇದಕ್ಕೆ ಉದಾಹರಣೆಗಳು. ಜಬಲ್ಪುರ್ ಬಳಿ ಸೈನಿಕ ತರಬೇತಿಯವರು ಸ್ಫೋಟಿಸುವ ಬಾಂಬು ಮತ್ತು ಗುಂಡಿನ ಹೊರಕವಚಗಳನ್ನು ಆರಿಸಲು ಹೋಗುತ್ತಾರೆ. ಅವರು ಈ ಅಪಾಯಕಾರಿ ಕೆಲಸ ಮಾಡುವುದು ಕಂಟ್ರಾಕ್ಟರುಗಳಿಗಾಗಿ. ಹೀಗೆ ಅವರು 2–3 ರೂಪಾಯಿಗಳ ದಿನಗೂಲಿಗಾಗಿ ಸಾವನ್ನು ತಮ್ಮ ಮೇಲೆ ಎಳೆಕೊಳ್ಳಲು ತಯಾರಾಗಿಬಿಡುತ್ತಾರೆ. ಎರಡು ವರ್ಷಗಳ ಹಿಂದೆ ಆದಿವಾಸಿ ಸಲಹಾಮಂಡಳಿಯ ಸುಕುಮಾರ್ ಪಗವೆ ಅವರು ಮಧ್ಯಪ್ರದೇಶ ಸರಕಾರಕ್ಕೆ ಸಲ್ಲಿಸಿದ ವರದಿಯ ಪ್ರಕಾರ ಹೋಷಂಗಾಬಾದ್ ಜಿಲ್ಲೆಯೊಂದರಲ್ಲೇ 80 ಜನ ಆದಿವಾಸಿಗಳು ಸತ್ತಿದ್ದಾರೆ. ಯದ್ವಾತದ್ವಾ ಅರಣ್ಯನಾಶದಿಂದಾಗಿ ಈ ಆದಿನಿವಾಸಿಗಳ ಆಹಾರ ಸಂಗ್ರಹ ಕ್ರಮ ಬುಡಮೇಲಾದುದರಿಂದಲೇ ಹೀಗೆ ಅವರು ಶೆಲ್‌ಗಳನ್ನು ಆರಿಸಲು ಬಂದು ಸಾಯುತ್ತಾರೆ ಎಂದೂ ಪಗವೆಯವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ಆದ್ದರಿಂದ, ಆದಿವಾಸಿಗಳ ಈ ತರಹದ ಸುಧಾರಣೆ ಅಮಾನುಷವೂ ವಿನಾಶಕಾರಿಯೂ ಆಗಿಬಿಡುತ್ತವೆ. ಅಷ್ಟೇ ಅಲ್ಲ; ಅವರಿಂದ ನಾವು ನಮ್ಮದಕ್ಕಿಂದ ಭಿನ್ನವಾದ, ಯಶಸ್ವೀ ಜೀವನಕ್ರಮವನ್ನು ಕಲಿಯಬಹುದಾದ ಅವಕಾಶ ಸಹ ಕಳೆದುಕೊಂಡಂತೆ ಆಗಿಬಿಡುತ್ತದೆ. ಆಧುನಿಕ ನಾಗರಿಕತೆಯ ವೈಫಲ್ಯದತ್ತ ಆಗಾಗ ನಮ್ಮ ಗಮನ ಹೋದಾಗ ನಾವು ಪ್ರವಾದಿಪುರುಷನಿಗಾಗಿಯೋ, ಎಂಥೆಂಥದೊ "ಉವಾಚ" ಗಳಿಗಾಗಿಯೋ, ಸಿದ್ಧ ಯೋಜನೆಗಳಿಗಾಗಿಯೋ ಕಣ್ಣು ಹಾಯಿಸುತ್ತೇವೆ. ಮಾತಾಡುವ ಕಲೆಯನ್ನು ರೂಢಿಸಿಕೊಳ್ಳಲು ಜರ್ಮನ್ನರು ತಿಂಗಳಿಗೊಂದು ದಿನ ಟಿ.ವಿ. ಬಂದ್ ಮಾಡುವ ಯೋಜನೆಯಾಗಲಿ, ಪ್ರಕೃತಿಯ ಸಾನ್ನಿಧ್ಯಕ್ಕಾಗಿ ಸಮುದ್ರತೀರಕ್ಕೆ ಅಥವ ಗಿರಿಧಾಮಗಳಿಗೆ ನಾವು ಧಾವಿಸುವ ಯೋಜನೆಗಳಾಗಲಿ ಅತೃಪ್ತಿಕರವಾದವು ಎಂದು ನಮಗೆ ತಿಳಿದಿದ್ದರೂ, ಪ್ರಕೃತಿಯೊಂದಿಗೆ ಅರ್ಥಪೂರ್ಣ ಹಾಗೂ ಸಾಮರಸ್ಯದ ಬದುಕು ಬದುಕುತ್ತಿರುವ ಆದಿವಾಸಿಗಳನ್ನು ಸಹಿಸಲು ನಾವು ತಯಾರಿಲ್ಲ!

ವೈಜ್ಞಾನಿಕವಾಗಿ, ನೈತಿಕವಾಗಿ, ಸೌಂದರ್ಯ ಪ್ರಜ್ಞೆಯ ದೃಷ್ಟಿಯಿಂದ ಮತ್ತು ಭಾವನಾತ್ಮಕ ದೃಷ್ಟಿಯಿಂದ ಸಹ, ಈ ಆದಿಜನಾಂಗಗಳು ನಮಗೆ ಅಮೂಲ್ಯವಾದ ಆಸ್ತಿ. ಆದರೆ ಕೆಲವು ಆದಿವಾಸಿ ಪಂಗಡಗಳು ಈಗಾಗಲೆ ನಾಶಹೊಂದಿದ್ದು ಇನ್ನೂ ಕೆಲವು ಪತನದ ಹಾದಿಯಲ್ಲಿವೆ. 50,000 ವರ್ಷಗಳ ಹಿಂದೆ ಮಾನವ ಯಾವ ಜೀವನಕ್ರಮವನ್ನು ರೂಪಿಸಿಕೊಂಡಿದ್ದನೋ, ಅದನ್ನೇ ಅನುಸರಿಸಿ ಬದುಕುತ್ತಿರುವಂತಹ ಜನಾಂಗಗಳು ಭಾರತದಲ್ಲಿ ಕೇವಲ ಎರಡಿವೆ. ಅಂಡಮಾನ್ ದ್ವೀಪಗಳ ಜರವ ಮತ್ತು ಸೆಂಟಿನೆಲಿಸ ಜನಾಂಗಗಳೇ ಇವು. ಜರವರು ತಮ್ಮ ದ್ವೀಪದಲ್ಲಿ ಇತರೇ ಜನಾಂಗದವರು ಬಾಳಲು ತಡೆಯೇನೂ ಒಡ್ಡಿಲ್ಲ. ಆದರೆ ಸೆಂಟಿನೆಲಿಸರು ತಮ್ಮ ದ್ವೀಪದಲ್ಲಿ ಇತರರನ್ನು ಸಹಿಸರು. ಈಗ ಸಿಕ್ಕಿರುವ ಮಾಹಿತಿಯ ಪ್ರಕಾರ, ದೃಢದೇಹದ, ಚಿಮ್ಮುವ ಮೈಕಾಂತಿಯ ಸೆಂಟಿನೆಲಿಸರು ಗಿಡ್ಡಾಗಿದ್ದರೂ ಸುಂದರರಾಗಿದ್ದಾರೆ. ಇವರ ಹೆಣ್ಣುಗಳೂ ಒಳ್ಳೆಯ ಅಂಗಸೌಷ್ಟವ ಹೊಂದಿದ್ದಾರೆ. ಈ ಎರಡೂ ಅಂಡಮಾನೀ ಜನಾಂಗದವರು ತಮ್ಮ ದ್ವೀಪಗಳಲ್ಲಿ ನೆಲಸಬಯಸುವ ಇತರ ಜನಾಂಗಗಳ ಮೇಲೆ ಹಗೆತನ ರೂಢಿಸಿಕೊಂಡಿದ್ದಾರೆ. ಈ ಜನಾಂಗಗಳ, ಮತ್ತು ಹಿಂದಿದ್ದ ಭಾರತದ ಭೂಭಾಗದ ಜನಾಂಗಗಳ ಬಗ್ಗೆ ಇರುವ ಚಾರಿತ್ರಿಕ ಮಾಹಿತಿಯನ್ನು ಅಧ್ಯಯಿಸಿದರೆ ಒಂದು ಅಂಶ ಎದ್ದುಕಾಣುತ್ತದೆ: ಅಂಡಮಾನೀ ಆದಿವಾಸಿಗಳ ಪ್ರತಿಕೂಲ ನಿಲುವೇ ಅವರ ಬದುಕಿನ ಕ್ರಮವನ್ನು ಉಳಿಸಿಕೊಳ್ಳಲು ಸಾಧ್ಯಮಾಡಿಕೊಟ್ಟಿರುವುದು; ಉಳಿದ ಜನಾಂಗಗಳು ಆಧುನಿಕತೆಯ ಒತ್ತಡಕ್ಕೆ ಸಿಕ್ಕಿ ನಿರ್ನಾಮವಾಗಿವೆ.

ಕ್ಷೇಮ, ಅಭಿವೃದ್ಧಿಯ ಬಗ್ಗೆ ಮಾತಾಡುವ ದೇಶದಲ್ಲಿ ಇಂಥ ಪರಿಸ್ಥಿತಿ ಇರುವುದು ವಿಷಾದಕರ. ಸಿನ್ಹಾರವರು

ಈ ಸ್ಥಿತಿ ಬಗ್ಗೆ ಪ್ರತಿಕ್ರಿಯಿಸುತ್ತಾ "ಒಂದು ದೇಶದ ನಾಗರಿಕತೆಯ ಗುಣವನ್ನು ನಿರ್ಧರಿಸುವುದು ಅದು ತನ್ನ ಅತ್ಯಂತ ದುರ್ಬಲ ವರ್ಗಕ್ಕೆ ತೋರಿಸುವ ನಡವಳಿಕೆಯಿಂದಷ್ಟೇ ಹೊರತು, ಬಲಾಢ್ಯ, ಬಹುಸಂಖ್ಯಾತ ವರ್ಗಕ್ಕೆ ನೀಡುವ ಸೌಲಭ್ಯದಿಂದಲ್ಲ." ಎಂದು ಹೇಳಿದ್ದು ಎಷ್ಟು ಸಮಂಜಸವಾಗಿದೆ!

ಸೆಂಟಿನಲಿಸರೇನೊ ತಮ್ಮ ದ್ವೀಪದಲ್ಲಿ ಉಳಿದವರಿಗೆ ಪ್ರವೇಶ ಮಾಡಲು ಬಿಟ್ಟಿಲ್ಲ. ಆದ್ದರಿಂದ ಅವರಿಗಿರುವ ಪ್ರತಿರೋಧ ಕಡಿಮೆ ಎಂದೇ ಹೇಳಬಹುದು. ಆದರೆ ಅಂಡಮಾನಿನ ಪಶ್ಚಿಮ ಮತ್ತು ಮಧ್ಯ ಭಾಗದಲ್ಲಿರುವ ಜರವರ ಸ್ಥಿತಿ ಡೋಲಾಯಮಾನವಾದದ್ದು. ಸುಮಾರು 309 ಚ. ಮೈಲಿ ಪ್ರದೇಶವನ್ನು ಜರವಾ ಜನಕ್ಕಾಗಿ ಮೀಸಲಿಟ್ಟಿದೆ ಎಂತ ಘೋಷಿಸಲ್ಪಟ್ಟಿದ್ದರೂ ಜರವರೊಂದಿಗೆ ಅನ್ಯರ ಕಲಹಗಳು ನಡೆಯುವ ವರದಿಗಳು ಬರುತ್ತಿರುತ್ತವೆ. ಜರವರಿಗೆ ಹಾನಿಕರವಾದ ಇಂಥ ಎಷ್ಟು ಘಟನೆಗಳು ವರದಿಯಾಗದೆ ಇವೆಯೋ!

ಈಚೆಗೆ ಜರವರೊಂದಿಗೆ ಸ್ನೇಹಸಂಬಂಧವನ್ನು ಬೆಳೆಸಲು ತೀವ್ರ ಪ್ರಯತ್ನಗಳು ನಡೆಯುತ್ತಿವೆ. ಇಂಥ ಪ್ರಯತ್ನಗಳ ಪ್ರಾಮಾಣಿಕತೆ ಭ್ರಾಮಕವಾದದ್ದು. ಇವುಗಳ ಹಿಂದೆ ಅಡಗಿರುವ ಸ್ಥಾಪಿತ ಹಿತಾಸಕ್ತಿಗಳನ್ನು ಅಲ್ಲಗಳೆಯುವಂತಿಲ್ಲ. ಅಂಡಮಾನಿನಲ್ಲಿ ಸಾಮಾನು ಸಾಗಣೆಗೆ ಅನುಕೂಲವಾಗುವಂತೆ ಸಾರಿಗೆ ಸಂಪರ್ಕವ್ಯವಸ್ಥೆಯನ್ನು ಉತ್ತಮ ಪಡಿಸಲು ಒತ್ತಾಯ ನಡೆದಿದೆ. ಜರವರೊಂದಿಗೆ ಸ್ನೇಹ ಬೆಳೆಸುವ ಉದ್ದೇಶ ನೈಜವಾದರೂ, ಅದರಿಂದ ಜರವರಿಗೆ ಲಾಭವಾಗಲಾರದು. 'ಇಪಿ' ಜನಾಂಗ ಕಣ್ಮರೆಯಾದಾಗ ಇಡೀ ಜಗತ್ತು ಪೇಚಾಡಿದ ಹಾಗೆ ಜರವರನ್ನು ಕಳೆದುಕೊಂಡು ನಾವು ಪರಿತಪಿಸುವುದು ಬೇಡ. ಎಂಥಾ ಒಳ್ಳೆಯ ಮ್ಯೂಜಿಯಂ ಕೂಡ ಒಂದು ಜೀವಂತ ಸಂಸ್ಕೃತಿಯನ್ನು ಹಿಡಿಯುವಷ್ಟು ಶಕ್ತವಾಗಿಲ್ಲ. ಜರವರೇ ಸಾಕ್ಷಾತ್ತಾಗಿ ಪ್ರಪಂಚದಲ್ಲಿರುವಾಗ ಅವರ ಮ್ಯೂಜಿಯಂಗಾಗಿ ನಾವು ಹಂಬಲಿಸುವುದು ಸರಿಯಲ್ಲ. ಜರವರಿಂದ ಬಿಲ್ಲುಬಾಣ ಮುಂತಾದವುಗಳನ್ನು ಸಂಗ್ರಹಿಸ ಹೋಗುವವರು ಜರವರಲ್ಲಿ ಎಷ್ಟರ ಮಟ್ಟಿಗೆ, ಅವರಿಗೆ ನಷ್ಟಮಾಡಿ, ಹಗೆತನದ ಹೊಗೆ ಹಾಕಿ ಬಂದಿದ್ದಾರೆ ಎಂದು ಮನ್‌ರವರು ತಿಳಿಸಿದ್ದಾರೆ. ಇವೆಲ್ಲ ನಿಂತು ಹೋಗಬೇಕು. ಜರವರೊಂದಿಗೆ 'ಸ್ನೇಹ' ಬೆಳೆಸುವ ಪ್ರಯತ್ನಗಳು ಸಹ ನಿಲ್ಲಬೇಕು— ಅವರಿಗಾಗಿ ಇನ್ನಷ್ಟು ಭೂಮಿಯನ್ನು ಮೀಸಲಾಗಿಟ್ಟರೂ ಪರವಾಗಿಲ್ಲ. ಆಧುನಿಕ ತಾಂತ್ರಿಕಜ್ಞಾನದಿಂದ ಜರವರ ಮಧ್ಯೆ ಪ್ರವೇಶಿಸದೆಯೇ, ಅವರ ಅಗತ್ಯಗಳನ್ನು ಅಭ್ಯಸಿಸಬಹುದು. ಅವರಿಂದ ಬಲಿದಾನ ತೆಗೆದುಕೊಳ್ಳದೆಯೇ ಅವರ ಅಗತ್ಯಗಳನ್ನು ಪೂರೈಸಿದಲ್ಲಿ ಮಾನವ ಜನಾಂಗವೇನೂ ಬಡವಾಗುವುದಿಲ್ಲ. ಅಂಡಮಾನಿನ ಪುಟ್ಟ ಮಾನವರು ಅದ್ಭುತ ಆತ್ಮವಿಶ್ವಾಸ, ಜೀವನೋತ್ಸಾಹ ತೋರಿಸಿದ್ದಾರೆ. ಅವರನ್ನು ನಾಶಮಾಡುವುದು ಬೇಡ. ಬೇರೆ ಯಾವ ಕಾರಣಕ್ಕಲ್ಲದಿದ್ದರೂ ಒಂದು ಜೀವಂತ ಸಂಸ್ಕೃತಿಯನ್ನು ದಕ್ಕಿಸಿಕೊಳ್ಳುವುದಕ್ಕಾಗಿಯಾದರೂ ಅವರನ್ನು ನಾಶಮಾಡುವುದು ಬೇಡ.

ಕೃಪೆ: ಪಿ. ಕೆ. ಮಿಶ್ರ 'Man in India' Vol. 58, No. 3, July - Sept. 1978

[ಸಂಗ್ರಹಾನುವಾದ : ಪಿ.ಕೆ.ಸುರೇಶ್]

ಸಿಮೋನ್ ವೇಲ್ : ನಿಯತಿ ಮತ್ತು ಒಳಿತು

[ಇಲ್ಲಿರುವ ಕೆಲವು ಮಾತುಗಳು ಸಿಮೋನ್ ವೇಲ್ ಬರಹಗಳ ಒಂದು ಸಂಗ್ರಹವಾದ Gateway to God ನಿಂದ ಆಯ್ದವು. ಇವಳ ಉಳಿದ ಮುಖ್ಯ ಪುಸ್ತಕಗಳಲ್ಲಿ ಕೆಲವು: Waiting on God, The Need for Roots, First and Last Note books. ಸಿಮೋನ್ ವೇಲ್ ಪ್ಯಾರಿಸ್‌ನಲ್ಲಿ 1909 ರಲ್ಲಿ ಹುಟ್ಟಿದಳು. 1931 ರಲ್ಲಿ ತತ್ತ್ವಶಾಸ್ತ್ರದ ಅಧ್ಯಾಪಕಿಯಾದಳು. ಅಧ್ಯಾಪಕ ವೃತ್ತಿಯ ನಡುವೆ ರೆನಾಲ್ಟ್ ಕಾರ್ ಫ್ಯಾಕ್ಟರಿಯಲ್ಲೂ, ದ್ರಾಕ್ಷಿತೋಟಗಳಲ್ಲೂ

ದೈಹಿಕ ದುಡಿಮೆ ಮಾಡಿದಳು. ಸ್ಪೇನ್‌ನ ರಿಪಬ್ಲಿಕನ್ ಸೈನ್ಯ ಸೇರಿ ಕ್ಯಾಟಲೋನಿಯಾದಲ್ಲಿ ಕ್ರಾಂತಿಕಾರರ ಪರ ಹೋರಾಡುವಾಗ ತನ್ನ ಒಳಜೀವನವನ್ನು ಯುದ್ಧದ ಭೀಕರತೆ ಆಕ್ರಮಿಸಿದ ಅನುಭವ ಪಡೆದಳು. 1941 ರಲ್ಲಿ ದಕ್ಷಿಣ ಫ್ರಾನ್ಸ್‌ನಲ್ಲಿದ್ದು ಹೊಲಗಳಲ್ಲಿ ದುಡಿಮೆ ಮಾಡುತ್ತ ಗ್ರೀಕ್, ಸಂಸ್ಕೃತ ಮತ್ತು ಹಿಂದೂಧರ್ಮಗಳ ತನ್ನ ಅಭ್ಯಾಸವನ್ನು ಮುಂದುವರಿಸಿದಳು. 1942 ರಲ್ಲಿ ಎರಡನೇ ಮಹಾಯುದ್ಧದ ಸಮಯದಲ್ಲಿ ಫ್ಯಾಸಿಸ್ಟ್ ವಿರೋಧಿ ಫ್ರೆಂಚ್ ತಾತ್ಕಾಲಿಕ ಸರ್ಕಾರದ ಪರವಾಗಿ ಅಮೇರಿಕಾದಲ್ಲಿ ಕೆಲಸ ಮಾಡಿದಳು. ರಾಜ್ಯಸತ್ತೆಗೂ ಪ್ರಜೆಗಳಿಗೂ ಇರಬೇಕಾದ ಅನ್ಯೋನ್ಯ ಸಂಬಂಧ ಕುರಿತ ತನ್ನ ಮಹತ್ವದ ಪುಸ್ತಕವಾದ The Need for Rootsನ್ನು ಬರೆದದ್ದು ಆಗಲೇ. ಹಿಟ್ಲರ್ ಆಕ್ರಮಣ ಮಾಡಿದ ಫ್ರಾನ್ಸ್‌ನಲ್ಲಿ ತನ್ನ ಜನರಿಗೆ ಕೊಡಲಾಗುತ್ತಿದ್ದ ಆಹಾರಕ್ಕಿಂತ ಹೆಚ್ಚೇನನ್ನೂ ತಿನ್ನಲು ನಿರಾಕರಿಸಿ ಕ್ರಮೇಣ ಪ್ರಾಯೋಪವೇಶವೆನ್ನಬಹುದಾದ ಸ್ಥಿತಿ ತಲುಪಿ 1943ರಲ್ಲಿ ಸಿಮೋನ್ ವೇಲ್ ಸತ್ತಳು. ಈ ನಮ್ಮ ಕಾಲದ ದೊಡ್ಡ ದಾರ್ಶನಿಕರಲ್ಲಿ ಇವಳೊಬ್ಬಳೆನ್ನಬಹುದು. ಮಾರ್ಕ್ಸ್‌ವಾದದಿಂದ ದೈವಿಕ ಶ್ರದ್ಧೆಯ ದಿಕ್ಕಲ್ಲಿ ತನ್ನ ಎಲ್ಲ ರಾಜಕೀಯ ನಿಷ್ಠೆಗಳನ್ನು ಉಳಿಸಿಕೊಂಡೇ ಇವಳು ಬೆಳೆಯುತ್ತ, ತೀವ್ರಾರ್ತತೆಯಲ್ಲಿ ಸತ್ಯವನ್ನು ಶೋಧಿಸುತ್ತ ಬದುಕಿದ ಬಗೆಯೂ ಸತ್ತ ಬಗೆಯೂ ಅಪೂರ್ವವಾದ್ದು.]

ಈ ಪ್ರಪಂಚ ಮುಚ್ಚಿದ ಬಾಗಿಲು. ಇದೊಂದು ತಡೆ, ಜೊತೆಗೇ ಇದೊಂದು ದಾರಿ.

* * *

ಮಾನವ ಸ್ಥಿತಿಯಲ್ಲಿನ ಮೂಲ ವಿರೋಧವೆಂದರೆ ಅವನು ಕಡ್ಡಾಯಗಳಿಗೆ ಒಳಗಾಗಿದ್ದಾನೆ, ಆದರೆ ನ್ಯಾಯಕ್ಕಾಗಿ ಹಂಬಲಿಸುತ್ತಾನೆ. ನಿಯತಿಯಲ್ಲಿ ಅವನು ನಿರ್ಬಂಧಿತ; ಆದರೆ ಒಳಿತಿಗಾಗಿ ಹಾತೊರೆಯುತ್ತಾನೆ. ಅವನ ದೇಹಮಾತ್ರವಲ್ಲ, ಅವನ ಯೋಜನೆಗಳೂ ಹೀಗೆ ಸಿಕ್ಕಿಬಿದ್ದಿವೆ; ಆದರೂ ಒಳಿತಿಗಾಗಿ ಸತತ ಶ್ರಮಿಸುವುದೇ ಅವನ ಅಸ್ತಿತ್ವದ ಜೀವಾಳವಾಗಿದೆ. ಆದ್ದರಿಂದಲೇ ನಾವೆಲ್ಲರೂ ನಿಯತಿಗೂ ಒಳಿತಿಗೂ ನಡುವೆ ಸಂಬಂಧವಿದೆಯೆಂದು ನಂಬುತ್ತೇವೆ. ಒಳಿತಿಗಾಗಿ ನಾವು ಮಾಡುವ ವಿಚಾರ ಇಹಲೋಕದಲ್ಲೇ ಸರ್ವಶಕ್ತವಾಗುತ್ತದೆಂದು ಕೆಲವರು ತಿಳಿಯುತ್ತಾರೆ; ಅವರು ಆದರ್ಶವಾದಿಗಳು. ಅವರು ಎರಡು ಬಗೆಯ ತಪ್ಪು ಮಾಡುತ್ತಾರೆ: ಒಂದು, ಈ ವಿಚಾರಗಳಿಗೇ ಸ್ವಯಂ ಶಕ್ತಿ ಇಲ್ಲ; ಎರಡು, ಅವು ಒಳಿತನ್ನು ಪಡೆಯುವುದಿಲ್ಲ. ಯಾಕೆಂದರೆ ಈ ವಿಚಾರಗಳು ಕಡ್ಡಾಯಗಳಿಂದ ಪ್ರಭಾವಿತವಾಗುತ್ತವೆ... ಇನ್ನು ಕೆಲವರು ಕಡ್ಡಾಯಗಳೇ ಸ್ವಯಂ ಒಳಿತಿನ ದಿಕ್ಕಲ್ಲಿ ಚಲಿಸುತ್ತವೆ ಎಂದು ತಿಳಿಯುತ್ತಾರೆ; ಇವರು ಮೂರ್ತಿಪೂಜಕರು. ಎಲ್ಲ ಭೌತವಾದಿಗಳ ನಂಬಿಕೆ ಇದು. ಇವರೂ ಎರಡು ಬಗೆಯ ತಪ್ಪು ಮಾಡುತ್ತಾರೆ: ಮೊದಲನೆಯದಾಗಿ, ಕಡ್ಡಾಯ ಒಳಿತಿಗೆ ಅನ್ಯವಾದ್ದು; ಎರಡನೆಯದಾಗಿ, ಎಲ್ಲಿಕಡೆಯೂ, ಯಾವಾಗಲೂ ಕಡ್ಡಾಯಗಳು ಒಳಿತಿಗಿಂತ ಬಲವಾದವು ಎಂಬುವಂತಿಲ್ಲ. ಇಂಥ ತಪ್ಪುಗಳನ್ನು ಮಾಡದೇ ಇರುವುದು ಯಾರಿಗೆ ಸಾಧ್ಯವೆಂದರೆ ಒಳಿತು ಮತ್ತು ನಿಯತಿಗಳ ನಡುವೆ ಅಜ್ಞೇಯವಾದ ಐಕ್ಯವಿದೆ, ಆದರೆ ಈ ಐಕ್ಯ ಪ್ರಪಂಚದ ಹೊರಗಿದೆ ಎಂದು ತಿಳಿದವರಿಗೆ. ತಮ್ಮ ಆಕಾಂಕ್ಷೆಯನ್ನೂ ಗಮನವನ್ನೂ ಈ ಐಕ್ಯದಲ್ಲಿ ನೆಟ್ಟಲ್ಲಿ ಅದು ಇಲ್ಲೂ ಸಹ ನಮ್ಮ ಅನುಭವಗಮ್ಯವಾದೀತೆಂದು ಇವರು ತಿಳಿಯುತ್ತಾರೆ....

ಇಪ್ಪತ್ತೈದು ಶತಮಾನಗಳ ಹಿಂದೆಯೇ, ಕೆಲವು ಗ್ರೀಕ್ ದಾರ್ಶನಿಕರು ಗುಲಾಮಗಿರಿ ನೈಸರ್ಗಿಕವಾಗಿಯೂ ವೈಚಾರಿಕವಾಗಿಯೂ ತಪ್ಪೆಂದು ಹೇಳಿದ್ದರು. ಕಾಲದೇಶಗಳಿಗೆ ಅನುಗಣವಾಗಿ ನಮ್ಮ ನೈತಿಕತೆ ಬದಲಾಗುತ್ತದಾದರೂ ಅನುಭಾವದಿಂದ ಹುಟ್ಟುವ ನೈತಿಕತೆ ಮಾತ್ರ, ಯಾವಾಗಲೂ ಸ್ಥಿರವಾಗಿದೆ, ಏಕವಾಗಿದೆ, ಒಂದೇ ರೀತಿಯದಾಗಿದೆ. ಉದಾಹರಣೆಗೆ ಈಜಿಪ್ಟ್, ಗ್ರೀಸ್, ಇಂಡಿಯಾ, ಚೀನಾ, ಬೌದ್ಧಧರ್ಮ, ಇಸ್ಲಾಂ, ಕ್ರೈಸ್ತಧರ್ಮ, ಎಲ್ಲ ದೇಶಗಳ ಜಾನಪದ ಪರಂಪರೆ– ಇವನ್ನು ನೋಡಬಹುದು. ಈ ನೈತಿಕತೆಯನ್ನು ಬದಲಿಸಲು ಸಾಧ್ಯವಿಲ್ಲ; ಯಾಕೆಂದರೆ, ಈ ಪ್ರಪಂಚದ ಹೊರಗಿರುವ ಪರಿಪೂರ್ಣ ಒಳಿತಿನ ಪ್ರತಿಫಲವಾದ್ದು ಅದು. ಎಲ್ಲ ಧರ್ಮಗಳೂ ಈ ನೈತಿಕತೆಯನ್ನೂ, ಸಾಮಾಜಿಕ ನೈತಿಕತೆಯನ್ನೂ ಬೇರೆ ಬೇರೆ ಹದಗಳಲ್ಲಿ ಮಿಶ್ರಗೊಳಿಸಿಲ್ಲವೆಂದಲ್ಲ. ಆದರೆ ಶುದ್ಧವಾದ ಅತೀತವಾದ ಒಳಿತೊಂದು ಇದೆ ಎಂಬುದಕ್ಕೆ, ಈ ಪ್ರಪಂಚಕ್ಕೆ ಸಂಬಂಧಿಸಿದಂತೆ, ಇದೇ ಪ್ರಾಯೋಗಿಕವಾದ ಪ್ರಮಾಣ; ದೇವರು ಇದ್ದಾನೆಂಬುದಕ್ಕೂ ಇದೇ ಪ್ರಾಯೋಗಿಕ ರುಜುವಾತು.

* * * *

ಕೆಲವು ವಿಶಿಷ್ಟ ಉದ್ದೇಶಗಳಿಗಾಗಿ ದೇವರು ಈ ಜಗತ್ತನ್ನೂ, ನಮ್ಮ ಜೀವನವನ್ನೂ ಪ್ರವೇಶಿಸಿ ಕೆಲವು ಗುರಿಗಳನ್ನು ಸಾಧಿಸುತ್ತಾನೆಂಬ ಹಾಸ್ಯಾಸ್ಪದವಾದ ದೈವದೃಷ್ಟಿ ನೈಜಶ್ರದ್ಧೆಗೆ ವಿರೋಧವಾದ್ದು. ವೈಜ್ಞಾನಿಕವಾದ ಲೋಕದೃಷ್ಟಿಯಿಂದ ಇದನ್ನು ಒಪ್ಪುವುದು ಅಸಾಧ್ಯ. ವಿದ್ಯೆಯ ಪ್ರಭಾವಕ್ಕೊಳಗಾದ ಕ್ರಿಶ್ಚಿಯನ್ನರು ಜಗತ್ತನ್ನು ವೈಜ್ಞಾನಿಕವಾಗಿ ಭಾವಿಸುವುದರ ಜೊತೆಗೇ, ದೈವ ತಮಗಾಗಿ ದುಡಿಯುತ್ತದೆಂಬ ನಂಬಿಕೆಯನ್ನೂ ಇಟ್ಟುಕೊಂಡಿರುತ್ತಾರೆ. ಇದರಿಂದ ಅವರ ಮನಸ್ಸು ಇಬ್ಭಾಗವಾಗಿ ಒಡಕೊಂಡು ಬಿಡುತ್ತದೆ.... ಹೀಗಾಗಿ ಅವರು ವೈಜ್ಞಾನಿಕವಾಗಿಯಾಗಲೀ, ಧಾರ್ಮಿಕವಾಗಿಯಾಗಲೀ ಆಲೋಚಿಸಲಾರದವರಾಗಿ ಬಿಡುತ್ತಾರೆ. ದೇವರು ನಮಗಾಗಿ ಮಧ್ಯಪ್ರವೇಶ ಮಾಡುವನೆಂಬುದನ್ನಂತೂ ಗಂಭೀರವಾಗಿ ಪರಿಶೀಲಿಸುವುದು ಸಹ ಸಾಧ್ಯವಿಲ್ಲ. ಹೀಗಾಗಿ ಧಾರ್ಮಿಕಶ್ರದ್ಧೆ ದೇವರನ್ನು ನಂಬದವರಿಗೆ ಹಾಸ್ಯಾಸ್ಪದವೆನ್ನಿಸುತ್ತದೆ....

ಒಳಿತೇ ಬೇರೆ, ನಿಯತಿಯೇ ಬೇರೆ; ಒಂದು ಇನ್ನೊಂದಲ್ಲ. ಎರಡೂ ಬಹುದೂರದಲ್ಲಿರುವಂಥವು. ಎರಡರ ನಡುವಿನ ಐಕ್ಯಕಾಣುವುದು ನಮಗೆ ಅನಿವಾರ್ಯವಾದರೂ ಈ ಐಕ್ಯತೆ ರಹಸ್ಯವಾದ್ದು. ಈ ಅವ್ಯಕ್ತ ಐಕ್ಯತೆಯ ಧ್ಯಾನವನ್ನೇ ಅಪ್ಪಟಧಾರ್ಮಿಕ ಜೀವನವೆನ್ನಬಹುದು.

* * * *

ನಿರೀಶ್ವರವಾದದ ಅತ್ಯಂತ ಮಹತ್ವದ ವಿಚಾರವೆಂದರೆ, ಪ್ರಗತಿ. ಆದರೆ ಇದು ವಸ್ತುವಿನ ಮೂಲ ಸ್ವರೂಪ ತಿಳಿದು ಮಾಡುವ ಪ್ರಾಯೋಗಿಕ ತರ್ಕಕ್ಕೆ ವಿರೋಧವಾದ್ದು. ತನ್ನಲ್ಲೇ ಸಾಮಾನ್ಯವಾದಂಥ ಗುಣ ಪಡೆದದ್ದು ಸ್ವಯಂ ಅತ್ಯುತ್ತಮ ಗುಣವಿಶೇಷ ಪಡೆದದ್ದನ್ನು ಹುಟ್ಟಿಸಬಲ್ಲುದೆಂದು ಹೇಗೆ ಹೇಳಲು ಸಾಧ್ಯ?

* * * *

ನಾನು ಒಳಿತಿಗಾಗಿ ಆಸೆಪಡುವುದು ಮಾತ್ರ ಸಾಧ್ಯ. ಉಳಿದೆಲ್ಲ ಆಸೆಗಳೂ ಕೆಲವುಸಾರಿ ಪರಿಣಾಮಕಾರಿಯಾಗಬಹುದು, ಅಥವಾ ಆಗದೇ ಇರಬಹುದಾದರೂ ಇದೊಂದು ಆಸೆ ಮಾತ್ರ ಯಾವತ್ತೂ ಪರಿಣಾಮಕಾರಿಯಾಗುತ್ತದೆ. ಕಾರಣವಿಷ್ಟೇ: ಚಿನ್ನದ ಮೇಲಿನ ಆಸೆ ಚಿನ್ನವೇ ಆಗಲಾರದು; ಆದರೆ ಒಳಿತಿಗಾಗಿನ ಆಸೆಯೇ ಒಳಿತಾದ್ದು.

* * * *

ಧರ್ಮ ಸಂತೃಕೆಯ ಆಕರವಾಗಿರುವ ತನಕ ನೈಜಶ್ರದ್ಧೆಗೆ ಅಡ್ಡಿಯಾಗುತ್ತದೆ.

* * * *

ದೇವರು ರೊಟ್ಟಿಯಾದಾನು, ಕಲ್ಲಾದಾನು, ವೃಕ್ಷವಾದಾನು, ಕುರಿಯಾದಾನು, ಮನುಷ್ಯನಾದಾನು; ಆದರೆ ಅವನು ಜನತೆಯಾಗಲಾರ. ಇಡೀ ಜನತೆ ದೇವರ ಅವತಾರವಾಗುವುದು ಅಸಾಧ್ಯ.

* * * *

ಪಯಿರಿನಲ್ಲಿ, ಬಳ್ಳಿಗಳಲ್ಲಿ ಎಲ್ಲ ಸೌರಶಕ್ತಿಯೂ ಶೇಖರವಾಗಿ, ಪತ್ರಹರಿತ್ತಿನಲ್ಲಿ ಸಾಂದ್ರಗೊಳ್ಳುತ್ತದೆ. ಈ ಮುಖಾಂತರ ಸೂರ್ಯನ ಶಕ್ತಿಯೇ ಮಾನವರನ್ನು ಪ್ರವೇಶಿಸಿ, ಅವರನ್ನು ಜೀವಂತಗೊಳಿಸುತ್ತದೆ....

ರೈತ ಈ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಾನೆ...

ಸಾವು ಮತ್ತು ದುಡಿಮೆಗಳು ಅಗತ್ಯಗಳೇ ಹೊರತು ನಮ್ಮ ಸ್ವತಂತ್ರ ಆಯ್ಕೆಗಳಲ್ಲ. ಮನುಷ್ಯ ಶ್ರಮದ ಮೂಲಕ ಕೊಟ್ಟಿದ್ದನ್ನು ಪ್ರಪಂಚ ಅನ್ನವಾಗಿ ಶಾಖವಾಗಿ ಮನುಷ್ಯನಿಗೆ ಹಿಂದಿರುಗಿಸುತ್ತದೆ... ಸಾವು ಬರುವಾಗ ಅದನ್ನು ಒಪ್ಪಿಕೊಳ್ಳುವುದೆಂದರೆ ಇದು ತಾನು ಎಂದು ತಿಳಿದುಕೊಳ್ಳುವ ಪ್ರತಿಯೊಂದರಿಂದಲೂ ಅಂತಿಮವಾಗಿ, ಥಟ್ಟನೇ ಕಿತ್ತುಕೊಳ್ಳುವುದಾಗಿದೆ. ಶ್ರಮವನ್ನು ಒಪ್ಪಿಕೊಳ್ಳುವುದು ಇದಕ್ಕಿಂತ ಕಡಿಮೆ ಕ್ರೂರವಾದ್ದು. ಜೀವನದುದ್ದಕ್ಕೂ ಪ್ರತಿ ಬೆಳಿಗ್ಗೆ ಇದು ಸಂಭವಿಸುತ್ತದೆ, ಸಂಜೆಯತನಕ ಮುಂದುವರಿಯುತ್ತದೆ. ದಿನಕಳೆದು ದಿನವಾದರೂ ಬೆಳಿಗ್ಗೆಯಿಂದ ಸಂಜೆ ತನಕ ಸಾಗುವ ಇದು ಮಾರನೇದಿನ ಮತ್ತೆ ಅಗತ್ಯವಾಗುತ್ತದೆ– ಹೀಗೆ ಸಾಯುವ ತನಕ. ಪ್ರತಿ ಬೆಳಿಗ್ಗೆ ಕೂಲಿಗಾರ ಆ ದಿನದ ದುಡಿಮೆ ಮಾಡಲು ಅಣಿಯಾಗುತ್ತಾನೆ, ತನ್ನ ಆಯುಷ್ಯ ತೀರುವ ತನಕ.

ದುಡಿಮೆಯಿಂದ ಅವನು ಬಳಲಿ ಸುಸ್ತಾಗುವುದು ಊಟಮಾಡಲೆಂದು, ಊಟಮಾಡುವುದು ದುಡಿಮೆಗಾಗಿ ಮತ್ತೆ ಶಕ್ತಿಯನ್ನು ಪಡೆಯಲೆಂದು. ಒಂದು ವರ್ಷದ

ಶ್ರಮದ ನಂತರ ಎಲ್ಲವೂ ಶುರುವಿನಲ್ಲಿ ಹೇಗಿತ್ತೊ ಹಾಗೇ ಇರುತ್ತವೆ. ಅನಂತತೆಯಿಂದ ಅವನ ದುಡಿಮೆ ಪ್ರಕಾಶಿತವಾದಲ್ಲಿ ಮಾತ್ರ ದುಡಿಮೆಯ ಏಕತಾನದ ಬೇಸರ ಸಹನೀಯವಾಗುತ್ತದೆ.

ಯಂತ್ರ ಕಲ್ಲಿದ್ದಲನ್ನು ಉರಿಸುವಂತೆ ದುಡಿಮೆಗಾರ ತನ್ನ ಮಾಂಸವನ್ನೇ ಉರಿಸುತ್ತ ಅದನ್ನು ಶಕ್ತಿಯಾಗಿ ಪರಿವರ್ತಿಸುತ್ತಾನೆ. ತನ್ನ ರಕ್ತಮಾಂಸವನ್ನು ಶ್ರಮದ ಫಲಗಳಾಗಿ, ಆಹಾರ ಮದಿರೆಗಳಾಗಿ ಮಾಡಿಕೊಡುತ್ತಾನೆ:

ಈ ಕಾಯಕಶ್ರಮ ಒಂದೋ ಕೀಳುಗೊಳಿಸುವ ಜೀತವಾಗುತ್ತದೆ, ಅಥವಾ ಯಜ್ಞವಾಗುತ್ತದೆ.

Gateway to God ನಿಂದ
(ಅನುವಾದ : ಅ. ಮೂ.)

*

ಚರ್ಚೆ

ಟಿ. ಜಿ. ರಾಘವ

ಭಾರತೀಯ ಸಂಸ್ಕೃತಿ ಮತ್ತು ಪ್ರಜಾಪ್ರಭುತ್ವ : ಒಂದು ಟಿಪ್ಪಣಿ

ಪ್ರತಿಯೊಂದು ಜನಾಂಗವೂ ಬದುಕನ್ನು ನೋಡುವ ರೀತಿ ಆ ಜನಾಂಗಕ್ಕೆ ವಿಶಿಷ್ಟವಾದುದು. ಒಂದು ಜನಾಂಗ ಬದುಕನ್ನು, ಪರಿಸರವನ್ನು ನೋಡಲು, ಅನುಭವಿಸಲು, ಪ್ರತಿಕ್ರಿಯಿಸಲು ತನ್ನದೇ ಆದ ಅರ್ಥಗಳ ಜಾಲ ಅಥವಾ ಮೌಲ್ಯಗಳನ್ನು ಸೃಷ್ಟಿಸಿಕೊಂಡು ಆ ಮೂಲಕ ಇರುವಿಕೆಗೊಂದು ಅರ್ಥವನ್ನು ತಂದುಕೊಂಡಿರುತ್ತದೆ. ಈ ಅರ್ಥಗಳ ಜಾಲ ಒಂದು ಜನಾಂಗ–ಸಂಸ್ಕೃತಿಯ ಸ್ಥಿರಾಂಶ. ಸ್ಥಿರಾಂಶಗಳು ಪುರಾಣ, ವಿಧ್ಯುಕ್ತಕ್ರಿಯೆ, ಪ್ರತಿಮೆ, ಸಂಕೇತಗಳ ಮೂಲಕ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಪ್ರವಹಿಸುತ್ತವೆ. ಇಂದಿನ ನಾವು ನೋಡುವ, ಅನುಭವಿಸುವ, ಅರ್ಥಮಾಡಿಕೊಳ್ಳುವ ಕ್ರಿಯೆಗಳೆಲ್ಲವೂ ಕಾಲದೇಶಗಳ ಅಂತರಾಳದಲ್ಲಿ ಸೃಷ್ಟಿಯಾದ ನಮ್ಮ ಸಂಸ್ಕೃತಿಯ ಈ ಸ್ಥಿರಾಂಶಗಳಿಂದ ನಿರ್ಧರಿತವಾಗುತ್ತವೆ. ಜನಾಂಗದ ಗತಚರಿತ್ರೆಯಿಂದ ಕಾಲಾನುಕ್ರಮದಲ್ಲಿ ನಮ್ಮ ಮೆದುಳು ಪ್ರಭಾವಿತವಾಗುವುದಷ್ಟೇ ಅಲ್ಲ ರೂಪಿತವಾಗುತ್ತದೆ ಎನ್ನುತ್ತಾನೆ ಯುಂಗ್. ಅಂದರೆ ನಮ್ಮ ಬುದ್ಧಿ ಮತ್ತು ಮನಸ್ಸು ಸಂಸ್ಕೃತಿಯ ಈ ಸ್ಥಿರಾಂಶಗಳಿಂದ ನಮಗೆ ಅರಿವಿದ್ದೊ ಇಲ್ಲದೆಯೊ ಬದ್ಧವಾಗಿರುತ್ತವೆ. ಈ ಸ್ಥಿರಾಂಶಗಳಿಂದಾಗಿಯೇ ಹೊರಗಿನವ ಎಷ್ಟೇ ಪ್ರಯತ್ನಿಸಿದರೂ ಮತ್ತೊಂದು ಜನಾಂಗದ ಅವಿಚ್ಛಿನ್ನ ಭಾಗವಾಗಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವನಿಗೆ ದಕ್ಕುವುದು ಆ ಸಂಸ್ಕೃತಿಯ ಚರಾಂಶಗಳು ಮಾತ್ರ.

ಚರಾಂಶಗಳು– ಆಹಾರಕ್ರಮ, ಬಟ್ಟೆ, ಹೊರ ನಡುವಳಿಕೆ ಇತ್ಯಾದಿ– ಹೊರಗಿನ ಸತತ ಆಘಾತಗಳಿಂದಾಗಿ ಬದಲಾವಣೆಗೆ ಒಳಗಾಗುತ್ತಲೇ ಇರುತ್ತವೆ,

ಇಲ್ಲ ಮತ್ತೊಂದು ಸಂಸ್ಕೃತಿಯ ಚರಾಂಶಗಳನ್ನು ಅಮದು ಮಾಡಿಕೊಳ್ಳುತ್ತಿರುತ್ತವೆ. ಈಗ ನಮ್ಮಲ್ಲಿ ಆಗಿರುವ, ಆಗುತ್ತಿರುವ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ ಇದಕ್ಕೆ ಉತ್ತಮ ಉದಾಹರಣೆ. ಆದರೆ ಈ ಅನುಕರಣೆ ಮೇಲುನೋಟಕ್ಕೆ ಎಷ್ಟೇ ಕರಾರುವಾಕ್ಕಾಗಿ, ಗಾಢವಾಗಿ ಕಂಡರೂ ಮೂಲತಃ ಭಾರತೀಯ ಬದುಕು ನಿರ್ದೇಶಿತವಾಗುತ್ತಿರುವುದು ನಮ್ಮ ಸಂಸ್ಕೃತಿಯ ಸ್ಥಿರಾಂಶಗಳಿಂದಲೇ.

ಭಾರತೀಯ ಸಂಸ್ಕೃತಿಯ ಸ್ಥಿರಾಂಶಗಳು ವ್ಯವಸ್ಥಿತವಾಗಿ ಶ್ರೇಣೀಕೃತವಾಗಿವೆ. ಅಂದರೆ ತರ, ತಮ ಭೇದಗಳಿಂದ ಕೂಡಿದ ಭಾರತೀಯ ಸಂಸ್ಕೃತಿ ಶ್ರೇಣೀಕೃತ ಸಂಸ್ಕೃತಿ. ಉದಾಹರಣೆಗೆ ವರ್ಣಾಶ್ರಮಧರ್ಮದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಶ್ರೇಣೀಕೃತ ವ್ಯವಸ್ಥೆ, ಈ ವ್ಯವಸ್ಥೆಯ ಕಟ್ಟಕಡೆಯಲ್ಲಿರುವ ಶೂದ್ರನಿಗೆ ಮೋಕ್ಷಕ್ಕೆ ಅರ್ಹತೆಯುಂಟೆ ಎಂಬ ಜಿಜ್ಞಾಸೆ; ಜ್ಞಾನ, ಭಕ್ತಿ, ಕರ್ಮ ಎಂದು ಶ್ರೇಣೀಕೃತವಾದ ಮೋಕ್ಷ ಮಾರ್ಗಗಳು; ಸಾಕಾರದಿಂದ ನಿರಾಕಾರ ಬ್ರಹ್ಮ ಇತ್ಯಾದಿ.

ಸಂಸ್ಕೃತಿಯ ಚರಾಂಶಗಳು ರೂಢಿಸಿಕೊಂಡವು ಇಲ್ಲ ಅಮದುದುವು. ಅಮದಾದ ಚರಾಂಶಗಳು ಬಹುಕಾಲ ಮೂಲಸ್ಥಿತಿಯಲ್ಲಿರಲು ಸಾಧ್ಯವಾಗುವುದಿಲ್ಲ. ಸ್ಥಿರಾಂಶಗಳು ಅವನ್ನು ನಿಧಾನ ಮಾರ್ಪಡಿಸುತ್ತ ತಮ್ಮ ಮೂಲಭೂತಗುಣಕ್ಕೆ ವ್ಯತಿರಿಕ್ತವಾಗದಂತೆ ಅಳವಡಿಸಿಕೊಳ್ಳುತ್ತವೆ.

ಅಮದಾದ ಪ್ರಜಾಪ್ರಭುತ್ವತತ್ವಕ್ಕೆ ಸಮಾನತೆಯೇ ಆಧಾರ. ಇದು ಶ್ರೇಣೀಕೃತ ಮೌಲ್ಯಕ್ಕೆ ವ್ಯತಿರಿಕ್ತವಾದುದು. ನಮ್ಮಲ್ಲಿ ಪ್ರಯೋಗಕ್ಕೆ ಒಳಗಾಗಿದೆ. ಅಂದರೆ ಭಾರತೀಯ ಮನಸ್ಸು ಅದನ್ನು ತನ್ನಲ್ಲಿರುವ ಸ್ಥಿರಾಂಶಗಳಿಗೆ ಹೊಂದಾಣಿಕೆಯಾಗುವಂತೆ ನಿಧಾನವಾಗಿ ಮಾರ್ಪಡಿಸಿಕೊಳ್ಳತೊಡಗಿದೆ, ಶ್ರೇಣೀಕೃತ ವ್ಯವಸ್ಥೆಯ ಒಂದು ಅಂಗವಾಗಿ. ಶಿಕ್ಷೆಗೆ ಅತೀತನಾದ ಬ್ರಾಹ್ಮಣನಂತಿರುವ ಇಂದಿನ ಆಳುವ ವರ್ಗ, ಅತಿಹೆಚ್ಚಿನ ಶಿಕ್ಷೆಗೆ ಗುರಿಯಾಗುತ್ತಿದ್ದ ಶೂದ್ರನಂತಿರುವ ಇಂದಿನ ಹತಾಶ ಸಾಮಾನ್ಯ, ಅಧಿಕಾರಶಾಹಿ, ಪ್ರಭಾವಶಾಲಿ ಪ್ರಧಾರಿ, ಹಣದ ವ್ಯಭಿಚಾರಿ ಹೀಗೆ ಶ್ರೇಣೀಕೃತವಾಗುತ್ತಿರುವ ಈ ತತ್ವ ನಮ್ಮ ಸಂಸ್ಕೃತಿಯಲ್ಲಿನ ಸ್ಥಿರಾಂಶಗಳೊಂದಿಗಿನ ಹೊಂದಾಣಿಕೆಗಾಗಿ ಶ್ರೇಣೀಕೃತವಾಗೇ ಉಳಿಯಬೇಕಾಗುತ್ತದೆ.

ಈಗ ನಮ್ಮ ಮುಂದಿರುವ ಪ್ರಶ್ನೆ : ಹೀಗೆ ನಿಧಾನ ಭಾರತೀಯವಾಗುತ್ತಿರುವ ಇಂತಹ ಶ್ರೇಣೀಕೃತ ಪ್ರಜಾಪ್ರಭುತ್ವವನ್ನು ನಾವು ಒಪ್ಪಿಕೊಳ್ಳಬೇಕೆ, ಅಥವಾ ಈ ಸಂಸ್ಕೃತಿಗೆ ತಕ್ಕುದಾದ (ಅಂದರೆ ಈ ಸಂಸ್ಕೃತಿಯಲ್ಲಿನ ಸ್ಥಿರಾಂಶಗಳ ಮೇಲೆ ಆಧರಿತವಾದ) ಕನಿಷ್ಠ ಹಿಂಸಾತ್ಮಕ, ಶೋಷಣೆ ರಹಿತ ಬದಲಿ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕೆ ಇಲ್ಲ, ಇಡೀ ಸಂಸ್ಕೃತಿಯನ್ನು ರೂಢಮೂಲವಾಗಿ ನಿರ್ಮೂಲಮಾಡಿ ಹೊಸ ಜನಾಂಗವನ್ನು ಸೃಷ್ಟಿಸಲು ಸಾಧ್ಯವೆ, ಎನ್ನುವುದು.

"We make out of the Quarrel with others rhetoric,
but of the quarrel with ourselves, poetry..."

W. B. Yeats

ಪುಸ್ತಕ ವಿಮರ್ಶೆ

ಕರ್ವಾಲೋ ಕಥೆ

ಕರ್ವಾಲೋ : ಪೂರ್ಣಚಂದ್ರ ತೇಜಸ್ವಿ, ನೆಲಮನೆ ಪ್ರಕಾಶನ, 1980

ಕರ್ವಾಲೋ ಏಕಕಾಲದಲ್ಲಿ ಸಮಕಾಲೀನವೂ ಸನಾತನವೂ ಆದ ಕಥೆ. ಒಂದು ನೋಟದಲ್ಲಿ ಇದು ಹಾರುವ ಓತಿಯನ್ನು ಕಾಣುವ ಆಧುನಿಕ ವೈಜ್ಞಾನಿಕ ಅನ್ವೇಷಣೆ: ಇನ್ನೊಂದು ದೃಷ್ಟಿಯಲ್ಲಿ ಇದು ಸೃಷ್ಟಿ ವೈಚಿತ್ರ್ಯವನ್ನರಸುವ, 'ಚಿದಂಬರ ರಹಸ್ಯ'ವನ್ನು ಬಗೆಯುವ—ದೇವರನ್ನು ಕಾಣುವ—ಸನಾತನ ಯಾತ್ರೆ. ಹಾಗೆಯೇ ಈ ಕಥೆ ಈ ಅನ್ವೇಷಣೆಯ, ಯಾತ್ರೆಯ ಹಾದಿಯಲ್ಲಿ ಬರುವ ಜನಸಾಮಾನ್ಯರ ಜೀವನದಲ್ಲಿ ಒಡಮೂಡುವ ಪ್ರತಿಭೆಯ, ಕರ್ಮಕುಶಲತೆಯ, ಅಸಮಾನ್ಯ ದರ್ಶನ.

ಕಥೆ ಕೇವಲ ಔಷಧಿಗಾಗಿ ಜೇನು ಕೊಳ್ಳಲು ಹೊರಟ ಪ್ರಯಾಣದಲ್ಲಿ ಮೊದಲಾಗಿ ಹಾರುವ ಓತಿಯನ್ನು ಸಂದರ್ಶಿಸುವ ಮಹಾ ಯಾತ್ರೆಯಲ್ಲಿ ಕೊನೆಗಾಣುತ್ತದೆ. ಉದ್ದಕ್ಕೂ ಕಥೆ ಪ್ರಯಾಣದಲ್ಲಿ, ಸಂಚಾರದಲ್ಲಿ ವ್ಯವಹರಿಸುತ್ತದಾದ್ದರಿಂದ ಪ್ರಯಾಣ ಬಾಳಿನ ರೂಪಕ ಮಾತ್ರವಲ್ಲದೆ ಕಥೆಯ ವ್ಯವಹಾರ ಮಾಧ್ಯಮವೂ ಆಗಿ ವಿಶೇಷ ಅರ್ಥ ಸಂಪತ್ತಿನ ಸಾಂದ್ರತೆಯನ್ನು, ಸಾಂಕೇತಿಕ ಮೌಲ್ಯಗಳನ್ನು ಪಡೆಯುತ್ತದೆ. ಜೀಪು, ಎತ್ತಿನಗಾಡಿ, ಕಾಲ್ನಡಿಗೆ– ಈ ಎಲ್ಲ ರೀತಿಯ ಪ್ರಯಾಣಗಳು, ಅನಾದಿ ಕಾಲದ ಕಾಲ್ನಡಿಗೆಯಿಂದ ಆಧುನಿಕವಾದ ಯಂತ್ರ ಯಾನದವರೆಗೆ, ಕಾಲ ವ್ಯತ್ಯಾಸವನ್ನು ಹಿಂಗಿಸಿ ಪ್ರಯಾಣದ ಸನಾತನತೆಯನ್ನೂ ನಿರಂತರತೆಯನ್ನೂ ಸಾರುತ್ತವೆ. ಹಾಗೆಯೇ ಈ ಪ್ರಯಾಣಗಳೆಲ್ಲವೂ ಜೇನಿನ ಅನ್ವೇಷಣೆಯಿಂದ ಓತಿಯ ದರ್ಶನದವರೆಗೆ ಬೆರಗಿನ ಅನಂತತೆಯನ್ನು ಬಗೆಯುವ ಹೆಜ್ಜೆಗಳಾಗುತ್ತವೆ.

ಪ್ರಯಾಣ ಜೀವನ ರೂಪಕ ಮಾತ್ರವಲ್ಲದೆ ಜೀವಿಗಳ, ಪ್ರಯಾಣಿಕರ ಜೀವನ ರೀತಿಯನ್ನೂ ನಿಯಂತ್ರಿಸುತ್ತದೆ. ಪ್ರಯಾಣ ಮುಖ್ಯರಾದ ಕರ್ವಾಲೋ, ನಿರೂಪಕ, ಮಂದಣ್ಣ, ಕರಿಯಪ್ಪ, ಎಂಕ್ಟ—ಇವರು ಮದುವೆಯಾಗಿದ್ದರೂ ಸಂಸಾರದ ಭಾರ ಕಳಕೊಂಡವರು. ಕರ್ವಾಲೋರ ಸಂಸಾರಸಂಬಂಧ ಎಷ್ಟರ ಮಟ್ಟಿನದೆಂದರೆ 'ಮಗಳಿಗೆ ಹುಷಾರಿಲ್ಲಾಂತ' (25) ಟೆಲಿಗ್ರಾಂದಿಂದ ಗೊತ್ತಾಗಿ ಅವಳನ್ನು ನೋಡಲು ಒಮ್ಮೆ ಬೊಂಬಾಯಿಗೆ ಹೋಗಿ ಬರುವಷ್ಟರದ್ದು. ನಿರೂಪಕ, ಹೆಂಡತಿ, ಮಗಳು, ಆಳು (ಪ್ಯಾರಾ), ನಾಯಿ (ಕಿವಿ) ಇದಿಷ್ಟೇ ಉಳ್ಳ, ಸಂಸಾರಸ್ಥನಾದಾಗ್ಯೂ ಅವನ ಸಂಚಾರ, ಅನ್ವೇಷಣೆಗಳಿಗೆ ಅನಿರ್ವಾರ್ಯರೂ ಅಡ್ಡಿ ಬರದವರು; ಕೆಲವು ಸಮಯದಲ್ಲಿ ಪ್ರೋತ್ಸಾಹಕರೂ ಸಹಾಯಕರೂ ಆದವರು. ಆಳು ಪ್ಯಾರಾ ಜೇನು ಪತ್ತೆ ಹಚ್ಚಲು ಸಹಾಯಕನಾದರೆ ನಾಯಿ ಕಿವಿ ಓತಿ ಅನ್ವೇಷಣೆಯಲ್ಲಿ ಸಂಗಾತಿಯಾಗಿ ಬರುತ್ತದೆ. ಮಂದಣ್ಣ ದುಂಬಾಲು

ಬಿದ್ದು ವಿಪರ್ಯಾಸದ ಮದುವೆಯಾದವನಾದರೂ ಅವನ ಹೆಂಡತಿ ಅವನ ಅಲೆಮಾರಿ ಜೀವನಕ್ಕೆ ಅಡ್ಡಿಯಾಗದ– ಗೃಹಿಣಿಯ ಲಕ್ಷಣಗಳನ್ನು ಕಳಕೊಂಡ– 'ರಾಮಿ ರಾಮಿ ಹರಾಮಿ' (72). ಬಿರಿಯಾನಿ ಕರಿಯಪ್ಪ ಬಿರಿಯಾನಿ ಗರ್ಮಿಯ ಹೆಸರಿನಲ್ಲಿ ನಾನಾ ಹೆಂಗಸರನ್ನು ಕೂಡಿ ಹೆಂಡತಿಯ ಅಸೂಯೆಯಿಂದಲೂ ಬಂಧದಿಂದಲೂ ಮುಕ್ತನಾದವನು. ಎಂಕ್ಟನಾದರೋ ಹೆಂಡತಿಯು ಫಾರೆಸ್ಟು ಗಾರ್ಡುಗಳನ್ನು ಓಲೈಸುವ ವ್ಯಭಿಚಾರವನ್ನು ನಿರಾತಂಕವಾಗಿ ಒಪ್ಪಿಕೊಂಡು 'ಯಾರದೇನು ಹರ್ಯಾಕಿಲ್ಲ, ಯಾರದ್ದೇನು ಮುರಿಯಾಕಿಲ್ಲ' (156) ಎಂದು ವೈರಾಗ್ಯ ತಾಳಿದವನು.

ಹೀಗೆ ಕಥೆಯಲ್ಲಿ ಮದುವೆ– ಸಂಸಾರಗಳನ್ನು ಗೌಣಗೊಳಿಸುವುದರ ಮೂಲಕ ಸಂಸಾರ ಹೇಗೆ ಮನುಷ್ಯನನ್ನು ಬಂಧಿಸಬಹುದು, ಹೇಗೆ ಆ ಬಂಧದಿಂದ ಮುಕ್ತನಾದ ಮನುಷ್ಯ ಕರ್ವಾಲೋರಂತೆ ಜೀವರಹಸ್ಯವನ್ನು ಭೇದಿಸುವ ದೃಷ್ಟಾರನಂತೆಯೂ, ನಿರೂಪಕನಂತೆ ಸೃಷ್ಟಿ ವೈಚಿತ್ರ್ಯದ ಬೆರಗನ್ನು ಬಗೆಯುವ ರಸಜ್ಞನಂತೆಯೂ ಮಂದಣ್ಣ– ಕರಿಯಪ್ಪ– ಎಂಕ್ಟ ಇವರಂತೆ ಕೆಲಸದಲ್ಲಿ, ಪರಿಣತಿಯನ್ನು, ಪ್ರತಿಭೆಯನ್ನು, ಕರ್ಮಕುಶಲತೆಯನ್ನು ಗಳಿಸಿಕೊಂಡ 'ಯೋಗಿ' ಗಳಂತೆಯೂ ('ಯೋಗಃ ಕರ್ಮಸು ಕೌಶಲಂ') ಎಲ್ಲರೂ ತಮ್ಮ ಜೀವನ ಸಾರ್ಥಕ್ಯವನ್ನು, ಸಾಫಲ್ಯತೆಯನ್ನು ಪಡೆದುಕೊಳ್ಳಬಹುದೆಂಬುದನ್ನು ಸೂಚಿಸುತ್ತದೆ.

ಸಂಸಾರದಂತೆಯೇ ಬಾಳಿನ ವ್ಯವಸ್ಥೆಯಲ್ಲಿ ಸಮಾಜ ಮತ್ತು ಸರ್ಕಾರ ಮನುಷ್ಯನಲ್ಲಿರುವ ಸತ್ವ, ಚೈತನ್ಯ, ಅಭಿವ್ಯಕ್ತಿಗಳನ್ನು ಅದುಮುವ, ಅಳಿಸುವ ಮಾರಕ ಶಕ್ತಿಗಳೂ ಹೌದು. ಮಂದಣ್ಣನ ಉತ್ಸಾಹೀ ಬ್ಯಾಂಡು ವಾದನ ಜೇನ್ನೊಣಗಳನ್ನೆಬ್ಬಿಸಿ ಒಂದು ಸರ್ಕಾರೀ ಪುರಸ್ಕಾರ ಸಮಾರಂಭವನ್ನು ಹಾಳುಮಾಡಿತೆಂಬ ಕಾರಣಕ್ಕಾಗಿ ಪೋಲೀಸರು ಅವನ ಮೇಲೆ ಕಣ್ಣಿಟ್ಟು, ಅವನು ಮುಂದೆ ಸಂಗ್ರಹಿಸಿಟ್ಟುಕೊಂಡಿದ್ದ ಜೇನನ್ನು ಸಾರಾಯಿಯ ಕೊಳೆಯೆಂದು ದೂರಿ ಅವನನ್ನು ಜೈಲಿಗೆ ಕರೆದೊಯ್ಯುತ್ತಾರೆ. ಅಲ್ಲದೆ ಅವನ ಬಿಡುಗಡೆಗೆ ಶ್ರಮಿಸುವ ನಿರೂಪಕ ಮತ್ತು ಕರ್ವಾಲೋರನ್ನು ಶಂಕಿಸಿ, ಅವರಲ್ಲಿ ಅಸಂಬದ್ಧ ಸಂಬಂಧಗಳನ್ನು ಕಲ್ಪಿಸಿ ವಿರೋಧವಾಗುತ್ತಾರೆ, ಬೆದರಿಕೆ ಹಾಕುತ್ತಾರೆ. ಶರಾಬು ಕಂಟ್ರಾಕ್ಟರ್ ಗೋವಿಂದಪ್ಪ ತನ್ನ ಹೆಂಡದ ಬೆರಕೆಗೆ ಬೇಕಾದ ಅಮೋನಿಯಂ ಮಾರಲು ಕರ್ವಾಲೋ ನಿರಾಕರಿಸಿದ್ದಕ್ಕಾಗಿ, ಅವರನ್ನು 'ಕಿತಾಪತಿ' ಮನುಷ್ಯನೆಂದು ದೂರುತ್ತಾನೆ. ಕರ್ವಾಲೋ ಬಳಿ ಕೆಲಸ ಮಾಡುವ 'ದಪ್ಪ ಗಾಜಿನ ಕನ್ನಡಕದ ಗೂಬೆ ಮೋರೆಯ' (23) ನಾಗರಾಜ ಕರ್ವಾಲೋ– ಮಂದಣ್ಣರಲ್ಲಿ ಲೈಂಗಿಕ ಸಂಬಂಧ ಕಲ್ಪಿಸಿ ಅಪಪ್ರಚಾರ ಮಾಡುತ್ತಾನೆ. ನಿರೂಪಕನಿಗೆ ದೂರದ ಸಂಬಂಧಿಯಾದ ಪಬ್ಲಿಕ್ ಪ್ರಾಸಿಕ್ಯೂಟರ್ ವಿಶ್ವನಾಥ ನಿರೂಪಕ 'ಬೇರೆ ಜಾತಿ' (102) ಯವಳನ್ನು ಮದುವೆಯಾದುದಕ್ಕೆ ದ್ವೇಷಿಸಿ ('ಎಂಥಾ ತಂದೆಗೆ ಎಂಥಾ ಮಗ ಹುಟ್ಟಿದ, ಆನೆ ಹೊಟ್ಟೆಯಲ್ಲಿ ಲದ್ದಿ ಬಿದ್ದಂತಾಯ್ತು' – 102), ಕೋರ್ಟಿನಲ್ಲಿ ನಿರೂಪಕನನ್ನು 'ಅತ್ಯಂತ ತಿರಸ್ಕಾರ'(102) ದಿಂದ ನೋಡುತ್ತಾನೆ. ಈ ಎಲ್ಲ 'ಗುಪ್ತ ವ್ಯವಸ್ಥೆ' (101) ಯ ಬಗ್ಗೆ ನಿರೂಪಕ 'ಅಸಹಾಯ'ಕನಾಗುತ್ತಾನೆ. ಆದರೆ 'ಅದೃಷ್ಟಕ್ಕೆ ನ್ಯಾಯಾಧೀಶರು ಯಾರೋ ಬಿಜಾಪುರದ ಕಡೆಯವರಾ' (102) ಗಿದ್ದುದರಿಂದ ಇವರು "ಬದುಕು" ತ್ತಾರೆ.

ಈ ರೀತಿಯಾಗಿ ಸಂಸಾರ – ಸಮಾಜ – ಸರ್ಕಾರಗಳ 'ಗುಪ್ತವ್ಯವಸ್ಥೆ' ಮಂದಣ್ಣ ಮತ್ತು ನಿರೂಪಕನ ನಂಟರಾಗಿ, ಸಮಾಜದ ನಾಗರಾಜ, ಗೋವಿಂದಪ್ಪಗಳಾಗಿ, ಸರ್ಕಾರದ ಪೋಲೀಸರಾಗಿ, ಇವರನ್ನು ಮೌ ಮೌ ಬೀ ಗಳಂತೆ ನಿಷ್ಕಾರಣವಾಗಿ ಎರಗಿ ಕಾಡುತ್ತಾರೆ. ಆದಾಗ್ಯೂ ಇಂತಹ ಬಾಳಿನ ವ್ಯವಸ್ಥೆಯಲ್ಲೇ ಇವರು ಜೀವನದ ಪ್ರಬಲಾಕಾಂಕ್ಷೆಯನ್ನು ಮುಂದುವರಿಸಿಕೊಂಡು ಬರುತ್ತಾರೆ.

ಇವರೆಲ್ಲರ ಜೀವನವನ್ನು, ಜೀವನ ಧಾಟಿಯನ್ನು, ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ನಿರ್ದೇಶಿಸುವ, ರೂಪಿಸುವ, ಆ ಮೂಲಕ ಅವರು ತಮ್ಮ ವೈಯಕ್ತಿಕ ಅಭಿವ್ಯಕ್ತಿಯನ್ನು ಕಂಡುಕೊಳ್ಳಲು ಅನುವಾಗುವ ಪ್ರಭಾವಕಾರಿ ಪ್ರಕೃತಿ, ಕಥೆಯಲ್ಲಿನ ಕಾಡು. ಸಾಮಾನ್ಯವಾಗಿ ಕಾಡನ್ನು ಕುರಿತ ಕಥೆಗಳಲ್ಲಿ ಕಾಡು ಹಿನ್ನೆಲೆ ಮುನ್ನೆಲೆಗಳಾಗಿ ಬರುವಂತೆ ಕರ್ವಾಲೋದ ಕಾಡು ಬರಿಯ ಹಿನ್ನೆಲೆ ಮುನ್ನೆಲೆಯಷ್ಟೇ ಅಲ್ಲ, ಕಥೆಯ ಸಂಪೂರ್ಣ ಪರಿವ್ಯಾಪ್ತ ವಾತಾವರಣವೂ, ಅದರ ಪ್ರಧಾನ ಪಾತ್ರವೂ

ಆಗಿ ಜೀವಂತವಾಗಿ ಉಸಿರಾಡುತ್ತದೆ. ಕಾಡು ಭಯವಾದ ಮೌಮೌಬೀಗಳಿಂದ ಹಿಡಿದು ವಿಸ್ಮಯವಾದ ಹಾರುವ ಓತಿಯವರೆಗೆ, ಭಯ– ವಿಸ್ಮಯಗಳ ಮಧ್ಯೆ ಆಳವಡುವ ಎಲ್ಲಾ ಭಾವಗಳಕೋಪ, ವಿಷಾದ, ದುಃಖ, ಆನಂದ ಇತ್ಯಾದಿಗಳ- ಮಾಧ್ಯಮವಾಗಿ ಕಥಾ ವ್ಯಕ್ತಿಗಳ ತನುಮನಗಳನ್ನು ಸೆಳೆಯುತ್ತದೆ, ಸೆರೆಹಿಡಿಯುತ್ತದೆ. ಈ ಸೆಳೆಯುವ, ಸೆರೆಹಿಡಿಯುವ ಮನುಷ್ಯ— ಕಾಡಿನ ಅಪೂರ್ವ ವ್ಯವಹಾರವೇ 'ಕರ್ವಾಲೋ' ಕಥೆ.

ಕಾಡು ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಜೀವನೋಪಕಾರಿಯಾಗಿರುವುದರಿಂದ. ಎಂಕ್ಟನಿಂದ ಹಿಡಿದು ಕರ್ವಾಲೋರವರೆಗೆ ಕೇಳಿದ್ದನ್ನು, ಬಯಸಿದ್ದನ್ನು, ಈಯುವುದರಿಂದ, ಇದು ಎಲ್ಲರ ಕಲ್ಪವೃಕ್ಷ: ಕಲ್ಪವೃಕ್ಷವಾಗಿ ಆಪ್ತ, ಆತ್ಮೀಯ. ಹಾಗೆಯೇ ಇದು ಅಭೇದ್ಯವಾದ, ಕರಿಯಪ್ಪನ ಮಾತಿನಲ್ಲಿ 'ಮಹಾ ಮಲೆ ಕಾನಾ'ಗಿ, ಎಲ್ಲರಲ್ಲಿ 'ಗೋಪ್ಯ, ಕುತೂಹಲ, ರಹಸ್ಯ,' (30) ಗಳನ್ನು ಕೆರಳಿಸುವ 'ಬ್ರಹ್ಮಾಂಡ' : ಬ್ರಹ್ಮಾಂಡವಾಗಿ ಅದ್ಭುತ, ನಿಗೂಢ. ಈ ಆಪ್ತತೆ—ನಿಗೂಢತೆಗಳ ದ್ವಂದ್ವದಲ್ಲಿ ಕಾಡು ಮಾನವನೊಂದಿಗೆ ವ್ಯವಹರಿಸುತ್ತದೆ.

ಮಂದಣ್ಣ 'ಹುಟ್ಟಾಗಿಂದ್ಲೂ...ಕಾಡುಕುರುಬನ ಹಂಗೆ ಹಕ್ಕಿಪಕ್ಕಿ ಹುಳಾಹುಪ್ಪಟೆ, ಚಾಟರಬಿಲ್ಲು ಶಿಕಾರಿ ತಿರು'(52) ಗುವ ಕಾಡಿನ ಒಡನಾಡಿ. ಈ ಒಡನಾಟದ ಆತ್ಮೀಯತೆಯೇ ಅವನನ್ನು ಕಾಡಿನ ಮರ್ಮಗಳನ್ನು ಅರಿತ, ಶಂಖದ ಹುಳುವಿನ ಬೆಳಕಿನ ಬಾಲದಿಂದಲೂ ಹಾರುವ ಓತಿಯ ರೆಕ್ಕೆಯವರೆಗೆ ಸೃಷ್ಟಿ ವೈಚಿತ್ರ್ಯಗಳನ್ನು ಬಲ್ಲ 'ಹುಟ್ಟಾ ನ್ಯಾಚುರಲಿಸ್ಟ್' (93), 'ಅದ್ಭುತ ಪ್ರಕೃತಿ ಶಾಸ್ತ್ರಜ್ಞ' ನನ್ನಾಗಿ ಮಾಡುತ್ತದೆ. ಇವನ ಅರಿವೇ ಕರ್ವಾಲೋರ ಕಣ್ಣಾಗಿ ಕಾಡಿನ ಮರ್ಮಗಳನ್ನು ಪತ್ತೆಹಚ್ಚುತ್ತಾ ಕಡೆಗೆ ಅವರ ಹಾರುವ ಓತಿಯ ಮಹಾನ್ವೇಷಣೆಗೆ ಮಾರ್ಗದರ್ಶಕವಾಗುತ್ತದೆ. ಎಲ್ಲರಿಂದಲೂ ಬೈಸಿಕೊಳ್ಳುವ (ಕರ್ವಾಲೋ ಕೂಡ ಇವನನ್ನು 'ಸ್ಕ್ಯಾಂಡ್ರಲ್' ಎನ್ನುತ್ತಾರೆ) ನಿಷ್ಪ್ರಯೋಜಕ, ಬೇಜವಾಬ್ದಾರನೆಂದು ಸಾಬೀತಾದ ಯಾರೂ ಇವನಿಗೆ ಹೆಣ್ಣುಕೊಡಲು ಒಲ್ಲದ. ಮಂದ ಬುದ್ಧಿಯ ಮಂದಣ್ಣ ತನ್ನ ಕಾಡಿನ ನಂಟಿನ ಆತ್ಮೀಯತೆಯಲ್ಲೇ 'ಹುಟ್ಟಾ ನ್ಯಾಚುರಲಿಸ್ಟ್' ಪ್ರತಿಭೆಯನ್ನೂ, 'ಅದ್ಭುತ ಪ್ರಕೃತಿ ಶಾಸ್ತ್ರಜ್ಞ'ನ ಪರಿಣತಿಯನ್ನೂ ಗಳಿಸಿಕೊಳ್ಳುತ್ತಾನೆ. ಇವನ ಪ್ರತಿಭೆಯನ್ನು ಗುರುತಿಸಿ ಕರ್ವಾಲೋ ಇವನನ್ನು 'ಶಿಷ್ಯ' ನನ್ನಾಗಿ ಮಾಡಿಕೊಳ್ಳುತ್ತಾರಲ್ಲದೆ ಇವನು ಗೋಗರೆದು ಕೇಳುವ 'ಪೀವನ್' ಕೆಲಸ ಇವನ ಪ್ರತಿಭೆಗೆ ಅವಮಾನವೆಂದು ಕೊಡದೇ ಹೋಗುತ್ತಾರೆ. ಕಾಡು ಹೀಗೆ ಮಂದಣ್ಣನಿಗೆ ಅವನ ಜೀವನೋಪಾಯದ ಮಾರ್ಗವಾಗುವುದರ ಜೊತೆಗೆ ಅವನ ನಿಗೂಢ ಪ್ರತಿಭೆಯನ್ನು ಹೊರಚೆಲ್ಲಿ ಅವನ ವಿಶೇಷ ಅಭಿವ್ಯಕ್ತಿಗೆ ಕಾರಣವಾಗುತ್ತದೆ.

ಮಂದಣ್ಣನಂತೆ ಕಾಡುಜೀವಿಗಳಾದ ಕರಿಯಪ್ಪ, ಎಂಕ್ಟ ಇವರುಗಳು ತಮ್ಮ ಕಾಡುಕೆಲಸಗಳಲ್ಲಿ ಕುಶಲತೆ ಪಡೆದವರು. ಕರಿಯಪ್ಪ ಮರಹತ್ತುವ 'ಚಳಕ'ವನ್ನು ನೋಡಿ ನಿರೂಪಕ ಪರಮಾಶ್ಚರ್ಯ ಪಡುತ್ತಾನೆ: 'ಕರಿಯಪ್ಪ ಇದ್ದಕ್ಕಿದಂತೆ ನೂರಾರು ಮಿಲಿಯ ವರ್ಷ ಹಿಂದಕ್ಕೆ ಹೋಗಿ ಪೂರ್ವಜರ ಸ್ಥಿತಿಯನ್ನು ತಲುಪಿದ್ದಾನೆನ್ನಿಸಿತು. ನಾವು ನೆಲದ ಮೇಲೆ ಓಡಿದಷ್ಟು ವೇಗವಾಗಿ ಅವನು ಮರಹತ್ತುತ್ತಿದ್ದ' (169). ಕಮಾನಿನಂತೆ ಬಾಗಿದ್ದ ಅವನ ಕಾಲುಗಳನ್ನು ಕುರಿತು ಮಂದಣ್ಣ 'ಮರ ಹತ್ತಿ ಹತ್ತಿಯೇ ಕಾಲುಗಳು ಕಮಾನಾಗಿ'(107) ವೆ ಎಂದಾಗ, ಜೀವವಿಕಾಸದಲ್ಲಿ ವಾತಾವರಣಕ್ಕೆ ತಕ್ಕಂತೆ ದೇಹರಚನೆ ಮಾರ್ಪಡುವಂತೆ ಕರಿಯಪ್ಪನ ಕಾಲು ಕಮಾನಾಗಿರಬಹುದೇ ಎಂದುಕೊಳ್ಳುವಷ್ಟು ಸಹಜ ಪರಿಣತಿಯನ್ನು ಕರಿಯಪ್ಪ ಮರಹತ್ತುವಲ್ಲಿ ತೋರಿಸುತ್ತಾನೆ. ಅದರಿಂದಲೇ ಅವನು ಯಾರಿಗೂ ಸಿಗದ 'ಯುಗಾಂತರ ಹಿಂದಿನ ಕುಣಿಕೆ'(171)ಯಾದ ಹಾರುವ ಓತಿಯನ್ನು ಹಿಡಿದೇ ಬಿಡುತ್ತಾನೆ. ಅಲ್ಲದೆ ಹಿಡಿದ ಓತಿ ಅವನ ಕೈಯಿಂದ ತಪ್ಪಿಸಿಕೊಳ್ಳಬೇಕಾದರೆ ಅವನ ಕೈಯಲ್ಲಿ ತನ್ನ ಬಾಲದ ಶೇಷವನ್ನು ಬಿಟ್ಟೇ ಕಾಡಿನ ಅನಂತವನ್ನು ಸೇರಬೇಕಾಗುತ್ತದೆ.

ಈ ರೀತಿಯ ಪ್ರತಿಭೆಯ ಮಾರ್ಗದಲ್ಲೇ ಹಾವುಗೊಲ್ಲರ ಎಂಕ್ಟ ಪುಂಗಿ ಬಾರಿಸಿ ಹಾವುಗಳ ಸಂತತಿಯನ್ನೇ ಪರೀಕ್ಷಿತ್ ರಾಜನಂತೆ ಪ್ರತ್ಯಕ್ಷಗೊಳಿಸಿ ನಿರೂಪಕನ ಮೇಲೆ 'ಮೋಡಿ' ಹಾಕಿ ಬಿಡುತ್ತಾನೆ. ಅವನು ಹಾವುಗಳ ಚರ್ಮವನ್ನು 'ಚಿಟಿ ಚಿಟಿ ಲಟಿಕೆ ಮುರಿದಂತೆ' (155) ಲೀಲಾಜಾಲವಾಗಿ ಸುಲಿಯುವ 'ವೈಖರಿ' ಕರ್ವಾಲೋರನ್ನು 'ಚಕಿತ' ಗೊಳಿಸುತ್ತದೆ.

ಈ ರೀತಿಯಾಗಿ ಅತಿಸಾಮಾನ್ಯರೂ, ಸಮಾಜದ ಅಂಚಿನಲ್ಲಿರುವ ಅಂತಿಮರೂ, 'ಶುದ್ಧಾ ಕಾಡು ಮನುಷ್ಯ' ರೂ ಆದ ಮಂದಣ್ಣ, ಕರಿಯಪ್ಪ, ಎಂಕ್ಟ ಇವರನ್ನು ಕಾಡು ಸಾಕಿಸಲಹುತ್ತದಲ್ಲದೆ ಅವರವರ ಮನೋಧಾರ್ಮಿಕ ಕಸಬುಗಳಲ್ಲಿ ಪರಿಣತಿಯ ಪ್ರತಿಭೆಯನ್ನು, ಕರ್ಮಕುಶಲತೆಯನ್ನೂ ಗಳಿಸುವ ' ಯೋಗಿ ' ಗಳನ್ನಾಗಿ ಹದಗೊಳಿಸಿ, ಅವರ ಅಭಿವ್ಯಕ್ತಿಗೆ ಮಾಧ್ಯಮವಾದ ಕರ್ಮಶಾಲೆಯಾಗುತ್ತದೆ.

ಹೀಗೆ ಅನಾಮಧೇಯರೂ, ಅಪ್ರಸಿದ್ಧರೂ ಆದ ಅಂತಿಮ ಸಾಮಾನ್ಯರಲ್ಲಿ ಅರಳುವ ಜೀವದ ಅಭಿವ್ಯಕ್ತಿ ವಿಶೇಷ ದರ್ಶನವೇ ' ಕರ್ವಾಲೋ ' ಕಥೆಯ ಹಾರುವ ಓತಿ.

ಈ ಜನಸಾಮಾನ್ಯರ ಸುಪ್ತಚೇತನದ ಆವಿಷ್ಕಾರಕ್ಕೆ ಕಾರಣಪುರುಷ ಕರ್ವಾಲೋ. ಎಲ್ಲಾ ಭೂಚರಗಳ ಉಗಮಸ್ಥಾನವಾದ, ಋಷಿಗಳ ಬೀಡಾದ ಕಾಡೇ ಕರ್ವಾಲೋರ ಜೀವನದ ನೆಲೆ, ಪ್ರಯೋಗ ಶಾಲೆ, ದರ್ಶನ ಕ್ಷೇತ್ರ. ಕಾಡನ್ನು ಕುರಿತು ' ನನಗಂತೂ ಮಲೆನಾಡು ಮೋಡಿಹಾಕಿ ಬಿಟ್ಟಿದೆ' (36) ಎನ್ನುತ್ತಾರೆ, ನಿರೂಪಕನಿಗೆ. ಜೀವದ ಮರ್ಮವನ್ನು ಅರಸುವ ಕರ್ವಾಲೋ ಎಲ್ಲರಿಗೂ- ಮುಖ್ಯವಾಗಿ ನಿರೂಪಕನಿಗೆ- ಮಹಾಜ್ಞಾನಿ, ಋಷಿರೂಪಿ. ಋಷಿಯಂತೆ ನಿರೂಪಕ, ನಿರೂಪಕನ ಸಂಸಾರ ಮತ್ತು ಅವನ ಸಂಗಡಿಗರಿಗೆ ಜೀವದ ವಿಸ್ಮಯಗಳನ್ನು ತಿಳಿಹೇಳುತ್ತಿರಬೇಕಾದರೆ ಎಲ್ಲರೂ- ಮೂಕಪ್ರಾಣಿಯಾದ ನಾಯಿಯೂ- ಮಂತ್ರಮುಗ್ಧರಾಗಿ ಕೇಳುತ್ತಾರೆ:

ಕಾಲದೇಶಗಳನ್ನು ಮೀರುವ ದಿವ್ಯಜ್ಞಾನದ ಮಿಂಚುನೋಟಗಳಂತೆ ಕರ್ವಾಲೋರ ಯೋಚನೆಗಳು ಬಂದು ನಮ್ಮ ಅಂತಃಕರಣಗಳನ್ನು ತಾಕಿದವು. ನನ್ನ ಹೆಂಡತಿ ಕಾಫಿಗೆ ನೀರಿಡಬೇಕೆಂದಿದ್ದವಳು ಎದ್ದು ಹೋದರೆ ಇನ್ನಾವ ಮುಹರ್ತ ಸಂಗತಿ ತಪ್ಪಿಹೋಗುತ್ತೋ ಎಂದು ಅಲ್ಲೇ ಕುಳಿತಿದ್ದಳು. ಎಲ್ಲರೂ ಮೌನವಾಗಿ ನಮ್ಮ ಅರಿವಿಗೆ, ಸಂಸ್ಕಾರಕ್ಕೆ ತಿಳಿದಷ್ಟು ಗ್ರಹಿಸಿದೆವು. ನನ್ನ ನಾಲ್ಕು ವರ್ಷದ ಮಗಳು, ಕೊನೆಗೆ ಚತುಷ್ಪಾದಿಯಾದ ಕಿವಿ ಕೂಡಾ ಸುಮ್ಮನೆ ಆಲಿಸಿದರು (97).

ಮಾಂತ್ರಿಕನಂತೆ ಕರ್ವಾಲೋ ತಮ್ಮ 'ಮಂತ್ರದಂಡ' ದಿಂದ ಶಂಖದ ಹುಳುವನ್ನು ಮುಟ್ಟಿದರೆ ' ಝಗ್ ' (37) ಎಂದು ಹುಳುವಿನ ಬಾಲ ದೀಪ್ತಗೊಳ್ಳುತ್ತದೆ; ಜಡವಾದ ರೆಂಬೆಯ ಕಡ್ಡಿ ' ಎಚ್ಚೆತ್ತುಕೊಂಡು, ಕೈಕಾಲು ಮೀಸೆ ಆಡಿಸುತ್ತಾ, ಇನ್ನೊಂದು ಕೊಂಬೆಗೆ ನಡೆದು ಹೋಗುವ ಕಡ್ಡಿಹುಳು ' (133) ವಾಗುತ್ತದೆ. ಕಾಡಿನ ಮಧ್ಯೆ ಬೆಂಕಿಯ ಮುಂದೆ ಸೃಷ್ಟಿಯ 'ಚಿದಂಬರ ರಹಸ್ಯ' (151) ದ ಪ್ರವಚನವನ್ನೀಯುವಾಗ ಸಾಕ್ಷಾತ್ ಉಪನಿಷತ್ತಿನ ಋಷಿಯೇ ಆಗಿಬಿಡುತ್ತಾರೆ: ' ಕೊಂಚ ದೂರದಲ್ಲೇ ಧಗಿ ಧಗಿಸುತ್ತಿದ್ದ ಬೆಳಕು ಅವರ ಮುಖವನ್ನು ಕತ್ತಲಹಿನ್ನೆಲೆಯಲ್ಲಿ ದೇದೀಪ್ಯಮಾನ ಮಾಡಿತ್ತು. ಪುರಾತನ ಮಹರ್ಷಿಯೋರ್ವನ ಮುಖದಂತೆ ಅವರ ಗಡ್ಡಮೀಸೆಯ ವದನ ಕಾಣುತ್ತಿತ್ತು' (151).

ದ್ರಷ್ಟಾರರಂತೆ ಕರ್ವಾಲೋ ಲೋಕದ ಪ್ರಲೋಭಗಳನ್ನು ಗೆದ್ದವರು. ಅವರ ಬಗ್ಗೆ ತುಚ್ಛವಾಗಿ ಮಾತನಾಡಿದವರನ್ನು, ಅಪಪ್ರಚಾರ ಮಾಡಿದವರನ್ನು ' ಸಾಕ್ರಟೀಸ್ ' (102) ನಂತೇ ಸಹಿಸಿ, ಕೆಡುಕನ್ನು ನುಂಗಿದ ' ವಿಷಕಂಠ' (102) ರು. ಅಷ್ಟೇ ಜೀವದ ಬಗ್ಗೆ ಮರುಗುವ ಭೂತದಯೆ, ಅನುಕಂಪಗಳ ಕರುಣಾಳು. ಕರಿಯಪ್ಪ ಕೊಲ್ಲುತ್ತಿದ್ದ ಪಕ್ಕಿ ಕೊಕ್ಕಾನಕ್ಕೆಯನ್ನು "ನೋನೋ! ಸ್ಟಾಪಿಟ್! ನೋ! ನೋ" ಎಂದು ಕೂಗಿ ಅದರ ಪ್ರಾಣವನ್ನು ಉಳಿಸಿ, ಹೇಗೆ ಅದು ಬದುಕಿದುದರಿಂದ ಅದರ ಮೇಲೆ ಆಹಾರಕ್ಕೆ ಅವಲಂಬಿತವಾದ ಹೆಣ್ಣುಹಕ್ಕಿ ಮತ್ತು ಅದರ ಮರಿಗಳು ಉಳಿದುವೆಂದು ತಿಳಿಹೇಳಿ ವಾಲ್ಮೀಕಿ ಋಷಿಯ ಸಹಜಾನುಕಂಪವನ್ನು ತೋರಿಸುತ್ತಾರೆ. ಕೊನೆಯಲ್ಲಿ, ಮಹಾಯಾತ್ರೆಯ ಫಲವಾಗಿ ಸಿಕ್ಕ ಹಾರುವ ಓತಿ, ಕೈಗೆ ಸಿಕ್ಕು ನುಣುಚಿ ಹಾರಿಹೋಗಿ ಕಾಡಿನ ಮಹಾಶೂನ್ಯವನ್ನು ಹೊಕ್ಕಾಗ ಸಮಚಿತ್ತರಾಗಿ, ದರ್ಶನತೃಪ್ತಿಯಲ್ಲಿ "ಜೀವವಿಕಾಸಕ್ಕೆ ಎಲ್ಲಿದೆ ಕೊನೆ" ಎಂದು ವಿಸ್ಮಯದ ಉದ್ಗಾರ ತೆಗೆಯುತ್ತಾರೆ.

ಹೀಗೆ ಕರ್ವಾಲೋ, ಕಥೆಯ ಶೀರ್ಷಿಕೆ ಸೂಚಿಸುವಂತೆ, ಕಥಾ ಮುಖ್ಯರಷ್ಟೇ ಅಲ್ಲ ಅದರ ಸೂತ್ರಧಾರರೂ, ಅದರ ಆದ್ಯಂತಗಳನ್ನು ನಿಯಂತ್ರಿಸುವ ಕರ್ತರೂ, ಎಲ್ಲಕ್ಕಿಂತಲೂ ಹೆಚ್ಚಾಗಿ ಜೀವ ವಿಸ್ಮಯದ ಸಂಕೇತವಾದ ಹಾರುವ ಓತಿಯ 'ವಿಶ್ವರೂಪ' ದರ್ಶನವನ್ನು ಎಲ್ಲರಿಗೂ ಕೊಡಿಸುವ ಗೀತಾಚಾರ್ಯನೂ ಆಗುತ್ತಾರೆ.

ಈ ಕಥೆಯಲ್ಲಿ ಈ ಸೃಷ್ಟಿಯ ವಿಶ್ವರೂಪದ ಹಾದಿಯಲ್ಲಿ ನಿರೂಪಕ ಅರ್ಜುನನಂತೆ ನಡೆದು ಬರುತ್ತಾನೆ.

ಅವನ ಪಾತ್ರತೆ ಅವನಲ್ಲಿರುವ ಅದಮ್ಯವಾದ ಕುತೂಹಲದ ಚಿಲುಮೆ. ಜೀವಕುತೂಹಲ ಅವನನ್ನು ಜೇನುಕೂರಿಸುವುದರಿಂದ ಹಿಡಿದು ಹಾರುವ ಓತಿಯನ್ನು ಕಾಣುವುದರವರೆಗೆ ನಡೆಸಿಕೊಂಡು ಬರುತ್ತದೆ. ಒಮ್ಮೆ ಅಧೀರನಾಗಿ ಈ ಮಹಾಯಾತ್ರೆಯಿಂದ ಅರ್ಜುನನಂತೆ ಹಿಮ್ಮೆಟ್ಟಲು ನೋಡುತ್ತಾನೆ. ಇದಕ್ಕೆ ಕಾರಣ ಅವನ ನಾಯಿಯ ಮೇಲಿನ ವ್ಯಾಮೋಹ. ಇವನ್ನು ವಿಮರ್ಶಕ ಜಿ.ಎಚ್.ನಾಯಕರು 'ಬೇಜವಾಬ್ದಾರಿತನ' (228) ಎನ್ನುವ ಮಾತನ್ನು ಗಮನಿಸಬೇಕು. ಮಂದಣ್ಣ ಛೂ ಬಿಟ್ಟದ್ದರಿಂದ ನಾಯಿ ಕಿವಿ ಬೇಟೆಯನ್ನರಸಿ ಅನಂತಾರಣ್ಯದಲ್ಲಿ ಮುಳುಗಿದಾಗ ನಿರೂಪಕನಿಗೆ ಆಕಾಶವೇ ಕಳಚಿಬೀಳುತ್ತದೆ. ಅದನ್ನರಸಲು ಯಾತ್ರೆಯನ್ನು ಬಿಟ್ಟುಹೋಗಲು ನಿರ್ಧರಿಸುತ್ತಾನೆ: 'ಅದೇನಾದರೂ ಕಳೆದರೆ ನನಗೇ ನಮ್ಮ ಅನ್ವೇಷಣೆಯಲ್ಲಿ ಕೊಂಚವೂ ಆಸಕ್ತಿ ಇರುತ್ತಿರಲಿಲ್ಲ. ನಾನು ಏಕಾಂಗಿಯಾಗಿ ಆ ಬಯಲಿನಲ್ಲಿ ಅದನ್ನು ಹುಡುಕಲು ಹೊರಡುತ್ತಿದ್ದುದಂತೂ ಖಚಿತವಾಗಿತ್ತು' (122).

ನಿರೂಪಕನ ವ್ಯಾಮೋಹದ ಹಿಂದೆ, ಕರ್ವಾಲೋಗಿದ್ದಂತೆಯೇ ಪ್ರೇಮಾನುಕಂಪಗಳಿವೆ. ಈ ಪ್ರೇಮಾನುಕಂಪಗಳ ತೀವ್ರತೆಯೇ ಜೊತೆಗೆ ಕಿವಿಯನ್ನು ನಿರೂಪಕನು ಕರೆದೊಯ್ಯುವಂತೆ ಮಾಡುವುದು. ಹಿಂದೊಮ್ಮೆ ನಾಯಿ ಅಸ್ವಸ್ಥವಾಗಿ ಸಾಯುವಂತಿದ್ದಾಗ ನಿರೂಪಕ ಅತ್ಯಂತ ವ್ಯಾಕುಲನಾಗಿ ಅದರ ಶುಶ್ರೂಷೆಮಾಡಿ ಬದುಕಿಸಿಕೊಳ್ಳುತ್ತಾನೆ. ಕಾಡಿನಲ್ಲಿ ಅದರ ಮೂತಿಗೆ ಗರಿ ಚುಚ್ಚಿದಾಗ ಗರಿತೆಗೆದು ನೋವನ್ನು ನಿವಾರಿಸುತ್ತಾನೆ. ನಿರೂಪಕ–ನಾಯಿ ಸಂಬಂಧ ಬರಿಯ ಮನುಷ್ಯ-ಪ್ರಾಣಿ ಸಂಬಂಧವಲ್ಲ; ಅದೊಂದು ಒಡನಾಟ, ಸ್ನೇಹ, ಒಲವು: 'ನಮ್ಮ ಮನೆಯಲ್ಲಿ ಅದನ್ನು ಪ್ರಾಣಿ ಎಂದು ಯಾರೂ ಪರಿಗಣಿಸಿಯೇ ಇರಲಿಲ್ಲ.' (122) ಆದರಿಂದಲೇ ಅದನ್ನು 'ಅವನು' ಎಂದು ನಿರೂಪಕನೂ, ಆಳು ಪ್ಯಾರನೂ ಸಂಬೋಧಿಸುತ್ತಾರೆ. ಪ್ರಾಣಿಗೆ ಮಾನವ ಅಂತಸ್ತನ್ನು ಕೊಟ್ಟು ಅದನ್ನು ಮಾನವೀಯವಾಗಿ ಕಾಣುವುದರಿಂದ. ಅದು 'ಹೆಚ್ಚು ಕಡಿಮೆ ಮಾತನ್ನೂ ಅಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಷ್ಟು ಕುಶಾಗ್ರಬುದ್ಧಿ ಬೆಳೆ' (122) ಸಿಕೊಂಡು ಮಾನವಾರ್ಹತೆಯನ್ನು ಪಡೆದುಕೊಳ್ಳುತ್ತದೆ: ಪ್ಯಾರಾ ಹೇಳಿದಂತೆ: 'ನೋಡಿದ್ರಾಸಾಮೀ! ಜೇನುಕಂಡ್ರೆ ಹೇಳು ಅಂತ ಹೇಳಿದ್ರಲ್ಲಾ! ಕಿವಿ ಕಂಡು ಹಿಡಿದನಲ್ಲಾ ಈಗ! ನೋಡಿದರಾ ಹೆಂಗೈತೆ ಇವನ ಬುದ್ಧಿ' (34).

ಈ ರೀತಿಯ ಪ್ರೇಮಾನುಬಂಧದ ಒಡನಾಡಿ ನಾಯಿಯನ್ನು ಓತಿಯ ಅನ್ವೇಷಣೆಗೆ ಕರೆದೊಯ್ಯುವ ನಿರೂಪಕ ಅದು ಕಾಡಿನಲ್ಲಿ ಕಳೆದುಹೋದರೆ ಯಾತ್ರೆಯನ್ನೂ ತೊರೆದು ಓತಿದರ್ಶನದ ರಸನಿಮಿಷವನ್ನು ನಿರಾಕರಿಸುತ್ತಾನೆ. ಧರ್ಮರಾಯನಂತೆ ನಿರ್ದೇಶಕ ನಾಯಿಯನ್ನು ಬಿಟ್ಟು ಸ್ವರ್ಗವನ್ನು ಸೇರಲಾರ.

ಒಲುಮೆಯೇ ನಿರೂಪಕನಿಗೂ ಅವನ ಸುತ್ತಲಿನ ಜಗಕ್ಕೂ ಇರುವ ಬಂಧ. ಕರ್ವಾಲೋರಲ್ಲಿರುವ ಮನುಷ್ಯ ಮತ್ತು ಪ್ರಾಣಿಗಳ ಮೇಲಿನ ಜೀವಪ್ರೇಮದಂತೆ ನಿರೂಪಕನ ಒಲುಮೆ ಅವನ ಅವ್ಯಾಜವಾದ ಸಹಜಗುಣ. ಮಂದಣ್ಣನ ಕಷ್ಟದ ಮದುವೆಗೆ, ಅದಕ್ಕಿಂತಲೂ ಕಷ್ಟದ ಅವನ ಜೈಲುಬಿಡುಗಡೆಗೆ ನಿರೂಪಕನ ಸಹಜಾನುಕಂಪ ಕಾರಣವಾದಾಗ್ಯೂ ಅದು ಯಾವವಿಧವಾದ ಪರೋಪಕಾರ, ಸಮಾಜಸೇವೆಗಳೆಂಬ ಭಾರಗಳನ್ನು, ಆದರ್ಶದ ಸೋಗನ್ನು ಹೊರದ ಅನುಷಂಗಿಕವಾಗಿ, ಕೆಲವುವೇಳೆ ಅವನ ಲೌಕಿಕ ವಿವೇಚನೆಗೆ ವಿರುದ್ಧವಾಗಿ ಬರುವ (ಗೋಲ್ಡ್‌ಸ್ಮಿತ್ತನ 'ಮ್ಯಾನ್ ಇನ್ ಬ್ಲ್ಯಾಕ್' ನಂತಹ) ಗುಣವಿಶೇಷ. ಇದು ಗುಪ್ತಗಾಮಿನಿಯಂತೆ ಅವನ ಎಲ್ಲಾ ವ್ಯವಹಾರಗಳುದ್ದಕ್ಕೂ ಹರಿದುಬರುತ್ತದೆಯಲ್ಲದೆ ಓತಿಯ ಅನ್ವೇಷಣೆಗೆ ಬೇಕಾದ ಎಲ್ಲಾ ಜನರನ್ನೂ ಒಟ್ಟುಗೂಡಿಸಿ ಕಾರ್ಯೋನ್ಮುಖರನ್ನಾಗಿ ಮಾಡುವ, ಸಂಯೋಜಿಸುವ ಕ್ರಿಯಾಧಾತುವಾಗುತ್ತದೆ. ಸೃಷ್ಟಿಕೌತುಕವನ್ನರಸುವ ಕುತೂಹಲ ಹೇಗೆ ನಿರೂಪಕನಿಗೆ ಓತಿ ಸಂದರ್ಶನಕ್ಕೆ ಪ್ರೇರಕವೋ ಹಾಗೆ ಅವನಪ್ರೇಮ ಆ ಮಹಾಯಾತ್ರೆಯ ಸಂಯೋಜಕ.

'ಶುದ್ಧಾ ಕಾಡುಮನುಷ್ಯ' ರಾದ ಮಂದಣ್ಣ, ಕರಿಯಪ್ಪ, ಎಂಕ್ಟ ಮತ್ತು 'ಸಾಕ್ರಟೀಸ್' ರಾದ ಕರ್ವಾಲೋ ಮಧ್ಯೆ ಸ್ನೇಹಸೇತುವಾಗಿ, ಎರಡುಕಡೆಯವರಿಗೂ ಬೇಕಾಗಿ, ಎರಡು ಕಡೆಯವರನ್ನೂ ಬೇಕಾಗಿಸಿ ಈ ಓತಿ ಯಾತ್ರೆಯಲ್ಲಿ ಯಾತ್ರಾದೀಕ್ಷತೆಯನ್ನು ಹೊತ್ತ ನಿಜಯಾತ್ರಿಯಾದ ನಿರೂಪಕ ಮಾನವೀಯ ಮಾನವ,

ಸರ್ವಮಾನವ. ಇವನ ಭಯವಿಸ್ಮಯಗಳೆರಡೂ ಇವನನ್ನು ಮಾನವನನ್ನಾಗಿ ಆಪ್ತಗೊಳಿಸುವ ಮೂಲ ಮಾನವ ಭಾವಗಳು. ಇವನು ಕಾಡಿನಲ್ಲಿ ಮೌ ಮೌ ಜೀಗಳ ಧಾಳಿಗೆ ಆದಿಮಾನವನಂತೆ ಭಯಗೊಂಡು ಕಂಬಳಿಯಲ್ಲಿ ಅವಿತು 'ಗೋರಿ'ಯಾಗಿಬಿಡುತ್ತಾನೆ ('ಕಂಬಳಿಯ ಗೋರಿಯೊಳಗೆ ಮೃತಾತ್ಮನಂತೆ ಕುಳಿತು... ಯೋಚಿಸ ತೊಡಗಿದ'–145); ಮಿಂಚುಳ್ಳಿಯ 'ಪ್ರತ್ಯಕ್ಷ'ಕ್ಕೆ ವಿಸ್ಮಯಗೊಂಡು ಆದಿಕವಿಯಂತೆ ಮೈಯೆಲ್ಲ ಕಣ್ಣಾಗುತ್ತಾನೆ:

> ಇದ್ದಕ್ಕಿದ್ದಂತೆ ಕೊಳದ ನಡುವಿನ ಶೂನ್ಯ ಅಂತರಾಳದಲ್ಲಿ ಯಾರೋ ಬೆಂಕಿ ಕಡ್ಡಿಯನ್ನು ಚಕ್ಕನೆ ಗೀಚಿದಂತೆ ಮಿರುಗುವ ಬೆಂಕಿಯ ಉಂಡೆಯಾಗಿ ಮಿಂಚುಳ್ಳಿಯೊಂದು ಹಠಾತ್ತಾಗಿ ಪ್ರತ್ಯಕ್ಷವಾಯಿತು. ಕೊಳದ ಹಿನ್ನೆಲೆಯ ನೆರಳಿನಿಂದ ಅದು ಹಠಾತ್ತಾಗಿ ಬಿಸಿಲಿಗೆ ಬಂದುದರಿಂದ ಅದು ಶೂನ್ಯದಲ್ಲಿ ನಮಗೆ ಪ್ರತ್ಯಕ್ಷವಾದಷ್ಟು ಅನಿರೀಕ್ಷಿತವಾಗಿ ದೃಗ್ಗೋಚರವಾಗಿತ್ತು. ಭರ್ರನೆ ರೆಕ್ಕೆಬಡಿಯುತ್ತ ಅದು ಹೆಲಿಕಾಪ್ಟರಿನಂತೆ ಶೂನ್ಯದಲ್ಲಿ ನಿಂತು ಕೊಳದಲ್ಲಿ ಅದೃಶ್ಯವಾಗಿ ಆಡುತ್ತಿದ್ದ, ಮೀನೊಂದಕ್ಕೆ ಗುರಿಕಟ್ಟುತ್ತಿತ್ತು. ಪ್ರಭಾಕರ ಸರಸರ ಕ್ಯಾಮರ ತೆಗೆದು ಅದರ ಲೆನ್ಸ್ ಬಿಚ್ಚಿ, ಟೆಲಿಲೆನ್ಸ್‌ಗಾಗಿ ತಡಕಾಡಿ ಹುಡುಕಿ ಅದರ ಕೇಸಿನ ಜಿಪ್ ಹಿಂದಕ್ಕೆಳೆದು ನನ್ನ ಕೈಗೆ ಯಾವುದೋ ಒಂದನ್ನು ಹಿಡಿದುಕೊಳ್ಳಲು ಕೊಟ್ಟು, ಇನ್ನೊಂದನ್ನು ಕೆಮರಾಕ್ಕೆ ಜೋಡಿಸುತ್ತಾ, ಇಷ್ಟೆಲ್ಲಾ ಮಾಡುತ್ತಿರಬೇಕಾದರೆ ಮಿಂಚುಳ್ಳಿ ನಿಂತಲ್ಲೇ ನಿಂತು ರೆಕ್ಕೆ ಬಡಿಯುತ್ತಾ ಮೀನಿಗೆ ಗುರಿ ಇಡುತ್ತಿತ್ತು. ನಾನೂ "ಬೇಗ ಕಣೋ, ಅದು ಇನ್ನೇನು ಹೊರಟು ಹೋಗುತ್ತೆ" ಎಂದೆನ್ನುತ್ತಿರಬೇಕಾದರೆ ಮಿಂಚುಳ್ಳಿ ಡುಬುಕ್ ಎಂದು ಕೊಳದ ನೀರೊಳಕ್ಕೆ ಧುಮುಕಿ ಬೆಳ್ಳಿಯ ತುಣುಕಿನಂತೆ ಮಿನುಗುತ್ತಿದ್ದ ಚಿಕ್ಕ ಮೀನೊಂದನ್ನು ಕೊಕ್ಕಿನಲ್ಲಿ ಹಿಡಿದುಕೊಂಡು ಮೇಲಕ್ಕೆದ್ದು ಅಂತರ್ಧಾನವಾಯ್ತು (134).

ಇಲ್ಲಿ, ಈ 'ದಿವ್ಯಕ್ಷಣ'ದಲ್ಲಿ ಮನುಷ್ಯ ಮತ್ತು ಕಾಡು ಸಂಧಿಸುತ್ತಾರೆ. ಇದು ಹೇಗೆ ಕಾಡಿನ, 'ಮಹಾಮಲೆಕಾನಿ'ನ ಮಹದ್ದರ್ಶನವೋ ಹಾಗೆಯೇ ಮಾನವನ–ಜೀವವಿಕಾಸದ ಪರಮೋನ್ನತ ಜೀವಿಯ–ಅನುಭಾವ. ಈ ದೃಶ್ಯದಲ್ಲಿ ಪ್ರಕೃತಿಯ 'ಬೆಂಕಿ', 'ನೀರು', ನೆಲ ('ನೆರಳು'), ಗಾಳಿ ('ಭರ್ರನೆ'), ಆಕಾಶ('ಶೂನ್ಯ')ಗಳ ಪಾಂಚ ಭೌತಿಕ ಸಮನ್ವಯವೂ ಪುರುಷನ ದರ್ಶನ-ಶ್ರವಣ–ಸ್ಪರ್ಶಗಳ ಐಂದ್ರಿಕೇಗಾಗ್ರತೆಯೂ ರಸನಿಮಿಷದಲ್ಲಿ ಸೇರುವುದರಿಂದ ಇದು ಪೌರುಷ ಅಪೌರುಷೇಯಗಳ ಐಕ್ಯ ದರ್ಶನಮಹತ್ತಾಗುತ್ತದೆ.

ಈ ಅನುಭವ ವಿಶೇಷವನ್ನು ಭಾಷೆ ಬರೀ ಶಬ್ದವೇ ಅರ್ಥವಾಗುವ ('ಚಕ್ಕನೆ', 'ಭರ್ರನೆ', 'ಡುಬುಕ್') ಅವ್ಯಯಗಳಿಂದ ಹಿಡಿದು ಅರ್ಥಪ್ರೌಢಿಮೆಯ ಸಂಸ್ಕೃತ ('ಶೂನ್ಯಾಂತರಾಳ', 'ಪ್ರತ್ಯಕ್ಷ', 'ಅನಿರೀಕ್ಷಿತ', 'ದೃಗ್ಗೋಚರ', 'ಅಂತರ್ಧಾನ') ಸಮಾಸಗಳವರೆಗೆ ಭಾವಪೂರ್ಣತೆಯಿಂದ ದುಡಿಸಿಕೊಂಡು ಬರುತ್ತದೆ. ಕೇವಲ ಭೌತಿಕವಾದ ಹಕ್ಕಿ–ಕೊಳ, ನೆರಳು–ಬೆಳಕುಗಳು ಭಾಷೆಯ ಬೌದ್ಧಿಕ–ಭಾವುಕ ಅರ್ಥಸಂಯೋಜನೆಯಿಂದ ಆಧ್ಯಾತ್ಮಿಕ ವ್ಯಂಜಕತೆಯನ್ನು ಪಡೆದು ಕೊಳ್ಳುತ್ತವೆ. ಅಲ್ಲದೆ, ಇಲ್ಲಿ ಹಕ್ಕಿ 'ಬೆಳ್ಳಿಯ ತುಣುಕಿನಂತೆ ಮಿನುಗುತ್ತಿದ್ದ' ಮೀನಿನ ಮಿಂಚನ್ನು ನೀರಿನ ಪಾತಾಳದಿಂದ ಹೆಕ್ಕಿ, ಮೇಲಕ್ಕೆದ್ದು, ಆಕಾಶದ ಅಂತರಾಳದಲ್ಲಿ ಅಂತರ್ಧಾನವಾಗುವಲ್ಲಿ, ಪೃಥ್ವಿಯೇ ದ್ಯಾವಕ್ಕೆ ದಿವ್ಯತೆಯನ್ನು ಚೆಲ್ಲುವ (ದಿವ್ಯ = ಬೆಳಕು, ಪ್ರಕಾಶ) ಒಂದು ಅನನ್ಯ ವಿನೂತನ ಅನುಭವವನ್ನು ಸಾಧಿಸುವುದರ ಜೊತೆಗೆ ಹೇಗೆ ಪ್ರಕೃತಿಯಲ್ಲಿ ದಿವ್ಯತೆ ಅಡಗಿದೆ, ಹೇಗೆ ಇಹದ ಅನುಭವಪ್ರತ್ಯಕ್ಷವೇ ಪರದ ವಿಸ್ಮಯ ದರ್ಶನ ಎನ್ನುವ ಸತ್ಯ ವಿಶೇಷದ ಹೊಸತನ್ನು ಅಭಿನಯಿಸುತ್ತದೆ. ಈ ಅನುಭವವೇ ಮುಂದಿನ ಹಾರುವ ಓತಿಯ ಸಾಕ್ಷಾತ್ಕಾರಕ್ಕೆ ನಾಂದಿಯಾಗುತ್ತದೆ.

ಆದರೆ ಈ ವಿಶೇಷಾನುಭವ ಅನಾಯಾಸವಲ್ಲ: ಇದಕ್ಕೆ ದುಡಿಮೆ, ಶ್ರಮ, ನೋವು, ಬಲಿ ಮತ್ತು ತ್ಯಾಗ ಆವಶ್ಯಕ. ಜೇನು ಹುಳು ತನ್ನ ಜೀವನ ರೀತಿಯ ವಿಶೇಷವನ್ನು ಪ್ರದರ್ಶಿಸುವಲ್ಲಿ ಅನ್ವೇಷಕರ ಮುಖ ಮೂತಿಗಳು ಹನುಮಂತ–ಜಾಂಬುವಂತರಂತಾಗ ಬೇಕಾಗುತ್ತವೆ. ಓತಿಯ ದರ್ಶನದ ಹಾದಿಯೋ ಇನ್ನೂ ದುಸ್ತರ, ದುರ್ಗಮ. ನಡೆಯುವ ಪ್ರಯಾಸ ಒಂದೇ ಅಲ್ಲ, ಒಮ್ಮೆ ಕೆಸರಹೊಂಡದಲ್ಲಿ ಬಿದ್ದ ಗಾಡಿಯನ್ನು 'ಬಚಾವ್' (157) ಮಾಡಲು ಮಾಡಿದ ಶ್ರಮಕ್ಕೆ 'ಚಳಿ ಇದ್ದರೂ ಬೆವರು ಧಾರಾಕಾರವಾಗಿ ಹರಿಯ ತೊಡಗು' (157)ತ್ತದೆ. ಸಂಗಾತಿ ನಾಯಿ ಕಿವಿಯ ಕಿವಿಗೆ ಗುರಿ ತಗುಲಿ ರಕ್ತ ತೊಟ್ಟಿಕ್ಕುತ್ತದೆ; ಗರಿ ಅದರ ಬಾಯಿಗೆ ಚುಚ್ಚಿ ಅದನ್ನು ತೆಗೆಯುವಾಗ 'ಕುಯ್ಯೋ' (123) ಎಂದು ಪರಮ ಯಾತನೆಯಿಂದ ಕೂಗಿ ಕೊಳ್ಳುತ್ತದೆ; ಒಮ್ಮೆ ಅದು ಕಾಡಿನಲ್ಲಿ ಕಳೆದು ಹೋಗಿ ನಿರೂ

ಪಕನಿಗೆ ಭರಿಸಲಾಗದ ದುಃಖವಾಗುತ್ತದಲ್ಲದೆ, ಅವನು ಅದನ್ನು ಹುಡುಕಲು ಕಾಡಿನ ಅನಂತವನ್ನು ಸೇರಲು ನಿರ್ಧರಿಸುತ್ತಾನೆ. ಈ ಅನ್ವೇಷಣದ ಹಾದಿಯಲ್ಲಿ ನಾಯಿಕಿವಿಯ ರಕ್ತಬಲಿಯೂ, ಒಂದು ಉಡದ ಪ್ರಾಣಬಲಿಯೂ ಆಗುತ್ತವೆ.

ಹೀಗೆ ಕಷ್ಟಸಾಧ್ಯವಾದ ಯಾತ್ರೆಯಲ್ಲಿ ಸಂಪ್ರಾಪ್ತವಾದ ಹಾರುವ ಓತಿ ಯಾತ್ರಿಕರಪಾಲಿಗೆ ಒಂದುರೀತಿಯ ದಿವ್ಯದರ್ಶನವೇ ಸರಿ. ಈ ದರ್ಶನವಾಗುವುದು ಮೊದಲು ಯಾತ್ರಾಮುಖ್ಯನೂ, ಎಲ್ಲರಿಗಿಂತಲೂ ಹೆಚ್ಚಾಗಿ ಹೆಣಗಿ ತಪ್ತನಾದವನೂ ಆದ ನಿರೂಪಕನಿಗೇ; ಹಾಗೆಯೇ ಅವನಿಂದಲೇ ಉಳಿದೆಲ್ಲರಿಗೂ ದರ್ಶನ ಲಾಭವಾಗುವುದು ಕೂಡ, ಈ ದರ್ಶನವಾದರೋ ಯಾವುದೋ ಒಂದು ಅಭೂತಪೂರ್ವ ವಿಶ್ವಘಟನೆಯಂತೆ, ಅವತಾರದಂತೆ, ನಿಗೂಢತೆಯ ಮುಸುಕನ್ನು ಹೊದ್ದು ನಿಲ್ಲುತ್ತದೆ:

ಒಂದು ಬಗೆಯ ಸ್ತಬ್ಧತೆ ಆವರಿಸಿತು. ಶಬ್ದವಿರಲಿಲ್ಲವೆಂದಲ್ಲ. ಚಲನೆಯೂ ಇರಲಿಲ್ಲವೆಂದಲ್ಲ ಆದರೆ ಅವೆಲ್ಲ ಒಂದುಬಗೆಯ ಜಡತ್ವವನ್ನೂ ಸ್ತಬ್ಧಸ್ಥಿತಿಯನ್ನೂ ಮಾತ್ರ ಸಂಕೇತಿಸತೊಡಗಿದ್ದವು.

ಸುಮ್ಮನೆ ಕುಳಿತಿದ್ದೆ. ಇದ್ದಕ್ಕಿದ್ದಂತೆ ತಟ ತಟ ಸದ್ದಾಯ್ತು.

ಈ ದ್ವಂದ್ವಾರ್ಥದ ಮಾಂತ್ರಿಕಭಾಷೆ ಸೃಷ್ಟಿಮೂಲದ ನಿಗೂಢತೆಯನ್ನು ವ್ಯಂಜಿಸುವ ವೇದೋಪನಿಷತ್ತುಗಳ (ಬೈಬಲ್ಲಿನ) ಗೂಢವಾಕ್ಯಗಳಂತೆ ಒಗಟಾಗುತ್ತದಲ್ಲದೆ, ಮುಂದೆ ಮೂಡಿಬರುವ ದರ್ಶನದ ಅನುಭಾವವಚನವೂ ಆಗುತ್ತದೆ.

ಈ ಸ್ತಬ್ಧತೆಯ ಗರ್ಭದಿಂದ ಹೊರಟ 'ತಟ ತಟ' ಕ್ಕೆ ನಾಯಿಕಿವಿ ತನ್ನಕಿವಿಯನ್ನು 'ರಾಡಾರ್ ಉಪಕರಣದಂತೆ ತಿರುಗಿಸು'ವಲ್ಲಿ ಒಮ್ಮೆಗೆ ನೆಲದಸದ್ದು ಆಕಾಶದ ಸುದ್ದಿಯಾಗುತ್ತದೆ, ವಿಶ್ವವ್ಯಂಜನವಾಗುತ್ತದೆ. ಅನಿರೀಕ್ಷಣೆಯ ಭ್ರೂಮಕ್ಕನುಗುಣವಾಗಿ 'ನಾನಾ ದ್ವಾರಗಳಿಂದ' ಇರುವೆಗಳತಂಡೋಪತಂಡ 'ಪ್ರವಾಹೋಪಾದಿಯಲ್ಲಿ ಹೊರಕ್ಕೆ ಪ್ರವಹಿಸತೊಡಗುತ್ತವೆ' (159). ಈ ಇರುವೆಗಳ ಪ್ರವಾಹದಿಂದ ಜಿಗಿದ ಓತಿ 'ಅದ್ಭುತ ಸರೀಸೃಪ'(159) ವಾಗಿ ನಿರೂಪಕನಿಗೆ ಪ್ರತ್ಯಕ್ಷವಾಗುತ್ತದೆ:

ಉದ್ವೇಗದಿಂದ ನನ್ನ ಕೈಕಾಲುಗಳಿಗೆ ವಿದ್ಯುದಾಘಾತವಾದಂತಾಯ್ತು. ಬಂಡೆಯ ಬುಡದಲ್ಲಿ ಶಿಲುಬೆಗೇರಿದವನಂತೆ ಕುಳಿತಿದ್ದೆ... ನಮ್ಮ ಅನ್ವೇಷಣೆಯ ಅಂತಿಮುಹಂತ ಕರಾಳ ಮೋಡಗಳಿಂದ ಹಠಾತ್ತಾಗಿ ಉದ್ಭವಿಸುವ ಸಿಡಿಲಿನಷ್ಟು ಅನಿರೀಕ್ಷಿತವಾಗಿ ಸಂಭವಿಸಿತ್ತು...

ನನ್ನ ಕಣ್ಣುಗಳು ಮೊಳೆಹೊಡೆದಂತೆ ಹತ್ತುತ್ತಿದ್ದ ಓತಿ ಕಡೆ ಕೀಲಿಸಿ ಹೋಗಿತ್ತು... ಪ್ರತಿಕ್ಷಣಕ್ಕೂ ಅದು ನನ್ನ ದೃಷ್ಟಿರೇಖೆಯಿಂದ ತಪ್ಪಿಸಿಕೊಂಡರೆ! ಎಂಬ ಉದ್ವೇಗ ಜ್ವರದಂತೆ ಉಲ್ಬಣಗೊಳ್ಳುತ್ತಿತ್ತು. (159-161)

ಈ ದರ್ಶನ ವಿಶೇಷದಲ್ಲಿ ವೇದನೆಯೇ ಸಂವೇದನೆ: ವಿದ್ಯುದಾಘಾತ, ಶಿಲುಬೆಗೇರುವಿಕೆ, ಹಠಾತ್ ಸಿಡಿಲು, ಕಣ್ಣುಗಳಿಗೆ ಮೊಳೆಹೊಡೆತ, ಕಣ್ಣು ಕೀಲಿಸಿ ಹೋಗುವುದು, ಉದ್ವೇಗ ಜ್ವರೋಲ್ಬಣ– ಇವೆಲ್ಲಾ ವೇದನೆಯೇ ಸಂವೇದನೆಯಾಗುವ ಅನುಭಾವ; ದರ್ಶನ ತೀವ್ರತೆಯನ್ನು ಭರಿಸಲು ಹೊರಟ ಅನುಭವದ ಸವಿಯಾತನೆ; ದೇಹದ ಎಲ್ಲೆಯನ್ನು ಭೇದಿಸುವ ಬಿಡುಗಡೆಯ ಕ್ರಿಸ್ತಕ್ಷಣ. ಹೇಗೆ ನೋಡುವ ಕಣ್ಣು ಬಡಿಯುವ ಕೆಲಸವನ್ನು ಮಾಡುತ್ತಾ ಜ್ಞಾನೇಂದ್ರಿಯ ಕರ್ಮೇಂದ್ರಿಯವಾಗುತ್ತೋ, ಹಾಗೆಯೇ ವೇದನೆಯೇ ಸಂವೇದನೆಯ ರಸವಾಗಿ ಪರಿಣಮಿಸುವಲ್ಲಿ ಕಾಣ್ಕೆ ದರ್ಶನವಾಗುವ ವೈಚಿತ್ರ್ಯವಡಗಿದೆ.

ನಿರೂಪಕನ ಈ ಮಹಾಕಾಣ್ಕೆಯನ್ನು ನಿಜಗೊಳಿಸುವುದು, ಸಾಕ್ಷಾತ್ಕರಿಸುವುದು ಕರ್ವಾಲೋರ ಕಾರ್ಯ:

"ಕೆಲವು ಪ್ರಶ್ನೆಕೇಳ್ತೀನಿ. ಉತ್ತರ ಹೇಳಿ"

"ಆಗಲಿ"

"ಅದರ ತಲೆ ಮತ್ತು ಕುತ್ತಿಗೆ ಮೇಲೆ ಗರಗಸದಂಥ ಚರ್ಮ ಇದೆಯೇ?"

"ಹ್ಞೂ."

"ಅದು ಬಾಲದವರೆಗೂ ಇದೆಯೋ"

"ಇಲ್ಲ ಬೆನ್ನಿನವರೆಗೆ ಮಾತ್ರ"

"ರೈಟ್"

.....

"ನಾಲಿಗೆ ಈಚೆಗೆ ಚಿಡ್ತಿದೆಯೋ"

"ಹ್ಞೂ"

"ಹ್ಯಾಗಿದೆ"

"ನಾಲಿಗೆ ಹಾಗೆ"

.....

"ರೈಟ್. ಯು ಆರ್ ರೈಟ್. ನೀವು ನೋಡುತ್ತಿರೋದು ನಿಜ"

ಕರ್ವಾಲೋ– ನಿರೂಪಕನ ಸಂಭಾಷಣೆ, ಆರುಣೀ–ಶ್ವೇತಕೇತುವಿನ ನ್ಯಗ್ರೋಧವನ್ನು ಕುರಿತ ಜೀವರಹಸ್ಯವನ್ನರಸುವ ಸಂವಾದದಂತೆ ಸತ್ಯಾನ್ವೇಷಣೆಯ ಹಾದಿಯಲ್ಲಿ ಸತ್ಯದರ್ಶನವಾಗಿಸುತ್ತದೆಯಲ್ಲದೆ, ಆ ಸತ್ಯಕ್ಕೆ ಗುರುವಿನ ಋಜುವಾತನ್ನು ಕೊಟ್ಟು ('ನೀವು ನೋಡ್ತಿರೋದು ನಿಜ') ನಿರೂಪಕನ ಅನುಭವವನ್ನು ನಿಜಗೊಳಿಸಿ, ಅವನದ್ದಾಗಿಸುತ್ತದೆ.

ಓತಿಯನ್ನು ಕಂಡ ನಿರೂಪಕ ಎಲ್ಲರನ್ನೂ ಕೂಗಿ ಕರೆದಾಗ, ಕರ್ವಾಲೋ ಪ್ರಭಾಕರ ಸ್ನಾನ ಮಾಡುತ್ತಿದ್ದವರು ಹಾಗೇ ಲಂಗೋಟಿಯಲ್ಲಿ ಧಾವಿಸುತ್ತಾರೆ. ಹಾಗೆ ಅವರು ಬರುವಲ್ಲಿ ಅವರು ನಾಗರಿಕತೆಯ ಸಂಕೇತವಾದ ಬಟ್ಟೆಯನ್ನು ಕಳಚುವುದು, ಆ ಮೂಲಕ ಕಾಲಬಂಧವನ್ನು ವಿಸರ್ಜಿಸುವುದೊಂದೇ ಅಲ್ಲ, ಪ್ರಕೃತಿ ಸಹಜವಾದ ನಗ್ನತೆಯಲ್ಲಿ, ಮುಗ್ಧತೆಯಲ್ಲಿ ಓತಿಯನ್ನು ಸಂದರ್ಶಿಸಿ, ಮಾನವನೂ ಪ್ರಕೃತಿಯೂ ನಗ್ನತೆಯ ಮುಗ್ಧತೆಯಲ್ಲಿ ಒಂದಾಗುತ್ತಾರೆ. ಕರ್ವಾಲೋ "ಓಹ್ ಮೈಗಾಡ್" "ಆಶ್ಚರ್ಯ" ಎಂದು ಉದ್ಗರಿಸಿ, "ಕಂಗ್ರಾಜುಲೇಶನ್ಸ್" ಎಂದು ನಿರೂಪಕನ ಕೈಕುಲುಕುವಲ್ಲಿ ಆ ದಿವ್ಯಕ್ಷಣದ ದಿವ್ಯತೆಯನ್ನು ಗುರುತಿಸುತ್ತಾರಲ್ಲದೆ ("ಓಹ್ ಮೈಗಾಡ್"), ಮಾನವೀಯ ಪ್ರೇಮವನ್ನು ಸ್ನೇಹಾನುಬಂಧವನ್ನು ಸಾರಿ (ಕಂಗ್ರಾಜುಲೇಷನ್ಸ್), ಅದನ್ನು ಕೈಕುಲುಕುವುದರ ಮೂಲಕ ಪುಷ್ಟೀಕರಿಸುತ್ತಾರೆ. ಇಲ್ಲಿ ದರ್ಶನ ವ್ಯಕ್ತಿ ಮಾತ್ರನ ಸ್ವಾರ್ಥ ಸಂಪಾದದೆಯಾಗದೆ ಸಮಾಜವು, ಮಾನವ ಕುಟುಂಬವೂ ಸೇರಿ ಪಾಲ್ಗೊಳ್ಳುವ ಸಾಮಾಜಿಕ ಕ್ರಿಯೆಯಾಗುತ್ತದೆ.

ಓತಿಯ ದರ್ಶನದಲ್ಲಿ ದಣಿದ ನಿರೂಪಕ ನಿದ್ರೆಮಾಡಿ ಎಚ್ಚತ್ತಮೇಲೆ ಅವನಿಗೆ ಇನ್ನೊಂದು ದರ್ಶನವಾಗುತ್ತದೆ. ಓತಿಯನ್ನು ಹಿಡಿಯಲು ಹಚ್ಚಿದ ಮರದೆಲೆಗಳ ಹೋಮದ ಬೆಂಕಿ_ಹೊಗೆ 'ಪರ್ವತ' ದಂತೆ ಎದ್ದು 'ಯಾವುದೋ ಕಾಳಮೇಘದೊಳಗಡೆಯಿಂದ ಮರಗಳೂ ಮಾನವರೂ ಉತ್ಪತ್ತಿಯಾಗುತ್ತಿದ್ದಂತೆ' (168) ಕಾಣುತ್ತದೆ. ಸೃಷ್ಟಿಮೂಲವಾದ ಕಗ್ಗತ್ತಲಿನ ಬಸಿರಿನಿಂದ ಜೀವವಿಕಾಸದ ಕ್ಷಣ ಮಿಂಚುತ್ತದೆ. ಈ ಕತ್ತಲೆಯಲ್ಲಿ ಕರ್ವಾಲೋ, ಕರಿಯಪ್ಪ ಮರೆಯಾಗುತ್ತಾರೆ; ನಿರೂಪಕ ತಾನೂ ಹೊಗೆಯ ಕತ್ತಲಿನಲ್ಲಿ ಏನೂ ಕಾಣದವನಾಗಿ ಎಂಕ್ಟನ ಹೆಂಡತಿಗೆ ಡಿಕ್ಕಿ ಹೊಡೆಯುವುದನ್ನು ಎರಡೇ ಗೇಣಿನಲ್ಲಿ ತಪ್ಪಿಸಿಕೊಳ್ಳುತ್ತಾನೆ. ಆಮೇಲೆ ಮರಹತ್ತುವ ಕರಿಯಪ್ಪ, ಎಂಕ್ಟ 'ಕೈಕಾಲುಗಳೆರಡನ್ನೂ ಉಪಯೋಗಿಸಿ ಚತುಷ್ಪಾದಿಗಳಂತೆ, ಕಪ್ಪೆಗಳೋಪಾದಿಯಲ್ಲಿ ಕೆವಳುತ್ತಾ' ಹತ್ತುತ್ತಾರೆ.

ಕಪ್ಪೆ, ಚತುಷ್ಪಾದಿ, ಹಿಸ್ಸೆಂದು ಬುಸುಗುಟ್ಟುವ ಹಾವು ಓತಿ ಸುಯ್ಯೆಂದು ಯಾನಗೈಯುವ ಹಕ್ಕಿಓತಿ, ಓತಿ ಬಾಲವನ್ನು ಬಿಡದೆ ಹಿಡಿದ ಕಪಿಮುಷ್ಟಿ ಕರಿಯಪ್ಪ, ನಿಂತುನೋಡುವ ಕೌತುಕಮಾನವ ನಿರೂಪಕ, ವಿಜ್ಞಾನಿ ಕರ್ವಾಲೋ– ಇವೆಲ್ಲಾ ಜೀವವಿಕಾಸದ ಮಿಂಚುನೋಟ.

ಕಥೆಯಲ್ಲಿ ಈ ದರ್ಶನ ವೈವಿಧ್ಯಗಳ ಗ್ರಾಹಕ ಮಾಧ್ಯಮ ಅಥವಾ ಪ್ರಜ್ಞಾಶೈಲಿ- ವಿನೋದ. ವಿನೋದ, ಇರುವ ಮತ್ತು ಇರಬೇಕಾದುದರ ಮಧ್ಯೆ ಇರುವ ಅಂತರದಿಂದ ಜನಿತವಾದ, ಭಯದಿಂದ ಹಿಡಿದು ವಿಸ್ಮಯದವರೆಗೆ ಹಬ್ಬಿದ, ಭಾವಗಳನ್ನು ಬಗೆಯುವ ವಿಶೇಷ ನೋಟ. ಇರುವ ಮತ್ತು ಇರಬೇಕಾದುದರ ಅಂತರ ಹಾಸ್ಯಕ್ಕೆ ಎಡೆಕೊಟ್ಟು ಕಾಮೆಡಿಯಾಗಬಹುದು; ವಿಷಾದವನ್ನು ಪ್ರೇರೇಪಿಸಿ ಟ್ರ್ಯಾಜಡಿಯಾಗಬಹುದು. ವಿನೋದವು ಹಾಸ್ಯ ವಿಷಾದಗಳೆರಡನ್ನೂ ಒಳಗೊಳ್ಳುವ, ಒಮ್ಮೊಮ್ಮೆ ಇವೆರಡನ್ನೂ ವಿಚಿತ್ರವಾಗಿ ಸಮನ್ವಯಿಸುವ ದೃಷ್ಟಿ ವಿಶೇಷ. ಕಥೆಯಲ್ಲಿನ ಈ ಒಂದು ಪ್ರಸಂಗ ಹಾಸ್ಯ– ವಿಷಾದಗಳೆರಡನ್ನೂ ಏಕಕಾಲದಲ್ಲಿ ಧ್ವನಿಸುತ್ತದೆ:

"ಅಯ್ಯಯ್ಯೋ ಬಂತೂ! ಬಂತೂ! ಅರರೇ! ಕೋಲು ಗೀಲು ತಗೊಳ್ರೋ" ಎಂದು ಮಂದಣ್ಣ ಮೊದಲು ದೊಂಬಿ ಎಬ್ಬಿಸಿದ. ಹೋಹೋ ಓಹೋ ಅರರೆ ಇತ್ಯಾದಿ ಉದ್ಗಾರಗಳ ಗೊಂದಲ ಒಂದು ಎದ್ದಿತು. ಮಸಿಸುಡುವವ, ಪ್ರಭಾಕರ, ಕರಿಯಪ್ಪ ಎಲ್ಲಾ ಎಬ್ಬಿಸಿದ ಗೊಂದಲ ಎಲ್ಲಾ ನಿಂತಾಗ ಕರಿಯಪ್ಪ ಮಿಂಚಿನ ವೇಗದಲ್ಲಿ ಒಂದು ದೊಡ್ಡ ಬಲವಾದ ಉಡುವನ್ನು ಕತ್ತಿಯಿಂದ ಹೊಡೆದು ಅದರ ಹೊಟ್ಟೆಯಲ್ಲಿ ದೊಡ್ಡ ಗಾಯ ಮಾಡಿ ಹಾಕಿದ್ದ. ಆ ಕಟ್ಟುಮಸ್ತಾದ ಬಲಶಾಲಿಯಾದ ಉಡ ಒದ್ದಾಡತೊಡಗಿತು. ಹಗ್ಗ ಕಟ್ಟಿದ್ದು ಇನ್ನೂ ಅದರ ಸೊಂಟದಲ್ಲೇ ಇತ್ತು. ಮಸಿಸುಡುವ ಬಡಕಲನ ಎಡಗೈ ಗಾಯವಾಗಿ ರಕ್ತ ಬರುತ್ತಿತ್ತು. ಅತ ಕರಿಯಪ್ಪನಿಗೆ ಅದನ್ನು ತೋರಿಸಿ ನೀನೇ ಕತ್ತಿತಾಗಿಸಿ ಗಾಯ ಮಾಡಿದ್ದು ಎನ್ನುವಂತೆ ಅಭಿನಯಿಸುತ್ತಾ ಬಯ್ಯತೊಡಗಿದ. ಕರಿಯಪ್ಪ ಅವನ ದೂರನ್ನು ತೀರಾ ನಿಕೃಷ್ಟವಾಗಿ ಕಂಡ

ಹೋಗಾ ಹೋಗಾ ಉಡನ ಉಗುರುತಾಗಿಆದದ್ದು, ನಾಮಾಡಿದ್ದಂತೆ! " ಎಂದು ತಾತ್ಸಾರದ ಮಾತಾಡಿದ (144)

ಕರ್ವಾಲೋ ಕೊಲ್ಲಬೇಡಿ ಎಂದು ಕೂಗಿದರಂತೆ. ಆದರೆ ಇವರ ಗಲಭೆಯಲ್ಲಿ ಅದು ಕೇಳಬೇಕಲ್ಲ. ಐದಾರು ಜನಕ್ಕೆ ಸವಾಲಾಗಿ ಸಮಬಲವಾಗಿ ನಿಂತ ಉಡ ಪಾಪ, ಕ್ಷುದ್ರ ಜಂತುವಿನಂತೆ ಒದ್ದಾಡಿ ಸತ್ತಿತು. ಕಿವಿ ಅದು ಕೊನೆಯುಸಿರೆಳೆಯುವವರೆಗೂ ಸಮೀಪ ನಿಂತು ಬೊಗಳುತ್ತಿತ್ತು (114).

ಇರುವ ಮತ್ತು ಇರಬೇಕಾದುದರ ವ್ಯತ್ಯಾಸವಿನೋದ, ಕಥೆಯ ಪ್ರಾರಂಭದ ಮೂರನೇ ವಾಕ್ಯದ ಅಕ್ಷರದಲ್ಲಿ ಮೊದಲಾಗಿ (ಹೊರಗಿನ ಬೋರ್ಡಿನಲ್ಲಿ ಬರೆದಿದ್ದ "ಜೇನು ಪೋಷಕರ ಸಹಕಾರಿ ಸಂಘ" ಎಂಬ ಬರಹದಲ್ಲಿ "ಷ" ಇರಬೇಕೋ "ಶ" ಇರಬೇಕೋ...) ಕಥೆಯ ಕೊನೆಯಲ್ಲಿ ಮಹಾಅನ್ವೇಷಣೆಯ ಭಗೀರಥದಲ್ಲಿ ಸಂಪ್ರಾಪ್ತವಾದ ಹಾರುವ ಓತಿಯ ಸೃಷ್ಟಿ ಪವಾಡ, ಕೈಗೆ ಸಿಕ್ಕೂ ಕೈ ಮೀರಿದ, ಬಾಲದ ಶೇಷವನ್ನು ಕೈಯಲ್ಲಿಟ್ಟು ಅನಂತ ಶೂನ್ಯಕ್ಕೆ ಕೈಕೊಟ್ಟ ಪ್ರಾಪ್ತಾಪ್ರಾಪ್ತತೆಗಳ ಭೌತಿಕ–ಆಧ್ಯಾತ್ಮಿಕಗಳ ವ್ಯತ್ಯಾಸದಲ್ಲಿ ಕೊನೆಯಾಗುತ್ತದೆ.

ಕರ್ವಾಲೋ ಕಥೆ ಕಾಡು ಮತ್ತು ಮಾನವನ ಕಥೆ. ಕಾಡನ್ನು ಮಾನವ ಪ್ರವೇಶಿಸುವಂತೆ ಕಾಡು ಮಾನವನನ್ನು ಪ್ರವೇಶಿಸುತ್ತದೆ. ಮಂದಣ್ಣ ಕಾಡನ್ನು ಹೊಕ್ಕು ಹಾರುವ ಓತಿಯನ್ನು ಹೊರಗೆಡಹುತ್ತಾನೆ; ಕಾಡು ಮಂದಣ್ಣನನ್ನು ಹೊಕ್ಕು 'ಅದ್ಭುತ ಪ್ರಕೃತಿ ಶಾಸ್ತ್ರಜ್ಞ'ನನ್ನು ಹೊರಗೆಡಹುತ್ತದೆ. 'ಯುಗಾಂತರಗಳ ಹಿಂದಿನ ಕುಣಿಕೆ'ಯಾದ ಹಾರುವ ಓತಿ ತನ್ನ ಬಾಲದ ಕುಣಿಕೆಯನ್ನು ಕೈಗಿತ್ತಾಗ, ಕಾಡಿನ ಮಾನವನ ಹಸ್ತಲಾಘವದಲ್ಲಿ ಕಾಲ ನಿಲ್ಲುತ್ತದೆ; ಅಂತರಮಾಯವಾಗುತ್ತದೆ; ಮಾನವ ಮತ್ತು ಕಾಡು ನಿಗೂಢತೆಯಲ್ಲಿ ಒಂದಾಗುತ್ತಾರೆ.

ಕುವೆಂಪು ಮತ್ತು ಕಾರಂತರ ಕಥೆಗಳಲ್ಲಿ ಕಾಡು ಆತ್ಮೀಯತೆಯ ಅಥವಾ ನಿಗೂಢತೆಯ ಕೆಲವು ಪಾರ್ಶ್ವಗಳನ್ನು ತಟ್ಟುತ್ತದೆ. ಆದರೆ ತೇಜಸ್ವಿಯವರ ಕರ್ವಾಲೋ ಕಥೆಯಲ್ಲಿನ ಕಾಡನ್ನು, ಆತ್ಮೀಯತೆ–ನಿಗೂಡತೆಗಳಲ್ಲಿ, ಇಲ್ಲಿ ತುಂಬಿಬರುವಷ್ಟು, ಮುದ್ದಾಗಿ ಬರುವಷ್ಟು ಆಂಗ್ಲ ಸಾಹಿತ್ಯದ ಕೆಲವು ಮಹತ್ವದ ಬರಹಗಾರರಲ್ಲಿಯೂ ಕಾಣುವುದು ಕಷ್ಟ. ಕಾಡು, ಕಾಳಿದಾಸನ "ಶಾಕುಂತಲದ" ಪ್ರಕೃತಿಯ ಆಪ್ತತೆಯನ್ನು, ಕಾನ್ರಾಡನ 'ಹಾರ್ಟ್ ಆಫ್ ಡಾರ್ಕ್‌ನೆಸ್' ನ ಕಾಂಗೋ ಕಾಡಿನ ಭಯ ವಿಸ್ಮಯ ನಿಗೂಢತೆಗಳನ್ನು ಭಾವೋದ್ರೇಕ ಅಥವ ಭಾವವೈಪರೀತ್ಯಕ್ಕೆ ಎಡೆಕೊಡದೆ, ಅನುಭವ ವಾಸ್ತವಿಕತೆಯಲ್ಲಿ, ಸ್ವಂತವಾಗಿ ಸ್ಪಂದಿಸುತ್ತದೆ.

ಕಥೆ ಅಲ್ಲಲ್ಲಿ, ಜಿ. ಎಚ್. ನಾಯಕರು ತಮ್ಮ ವಿಮರ್ಶೆಯಲ್ಲಿ ಸೂಚಿಸಿರುವಂತೆ 'ಆಧ್ಯಾತ್ಮಿಕ ಪರಿಭಾಷೆ'(217)ಯ ಪ್ರಯೋಗ 'ತಾತ್ವಿಕ ಧೋರಣೆಗೆ ನವುರಾಗಿ ಇನ್ನೊಂದು ಆಯಾಮವನ್ನು ಮೈಗೂಡಿಸುವ ಹವಣಿಕೆ' (217), 'ಯತ್ನ' ಎನ್ನುವಂತೆ ಕಾಣುವುದು ಸಹಜವಾದರೂ ಆ ಮಾತುಗಳು ಕಥೆಯಲ್ಲಿ ಪಾತ್ರವಾದ ನಿರೂಪಕನ ಬಾಯಲ್ಲಿ ಬರುವುದರಿಂದ ಅದು ನಿರೂಪಕನ ವ್ಯಕ್ತಿನ್ಯೂನತೆಯಾಗಬಹುದಾಗಿ, ಬರಹಗಾರನ ವ್ಯಾಖ್ಯಾನದ, ಅಧಿಕಪ್ರಸಂಗತೆಯ ಅಪವಾದವನ್ನು ಸಾಕಷ್ಟು ಕಳೆದುಕೊಳ್ಳುತ್ತದೆ. ಹಾಗೆಯೇ ಕೆಲವು ಕಡೆಯ ನಿರೂಪಣೆಗಳಲ್ಲಿ ನೈತಿಕ ಟೀಕೆ ಇರುವಂತೆ ಕಂಡುಬಂದರೆ ಅದು ನಿರೂಪಕನ ಅಥವಾ ಪಾತ್ರಗಳ, ದೃಷ್ಟಿಕೋಣ, ಕಥೆಯ ಪ್ರಜ್ಞೆಯದ್ದಲ್ಲ ಎಂಬುದನ್ನು ನಾಯಕರು ಸೂಚಿಸಿದರೂ, ಅವೂ ಒಂದು ರೀತಿಯಲ್ಲಿ ಕಲೆಯ ಕ್ಲೇಶಗಳಾಗಿ ನಾಯಕರಿಗೆ ತೋರಿಬರುವಷ್ಟು ತೀವ್ರವಲ್ಲ. ಉದಾಹರಣೆಗೆ ಎಂಕ್ಟ ಹೆಂಡತಿಯ ಹಾದರದ ಬಗ್ಗೆ 'ಯಾರದೇನು ಹರ್‍ಯಾಕಿಲ್ಲ, ಯಾರದ್ದೇನು ಮುರ್‍ಯಾಕಿಲ್ಲಾ' ಎಂಬಮಾತು ಮಂದಣ್ಣನಿಗೆ 'ಹಲ್ಕಾ', ನಿರೂಪಕನಿಗೆ 'ಪೋಲಿ'ಯಾಗಿ ಕಂಡರೆ ಆ ಮೂಲಕ ಅದು ಓದುಗನೂ ಎಂಕ್ಟನನ್ನು 'ಒಬ್ಬ ಯಃಕಶ್ಚಿತ್ ಪ್ರಾಣಿಯಾಗಿ ಕಾಣುವಂತಾಗುತ್ತದೆ' (227) ಎಂಬ ನಾಯಕರ ಮಾತಿಗೆ ಕಥೆಯಲ್ಲಿ ಪುಷ್ಟಿಸಿಗುವುದಿಲ್ಲ. ಏಕೆಂದರೆ ಈ ಮುಂಚೆ ಓದುಗ ಎಂಗ್ಟನ 'ಪ್ರತಿಭೆ'ಯನ್ನು ಕಂಡವನಾದ್ದರಿಂದ– ಅವನ ಪ್ರತಿಭೆ ಕರ್ವಾಲೋರನ್ನೂ 'ಚಕಿತ' ಗೊಳಿಸುವುದರಿಂದ– ಅವನ ಈ ವೈರಾಗ್ಯ ಮೊದಲು ನಗುಬರಿಸುವಂತಾದರೂ ಅವನನ್ನು 'ಯಃಕಶ್ಚಿತ' ನೆನ್ನುವದಕ್ಕೆ ಎಡೆಕೊಡುವುದಿಲ್ಲ. ಹಾಗೆಯೇ ನಾಯಕರು ಎಂಕ್ಟನ ಅನಿವಾರ್ಯತೆಯನ್ನು, ಕರ್ವಾಲೋ ಮಂದಣ್ಣನನ್ನು ಕಳ್ಳಭಟ್ಟಿ ಪ್ರಕರಣದಿಂದ ಬಿಡಿಸುವ ಅನಿವಾರ್ಯತೆಯನ್ನು ಅದರೊಂದಿಗೆ ಸಮೀಕರಿಸುವುದು ಸಮಂಜಸವಾಗಿ ಕಾಣುವುದಿಲ್ಲ. ಮೂಲತಃ ಅವೆರಡೂ ಅನೀತಿಗಳೆಂದು ತೀರ್ಮಾನಿಸಿರುವುದು ಸಮರ್ಥನೀಯವಲ್ಲ. ಒಂದನೆಯದಾಗಿ, ಕರ್ವಾಲೋರು

ಮಂದಣ್ಣನನ್ನು ಬಿಡಿಸುವುದರಲ್ಲಿ ಅನೀತಿಯಂತೂ ಇಲ್ಲವೇ ಇಲ್ಲ. ಹುಳಿತ ಜೇನು ಮಂದಣ್ಣ ಎಸೆಯಲು ಇಟ್ಟಿದ್ದ. ಆದರೆ ಅದನ್ನು ಎಸೆಯಲು ಬಿಡದೆ 'ದಬಾಯಿಸಿ' ಇರಿಸಿಕೊಂಡವರು 'ಭಾವ ಮೈದರು, ಮಾವ.' ಇದನ್ನು ಸತ್ಯ ಪಕ್ಷಪಾತಿಗಳಾದ ಕರ್ವಾಲೋ "ತ ಡೀ ರಿ, ತ ಡೀ ರಿ. ಮಂದಣ್ಣ ಹಠಾಬು ಮಾಡ್ತಿದ್ದದ್ದು ಹೌದೋ?" (80) ಎಂದುಕೇಳಿ ನಿರೂಪಕನಿಂದ ಖಚಿತ ಪಡಿಸಿಕೊಳ್ಳುತ್ತಾರೆ. ಅಮೇಲೆ "ಪಾಪ ಅವನದೇನೂ ತಪ್ಪಿಲ್ವಲ್ಲ" (80) ಎಂದು ಅವನ ನಿರಪರಾಧವನ್ನು ಮನದಟ್ಟು ಮಾಡಿಕೊಂಡು ಅವನ ಬಿಡುಗಡೆಗೆ ನ್ಯಾಯಸಮ್ಮತವಾಗಿ ನ್ಯಾಯಾಲಯದಲ್ಲಿ ವಕೀಲರ ಸತ್ಯವಾದದಿಂದ, ತಮ್ಮ ಸತ್ಯ ಸಾಕ್ಷ್ಯದಿಂದ, ಪ್ರಯತ್ನಿಸಿ ಗೆಲ್ಲುತ್ತಾರೆ. ಒಂದು ವೇಳೆ ಅವನು ತಪ್ಪಿತಸ್ಥನಾಗಿ ಜುಲ್ಮಾನೆಯ ಶಿಕ್ಷೆಯಾದರೆ "'ಆರುನೂರಲ್ಲ ಆರುಸಾವಿರ ಆದರೂ ನಾನು ಕೊಡ್ತೀನಿ" (81) ಎಂದು ಕರ್ವಾಲೋ ಹೇಳುವಲ್ಲಿಯೂ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಅನೀತಿಯೂ ಅಲ್ಲಿಲ್ಲ. ಇನ್ನು ಎಂಕ್ಟನ ಅನಿವಾರ್ಯತೆ ಬಾಳಿನ ಅನಿವಾರ್ಯತೆ; ಬಾಳಿನ ಲೈಂಗಿಕ ಸತ್ಯವನ್ನು ಅನುಸರಿಸಿ ನಡೆವ, ಯಾರನ್ನೂ ವಂಚಿಸದ, ಯಾರಿಗೂ ತೊಂದರೆಕೊಡದ ಪ್ರಾಮಾಣಿಕ ವರ್ತನೆ. ಅದು, "ಹೆಂಡ್ರೂ ಮಕ್ಳೂ ಬಿಟ್ಟ" ಗಾರ್ಡ್‌ಗಳ ಅಸಹಾಯಕತೆಯನ್ನು, ಅವರ "ಹೆಂಗ್ಸರ ಸೋಕಿ" ಯ, ತನ್ನ 'ಜಾತಿ ಹೆಂಗ್ಸ' ರ "ಚಾಳಿ" ಯ ಲೈಂಗಿಕ ನಿಜವನ್ನು ಅರಿತ ಗಹನ ವರ್ತನೆ. ಒಟ್ಟಿನಲ್ಲಿ ಯಾವುದರಲ್ಲಿ ಯಾರಿಗೂ ತೊಂದರೆ, ಹಿಂಸೆ, ವಂಚನೆ ಇಲ್ಲವೋ ಅದು ಅನೀತಿಯಾಗಲು ಸಾಧ್ಯವಿಲ್ಲ. ಎಂಕ್ಟ 'ಯಾರದೇನು ಹರ್‍ಯಾಕಿಲ್ಲ, ಯಾರದ್ದೇನು ಮುರ್‍ಯಾಕಿಲ್ಲ' ಎನ್ನುವ ಮಾತು ನೀತಿ ಅನೀತಿಗಳ ಅಸ್ತಿತ್ವವನ್ನು ಸೂಚಿಸುತ್ತದೆಯಲ್ಲದೆ, ಇವನ ಬಾಳ ನೀತಿಯ ತಾತ್ವಿಕತೆಯನ್ನೂ ಸಾರುತ್ತದೆ. ನಾಯಕರು 'ಅದು ಗಂಭೀರವಾದ ವಿಷಯವೇ ಇದ್ದೀತು' (228) ಎನ್ನುವ ರಿಯಾಯಿತಿಯಲ್ಲಿ, ಈ ಅಂಶವನ್ನು ಗಮನಿಸದೇ ಇಲ್ಲ. ಮೇಲಾಗಿ, ಎಂಕ್ಟ ಇದು ಅವಮಾನವೆಂದು ತಿಳಿದೂ ಸುಳ್ಳು ಹೇಳದ, ಇದರಿಂದ ಅವಮಾನಿತನಾದರೂ ('ಹಲ್ಕ ಬಡ್ಡೀ ಮಗನೆ') ಲೆಕ್ಕಿಸದ, ತನ್ನ ಆತ್ಮಸಾಕ್ಷಿ ನಿಲುವನ್ನು ಮುಂದಿಡಲು ಅಂಜದ ತಾತ್ವಿಕ ಪ್ರಾಮಾಣಿಕ.

ಒಟ್ಟಿನಲ್ಲಿ ಕಥೆಯಲ್ಲಿ ಕಲೆಯ ನ್ಯೂನತೆಗಳೇನೇ ಇರಲಿ, ನಾಯಕರು ಕರ್ವಾಲೋ ಕಥೆಯ ಮಂದಣ್ಣನವರಂಥವರಲ್ಲಿ 'ಹುದುಗಿರುವ ಪ್ರತಿಭೆ' ಯ 'ಅದ್ಭುತ ಪ್ರಪಂಚ' (220) ವನ್ನು ಗುರುತಿಸಿ ಆ ಮಾರ್ಗದಲ್ಲಿ ಕಥೆಯ ಮಹತ್ತಿನ ಸಾಧನೆಯನ್ನು ಎತ್ತಿ ತೋರಿಸಿದ್ದಾರೆ.

ಕರ್ವಾಲೋ ಕಥೆಯ ಈ 'ಅದ್ಭುತ ಪ್ರಪಂಚ' ನಾಯಿ (ಕಿವಿ) ಮಾನವನಾಗುವ, ಕಾಡುಮಾನವ (ಮಂದಣ್ಣ) ಜೀನಿಯಸ್ಸಾಗುವ, ಕೃಷಿಕ (ನಿರೂಪಕ) ಕವಿಯಾಗುವ, ವಿಜ್ಞಾನಿ (ಕರ್ವಾಲೋ) ದ್ರಷ್ಟಾರನಾಗುವ– ಜೀವರೂಪ ವಿಶ್ವರೂಪವಾಗುವ– ಕಾಡು-ಮಾನವ ವ್ಯವಹಾರಾನುಭವನಿಜವೇ, ನಿತ್ಯವೇ ಕಥೆಯಲ್ಲಿ ಹಾವಾಗಿ ತೆವಳಬೇಕಾದ್ದು ಹಕ್ಕಿಯಾಗಿ ಹಾರುವ ಓತಿಯ ವಿನೋದ, ವಿಸ್ಮಯ, ದರ್ಶನ.

(ಈ ಲೇಖನದಲ್ಲಿ ಬರುವ ಸಂಖ್ಯೆಗಳು ಕಾದಂಬರಿಯ ಪುಟ ಸಂಖ್ಯೆಗಳಾಗಿವೆ.)

*

"ಮುಖ್ಯವಾಗಿ ನಾನು ಹಳೆಯ ಹೊಸ ಯೋಚನೆಗಳ ಸಮನ್ವಯದಲ್ಲಿ ತೊಡಗಿರುವ ಸಾಹಿತಿ. ಇಂಥ ಮನುಷ್ಯ ಇಂಗ್ಲೀಷ್ ವಚನ ಒಂದು ಹೇಳುವಂತೆ ಎರಡು ಕುರ್ಚಿಗಳ ಮಧ್ಯೆ ನೆಲಕ್ಕೆ ಬೀಳುವ ಸಂಭವ ಇದೆ. ಮಧ್ಯೆಯೂ ಒಂದು ಕುರ್ಚಿ ಇದೆ ಎಂದು ನನ್ನ ನಂಬಿಕೆ. ನಾನು ಅದರ ಮೇಲೆ ಕೂರುತ್ತೇನೆ ಎಂದು ನನ್ನ ಕಲ್ಪನೆ"

ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್

(ಸಂಪಾದಕರಿಗೆ ಬರೆದ ಪತ್ರದಿಂದ, 15-10-80)

ವಿಮರ್ಶೆಯ ಪರಿಭಾಷೆ

ಓ. ಎಲ್. ನಾಗಭೂಷಣ ಸ್ವಾಮಿ

complexity : ಸಂಕೀರ್ಣತೆ

ಸಂಕೀರ್ಣತೆ ಎಂಬ ಪಾರಿಭಾಷಿಕ ನವ್ಯವಿಮರ್ಶಕರ (New critics) ಪರಿಚಯದಿಂದಾಗಿ, Complexity ಪದದ ಸಮಾನಾರ್ಥಕವಾಗಿ, ಕನ್ನಡದಲ್ಲಿ ಬಳಕೆಯಾಗುತ್ತಿದೆ. Complexityಗೆ "ಅನೇಕ ಭಾಗಗಳನ್ನು ಒಳಗೊಂಡದ್ದು, ಸರಳವಲ್ಲದ್ದು, ಜಟಿಲವಾದದ್ದು, ಕಷ್ಟಕರವಾದದ್ದು" ಎಂಬ ಸಾಮಾನ್ಯ ಅರ್ಥವಿದೆ. ವಿಮರ್ಶೆಯಲ್ಲಿ "ವಿವಿಧ ಅನುಭವ ಮತ್ತು ಅರ್ಥಗಳನ್ನು ಅನುಮತಿಯಿಂದ ಸೂಚಿಸುವ, ಧ್ವನಿಸುವ ಪ್ರಕ್ರಿಯೆ" ಸಂಕೀರ್ಣತೆ ಎಂದು ಕರೆಸಿಕೊಳ್ಳುತ್ತದೆ.

ಸಂಕೀರ್ಣತೆ ಎಂಬ ಪರಿಕಲ್ಪನೆಯ ಬೇರು I. A. Richardsನ ಸಂದರ್ಭಸಿದ್ಧಾಂತ (Context Theory) ದಲ್ಲಿದೆ. ಯಾವುದೇ ಸಂದರ್ಭದಲ್ಲಿ ಬಳಕೆಯಾಗುವ ಪದಗಳು ಪರಸ್ಪರ ಉಜ್ಜೀವಿತಗೊಳ್ಳುತ್ತವೆ. (inter animate). ಪ್ರಸ್ತುತ ಸಂದರ್ಭದ ಮಿತಿಯಲ್ಲಿ ತಮ್ಮ 'ಯೋಗ್ಯತೆ' ಯನ್ನು ಪಡೆದುಕೊಳ್ಳುತ್ತವೆ. ಅಲ್ಲದೆ, ಹಿಂದೆ ಬೇರೆ ಬೇರೆ ಸಂದರ್ಭಗಳಲ್ಲಿ ಬಳಕೆಯಾಗಿದ್ದಾಗ ತಾವು ಪಡೆದಿದ್ದ ಅರ್ಥಶಕ್ತಿ, ಯೋಗ್ಯತೆಗಳನ್ನು ಪ್ರಸ್ತುತ ಸಂದರ್ಭಕ್ಕೂ ತಮ್ಮೊಡನೆ ತರುತ್ತವೆ. ಹೀಗಾಗಿ ಪದ-ಅರ್ಥಗಳಿಗೆ ಸೂಕ್ಷ್ಮವಾದ, ಶ್ರೀಮಂತವಾದ ಸಂಕೀರ್ಣತೆ ಪ್ರಾಪ್ತವಾಗುತ್ತದೆ. ಹಾಗೆಯೇ ಕಾವ್ಯದಲ್ಲಿ ಎರಡು ಬಗೆಗಳನ್ನು ಗುರುತಿಸಬಹುದು : 1. ಬಹಿಷ್ಕರಣ ಕಾವ್ಯ (Poetry of Exclusion) 2. ಅಂಗೀಕರಣ ಕಾವ್ಯ (Poetry of Inclusion). ಭಾವುಕ ಪ್ರೇಮ ಕವನ ಬಹಿಷ್ಕರಣ ಕಾವ್ಯದ ಉದಾಹರಣೆ. ಇದು ತನ್ನ "ಅಚ್ಚುಕಟ್ಟುತನ"ಕ್ಕಾಗಿ, ಭಾವುಕ ಪ್ರೇಮವೊಂದನ್ನು ಬಿಟ್ಟು ಮಿಕ್ಕೆಲ್ಲ ಅನುಭವಗಳನ್ನೂ, ಸಂವೇದನೆಗಳನ್ನೂ ಕವನದಿಂದ "ಕ್ರಮಬದ್ಧವಾಗಿ ಬಹಿಷ್ಕರಿಸುತ್ತದೆ". ಓದುಗ ಇಂಥ ಕವನವನ್ನು ಒಂದು ಸೀಮಿತ ಬೆಳಕಿನಲ್ಲಿ, ಪರಿಮಿತ ದೃಷ್ಟಿಕೋನದಲ್ಲಿ ನೋಡಿದಾಗ ಮಾತ್ರ ಕವನ ಯಶಸ್ವಿಯಾಗುತ್ತದೆ. ಓದುಗನ ಅನುಭವ ಬೇರೆಯಾದಾಗ, "ವಿಶಾಲ ಸಂದರ್ಭದ" ಭಿನ್ನ ರೀತಿಯ ದೃಷ್ಟಿಕೋನದಲ್ಲಿ ಪುನರ್‌ಪರಿಶೀಲಿಸಿದಾಗ ಇಂಥ ಭಾವುಕ ಪ್ರೇಮ ಕವನಗಳು ತೀರ ತೆಳುವೆಂದು, ಅನುಭವದ ಸರಳೀಕರಣವೆಂದು (ಯಾಕೆಂದರೆ, ಭಿನ್ನ ರೀತಿಯ, ವಿರುದ್ಧ ಅನುಭವಗಳನ್ನು ಗುರುತಿಸದೆ ಅವುಗಳ ಅಸ್ತಿತ್ವದ ಬಗ್ಗೆಯೇ ಮೌನವಾಗಿದ್ದು ತಿರಸ್ಕರಿಸಿ ಬಿಡುವುದರಿಂದ), ತಿಳಿದುಬಿಡುತ್ತದೆ. ಬಹಿಷ್ಕರಣ ಕಾವ್ಯದ ಸಂದರ್ಭ ಸೀಮೀತವಾದದ್ದು. ಅಂಗೀಕರಣ ಕಾವ್ಯವು ಭಿನ್ನ ರೀತಿಯ ವಿಶಾಲ ಸಂದರ್ಭಗಳನ್ನು ಅಂಗೀಕರಿಸಿ ತನ್ನಲ್ಲಿ ಒಳಗು ಮಾಡಿಕೊಳ್ಳುತ್ತದೆ. ಹೀಗಾಗಿ ಓದುಗನ ಅನುಭವವ್ಯಾಪ್ತಿ ವಿಶಾಲಗೊಂಡಾಗ, ಆತ ಆ ಕಾವ್ಯದ ಪುನರ್‌ಪರಿಶೀಲನೆ ನಡೆಸಿದರೂ, ಅದನ್ನು ತಾಳಿಕೊಳ್ಳುವ "ಬಿರುಸು" ಅಂಗೀಕರಣ ಕಾವ್ಯಕ್ಕೆ ಇರುತ್ತದೆ. ಭಿನ್ನರೀತಿಯ ಅನುಭವಗಳನ್ನು, ದೃಷ್ಟಿ

ಕೋನಗಳನ್ನು ತನ್ನಲ್ಲಿಯೇ ಒಳಗೊಂಡಿರುವುದರಿಂದ, ಅಂದರೆ ವ್ಯಂಗ್ಯ ಕೃತಿಯಲ್ಲೇ ಅಂತರ್ಗತವಾಗಿರುವುದರಿಂದ, ಓದುಗನ "ವ್ಯಂಗ್ಯ ಪರಿಶೀಲನೆ" (ironic contemplation) ಯನ್ನು ತಾಳಿಕೊಳ್ಳುವ ಶಕ್ತಿ ಅಥವ ಸಂಕೀರ್ಣತೆ ಇರುತ್ತದೆ. (ಉದಾಹರಣೆಗೆ ಕನ್ನಡದ ಲೇಖಕಿಯರ ಕಾದಂಬರಿಗಳಿಗೂ ಕಾರಂತ, ಚಿತ್ತಾಲರ ಕಾದಂಬರಿಗಳಿಗೂ ಇರುವ ವ್ಯತ್ಯಾಸ.)

Richardsನ ಈ ವಾದದ ಹಿನ್ನೆಲೆಯಲ್ಲಿ ಸಂಕೀರ್ಣತೆಯ ಪರಿಕಲ್ಪನೆ ಜನ್ಮತಾಳಿತು: ಉತ್ತಮ ಕಾವ್ಯ "ಶ್ರೀಮಂತಿಕೆ"ಯನ್ನು ಮತ್ತು "ಬಿರುಸನ್ನು" ಪಡೆದಿರಬೇಕು. ಅರ್ಥ ಮತ್ತು ಅನುಭವಗಳ ಶ್ರೀಮಂತಿಕೆ ಸಂದಿಗ್ಧತೆಯಿಂದ (Ambiguity) ಬರುತ್ತದೆ. ಪುನರ್‌ಪರಿಶೀಲನೆಯನ್ನು ತಾಳಿಕೊಳ್ಳುವ ಬಿರುಸು (toughness) ಕವನ ಒಳಗೊಂಡಿರುವ ವ್ಯಂಗ್ಯದಿಂದ ಬರುತ್ತದೆ. ಸಂದಿಗ್ಧತೆ ಮತ್ತು ವ್ಯಂಗ್ಯಗಳು ಸೇರಿ ಕಾವ್ಯಕ್ಕೆ ಸಂಕೀರ್ಣತೆ ಪ್ರಾಪ್ತವಾಗುತ್ತದೆ.

ಕೆಲವು ವಿಮರ್ಶಕರು ಸಂಕೀರ್ಣತೆಯನ್ನು ತೀರ ವಿಶಾಲ ಅರ್ಥದಲ್ಲಿ ಬಳಸುತ್ತಾರೆ. "ಅತ್ಯಂತ ಸರಳವಾದ ಭಾವವೂ ಮನುಷ್ಯನ ಅನುಭವಗಳಿಗೆ ಸಂಬಂಧಿಸಿದಂತೆ ಸಂಕೀರ್ಣವಾಗುತ್ತದೆ." ಕವನವನ್ನು ಒಂದು ಘಟಕವೆಂದು ಪರಿಗಣಿಸಿ ಅದರಲ್ಲಿ ಸಂಕೀರ್ಣತೆಯನ್ನು ಗುರುತಿಸುವುದಕ್ಕಿಂತ ಮುಂದೆ ಹೋಗಿ, ಮನುಷ್ಯನ ಅನುಭವಗಳೊಡನೆ ಸಂಬಂಧ ಕಲ್ಪಿಸುತ್ತಾ ಅತಿ ಗಹನ ಸಂಕೀರ್ಣತೆಯನ್ನು ಗುರುತಿಸುತ್ತಾರೆ.

Robert Graves, Laura Riding, I. A. Richards, William Empson ಸಂಕೀರ್ಣತೆಯ ಪರಿಕಲ್ಪನೆಯನ್ನು ಹೆಚ್ಚು ಪ್ರಚಾರಕ್ಕೆ ತಂದ ವಿಮರ್ಶಕರು. "ಸಂಕೀರ್ಣತೆ"ಯ ಬಗ್ಗೆ ಕೆಲವು ಗಂಭೀರ ಆಪಾದನೆಗಳೂ ಇವೆ: ಸಂಕೀರ್ಣತೆಯನ್ನು ಮಾನದಂಡವಾಗಿ ಬಳಸುವ ವಿಮರ್ಶಕ ಪಕ್ಷಪಾತಿಯಾಗುವ ಅಪಾಯವಿದೆ; ಆತ "ಸರಳತೆ ಮತ್ತು ಭಾವುಕತೆ"ಗಳನ್ನು ನಿರ್ಲಕ್ಷ್ಯಿಸಲು ತೊಡಗಬಹುದು; ಸಂಕೀರ್ಣತೆಯನ್ನು ಕಂಡುಕೊಳ್ಳುವ ಭರದಲ್ಲಿ ತನಗೆ ತೋರುವ ಅರ್ಥಗಳನ್ನೆಲ್ಲ ಕವನಕ್ಕೆ ಆರೋಪಿಸುತ್ತ ಹೋಗಬಹುದು. ಆದರೆ "ಮಹಾಕಾವ್ಯ" ನಿಜವಾಗಿಯೂ ಎಷ್ಟು "ಸರಳ" ಎಂದು ಸಾಧಿಸಲು ಕೊಡುವ "Ripeness is all", "It was sad as sad could be" ಇಂತಹ ಉದಾಹರಣೆಗಳು ತಮ್ಮ ಅರ್ಥ ಶ್ರೀಮಂತಿಕೆಯನ್ನು ತಮ್ಮ ತಮ್ಮ ಕೃತಿಗಳ ಸಾಹಿತ್ಯಿಕ ಸಂದರ್ಭದ ಬಲದಿಂದಲೇ ಪಡೆಯುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಹೆಚ್ಚಿನ ಓದಿಗೆ: E. B. Burgum. The cult of the Complex in Poetry, 1951; Cleanth Brooks: Irony as a Principle of Structure, 1951; W. Empson: The Structure of Complex Words 1951.

(ಮುಂದುವರಿಯುತ್ತದೆ)

*

"ನಮ್ಮ ಸಾಹಿತ್ಯ ನಮ್ಮ ವಿಮರ್ಶೆ ಇನ್ನೂ ಅಂಗ್ಲ ಸಾಹಿತ್ಯದ ಪ್ರಭಾವದಲ್ಲಿಯೇ ನಡೆಯುತ್ತಿವೆ. ನಮಗೆ ಆ ಸಾಹಿತ್ಯ ಆ ವಿಮರ್ಶೆಯ ಪರಿಚಯ ಇರಬೇಕು. ಆದರೆ ಕೃತಿಯಾಗಲಿ ವಿಮರ್ಶೆಯಾಗಲಿ ಆ ಸಾಹಿತ್ಯ, ಆ ವಿಮರ್ಶೆಯಂತೆ ಇರಬೇಕು ಎನ್ನುವುದು, ಇದೆಯೇ ಎಂದು ನೋಡುವುದು, ನಮ್ಮ ನಡೆಯ ಧಾರಾಳವನ್ನು ತಡೆಯುತ್ತದೆ ಆದ್ದರಿಂದ ಹಾಗೆ ಮಾಡಬಾರದು ಎಂದು ನನ್ನ ಮನಸ್ಸು."

ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್

(ಸಂಪಾದಕರಿಗೆ ಬರೆದ ಪತ್ರದಿಂದ: 13-11-1980)

ಕವಿತೆಗಳು

ಮಾಸ್ತಿ ವೆಂಕಟೇಶ ಅಯ್ಯಂಗಾರ್

ದಾಂಪತ್ಯದ ಐದು ಹಂತ

(ಮೊದಲ "ದನಿ, ಮಾರ್ದನಿ," 1929 ರಲ್ಲಿ ಬರೆದವು. ಈ ಪದ್ಯ ನನ್ನ "ತಾವರೆ" ಪದ್ಯ ಸಂಕಲನದಲ್ಲಿ ಪ್ರಕಟವಾಗಿದೆ. ಪದ್ಯಗಳ ಸಂಗತಿಯ ಅವಗಾಹನೆ ಸುಲಭ ಆಗಲೆಂದು ಅದನ್ನು ಇಲ್ಲಿ ಮೊದಲಲ್ಲಿ ಕೊಟ್ಟಿದೆ ಆ ಮೇಲಿನ ನಾಲ್ಕು ಪದ್ಯಗಳು ಈ ಅರವತ್ತು ವರ್ಷಗಳ ಮನೋಧರ್ಮವನ್ನು ಪ್ರಕಟಸುತ್ತವೆ. ಕಡೆಯ ಪದ್ಯದ ಹಿನ್ನಲೆ ನನ್ನ ಮಡದಿ 1969 ರಲ್ಲಿ ದೇವರಪಾದವನ್ನು ಸೇರಿದಳು ಎನ್ನುವುದು : **ಲೇಖಕ**)

೧

ನಾಲ್ವತ್ತರ ನಲುಗು

i

ದನಿ

ಅತ್ತೆಯ ಮಗಳೆ, ಮುತ್ತಿನ ಚಂಡೆ,
ಯಾವೆಡೆಯಿಂದ ಹೊರಟನ್ನಾವೆಡೆ
ಸುತ್ತಿ ಸುಳಿದು ನನ್ನನು ಕಂಡು
ಜೀವನವಿದ ಬೆಳಗಲು ನೀ ಬಂದೆ ?

ಮಾವನ ಮಗಳೆ, ಮಲ್ಲಿಗೆಯುರಳೆ
ಲೋಕದ ಮಾತೆ ನನ್ನಯ ಬಾಳ
ಪಾವನಗೆಯ್ಯಲು ತಾನೊಲುಮೆಯಲಿ
ಸಾಕಿದ ನಿನ್ನನು ಕಳುಹಿದಳಹುದು.

ಬಾಳಿನ ಬೆಳಕೆ, ಜೀವದ ಕಳೆಯೆ,
ಒದವಿದ ಸೊಗಸೆ, ನೀತಿಯ ನೆಲೆಯೆ,
ಹೇಳದೆ ಧರ್ಮವ ಕಲಿಸುವ ಗುರುವೆ,
ಬದುಕಿದು ಬದುಕೆ ನೀನಿದನುಳಿಯೆ ?

ii

ಮಾರ್ದನಿ

ಎನ್ನರಸ, ಚೆನ್ನರಸ,
ನಿನ್ನಡಿಯ ಸೋಂಕಿನಲಿ
ಎನ್ನೆದೆಯ ಕಲ್ಲರಳಿ
ಹೆಣ್ಣಾದೆ ನಾನು.

ಎನ್ನರಸ, ಪೊನ್ನರಸ,
ಚೆನ್ನಿಗನೆ ನೀನಾಗಿ
ತನ್ನದೆಂದೆನ್ನಸುವ
ಮನ್ನಿಸಿದನಹುದು.

ಚೆನ್ನರಸ, ದೊರೆ, ಎನ್ನ
ಕಣ್ಣ ತಣಿಸುವ ಹಸುರೆ,
ಎನ್ನುಸಿರಿನೊಳ ಉಸಿರೆ,
ರನ್ನ, ಸಂಪನ್ನ.

೨
ಐವತ್ತರ ಅರಿವು

i
ದನಿ

ಸೌಭಾಗ್ಯದಲಿ ಬಾಳೆ ನೀ ಜಗಕೆ ಬಂದು
ನನ್ನಕೈ ಹಿಡಿದು ಈ ಮನೆಯು ಸಿರಿಯಾದೆ;
ಸ್ಥಾನವನು, ಮಾನ ಮರ್ಯಾದೆಯನು ತಕ್ಕಸಿತು
ಧನಧಾನ್ಯವನು ತಂದು ಈ ಬಾಳಕಾದೆ.

ಒಡಲ ಸುಖ ಮನದ ಸುಖ ಬುದ್ಧಿಸುಖಗಳಲಿ
ಸಮಭಾಗವನು ತಳೆದು ಜೊತೆಗೆ ಜೊತೆಯಾಗಿ
ಬಾಳ ಭಾರವನೆಲ್ಲ ದಿಟದಿ ನೀನೇಹೊತ್ತು
ನಾಹೊತ್ತ ತೆರ ಎದುರುನಿಂತಿರುವೆ ಬಾಗಿ.

ಬಾಳ ಸೌಭಾಗ್ಯವೆ, ಪ್ರೇಮವೇ, ತಾಳ್ಮೆಯೇ,
ನೇಮನಿಷ್ಠೆಯೆ, ಎಲ್ಲ ಸದ್ಗುಣದ ಕಣಿಯೇ
ಏನೆಂದು ಹೊಗಳಿ ಹೇಳಲಿ ನಾನು ನಿನ್ನ ?
ಏನೆಂದೆ ಎನಿತೆಂದೆ ಹೊಗಳಿದರು ತಣಿಯೆ.

ii
ಮಾರ್ದನಿ

ಆಯ್ತಲ್ಲ; ತಣಿಸ ನೋಡುವೆಯೇಕೆ ಇಂತು ?
ತನಗೆ ತಾನೇ ದೃಷ್ಟಿ ಇಂಥ ಮಾತೆಲ್ಲ.
ಭಾಗ್ಯ ಹಿರಿದೇ ? "ನಿನ್ನ ಕೃಪೆ ಹಿರಿದು" ಎಂದು
ದೈವವನು ಹೊಗಳು : ಕೈಹಿಡಿದವಳನಲ್ಲ.

ನಿನ್ನಿಂದ ನಾನೇ ? ನನ್ನಿಂದ ನೀನೇ ?
ನೀನು ಮರ; ನಾ ಬಳ್ಳಿ. ನೀನು ನಿಂತಿರಲು
ನಾನು ಸಹ ನಿಂತಿಹೆನು. ನಮ್ಮ ಇಬ್ಬರಲಿ
ಯಾರು ಹಿರಿಯರು ಎಂಬ, ಹದನು ಇಂತಿರಲು ?

ನೀ ಪಡೆದ ಹತ್ತು ಭಾಗ್ಯದಲಿ ನಾ ಒಂದು
ಒಡೆಯ ನನ್ನನು ನಿನ್ನ ಕೈಯಲ್ಲಿ ಇಟ್ಟ.
ಭದ್ರ ಹಿಡಿದಿರು ನನ್ನ : ಬಿಟ್ಟೀಯೆ ಜೋಕೆ !
ಭದ್ರ ದೊರೆ: ಇದೆ ನಿನ್ನ ದೊರೆತನದ ಪಟ್ಟ.

✧ ✧ ✧ ✧

೩
ಅರವತ್ತರ ಅರಳು

i
ದನಿ

ತರಳನಿಗೆ ತರಳೆ ನೀ ಮನೆಯಾಕೆಯಾಗಿ
ಸಿರಿವಂತೆ ಐತಂದು ಮನೆಯ ತಾಯಾಗಿ
ಹೆತ್ತ ಮಕ್ಕಳ ಜೊತೆಗೆ ನನ್ನನೂ ಮಗುಮಾಡಿ
ನನ್ನ ನಡೆಸಿಹೆ ಬಾಳುವೆಯಲಿ ಹಾಯಾಗಿ.

ಕಷ್ಟದಲಿ ಕುಸಿದು ನಾ ಬಳ್ಳಿಯಾದಂದು
ಬಳ್ಳಿ ನೀ ಮರನಾಗಿ ಸೆಟೆದೆನ್ನ ಹಿಡಿದೆ.
ನಷ್ಟವೆನ್ನಿಸುತಿಹುದೆ ಲಾಭವೆನಿಸುವುದನುತ
ಸೆರಗಿಂದ ನನ್ನ ದುಃಖಾಶ್ರುವನು ತೊಡೆದೆ.

ನೀ ಬರಿಯ ಹೆಣ್ಣಲ್ಲ; ಬಾಳ ರಕ್ಷಿಸಲು
ದೈವವೀ ಮೂರ್ತಿಯಲಿ ಕಳುಹಿದೊಂದಂಶ
ಇಂತೇ ಸದಾ ಜೊತೆಯೊಳಿರುತ ಸಂಗಾತಿ
ಮಾಡು ನನ್ನನು ನಿನ್ನ ಗಡೆ ರಾಜಹಂಸ.

ii
ಮಾರ್ದನಿ

ಅರಳು ಮರುಳರ ಪತ್ರಿಕೆನ್ನುವರು ಮಂದಿ.
ಅರುಳೊ ಮರುಳೋ ಆಡಿದೀ ಮಾತು,ನಲ್ಲ ?
ಹೆಂಡತಿಯನು ಮಿತಿ ಮೀರಿ ಇಂತು ಹೊಗಳುವುದೆ ?
ಉಬ್ಬುವೆನೊ ಎಂದು ನೋಡುತಲಿಲ್ಲವಲ್ಲ ?

ನಾನು ಮಾಡಿದುದೆಂಬುದೇತರದು ಇಲ್ಲ.
ಎಲ್ಲವೂ ನಿನ್ನ ಭಾಗ್ಯದ ಒಂದು ಭಾಗ.
ಸುಖವ ಕೊಡುವವನೆ, ಕಷ್ಟವ ಕೊಟ್ಟ ಹೊತ್ತು
ಅದ ತಡೆವ ಶಕ್ತಿಯನು ಕೊಡುವನು ಸರಾಗ.

ಹಿಂದಿದ್ದರೂ ನಾನು ಬಳ್ಳಿ. ಮರ ನೀನು.
ಧೈರ್ಯ ನಿನ್ನದು; ನಾನು ನಿನ್ನ ಜೊತೆಗಾತಿ,
ಅಂದಿನಂತೇಗಳೂ ನೀ ನನ್ನ ಅರಸ
ಚೆನ್ನರಸ, ಪೊನ್ನರಸ, ಬಾಳಿದರ ತಾಯ್ತು.

ಸನ್ನಿ ವೇಶ

೭೨
ಎಪ್ಪತ್ತರ ಮರಳು

i
ದನಿ

ಓ ಬಾಳ ಸಂಗಾತಿ, ಎಪ್ಪತ್ತರತ್ತ
ನಡೆಯುತಿಹೆ ನಾನು, ನೀ ಜೊತೆಗೆ ನಡೆದಿರುವೆ.
ಹರಿಯ ಕೃಪೆ ರೂಪಾಂತು ಜೊತೆಗೆ ನಿಂತಂತೆ
ಬಾಳಿನಲಿ ನನ್ನೊಡನೆ ಜೊತೆಗೆ ದುಡಿದಿರುವೆ.

ನಾ ವಸ್ತು, ನೀ ಬರಿಯ ನೆರಳು, ಎಂಬಂದ
ನನ್ನ ಮುಂದಿರಿಸಿ ನೀ ಹಿಂದೆ ಮರೆದಿರುವೆ.
ನಿನ್ನದೆಂಬುದು ಬೇರೆ ಏತರದೆ ಇಲ್ಲ
ಎಂಬುವ ನನ್ನ ಆಸೆಗಳ ಪೊರೆದಿರುವೆ.

ನನಗೆ ಭೋಗವ ಬಿಟ್ಟು ನೀ ತ್ಯಾಗಿಯಾಗಿ
ನಿನ್ನ ಜನ್ಮವ ನೀನು ಸಫಲಗೊಳಿಸಿರುವೆ.
ನಾ ಸ್ವಾರ್ಥಿಯೆಂದು ಹರಿ ತಪ್ಪೆಣಿಸುವಂದು
ನನಗಾಗಿ ಅವನೆದುರು ಏನೆಂದು ಮೊರೆವೆ ?

ii
ಮಾರ್ದನಿ

ನನ್ನ ದೇವರು ನನ್ನ ಸೇವೆ ಕೊಳುತಿಹನೆಂದು
ಇನಿಸುದಿನ ನಾ ನಿನ್ನ ಸೇವೆ ನಡೆಸಿಹೆನು.
ಅವನ ಸೇರಿಹುದು ನಾ ಗೆಯ್ದೆಲ್ಲ ಸೇವೆ;
ನಿನ್ನ ಮೂಲಕ ತಂದೆ ಅದನು ಪಡೆದಿಹನು.

ಸುಖವ ಕೊಂಬುದು, ಕೊಳುತ ಸುಖವ ನೀಡುವುದು,
ಗಂಡಾದ ಚೇತನದ ದಾರಿ ಇದು. ಸುಖವ
ನೀಡುವುದು, ನೀಡುತ್ತ ಸುಖವ ಕಾಣುವುದು,
ಹೆಣ್ಣು. ಹರಿಯೇಗೆಯ್ದ ನೀ ಎರಡುಮುಖವ.

ನಮ್ಮ ನಿರ್ಮಿಸಿದ ದೇವರು, ನಮ್ಮದಾರಿ
ಒಂದಲ್ಲ ಎಂಬುದನು ಕಾಣನೇ ನಲ್ಲ ?
ಮೇಲಾಗಿ ನಾವು ಮಕ್ಕಳು ತಪ್ಪಿ ನಡೆದಿರಲು
ನಮ್ಮ ಮನ್ನಿಸಿ ಪೊರೆವುದೆಂತು ಅವ ಬಲ್ಲ.

✧ ✧ ✧ ✧

೭೩
ಎಂಬತ್ತರ ಕೊರಗು

i
ದನಿ

ಅತ್ತೆಯ ಮಗಳೆ, ಮುತ್ತಿನ ಚೆಂಡೆ,
ಮಾವನ ಮಗಳೆ, ಮಲ್ಲಿಗೆಯರಳೆ,
ಜೊತೆ ಜೊತೆ ನಡೆಯುತ ಸುಳಿವೇಕೊಡದೆ
ಮರೆಗೆ ಸರಿದೆ ಇದು ಸರಿಯೇ, ಸರಳೆ ?

ನಿನ್ನರಸ ನಿನಗೆ ಇನ್ನರಸ ಅಲ್ಲ;
ಪೊನ್ನರಸ ಚೆನ್ನ ಚೆನ್ನರಸ ಅಲ್ಲ;
ಇಪ್ಪತ್ತರ ದಿನ ತೊಡಗಿದ ನಲುಗು
ಮುಗಿದಿದೆ ಇಂದು; ಮುಗಿಯಿತು ಚೆಲ್ಲ.

ಕಣ್ಣಿಂದ ಮರೆದು ಮನದೆದುರಿಗಿರುತ
ಕ್ಷಣ ಕ್ಷಣ ಒಳಗನು ಬೆಳಗುತಲಿರುವ
ಜೊತೆಗಿಲ್ಲದೆಯೆ ಜೊತೆಯಾಗಿರುತ
ಕಾದಿರು ಕೆಲದಿನ; ನಾನೂ ಬರುವೆ.

ii
ಮಾರ್ದನಿ

ಮರುದನಿ ಏನೋ ನುಡಿದಂತಹುದು
ಆಚೆಯ ಕೊರೆದನಿ; ಅರಿಯಲು ತಗದು.

✲

ಎಚ್. ಎಸ್. ಶಿವಪ್ರಕಾಶ್

ಮರುಳ ಶಂಕರ ದೇವ

ಅಲ್ಲಮನಿಂದ ಬಸವನಿಗೆ ಮರುಳ ಶಂಕರನ ಪರಿಚಯ :

೧

" ಮರಹು ಮರೆಯ ನಿಧಾನವನಾರು ಬಲ್ಲರು ?
ಅಗೆದು ತೋರುವೆ ಬಾರ. ಬಸವ ಡಣ್ಣಾಯಕ :

ಬೆವರು ನುಂಗಿದ ಮೈಯಿ;
ಬಯಲ ಹೀರಿ ಹೀರಿ ಕುಳಿವೋದ ಕೆನ್ನೆಗಳು;
ತಲೆಗೂದಲಿನ ಕಾನನದ ಕೆಳಗೆ
ಖನಿಜಗಳ ಖನಿ ತೆಗೆತೆಗೆದು ತೋರುವ ಮೊದಲು
ಇಕೊ ಬಸವ
ಈ ಸುಟ್ಟಕಣ್ಣುಗಳ ಮಧ್ಯೆ
ಬೆಳ್ಳಬೆಳಕುಲಿವ ಪರುಷದ ಪಕ್ಷಿ
ಮಹಮನೆಯ ಪಂಜರಕೆ
ಸಿಗದಷ್ಟು ಕಿರಿದು.

ಅವಶೇಷಗಳ ಗಾಳಿ ಹುಯ್ಯಲಿನಲ್ಲಿ ಸತ್ಯವನೆರೆದ;
ಬೆಟ್ಟಗಳಿಗೆಣೆಯಾಗಿ ಕೊಬ್ಬಿದ ನದಿಯ.
ಬಡಬಾಗ್ನಿ ಸೀಳಿದ ಸಮುದ್ರದ ಬಸಿರಿನ ನೀರು
ಮಂಗದೊಮ್ಮೆ
ದೋಣಿ ಹಡಗುಗಳ ತಳದ ಸೋಂಕಲ್ಲಿ
ಪುಳಕಗೊಂಬುದ ಕಂಡೆ.

ನಿನ್ನಂಗಳದ ಪ್ರಸಾದಕುಳದೆಂಜಲೆಲೆ ದಡವಲ್ಲಿ
ನಾ– ಹಡಗನಪ್ಪಳಿಸಿ ಗಳಿಸಿ ಬದುಕಿದ ವಣಿಜ
ಮರುಳ ಶಂಕರದೇವ. ಹಡಗಲ್ಲ,
ಕಜ್ಜಿನಾಯಿಯು ತುರಿ ತುರಿ ಮೈಯ್ಯ
ದಿಕ್ಕೆಟ್ಟ ಮೋಡಗಳ ಹರುಕನ್ನು ಹೊತ್ತ
ಮರೆವೆ ಹಿಂದಣ ಮರಣ
ಮರುಳ ಶಂಕರದೇವ."

೨

“ ಈ ಕಣ್ಣಗೊಂಬೆಯ ಸೂತ್ರದ,
ಈ ಕಳ್ಳ ನಗುವಿನ ಸವಿಯ ಸಾರದ
ಈ ಮೈಗೆ ಬಿದ್ದ ಕೂರೆಗಳ ಪಡೆಯ
ಹಡೆದ ಕರುಳಿರದ ತಾಯಿ
ಮಹಾಮನೆಯ ಲಕ್ಷ್ಮಿ ಬಸವಾ.
ಮಲತಂಗಿ ಬಸವಾ ಆಕೆ
ಕಲಚೂರ್ಯ ವಿಜಯ ಲಕ್ಷ್ಮಿಗೆ.

ಬೂದಿಹುಬ್ಬುಗಳ ಮರುಳ ಶಂಕರಗೀಗ
ಕಂಗಳೇ ಪ್ರಾಣ;
ಕಾಯುವಿಕೆ ಕಾಯಿ ಮಾಗಿತ್ತು ಈ ಹೊತ್ತು;
ಹಣ್ಣು ರಸವೂರುತಿದೆ; ತೊಟ್ಟುಗಳಚುವ ಮೊದಲೆ
ಕಿತ್ತು ಒಪ್ಪಿಸು ನಿನ್ನ ಶರಣ ಸಂದೋಹಕ್ಕೆ. ಹಣ್ಣಲ್ಲ,
ಮಣ್ಣು ಹುಳುಗಳ ಹಬ್ಬ.

ಬೀಜ ಗರ್ಭಿಣಿ ಹೆರುವ ಕಾಮಲತೆಯರು ನೆರೆದ
ಮೃತ್ತಿಕೆಯ ಮಹಮನೆಯ ಹೊಸ್ತಿಲಿಗೆ
ಕರೆಯದೇ ಬಂದವರ,
ಮಿಂದುಣದೆ, ಹೇಳದೇ ಹೋದವರ
ಹೆಜ್ಜೆಸಾಲು ......

ಬೆಚ್ಚಿದೆಯ ಹೇಳು.”

*

ಜಯಸುದರ್ಶನ

ದಾರಿ ಹಿಡಿಯುವುದು

The foot feels the foot
when it feels the earth.
—Buddha

ಗಾಢ ನಿದ್ದೆಯ ನಿರಾಳದಿಂದ ಅಥವಾ ಅಸೀಮ
ಕಳವಳವ ತಂದ ಕೆಟ್ಟ ಕನಸಿಂದ ಎಚ್ಚರಗೊಂಡಾಗ ಮಾತ್ರವೇ
ತಂತಾನೆ ಹೊಳೆದು ಮರೆಯಾಗುವಂಥ ಊಹೆಯಾಚಿನ ಅವಕಾಶಗಳಿಗೆ, ಆಶೆಗಳಿಗೆ
ಭ್ರಮ ನಿರಸನಕ್ಕೆ, ತಪ್ಪು ಲೆಕ್ಕದ ಗುಣಿತಕ್ಕೆ, ಸುಳ್ಳಿಗೆ
ಇಂಬುಗೊಡುವಂಥ ಘನವಾದ ದೂರಗಳ ಕುರಿತು,
ದಾಟಿವಷ್ಟೂ ಪುನಃ ಪುನಃ ಎದುರಾಗುತ್ತ, ಇದ್ದಕಿದ್ದಂತೆ
ಬೆಳೆದು, ತಿರುಗಿ ನೋಡಿದರೆ ಮರೆಯಲಡಗುವ ಖಾಲಿ
ದೂರಗಳ ಕುರಿತು—
ಈಗ ನಾ ಹೇಳಲೇ ಬೇಕು ಸ್ಮರಣೆಗಳ ಕೋಶ ಹೊಕ್ಕು,
ಹೊರಬಂದು, ಅದರಾಚೆಗೂ ಮಿಂಚಿರುವ
ಸ್ಫುರಣೆಗಳ ಹಿಡಿದುಕೊಂಡು.
ನಿನ್ನ ಕಾಣುವಂತೇ ಇರಲಿಲ್ಲ ನಾನು. ಆದರೂ ಕಂಡೆ!

ನುಗ್ಗುವುದು ಹೊಳೆಯ ಬಾಯಲ್ಲಿ ತಾಳ್ಮೆಗೆಟ್ಟಂಥ ಸಮುದ್ರ
ಮುಖಜಕ್ಕೆ ಸಮೀಪ.
ಕೆಟ್ಟ ಬಿರುಗಾಳಿ ಬೀಸುತ್ತಲೇ, ತಟ್ಟನೆ
ಮರೆಯಾದ ಬಳಿಕ, ತಂಗಾಳಿಯಾಡುವುದು
ಕಾಡಿನಂಗಳದಲ್ಲಿ ಮತ್ತೆ,
ಮರ-ಗಿಡದೆಲೆ ಎಲೆ ಮರೆಯಿಂದ ಹೊರಬಂದು.
ಹೊಚ್ಚ ಹೊಸ ಇರುಳನ್ನೂ ಬಿಡದೆ ಹಳತಾಗಿಸುವುವು ಜೀರುಂಡೆಗಳ
ಚೀರಾಟ, ಎದೆ ತುಂಬಿ ಬಂದರೂ ತುಟಿಯಾಚೆ
ಬಾರದ ಭಾವಗಳ ಬೋಳು ನಿಟ್ಟುಸಿರು, ಆರದಿರುವ ನಕ್ಷತ್ರಗಳ
ನಿರಂತರ ಮಿಡುಕು, ಗಗನ ಮೌನ-
ದಣಿಯಿರದ ಹಗಲ ಭಾರ.
ಇಲ್ಲಿ, ಪ್ರತಿಯೊಂದು ಮುಂಜಾನೆಯೂ ತನ್ನ ಇಷ್ಟದ
ಕನಸುಗಳಿಂದ ಹಿಂದೆ ಬಾರದೆ, ಅಲ್ಲೇ
ಉಳಿಯುತ್ತಾನೆ ಹಿಂದಿನ ರಾತ್ರೆ ಮಲಗಿಕೊಂಡವರ ಪೈಕಿ
ಒಬ್ಬ.
ನಾ ನಿನ್ನ ಕಳೆದುಕೊಂಡೆ. ಎಂದೂ ನೀನು ಕಳೆವಂತೆಯೇ ಇರಲಿಲ್ಲ!

ನಿನ್ನ ಕಂಡಾಗ ನಾನಂದೆ, ಕೆಳದಿ:
"ನೀನು ಹೂವಲ್ಲಿ ಕೆಂಪು ಗುಲಾಬಿ, ನೀಲಿ, ಹಸಿರು, ಬಿಳಿ,
ಕಪ್ಪು, ಹಳದಿ.
ನೀನು ಮಳೆ ನೀರ ಕುಡಿದು ನೆಲವಾದ ಮಣ್ಣು, ಅದರ
ಮೇಲಾಡುವ ತಂಗಾಳಿ, ಬೆರಗಿನ ಗರ ಬಡಿದ ನನ್ನ
ಕಣ್ಣಿಗೆ ಹುಬ್ಬಾದ ಕಾಮನ ಬಿಲ್ಲು.
ನನ್ನ ಒಡಲಲ್ಲಿ ಪ್ರಾಣ ಬಿಟ್ಟಂಥ ನಿನ್ನೆ ಮೊನ್ನೆಯ ಪ್ರಣಯಗಳು
ಮುಟ್ಟಲಾಗದ ಮೊದಲ ಪ್ರೀತಿ ನೀನು–
ಮಾರ್ಪಡಿಸು ನನ್ನ ನಿತ್ಯ ಪ್ರೇಮಿಯಾಗಿ, ನಿನ್ನ ಗುಟ್ಟಿನ
ಗಂಡನಾಗಿ, ನೀ ಹೆತ್ತ ಗಂಡು ಪಿಂಡಗಳಲ್ಲಿ
ಒಂದಾಗಿ, ನಿನ್ನ ಅಣ್ಣ – ತಮ್ಮನಾಗಿ, ತಂದೆಯಾಗಿ.
ಬಿಚ್ಚಲೆಂದೇ ಹೆಣ್ಣು ಬಚ್ಚಿಡುವ ಗುಟ್ಟುಗಳಿಂದ, ನಿನ್ನೊಡಲ ಚುರುಕು–
ಗಂಪುಗಳಿಂದ ಮುಚ್ಚು ನನ್ನ.
ಕೊಡು ನನಗೆ ನಾಚಿಕೆಗೆಟ್ಟ ತೀಟೆಗಳ ತಗುದೆ,
ಗಾಳಿ, ಬಿಸಿಲು, ಮಳೆಯುಂಡ ಮೈ ಮನದ ಮೇಲೆ ವೈಫಲ್ಯಗಳ
ಚೂಪು ಮೊನೆ ಕೆತ್ತಿರುವ ಗಾಯಗಳ
ಮಾಯಿಸುವ ಅನುರಾಗ, ಭೋಗಕ್ಕೆ ಸಂದೂ,
ಅಷ್ಟಕ್ಕೇ ಬರಿದಾಗದಿರುವ ಜೀವೋದ್ವೇಗ,
ಎಷ್ಟೋ ಹುಟ್ಟುಗಳು ತಣಿಸದ, ಒಳಗೇ ಹಿಡಿದಿಟ್ಟ ಬಾಲ್ಯವ
ಮುಟ್ಟಿ, ಆಟವಾಡುವ, ಆಡಿಸುವ ಲೀಲಾ ಪ್ರಸಂಗ."
ನಿನ್ನ ಕಾಣುವಂತೇ ಇರಲಿಲ್ಲ ನಾನು. ಆದರೂ ಕಂಡೆ!

ನನ್ನ ಅಲೆತದಪಾಡು ನನಗುಂಟು ಮೊದಲಿನಂತೀಗ–
ಮೈ, ಮನಸ್ಸು ತಿಳಿಯದ ವಿಕ್ಷಿಪ್ತ ಸಮಯಗಳ
ಲಹರಿ ಹಿಡಿದ ನನ್ನ ಹೃದಯಕ್ಕೆ ಎತ್ತೋ ಹೋಗಲುಂಟು.
ತನ್ನ ಸುತ್ತಲೆ ತಿರುತಿರುಗುತ್ತಿದೆ ನೆಲವು ನನ್ನ
ಕಾಲಿನಡಿ ತನಗೇ ತಿಳಿಯದಂತೆ, ಮತ್ತೂ ಎಂದಿನಂತೆ.
ಇಲ್ಲಿ ಆಯಾ ವಸ್ತು ತನ್ನ ಜಾಗೆಗೆ ಸಂದಿದೆ
ಎಂದಿಲ್ಲದಂತೆ, ನಿಷ್ಕಾರಣ ಪ್ರಳಯ—
ದಾಸ್ಫೋಟ ತರುವಂಥ ವಿಷಮಗಳಿಗೆಯಾಕಸ್ಮಿಕವ
ಬಯಸಿ, ಕಾದು ನಿಂತಿರುವಂತೆ.
ಇಂಥ ಇಲ್ಲೇ ನಾನು ಹಾಡಬೇಕು, ಬೇರೊಂದು
ನೆಪವಿರದೆ ನಾ ಕುಣಿಯಬೇಕು, ತನ್ನ ಹಾಡಿನ
ಭೂತ, ತಾಳದ ಗುಂಗು ಹಿಡಿದ ಬೆತ್ತಲೆಯವನ ಹಾಗೆ.
ಬದಲಾಗುವುದಿಲ್ಲ ಬೇರು, ಎಂದೆಂದಿಗೂ
ಅದೇ ಚಿಗುರು. ನಟ್ಟ ನಡುವೆ ಬಣ್ಣ, ರುಚಿ,

ಕಂಪುಗಳ ತಳೆಯುತ್ತ, ಬದಲಾಯಿಸುತ್ತ, ಬೆಳೆದು,
ಹೂ, ಕಾಯಿ, ಹಣ್ಣು. ಬೀಜವಾಗುವುದು
ಮರದ ಪಾಡು.
ನಾ ನಿನ್ನ ಕಳೆದು ಕೊಂಡೆ. ಎಂದೂ ನೀನು ಕಳೆವಂತೆಯೇ ಇರಲಿಲ್ಲ!

ನಲ್ಲೆ, ನೋಡಲ್ಲಿ, ಅತ್ತ—
ಎಲ್ಲೂ ನಿಲ್ಲದ, ಎಲ್ಲೂ ಸೇರದ, ಶಂಕೆಗೊಳ್ಳದ ಜೋಡಿ ಪಾದಗಳ ಕೆಳಗೇ
ನೆಲದಿಂದೆದ್ದು, ಹಿಂಬಾಲಿಸಿವೆ ಹದ್ದು ಮೀರಿದ
ಮಣ್ಣಿ ಪ್ರಾಥಮಿಕ ಹಸಿವುಗಳು,
ತೇಗಿನಾಚೆಗೆ ಮತ್ತೆ ಕೆರಳುವ ಜೀವ–ಭೌತಿಕದ ಅತೃಪ್ತಿಗಳು,
ಅಕ್ಕಸದಲ್ಲಿ ಬಿಟ್ಟೂ ಬಿಡದೆ—
ಎರಗಿ ಬೀಳಲು ಮೇಲೆ, ಜಗ್ಗದಿದ್ದರೆ, ಅಡ್ಡ ಬಿದ್ದೇ
ಶರಣಾಗಲು, ಇಲ್ಲ, ಸುಳಿವೇ
ಕೊಡದೆ ದಾಟಿ ಹೋಗಲು ಮುಂದೆ, ಮುಂದೆ, ಮುಂದೆ,
ಅದರಾಚೆಗೆ—
ಕಾಲು ಮೂಡಿಸುವ ದಾರಿಗಳ ದಾಟಿ, ಪ್ರಾರಂಭದೆಡೆಗೆ.
ನಿನ್ನ ಕಾಣುವಂತೇ ಇರಲಿಲ್ಲ ನಾನು. ಆದರೂ ಕಂಡೆ!

*

ಶ್ರೀ ಕೃಷ್ಣ ಆಲನಹಳ್ಳಿ

ಗರತಿಯೊಬ್ಬಳ ಅನಿಸಿಕೆ

ಸುಕುಮಾರ ದೇಹದ, ಚಂದದ ಗಂಡ
ಮುದ್ದಿನ ಮಗು
ತೃಪ್ತಬದುಕು

ನನಗಿಂತ ಸುಖಿ
ಇನ್ನಾರ ಸಖಿ ?

ಆದರೂ
ಆಗೀಗ ಕ್ರೂರ ಏಕಾಂತಕ್ಕೆ
ಸಿಕ್ಕಾಗ–
ಲಗ್ಗೆ ಹಾಕುವ
ಉರಿಗಣ್ಣಿನ
ಕರಿಹುಡುಗನ ನೆನಪು.

ಬೆಚ್ಚುವ ಒಳಗೇ ಬೆವರುವೆ
ದುಃಸ್ವಪ್ನಕೆ
ನನ್ನೀ ಪ್ರಶಾಂತ ಚಿತ್ತವ
ತುಡುಗು ಕಾಲುಗಳಿಂದ
ಕದಡುವ
ಕಾಡುವ
ದುಷ್ಟ ಮೃಗದಾಕ್ರಮಣಕೆ
ಅರಿವಿಲ್ಲದೆ
ಮೈಮನಗಳತೆರೆದೇ ಬಿಡುವೆ

ನನಗೀತ ಸುಖಿ
ಇನ್ನಾರೆ ಸಖಿ ?

*

ಎಸ್. ಮಂಜುನಾಥ

ಸಣ್ಣ ಪುಟ್ಟ ಉಪಯುಕ್ತವಸ್ತುಗಳು

ಕೆಲವು ಉಪಕರಣ ಸಲಕರಣೆಗಳಿಗೆ ಅವುಗಳ ಉಪಯೋಗವೇ ಸೌಂದರ್ಯ :
ತಲೆ ಬುಡ ವಕ್ರ ಮೈ ನೇರ ಝಳಪಿಸುವ ಬ್ಲೇಡು, ಹಾರಾಡುವ ಇಷ್ಟುದ್ದ ದಾರ,
ಒಂದು ಗುಂಡುಪಿನ್ನು, ನೀಟಾಗಿ ಕತ್ತರಿಸಿದ ಅಂಗೈಯಗಲ ಹಾಳೆ

ಉದಾಹರಣೆಗೆ ಪ್ಲಾಸ್ಟಿಕ್ ಪ್ಯೇಂಟ್ ತಟ್ಟೆ ಒಡೆದಿದ್ದು ಎರಡೂವರೆ ಗುಂಡಿಯಲ್ಲಿ
ಒಂದು ಮುರಿದ ಬ್ರಶ್ಶು ಕಲೆಯನ್ನ ಕಲೆಸಲಿಕ್ಕೆ ಅವಕಾಶ ಒದಗಿಸತ್ತೆ

ಅಡ್ಡ ದಾರಿಗಳಲ್ಲಿ ಒಂದು ಬಾಣದ ತಲೆ
ಇಡೀ ದಾರಿ ತೋರಿಸಿಬಿಡತ್ತೆ

ಒಂದು ಸಣ್ಣಕೊಕ್ಕೆ ಹೇಗೆ ಕೊಂಡಿ ಹಾಕತ್ತೆ

ಪುಟಾಣಿ ಹಲ್ಲುಗಳಿರುವ ಚಕ್ರ, ಪುಟ್ಟ
ಮಗುವಿನ ಇಷ್ಟಆಗತ್ತೆ

ಅದೇ ಒಂದು ಕೆಲವು ಸಾಲುಗಳ ಸೂಕ್ಷ್ಮ ಲಯದ ಕವನ
ನಾಲ್ಕಾರು ಸಣ್ಣ ಪುಟ್ಟ ಉಪಯುಕ್ತ ವಸ್ತುಗಳನ್ನ ಹೇಗೆ ನಿಜ ಮಾಡತ್ತೆ.

* * *

ಚೆನ್ನವೀರ ಕಣವಿ

ಬೆಳುವಲದ ಬಾಗಿನ

ಬಯಲು ಸೀಮೆಯ ಬಿರುವಿಸಿಲಿಗೆ ಎರೆಹೊಲದೆದೆಯ
ಎರಕಲು ಬೀಡು ಕಾದು ಕಂಗೆಡಿಸಿರಲು, ಮುಗಿಲು–
ಮುಂಗಾರು ಹದಗೊಳಿಸಿ, ಮುಂದಿನ ತಲೆಗೆ ಮಿಗಿಲು
ಹಾರೈಸಿ; ಹಿಂಗಾರು : ಜೋಳ ಗೋದಿಯ ತೆನೆಯ
ಸಿಂಗಾರ. ಕಡಲೆ ಮಿಡಿಗೆ ಕೊಡರ್ ಕೊಂಚೆ ಹಿಂಡು.
ಕುಸುಬೆ ಸಾಲಿನ ಹೂವಿನಂಚೆಲ್ಲ ಜರತಾರಿ.
ಬಿಸಿಲು ಕಾಸಿದ ಬೆಳ್ಳಿ : ಹತ್ತಿ ತೊಳೆ ರೂವಾರಿ.
ಮಾವು, ಹುಣಿಸೆಯು, ಬೇವು– ಗುಡಿ ಹುಣ್ಣಿಮೆಗೆ ಈಡು.
‘ಬೆಳುವಲದ ಮುನ್ನೂರು’ : ನೆಲ-ನೀರು-ಗಾಳಿಯಲಿ
ಹಲವು ಹಂಬಲ ತುಂಬಿ ಬಿಂಬ ಪ್ರತಿಬಿಂಬದಲಿ
ಒಲವಿನೊಂದೇ ರೂಪ, ಆರೋಗಣೆಯಂಬಲಿ.
ಬಯಲ ದೀಪಸ್ತೂಪ ಹೇಗೊ ಹಿಡಿದಿದೆ ಜೋಲಿ.
ದುಡಿಮೆಯೊಳಗೊಂದು ಸುಖ, ನೋವು–ನಲವಿನ ಜೀಕ.
ಪಡೆದ ಭಾಗ್ಯವು ಬೇರೆ; ಸಂಸ್ಕೃತಿ ಭೂಮಿತೂಕ.

*

ಕಮಲ ಹೆಮ್ಮಿಗೆ

ಅ ಪ ಘಾ ತ

ಆಘಾತಗಳೇ ಅಭ್ಯಾಸವಾಗಿರುವ ಮನಸ್ಸಿಗೆ
ಅಪಘಾತವೆಂದರೆ, ದಿಗ್ಭ್ರಮೆಯಲ್ಲ.
ಅಥವ ಹೀಗೆ ; ಆಘಾತಗಳ ಮೆಟ್ಟಿಲ ಕೊನೆ
ಅಪಘಾತ

ಬಿಚ್ಚುತ್ತ, ನರಳುತ್ತ ಒಡ್ಡುತ್ತ ಪಡೆಯುವುದೂ
ಆಘಾತ. ಹಲವು ಹಂಬಲಿಸಿ ಪಡೆದಿದ್ದು
ದಕ್ಕದೇ_ ಅನಿಸಿದ್ದು ಸುಳ್ಳಾಗಿ ಆಘಾತ.

ಕೂಡದ್ದ ಕೂಡಿಸುವ ಛಲದಿಂದ ಜೋಳಿಗೆ
ಯೊಳಗೆ ಧ್ಯಾನ. ಪ್ಲಾಸ್ಟರಿನೊಳಗೆ ಬದುಕು ಸ್ಥಗಿತ
ಬೆನ್ನ ಹುರಿಯಲ್ಲಿ ಬಿಗಿತ.

ಗೊತ್ತು ನಖಾಘಾತ ಬಲು ಸೂಕ್ಷ್ಮ, ಕನವರಿಕೆಯಂಥ ಉರಿ.
ಆದರೆ, ರಕ್ತಘೋರವಲ್ಲದ ಮೂಳೆಮುರಿತ ಮಾತ್ರ ಕಷ್ಟ.
ಮುಟ್ಟಿದರೂ ತಿಳಿಸಲಾಗದ ಗೂಢ, ವಿಫಲ
ಪ್ರೇಮದ ಮೂಗುಬ್ಬಸ.

ಬದುಕಲ್ಲಿ ಪರಚುವಿಕೆ ಸಹಜ. ಆದ್ದರಿಂದಲೆ
ಗಾಯ ಮಾಗುವುದು ಬೇಗ. ಆದರೆ
ಮೂಳೆ ಕೂಡುವುದಕ್ಕೆ ಕಾಯಬೇಕು. ಒಟ್ಟಿಗೇ
ಸಂಬಂಧಗಳ ತಳುಕು ತಿಳಿಯಬೇಕು.

*

ಸನ್ನಿವೇಶ

ಎಚ್. ಎಸ್. ವೆಂಕಟೇಶ ಮೂರ್ತಿ

ಇಂಡಿಯಾದ ನಿಬಿಡಾರಣ್ಯಗಳಲ್ಲಿ

ಇಂಡಿಯಾದ ನಿಬಿಡಾರಣ್ಯಗಳಲ್ಲಿ
ಮಾವು ಬೇವು ಆಲ ಬೇಲ ಶ್ರೀಗಂಧ
ಹೊನ್ನೆ ಮತ್ತಿ ತೇಗಗಳು ಕೈ ಕೈಹಿಡಿದು.

ಹುರಿಹುರಿ ಬಳ್ಳಿ ಕರುಳ ಕುಸುರಾಗಿ
ನೀಲಿನೆಲದ ನಡುವೆ ಹಸುರ ಹಸೆಯಾಗಿ
ಅಲ್ಲಲ್ಲಿ ಹಚ್ಚಗೆ ಬಿಟ್ಟ ಎಲೆ ಎಲೆ ಕಣ್ಣು.

ನೆಲಕ್ಕಿಳಿವ ಬಿಸಿಲು ಕಾಲಿನ ಹೆಜ್ಜೆ
ದಟ್ಟ ತಣ್ಣೆಳಲು ಮಡುಗಟ್ಟಿದಲ್ಲಿ ಬೆಳ್ಳಿ
ಮೀನಾಗಿ ಆಡಿ ಸಸ್ಯ ಸಂಪದದ ನಡುವಲ್ಲಿ

ಜೀವ ಸಮೃದ್ಧಿ. ಜೀಗುಡುವ ಅಗಣಿತ ಕೂಗು.
ಹಕ್ಕಿದನಿ ಚಿಲಿಪಿಲಿ ಹೊಳೆ ತರಂಗದ ಮಧ್ಯೆ
ಹೆಬ್ಬಂಡೆಯಂತೆ ಎದ್ದುನಿಲ್ಲುವ ಹೆಬ್ಬುಲಿ

ಗರ್ಜನೆ. ತಂಗೊಳಕ್ಕೆ ಹುಣ್ಣಿಮೆ ರಾತ್ರಿ ಕೊಡ
ಕೊಡ ಹಾಲು ಸುರಿದ ಗಳಿಗೆ ಹುಲಿ ಚಿರತೆ
ಕರಡಿ ಆನೆ ಜಿಂಕೆ ಹಾಲು ಮೊಲಗಳ

ನಿಬ್ಬೆರಗು ನೆಳಲು. ನಿಂತ ನೀರಲ್ಲಿ. ತೀರದ
ಆಚೆದಡದಲ್ಲಿ ಉರಿಯುವ ನಕ್ಷತ್ರ ಕಾಂತಿ,
ಧೂಳು ಮಣ್ಣಲ್ಲಿ ಜೀಪು ಗಾಲಿಗಳು ಬಿಡಿಸಿರುವ

ರಂಗವಲ್ಲಿಗೆ ಜಿಂಕೆ ಕೆಂಪಿನ ಎಳಬೊಟ್ಟು.
ಮುಳ್ಳು ಪಂಜದನಡುವೆ ಹುಲಿ ಗುಲಾಬಿ ಹೂ.
ಗಾಳಿಯಲ್ಲನಾಥ ಹುಪ್ಲು ಗರ್ಜನೆ ಎಳೆ ಎಳೆ

ಮೃದು ಮಾಂಸ ಪದರಲ್ಲಿ ಉಕ್ಕಿನ ಬೀಜ
ವಿಕ್ಕೆ ಬೆಳೆದವು ಅಹಾ! ತುಫಾಕಿ ಮೊಳೆ, ಬಂದೂಕ
ಬಿದಿರುಮೆಳೆ, ಕತ್ತಿಎಲೆ, ನಿಷ್ಠುರ ನೀಲ ಗುಂಡು

ದ್ರಾಕ್ಷಿಯ ಜೊಂಪೆ ಜೊಂಪೆ, ಕಾಡ ತುಂಬ. ಸಾಗಣೆಗೆ
ದಂಡಕಾರಣ್ಯದಿಂದ ದಿಲ್ಲಿವರೆಗೆ ಉಕ್ಕು ಹಳಿಗಳ ಸಾಲು ಸಾಲು
ಅವುಗಳಡಿಗೆ ಉದ್ದಕ್ಕೂ ಕಡಿದು ಬಿದ್ದಿರುವ ನಿಬಿಡಾರಣ್ಯದ

ತುಕುಡ ತುಕುಡ ಕೈಕಾಲು.

*

ನಾ. ಮೊಗಸಾಲೆ

ಬಾಬು ಜಗಜ್ಜೀವನರಾಮ್ ಎಂಬ ಸರಳ ರಗಳೆ

ಬಾಬೂ ಜಗಜ್ಜೀವನರಾಮ್ ಹೇಗಿದ್ದೀರಾ, ಆರಾಮ್ ?
ಅಂದರೆ 'ಇದ್ದೀನೆ ಹೀಗೆ' ಅನಬಹುದು ನೀವು. ನೀವು
ಹೀಗೆನ್ನುವಾಗ ಹುಳಹಿಡಿದ ಈ ದೇಶದ 32 ಹಲ್ಲು
ಸುಕ್ಕುಗಟ್ಟಿದ ಕೆನ್ನೆ ನೆರಿಗೆ ಬಿದ್ದ ಹಣೆ ಲಂಗೋಟಿಯಿಂದ
ಹೊರಗೆ ಬಿದ್ದ ಅಂಡು—ಎಲ್ಲ ಕಾಣಿಸುತ್ತೆ ನನಗೆ, ನಿಮಗೋ
ಈ ದೇಶಕ್ಕೆ ಅರ್ಥವೇ ಇಲ್ಲ ಅಂತ ಕಂಡೀತು. ನನ್ನ ಮುಖ
ಕನ್ನಡಿಯಲ್ಲಿ ನಿಮ್ಮ ನಗು ಅಳು ಧ್ವನಿಸೀತು ಆದರೂ
ಬಾಬೂಜಿ ನಿಮ್ಮ ಸುತ್ತ ರಾಜಕುಮಾರನ ಅಥವಾ ಕುಮಾರಿಯ
ಯಕ್ಷ ಯಕ್ಷಿಣಿಯ ಗಂಧರ್ವಲೋಕದ ಕತೆ ಬಿಚ್ಚುತ್ತೆ
ಅಂತ ತಿಳಿದುಕೊಂಡಿದ್ದೆ ಬಂತು ನಾನು! ನೀವು
ನನ್ನ ಪುಟ್ಟ ಮಗ ಓದುವ ಚಂದಮಾಮದ ಒಂದು ಕತೆ
ಯಿಂದ ಈಚೆಗೆ ಬಂದು ಯಾಕೆ ಕಾಣಿಸಿಕೊಳ್ಳಲಿಲ್ಲ ?
ಒಮ್ಮೆಯೂ ರಕ್ತಮಾಂಸ ತುಂಬಿದ ಮಣ್ಣಿನ ಮಗನಾಗಿ ಪ್ರತಿಭಟಿಸಲಿಲ್ಲ, ಯಾಕೆ ?
ಮೊನ್ನೆ ತಾನೆ ನೀವು ಭಾರೀ ಮೊಲೆಯ ಮಜಬೂತು ತೊಡೆಗಳ
ನಮ್ಮ ಪ್ರಜಾಪ್ರಭುತ್ವದ ಕೊರಳಿಗೆ ಕಟ್ಟುತ್ತೀರಿ ತಾಳಿ
ಆಗುತ್ತೀರಿ ಪ್ರಧಾನಿ ಅನ್ನುವಾಗ ಮದುವೆಯಾಗದ ಹುಡುಗರೆಲ್ಲ
ಬೀದಿ ಬೀದಿಗಳಲ್ಲಿ ಎದ್ದು ನಿಂತಿದ್ದರು—ಪತಾಕೆ ಹಿಡಿದು !
ಕೆಲವರಂ ತಡೆಯಲಿಕ್ಕಾಗದೇ ಸೂಳೆಗೇರಿಗೂ ಹೋದರೆಂಬ ಗುಮಾನಿ
ಹಬ್ಬಿದೆ ನಮ್ಮೂರಲ್ಲಿ ಆಮೇಲೆ ನೀವು ಪ್ರಧಾನಿ ಆಗುವ ಕನಸು
ಬೇಸಗೆಯ ಮರವಾಗಿ ಗಾಂಧೀಜಿಯ ಕನಸು ಸೂಜಿಮೊನೆ ತಾಗಿದ ಬೆಲೂನಾಗಿ
ನಮ್ಮನೆ ಸೂರಮೇಲೆ ಬೀಳುವಾಗ ಕೂತಿದ್ದೆ ನಾನು ಒಂದಕ್ಕೆ.
ಬಾಬೂಜಿ, ನಿಜಕ್ಕೂ ಬರಲಿಲ್ಲ ನನಗೆ ಆದಿನ ಮೂತ್ರ. ಹೆಂಡತಿಯೂ
ಸೇರಲಿಲ್ಲ ರಾತ್ರೆ. ಮಧ್ಯರಾತ್ರಿ ಇವಳು ನನ್ನನ್ನೆಬ್ಬಿಸಿ ಕೃಷ್ಣಾಷ್ಟಮಿ ಎಂದಾಗ
ನನಗೆ ನೀವು ಕಂಡಿರಿ ಕೃಷ್ಣನ ಹಾಗೆ
ಪ್ರಾಯಃ ನಿಮ್ಮ ಮೈ ಬಣ್ಣವೂ ಕೃಷ್ಣನ ಹಾಗಿರುವುದಕ್ಕೇ
ಹಾಗೆ ಕನಸು ಬಿತ್ತೋ ಏನೋ !

ಸನ್ನಿವೇಶ

ಬಾಬೂಜಿ ನಿಮಗೆ ಈಗೆಷ್ಟು ವರುಷ? ಖಾಸಗಿಯಾಗಿ
ಹೇಳಿ. ಸರಕಾರಿ ಲೆಕ್ಕ ಬೇಡ (ತೆರಿಗೆ ಕಟ್ಟಲು ಮರೆತವರೆಂಬ
ಆಪವಾದ ಇದೆ ನಿಮ್ಮ ಮೇಲೆ) ನಿಮ್ಮ ವಯಸ್ಸೆಷ್ಟೋ
ಅಷ್ಟಕ್ಕೇ ನಮ್ಮನ್ನೂ ತಂದು ನಿಲ್ಲಿಸುತ್ತಾರೆ ಇಲ್ಲಿ, ಅಂದರೆ ಕೇಳಿ
ನೀವು ನಾವು ಇಬ್ಬರೂ ಈ ದೇಶದಲ್ಲಿನ್ನು ಪ್ರಧಾನಿಯಾಗುವ ಹಾಗಿಲ್ಲ.
ನನಗೋ ಈಗ 36. ಇನ್ನೂ ಬಿಸಿನೆತ್ತರಿರಬೇಕಿತ್ತು ಆದರೆ ಈ ನೆತ್ತರು
16ಕ್ಕೇ ತಣ್ಣಗಾಗಿದೆ. 5ನೇ ಈಯತ್ತೆಯಲ್ಲಿ ಭಾರತದ
ನಕಾಶೆ ಬಿಡಿಸಲು ಕಲಿತದ್ದನ್ನೇ ಈಗಲೂ copy ಹೊಡೀತಿದ್ದಾನೆ
ನನ್ನಮಗ. ಬಾಲ್ಯದಲ್ಲಿ ಚಂದಮಾಮದಲ್ಲಿ ಓದಿದ ಕತೆಗಳೇ
ಈಗ ನಮ್ಮ ದೇಶದ ರಾಜಕೀಯ. ಹಠ ಬಿಡದ ತ್ರಿವಿಕ್ರಮ }
ಬೇತಾಳನ ಬೆನ್ನು ಹತ್ತುವ ಪಾಡು ನಮಗೆ, ನಿಮಗೆ.

ಆದರೆ ಬಾಬೂಜಿ ನೀವೂ ಸೇರಿದಂತೆ ಅಧಿಕಾರದಲ್ಲಿದ್ದಾಗ
ಎಲ್ಲರೂ ಹೇಳುವ ಮಾತು 'ಭಾರತ ಬದಲಾಗಿದೆ'
ನಿಜ; ಭಾರತ ಬದಲಾಗಿದೆ ಬಾಬೂಜಿ, ಬೇಕಾದರೆ ನಮ್ಮ
ಹಳ್ಳಿಗೆ ಬನ್ನಿ, ಗಾಂಧೀಜಿಯ ಕನಸೆಲ್ಲ ನನಸಾಗಿದೆ ಕುಸಿಯುವ ಜನತಾ ಗೃಹಗಳಲ್ಲಿ.
ಈ ಗೃಹಗಳಲ್ಲಿ ಉರಿಯುತ್ತಿದೆ ಚಿಮಣಿ ಪಕ್ಕದಲ್ಲೇ
ಶರಾಯಿ ಅಂಗಡಿ ಆಚೆ ಹೊಟ್ಟೆಗಾಗಿ ಬಟ್ಟೆ ಬಿಚ್ಚುವ ಮೂರೆಲೆಯಾಟ
ಆದರೂ ಬಾಬೂಜಿ ಒಬ್ಬನೇ ಒಬ್ಬ ಈ ದೇಶದ ಮಗ
ಯಾಕೆ ಕೊಳ್ಳಿ ಇಡುವುದಿಲ್ಲ ಈ ವ್ಯವಸ್ಥೆಗೆ }
ಗಾಂಧಿಯಾಗಿ ಅಥವಾ ಗೋಡ್ಸೆಯಾಗಿ ?

ಬಾಬೂಜಿ ಇದು ಸಾಧ್ಯವಿಲ್ಲ ಅಂತೀರಾ ಹಾಗಾದರೆ ಬನ್ನಿ
ಒಪ್ಪಿಕೊಳ್ಳೋಣ ಬಾರಿನಲ್ಲಿ 'ಚೀಯರ್ಸ್' ಹೇಳಿ ಕುಡಿಯುವ ಹಾಗೆ
ನಮ್ಮಲ್ಲಿ ರಾಗದ್ವೇಷವಿಲ್ಲ ನಾವು ರಾಜಕೀಯದಲ್ಲಿದ್ದೂ
ರಾಜಕೀಯದಿಂದ ದೂರನಿಂತ ಗೋಮಟೇಶ್ವರರೆಂದು
ಅಥವಾ ಜಯಹೇ ಜೀವನಾರಾಮ್ ಜಯಹೇ ಜೀವನಾರಾಮ್
ಅಂತ ಕಟ್ಟುವ ಹರೇಕೃಷ್ಣ ಪಂಥದಂತ
ಪಂಥ ಅಥವಾ ಪದ್ಯ!

ಜಿ. ಎಸ್. ಸಿದ್ಧಲಿಂಗಯ್ಯ

ಎಲ್ಲಿಗ್ಬಂತು ಸಂಗಯ್ಯ

ಬೆಳಕನ್ ಸಹಿಸ್ದೆ ಗೂಬೆ ಮುತ್ತಿ
ದೀಪ ಆರ್ತ್ತು; ಸುತ್ಲು ಕತ್ಲು
ಒಳ್ಳೆಗ್ರಹಚಾರ್ವಾಯ್ತಲ್ಲಪ್ಪ !
   ಎಲ್ಲಿಗ್ಬಂತು ಸಂಗಯ್ಯ......
   ಕಾನ್ ಕಾನ್ ಒತ್ತಿ ಒತ್ತಿ

ಹರಿಶ್ಚಂದ್ರ ಸುಡುಗಾಡ್ಹೋದ
ಸೀತಾಮಾತೆ ಭೂಮಿ ಹೊಕ್ಲು
ಧರ್ಮ್‌ರಾಯ ಕಾಡ್ ಬಿದ್ದೋದ
   ಎಲ್ಲಿಗ್ಬಂತು ಸಂಗಯ್ಯ
   ಕಾನ್ ಕಾನ್ ಒತ್ತಿ ಒತ್ತಿ

ಬುದ್ಧ ಬಂದವ್ನ ಣಬೆತಿಂದ
ಕ್ರಿಸ್ತಪ್ಪ್ನನೆ ಶಿಲುಬೆಗೇರ್ದ
ಗಾಂಧಿ ತಾತಪ್ನ ಗುಂಡ್ ತಿಂಧೋದ
   ಎಲ್ಲಿಗ್ಬಂತು ಸಂಗಯ್ಯ
   ಕಾನ್ ಕಾನ್ ಒತ್ತಿ ಒತ್ತಿ

ಅಲ್ಲಮ್ ಪ್ರಭೂನದ್ರುಸ್ಸೆಲ್ಲಿ ?
ಶರಣರನ್ನೋರ್ ಎಲ್ಲವ್ರಿನ್ನು ?
ಬಸವಣ್ಣನ್ನೇ ಓಡಿಸ್ಬುಟ್ರು !
   ಎಲ್ಲಿಗ್ಬಂತು ಸಂಗಯ್ಯ
   ಕಾನ್ ಕಾನ್ ಒತ್ತಿ ಒತ್ತಿ

ಹೆಂಡ್ರುನ್ಮಾರಿ ಧರ್ಮಕೊಳ್ಬೇಕ್
ಯಾರ್ಯ್ಯಾರ್ಕಾಲ್ಗೋ ಬೀಳ್ತಾಇರಬೇಕ್
ಮರ್ಯ್ಯಾದೆಂಬೋದ್ ಮರ್‍ತುಬಿಡ್‍ಬೇಕು
   ಎಲ್ಲಿಗ್ಬಂತು ಸಂಗಯ್ಯ
   ಕಾನ್ ಕಾನ್ ಒತ್ತಿ ಒತ್ತಿ

ಮುಳ್ಳಿನ್ಮೇಲೆ ನಿಂತಿದ್ದೀನಿ
ಬಿಸಿಲಿನ್ ಧಗೆ ತಿನ್‍ತಿದ್ದೀನಿ
ಬಯ್ಯೋರ್ ಮಾತು ನುಂಗ್ತಿದ್ದೀನಿ
   ಎಲ್ಲಿಗ್ಬಂತು ಸಂಗಯ್ಯ
   ಕಾನ್ ಕಾನ್ ಒತ್ತಿ ಒತ್ತಿ

ಹೊಟ್ಟೇಗನ್ನ ಸಿಕ್ಕಂಗಿಲ್ಲ
ಮರ್ಯ್ಯಾದೇನೂ ಉಳ್ಯಂಗಿಲ್ಲ
ಜೀವ ಉಳ್ಸೋದೊಂದೇ ಖಬರ ?
   ಎಲ್ಲಿಗ್ಬಂತು ಸಂಗಯ್ಯ
   ಕಾನ್ ಕಾನ್ ಸುತ್ತಿ ಸುತ್ತಿ

✻

ಜಿ. ಎಸ್. ಶಿವರುದ್ರಪ್ಪ

ಸುದ್ದಿ ಜೀವಿಗಳು

ಕೆಲವರಿಗೆ,
ಕಳೆದು ಹೋಗುವ ಭೀತಿ;
ಅದಕ್ಕಾಗಿ ಸದಾ ಕೂರುತ್ತಾರೆ
ಮೊದಲ ಪಂಕ್ತಿಯ ಖುರ್ಚಿ,
ಅಥವಾ ಅಧ್ಯಕ್ಷತೆಯ ಗದ್ದುಗೆ.

ಹಳಹಳಿಸುತ್ತಾರೆ ಅವರಿವರ ಮುಂದೆ
ಹಸನ್ಮುಖಿಗಳಾಗಿ;
ಕೈಕುಲುಕಿ, ಹಲ್ಕಿರಿದು, ಸೌಜನ್ಯ ಮೂರ್ತಿಗಳಾಗಿ
ದಿನಕ್ಕೊಂದು ಸುದ್ದಿಯಾಗಿ.

ಸುದ್ದಿಜೀವಿಗಳಿವರು–
ನಿದ್ದೆಬಾರದು. ಇವರಿಗ್ಯಾರಾದರೂ
ತಮ್ಮನು ಕುರಿತು ಮಾತಾಡಿಕೊಳದಿದ್ದರೆ,
ಪತ್ರಿಕೆಯಲ್ಲಿ ತಾನಾಡಿದ್ದು ಬರದಿದ್ದರೆ.

ಶಾವಾಗಿಯೇ ಬಾಗಿಲು ಬಡಿದು ನುಗ್ಗುತ್ತಾರೆ
ಬಗೆ ಬಗೆಯ ವೇದಿಕೆಗೆ,
ಮೈಕಿಗೆ, ಚಪ್ಪಾಳೆಗೆ, ಜಿರಾಫೆ ಕೊರಳೊಡ್ಡುತ್ತ
ಬೀಳಬಹುದಾದ ಹಾರಕ್ಕೆ.

ನಿಶ್ಶಬ್ದದಲ್ಲಿವರು ತುಕ್ಕುಹಿಡಿಯುತ್ತಾರೆ,
ಸಣ್ಣಗೆ ಕೊರಗುತ್ತಾರೆ,
ಮರೆತು ಹೋಗುವ ಭಯದಲ್ಲಿ ಬೆವರುತ್ತಾರೆ;
ಸಿಕ್ಕಿದ್ದಕ್ಕೆಲ್ಲಾ ಶೆಕ್ಕೆಬೀಳುತ್ತಾ
ಪ್ರವಾಹದ ಗುಂಟ ತೇಲುತ್ತಾರೆ.

✻

ಗೋವಿಂದಯ್ಯ

ಅ ಆ ಮತ್ತು . . . .

✧ ಕಣ್ಣುಬಿಟ್ಟು ನಾನು ಕೈಕಾಲು ಆಡಿಸಿದಾಗ;
ಕತ್ತಲೆಗೂಡಿನ ಅವ್ವನ ಕಣ್ಣೊಳಗೆ
ಒಲೆ ಉರಿಯುತ್ತಿತ್ತು
ಕಪ್ಪು ಕೈಕಾಲುಗಳ ಬೆಂಕಿಗೆ ಒಪ್ಪಿಸಿಕಾಯುತ್ತಾ
ಅಪ್ಪ ವೋಟು ಬೀಡಿಯೊಂದಿಗೆ ಉಸಿರಾಡಿದ
ಕುದಿವ ಗಂಜಿಗೆ ಜೀವಗಳು ಕುದಿಯುತ್ತಿದ್ದವು

✧ ಅವ್ವನ ಎದೆಗೂಡೊಳಗೆ
ತೆವಳಿ–ನಿಂತು–ನಡೆದಾಡಿದ ಹೆಜ್ಜೆಗಳು
ಇಸ್ಕೂಲು ಗೋಡೆಗಳ ನಡುವೆ ನಿಂತೇಬಿಟ್ಟಾಗ
ಕರಿಕೆನ್ನೆಯ ಮೇಲೆ ಹುರಿಗೊಂಡಿದ್ದ ಅಪ್ಪನ ಮೀಸೆ
ನಾಮದ ಮೇಸ್ಟರ ಕಾಲಿಗೆ ಬಿದ್ದು ನೆಲ ನೋಡಿತು!

✧ ಕತ್ತಲೆ ಬೋರ್ಡಿನ ಮೇಲೆ ಕಲಿತ ಅ ಆ
ಅಕ್ಷರಗಳ ನಡುವೆ ಅವ್ವ ಅಪ್ಪನ ಆಶೆಗಳು ಸಿಕ್ಕಿದುವು
ನಮ್ಮ ಊರು, ಕೇರಿ, ಸಮಾದಿಗಳು ಸಿಕ್ಕಿದುವು
ಅಸ್ತಿ ಪಂಜರಗಳ ಪಾತಾಳದಲ್ಲಿ ಒಂದಿಷ್ಟು
ಮಾತುಗಳು ಸಿಕ್ಕಿದುವು

✧ ಹುಡುಕುತ್ತಾ ಹುಡುಕುತ್ತಾ
ಕೆಳಕ್ಕೆ ಇಳಿದಾಗ ಎದ್ದ ಪ್ರಶ್ನೆಗಳಿಗೆ
ಕಾಕಿ ಡ್ರೆಸ್ಸಿನ ಕೈಕಾಲುಗಳು ಮೂಡಿ
ಮೀಸೆಗಳು ಬೆಳೆದು ಅದರಿಕೊಂಡು
ಕತ್ತಲಲ್ಲಿ ಕರಗಿ ಹೋದೆ!

✧ ಆದರೆ
ಪಿತ್ರಾರ್ಜಿತ ಗುಡಿಸಲ ಹರಕು ಗೋಡೆಗಳ ಮೇಲೆ
ಅ ಆ ಮೂಡಿಸಿದಾಗ ಅಂದು
ಅವ್ವ ಕೊಟ್ಟ ಮುತ್ತುಗಳು ಕೆನ್ನೆ ಮೇಲೆ ಇನ್ನೂ ಇವೆ
ಅಪ್ಪ ಕೊಟ್ಟ ತೂತು ಕಾಸು ಉಡುದಾರದಲ್ಲಿ
ಹಾಗೇ ಇದೆ!

✻

ಗೋಪಾಲಕೃಷ್ಣ ಅಡಿಗ

ಶಾಂತವೇರಿಯ ಅಶಾಂತ ಸಂತ

೧

ಮೊದಲು ಗಾಯತ್ರಿ ಹೊತ್ತು ಹೆತ್ತ ವಿಶ್ವಾಮಿತ್ರರಿಗೆ, ಅನಂತರ ರೂಢಿ
ಚಿಪ್ಪೊಡೆದು ಚಿಮ್ಮಿದ ಚಿದಗ್ನಿ ದ್ವಿಜಾಗ್ನಿ ಸುಳಿ ಶಂಬೂಕ ಋಷಿಗಳಿಗೆ. ತದನಂತರ ನಮ್ಮ
ಶಾಂತವೇರಿಯ ಅಶಾಂತ ಸಂತ ಗೋಪಾಲಗೌಡರಿಗೆ
ನಮಸ್ಕಾರ:

ತಪಿಸಿ, ಶಪಿಸಿ, ಪರಿತಪಿಸಿ, ಬದುಕಿದ್ದು, ಆಗಿ, ಹೋಗಿ ರುಜುವಾತು ಪಡಿಸಿದಿರಿ:
"ಜಾತಿ ಅಜ್ಞಾತಕ್ಕೆ ಕೊಟ್ಟ ಲೇಬಲ್ ಮಾತ್ರ, ಪ್ರಮಾಣ ಪತ್ರವಲ್ಲ.
ಪ್ರಚೋದಿತ ಧೀಗೆ ಸತ್ಯಲೋಕವೊಂದೇ ಸೀಮೆ,
ಚರಂಡಿಬಳಿ ಇರಲಿ, ಕೈದೋಟದಲ್ಲೇ ಇರಲಿ,
ಹುಳಿ ಮಾವು ಹುಳಿಯೆ, ಸಿಹಿಯಾದ್ದು ಸಿಹಿಯೇ."

೨

ರಾಶಿರಾಶಿ ಮರಳು ಕಲ್ಲು ಮುಳ್ಳು ಮಣ್ಣು ಹೊರೆಹೊರೆ ಕೆಳಗೆ
ಏರುತ್ತಲೇ ಇದ್ದ ಧೀಮಂತ ಮೊಳಕೆ,
ಹಗಲಿರುಳು ವಾರ ತಿಂಗಳು ವರ್ಷ ವರ್ಷವೂ
ಕುದಿಯುತ್ತಲೇ ಇದ್ದ ಕರುಳ ಚರಿಗೆ
ನೀವು. ಈಗ ಇರಬೇಕಿತ್ತಿಲ್ಲಿ ಕವರ್ಣಾಂಗಕ್ಕೆ.
ಬ್ರಹ್ಮ ಕುಳಿತಿರೆ ನಾವು ಮೂಲೆ ಸೇರಿ
ನೀವು ಕುಳಿತಿರಿ ಕುಂಡದಲ್ಲಿ ಸರ್ವ ಹುತಕ್ಕೆ ಅಧ್ವರ್ಯು,
ಸಿದ್ಧಪಡಿಸುತ್ತ ಅಂಗಾಂಗ;
ಅಂಗುಲಂಗುಲ ಹವಿಸ್ಸಾಗಿ ಸುಟ್ಟಿರಿ ಇಲ್ಲಿ
ಜೀಮೂತವಾಹನ ದಧೀಚಿ ರೀತಿ.

೩

ಬಂಗಾರವಾಗಿ ಬದುಕಿದ್ದ ಅಕಿಂಚನ ಚೇತ,
ಧೀಮಂತರಲ್ಲಿ ಧೀಮಂತ, ರಸಿಕರಲ್ಲಿ ರಸಿಕ;
ಕಂಗಾಲರಲ್ಲಿ ಕಂಗಾಲ, ಮುಗ್ಧರೊಳಗೆ ಮುಗ್ಧ ವಿದಗ್ಧ,
ಅಂತರಂಗದ ಅಭಂಗ ದೀಪಾವಳಿಯ ರಂಗಕ್ಕೆ
ಹಣತೆ ಮಾಡಿದಿರಿ ನಿಮ್ಮೊಡಲ, ಎರೆದಿರಿ ಅದಕ್ಕೆ
ಆಜ್ಯಧಾರೆಯ ಹಾಗೆ ಹರಣ.

ಧೀರೋದಾತ್ತ ನಾಯಕನ ಪಾತ್ರಕ್ಕಾಗಿ ಹುಟ್ಟಿಯೂ ಕೂಡ
ಹುತಾತ್ಮ ಪಾತ್ರವನಾಯ್ದುಕೊಂಡ ವೀರ;
ಶತಕ್ಷತವಾದರೂ ಶರೀರ ತೆವಳುತ್ತಲೇ ಇತ್ತು
ಕಂಡ ಕಣಸಿನ ಗುರಿಗೆ ನೇರ, ನೇರ.

ಹುಗಿದಿಟ್ಟು ಹತ್ತಾಳು ಕೆಳಗೆ ಕೈ ತೊಳೆದುಕೊಂಡಿರಿ ನಿಮ್ಮ
ಇಂದ್ರಿಯಾರ್ಥಗಳ. ಆವೇ ಕೂಗುವಾರಿ
ಬೆನ್ನಟ್ಟಿ ಬಂದು ಕಾಡಿದ್ದು ಸೋಜಿಗವಲ್ಲ, ದಿಗ್ಭ್ರಾಂತರಾಗದೆ ನೀವು
ಅಭಿಮನ್ಯು ನಿಂತದ್ದು ಪವಾಡವೆ ಸರಿ.

೪

ಸಂಕಲ್ಪ ಬಲದ ಬಾರು ಬಿಗಿದೆ ಬಿಗಿದಿರಿ, ಮೃದಂಗ
ಒಡೆದು ಹೋಯಿತು. ತಾಳಗೆಟ್ಟ ಮೇಳ
ದಿಕ್ಕುಪಾಲಾಗಿ ಚೆದುರಿತು. ಸಮತ್ವ ಭ್ರಾತೃತ್ವಗಳ ಬಯಲಾಟ
ಬಟ್ಟಂ ಬಯಲು, ರಂಗ ಖಾಲಿ ಖಾಲಿ.

ಧರ್ಮಕ್ಷೇತ್ರ, ಕರ್ಮಕ್ಷೇತ್ರ, ಕುರುಕ್ಷೇತ್ರ ಯಾವುದಾದರು ಇರಲಿ
ಸೋಲುವುದು ಸೋಲೆ, ಗೆಲವು ಕೂಡ ಸೋಲೇ.
ಬರೀ ಚಿಗುರು ಪೊಗರು, ಮೊಗ್ಗುಗಳು ನೂರಾರು
ಹೂವುಗಳು ಒಂದಿಷ್ಟು ಅಲ್ಲಿ ಇಲ್ಲಿ;
ಹೊಸ ಬದುಕುತರುವ ಹಣ್ಣೆಲ್ಲ ಮುಂದಿನ ಮಾತು.
ಇದ್ದಾಗ ಒಳಗಿದ್ದುದೆಲ್ಲ ಮೊಳೆತು ಸಸಿಯಾಗಿ ಹೆಮ್ಮರವಾಗಿ ಚಾಚಿದ್ದು
ಹೂಬಿಟ್ಟು ನಿಂತಂಥ ಜೀವಲೀಲೆ
ನಿಮ್ಮದಾಗಿತ್ತು, ಕೃತಕೃತ್ಯರಯ್ಯಾ ನೀವು,
ಹಣ್ಣತ್ತು ಹಲವಾರು ಒಳಗೆ ಒಳಗೆ,
ಅಂತರಂಗದ ಶ್ರೀಮಂತ ಬದುಕು ಅನಂತವಿರಬಹುದಯ್ಯಾ,
ಆತ್ತ ಕಡೆಗೆ ನಮ್ಮ ಹೆಜ್ಜೆ ಕೂಡ.

*

ಸಂಪಾದಕನ ಟಿಪ್ಪಣಿಗಳು

ನಮ್ಮ ಸನ್ನಿವೇಶ

ಮೌನಕಣಿವೆ

ಈ ಮೌನಕಣಿವೆ, ಸೈಲೆಂಟ್ ವ್ಯಾಲಿಯೆಂದು ಈಚೆಗೆ ಪ್ರಸಿದ್ಧವಾದುದು, ಕೇರಳದಲ್ಲಿದೆ. ಅದಕ್ಕೆ ಹತ್ತಿರದ ದೊಡ್ಡ ಊರಾದ ಪಾಲ್ಘಾಟ್‌ನಿಂದ ಕಡಿದಾದ ಬೆಟ್ಟದ ದಾರಿಯಲ್ಲಿ ಸುತ್ತಿ, ಬಳಸಿ, ಕುಕ್ಕಿ, ಕುಲುಕಿ ಜೀಪ್ ನಮ್ಮನ್ನು ಈ ಪ್ರದೇಶಕ್ಕೆ ಕೊಂಡೊಯ್ಯುತ್ತದೆ. ಕೇರಳದ ವಿದ್ಯುಚ್ಛಕ್ತಿ ಇಲಾಖೆಯವರು ಬೆಟ್ಟದ ನೆತ್ತಿ ಮೇಲೆ ಈ ಮೌನಕಣಿವೆಗೆ ಅಣೆಕಟ್ಟು ಕಟ್ಟಲು ಸಿದ್ಧರಾಗಿ ಕಾದು ಕೂತಿದ್ದಾರೆ. ಇವರು ನಮ್ಮನ್ನು ಆದರದಿಂದ ಬರಮಾಡಿಕೊಂಡು ಈ ಅಣೆಕಟ್ಟಿನ ವಿಷಯ ವಿವರಿಸುತ್ತಾರೆ. ಈ ಅಣೆಕಟ್ಟನ್ನು ಕಟ್ಟದಂತೆ ನಡೆಯುತ್ತಿರುವ ಚಳವಳಿಯ ಹಿಂದೆ ಹೊರದೇಶದವರ ಕೈವಾಡವಿದೆಯೆಂದು ಅವರು ನಮಗೆ ನಮ್ರವಾಗಿ ಸೂಚಿಸುತ್ತಾರೆ. ಕಮ್ಯುನಿಸ್ಟ್ ಪಕ್ಷದ ವಿಜ್ಞಾನಿ ಲೇಖಕ ಡಾ. ಪರಮೇಶ್ವರನ್ ಕೂಡ ಏಕೆ ಇದನ್ನು ವಿರೋಧಿಸುತ್ತಾರೆ ಎಂದು ನಾವು ಕೇಳಿದರೆ ಅವರು ಮುಗುಳ್ನಗುತ್ತಾರೆ. ಎಷ್ಟೋ ಜನ ಈ ಪ್ರಶ್ನೆ ಕೇಳಿರಬೇಕೆಂದು ಅವರ ಅರ್ಥಪೂರ್ಣ ನಗುವಿನಿಂದ ನಮಗೆ ಭಾಸವಾಗುತ್ತದೆ. ತಾವು ಕೂಡ ಪರಮೇಶ್ವರನ್ನ ಗೌರವಿಸುತ್ತೇವೆಂದು ಒಪ್ಪಿಕೊಂಡು, "ಈ ಪ್ರತಿಕ್ರಿಯೆ ಕೇವಲ ಭಾವುಕವಾದ್ದು ಸಾರ್. ಸೈಲೆಂಟ್ ವ್ಯಾಲಿಯೆಂದು ಈ ಪ್ರದೇಶವನ್ನು ಕರೆಯಲು ಹೋಗಿ ಹೀಗಾಯ್ತು. ಯಾವನೋ ಆಂಗ್ಲನೊಬ್ಬ ಬಹಳ ಹಿಂದೆ ಈ ಕಡೆ ಕುದುರೆ ಮೇಲೆ ಬರುವಾಗ ಜಾಗದ ಹೆಸರೇನೆಂದು ಯಾರನ್ನೋ ಕೇಳಿದನಂತೆ. ಹಳ್ಳಿಯವ 'ಸೈರಂಧ್ರೀ ಕಣಿವೆ' ಎಂದದ್ದನ್ನು 'ಸೈಲೆಂಟ್ ವ್ಯಾಲಿ' ಎಂದವನು ತಪ್ಪಾಗಿ ತಿಳಿದುಕೊಂಡನಂತೆ. ಈ ಕಣಿವೆಯಲ್ಲಿ ಹರಿಯುವ ನದಿಯ ಹೆಸರು 'ಕುಂತಿ' ಎಂದು. ನಾವಿದನ್ನು 'ಕುಂತಿ ಅಣೆಕಟ್ಟು' ಎಂದು ಕರೆದಿದ್ದರೆ ಈ ಎಲ್ಲ ತಾಪತ್ರಯಗಳಿಂದ ಪಾರಾಗಬಹುದಿತ್ತೇನೋ" ಎಂದವರು ಬೇಸರದಿಂದ ವಿವರಿಸಿ ಅಣೆಕಟ್ಟು ಕಟ್ಟಬೇಕೆಂದಿದ್ದ ಜಾಗಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತಾರೆ.

ಮಲೆನಾಡಿನಲ್ಲಿ ಹುಟ್ಟಿಬೆಳೆದ ನಾನೇನೂ ಈ ಅದ್ಭುತ ದೃಶ್ಯಕಂಡು ಬೆಕ್ಕಸಬೆರಗಾಗುವುದಿಲ್ಲ. ಪಶ್ಚಿಮ ಘಟ್ಟಗಳಲ್ಲಿ ಇದೇನೂ ಪ್ರಕೃತಿಯನ್ನು ಮನುಷ್ಯನಿಗಾಗಿ ಪಳಗಿಸಿಕೊಳ್ಳುವ ಮೊದಲ ಯೋಜನೆಯಲ್ಲ. ಗತಿಸಿದ ಇರಾನಿನ ಶಾನಿಗೂ, ನಿನ್ನೆ ಮೊನ್ನೆ ಬಲಿಷ್ಠರಾದ ನಮ್ಮ ರಾಜಕೀಯ ಧಡಿಯರಿಗೂ ಅನುಕೂಲವಾಗಲೆಂದು ಕುದುರೆಮುಖದ ಯೋಜನೆ ಶುರುವಾದಾಗ ಯಾರೂ ಚಕಾರವೆತ್ತಲಿಲ್ಲ. ಅನಂತಗಿರಿ ಶ್ರೇಣಿಯನ್ನು ಕೊರೆದಾಗ ಯಾರೂ ಪ್ರತಿಭಟಿಸಲಿಲ್ಲ. ನನ್ನಲ್ಲಿ ಏಳುವ ಈ ಅರ್ಥಂಬರ್ಥ ಯೋಚನೆಗಳನ್ನು ಅಂಕಿ ಅಂಶಗಳ ಸಹಿತ ವಿದ್ಯುತ್ ಎಂಜಿನಿಯರ್ ಸ್ಪಷ್ಟ

ಗೊಳಿಸುತ್ತ ಹೋಗುತ್ತಾರೆ; "ಅವುಗಳಿಗೆಲ್ಲ ಹೋಲಿಸಿದರೆ ಈ ಮೌನಕಣಿವೆಯಲ್ಲಿ ಮುಳುಗುವ ಕಾಡು ಕೇವಲ 845 ಹೆಕ್ಟೇರುಗಳು. ಇವನ್ನು 'ವರ್ಜಿನ್' ಕಾಡೆನ್ನುತ್ತಾರೆ. ಮಾತಿಗೆ ಮಾತ್ರ ಇದು ಕನ್ನಿಕೆ–ಅದೆಷ್ಟೋ ವರ್ಷಗಳಿಂದ ಈ ಕಾಡಿನ ಮರಗಳು ರೈಲ್ವೆಗೆ ಬಳಕೆಯಾಗುತ್ತಿವೆ. ಪ್ರತಿನಿತ್ಯ ಸೌದೆಗೆಂದು ನಾಟಕ್ಕೆಂದು ಕಳ್ಳಸಾಗಾಣಿಕೆ ನಡೆಯುತ್ತಿದೆ. ನಾವು ಅಣೆಕಟ್ಟು ಕಟ್ಟದಿದ್ದರೂ, ಅಗೋ, ಈ ದಿಬ್ಬಗಳ ಮೇಲೆಲ್ಲ ಬೋಳಾಗುತ್ತಾ ಹೋದಂತೆ ಈ ಕಣಿವೆಯ ಆಳದಲ್ಲಿರುವ ಕಾಡೂ ಒಂದಲ್ಲ ಒಂದು ದಿನ ಬೋಳಾಗುವುದಂತೂ ಖಂಡಿತ. ಇಲ್ಲಿ ಅತ್ಯಂತ ಕಮ್ಮಿ ಖರ್ಚಿನಲ್ಲಿ ಕಟ್ಟೆ ಕಟ್ಟಬಹುದು,—ಈ ಕಾಡು ಮುಳುಗಿದರೂ ಮೇಲೆ ವಿಶಾಲ ಹಬ್ಬಿರುವ ಕಾಡುಗಳನ್ನೆಲ್ಲಾ ಸಕ್ರಮವಾಗಿ ಕಾಯುವ ಏರ್ಪಾಡು ಮಾಡಬಹುದು. ಈಗ ಬೋಳುಗುಡ್ಡವಾಗಿರುವುದು ನೀರಿನಿಂದ ತುಂಬಿದಂತೆ ಅಂಚಿನಲ್ಲಿ ತಾನಾಗಿಯೇ ಕಾಡು ಬೆಳೆಯುವುದು. ಅದು ಅರಣ್ಯದ ಸ್ವಭಾವ–ಎಲ್ಲ ನದಿ ದಂಡೆ ಮೇಲೂ ನಾವು ಕಾಣುವುದಿಲ್ಲವೇ ಅಂಥ ನೈಸರ್ಗಿಕ ಕಾಡುಗಳನ್ನ ?".

ಉತ್ತರ ಪ್ರದೇಶದ ತೆರಾಯ್‌ನಲ್ಲಿ, ಬಿಹಾರದ ರಾಂಚಿ ಕಲ್ಲಿದ್ದಲು ಗಣಿಗಳಲ್ಲಿ, ಹಜಾರಿಬಾಗ್ ಗಯಾದ ಕಾಡುಗಳಲ್ಲಿ, ಮಧ್ಯಪ್ರದೇಶದ ಮಹದೇವ, ಸತ್ಪುರ, ಬೈಲಾದೀಲ ಗಿರಿಶ್ರೇಣಿಗಳಲ್ಲಿ, ಆಂಧ್ರಪ್ರದೇಶದಲ್ಲಿ, ತಮಿಳುನಾಡಿನಲ್ಲಿ, ಕರ್ನಾಟಕದಲ್ಲಿ ಇಕಾಲಜಿಸ್ಟರು ಯಾಕೆ ಬಾಯಿ ಮುಚ್ಚಿಕೊಂಡು ಕೂತರು ? ಭಾರತದ ಎಲ್ಲ ಪ್ರದೇಶಗಳೂ ನಾಗರಿಕತೆಯಲ್ಲಿ ಮುಂದುವರಿದಂತೆ ಕೇರಳದ ಈ ದಟ್ಟದರಿದ್ರ ಪ್ರದೇಶ ಮುಂದುವರಿಯಬಾರದೆ ?

ಮಾನವನ ನಾಗರಿಕ ಸೌಲಭ್ಯಗಳಿಗಾಗಿ, ಬಡತನದ ನಿವಾರಣೆಗಾಗಿ ಉತ್ಕಂಠ ಆರ್ತತೆಯಿಂದ ಮಾತಾಡುವ ವಿದ್ಯುತ್ ಇಲಾಖೆಯ ಧ್ವನಿ ನನ್ನದೂ ಅಲ್ಲವೆ ಎಂದು ನಾನು ಗೊಂದಲಕ್ಕೊಳಗಾಗುತ್ತೇನೆ. ಅದೇನೋ ಒಂದು ಜಾತಿಯ ಮಂಗವಂತೆ—ಅದನ್ನು ಉಳಿಸಲೆಂದು ಇಷ್ಟು ನೀರಾವರಿ, ಇಷ್ಟು ವಿದ್ಯುಚ್ಛಕ್ತಿಯನ್ನು, ಇಷ್ಟು ಕಡಿಮೆ ಖರ್ಚಿನಲ್ಲಿ (ಎಷ್ಟು ಮರೆತಿದೆ) ಉತ್ಪಾದಿಸುವುದನ್ನು ಕೈಬಿಡಬೇಕೆ ? ನನ್ನ ಮೌನದಿಂದ ಉತ್ತೇಜಿತರಾದ ಎಂಜಿನಿಯರ್ ಸಿಟ್ಟಿನಲ್ಲಿ ಗೊಣಗುತ್ತಾರೆ. ಅರ್ಜುನ ಮತ್ತು ಕೃಷ್ಣರು—ನರನಾರಾಯಣರೇ—ಖುದ್ದಾಗಿ ನಡೆಸಿದ ಖಾಂಡವದಹನವನ್ನು ನಾನು ನೆನೆಯುತ್ತೇನೆ. ಎಲ್ಲಾ ಕಾಲದಲ್ಲೂ ಎಲ್ಲೋ ಕೆಲವು ವ್ಯಕ್ತಿಗಳು ಮಾತ್ರ ದಯಾವಂತರು; ಆದರೆ ಮಾನವಕುಲ ಸಮುದಾಯವಾಗಿ ಇತಿಹಾಸದಲ್ಲಿ ಯಾವತ್ತೂ ನಿರ್ದಯವಾಗಿ ನಡೆದುಕೊಂಡೇ ಬಂದಿದೆಯಲ್ಲವೆ ? ಇಲ್ಲದಿದ್ದಲ್ಲಿ ನಾವೆಲ್ಲರೂ ಜೇನುಕುರುಬರಂತೆ ಊಂಛವೃತ್ತಿಗಳಾಗಿ ಬದುಕಬೇಕಾಗುತ್ತಿತ್ತು. ಅಸೂಯೆ ದುರಾಸೆಗಳೂ ಮಾನವನನ್ನು ಪ್ರಗತಿಪಥದಲ್ಲಿ ನಡೆಸುವ ಶಕ್ತಿಗಳಿರಬಹುದು ಎಂಬರ್ಥದ ಎಂಗೆಲ್ಸ್‌ನ ಮಾತುಗಳು ನಿಷ್ಠುರ ಸತ್ಯವಿದ್ದರೆ ?

ವಿದ್ಯುತ್ ಎಂಜಿನಿಯರ್ ನನ್ನ ಕೈಯಲ್ಲಿ ಸುಡುವ ಚಹಾದ ಕಪ್ಪನ್ನಿಟ್ಟು ಹೇಳುತ್ತಾರೆ ; "ನೀವು ಲೇಖಕರಂತೆ. ನಿಮ್ಮಂಥವರದು ಮೃದುವಾದ ಅಂತಃಕರಣ. ಇಂಥ ಸೌಂದರ್ಯದ ನಾಶವನ್ನು ನೀವು ಒಪ್ಪುವುದಿಲ್ಲ. ಆದರೆ ನೀವು ಬರೆಯುವ, ಓದುವ ಪುಸ್ತಕಗಳ ಕಾಗದಕ್ಕೆಂದು ಎಷ್ಟು ಅರಣ್ಯ ನಾಶವಾಗುತ್ತದೆ ಗೊತ್ತೆ? ನಾವು ತಪಸ್ವಿಗಳಾದ ಋಷಿಗಳಾಗಿದ್ದರೆ ಇಕಾಲಜಿಸ್ಟರು ಹೇಳುವುದನ್ನು ಒಪ್ಪಬಹುದಿತ್ತು. ಆಧುನಿಕವಾಗಿ ಬದುಕಬೇಕೆಂದರೆ ಹಿಂಸೆ ನಾಶಗಳಿಂದ ಹಿಂದೆಗೆಯುವುದು ಸಾಧ್ಯವೆ ? ಭಾರತದ ಆಧುನೀಕರಣಕ್ಕಾಗಿ ಈ ಎಲ್ಲ ಯೋಜನೆಗಳೂ ಅಗತ್ಯ. ಗೊಡ್ಡು ಗಾಂಧೀವಾದಿಗಳು ಅಥವಾ ಭಾರತ ಬಡರಾಷ್ಟ್ರವಾಗಿಯೇ ಉಳಿಯಬೇಕೆಂದು ಬಯಸುವ ಯೂರೋಪ್ ಅಮೇರಿಕಾದವರು ಇಂಥ ಯೋಜನೆಗಳಿಗೆ ಅಡ್ಡಿ ಬಂದು ಮಂಗಗಳನ್ನು ಉಳಿಸಿ ಎಂದು ಬೊಬ್ಬೆಯಿಡುತ್ತಾರೆ.'' ಏನು ಹೇಳಲೂ ನಾನು ಅಳುಕುತ್ತಿರುವುದನ್ನು ಕಂಡು, ಚಹಾ ಹೀರುತ್ತ ವಿದ್ಯುತ್ ಎಂಜಿನಿಯರ್ ಅಟ್ಟಹಾಸದಿಂದ ಮಾತಾಡುತ್ತಾರೆ. ತಾವು ಗೆದ್ದೇ ಗೆಲ್ಲುವೆವು ಎಂಬ ಭರವಸೆ ಅವರಿಗೆ....

ಮೌನಕಣಿವೆಯೊಳಕ್ಕೆ ನಾವು ಇಳಿದು ಹೋಗುತ್ತೇವೆ–ಜಿಗಣೆಗಳನ್ನು ಕಾಲಿನಿಂದ ಕೀಳುತ್ತ, ಹಸಿರು ಹಾವುಗಳನ್ನು ಅಲ್ಲಲ್ಲಿ ಕಾಣುತ್ತ, ಏಕಪ್ರಕಾರವಾಗಿ ಮಾತಾಡುತ್ತ. ಎಷ್ಟೊಂದು ಮಾತುಗಳಿಗೆ, ವಾದಗಳಿಗೆ ಕಾರಣವಾದ ಈ ಪ್ರದೇಶದ ಹೆಸರು ನನಗೆ ಐರಾನಿಕ್ ಎನ್ನಿಸುತ್ತದೆ. ತನ್ನ ಬಾಲ್ಯದ ಹುಚ್ಚು ಚಪಲಗಳನ್ನೂ, ಕುತೂಹಲಗಳನ್ನೂ ಪಳಗಿಸುತ್ತ, ತನಗೆ ಸೊಬಗಿನ ಮೂಲಕವೆಷ್ಟೋ ಅಷ್ಟೇ ದಿಗಿಲಿನ ಮೂಲಕ ಪಾಠ ಕಲಿಸಿದ ವರ್ಡ್ಸ್‌ವರ್ತ್ ವರ್ಣಿಸಿದ ಪ್ರಕೃತಿ ನೆನಪಾಗುತ್ತದೆ. ನವೆಂಬರಿನ ತಂಪಾದ ಮೌನಕಣಿವೆಯ ಆಳದಲ್ಲಿ ನಿಂತ ನನ್ನನ್ನು 'ನಿಮಗಿಲ್ಲಿ ಎಲ್ಲ ಕಾಡುಗಳಲ್ಲೂ ಕೇಳಿಬರುವ ಸಿಕಾಡೆಗಳ ದನಿ ಕೇಳಿಸುವುದಿಲ್ಲ ಅಲ್ಲವೇ?' ಎಂದು ಎಂಜಿನಿಯರ್ ಕೇಳುತ್ತಾರೆ. "ಆ ಕಾರಣ

ದಿಂದಲೇ ಇವನ್ನು ಮೌನಕಣಿವೆ ಎನ್ನುವುದು,'' ಎಂದು ವಿವರಿಸುತ್ತಾರೆ. ''ನೋಡಿ ನಷ್ಟವಾಗುವುದು ಇಷ್ಟೇ ಕಾಡು'' ಎಂದು ಮತ್ತೆ ಈ ಕಡಿದಾದ ಕಣಿವೆಯಲ್ಲಿ ನನಗೆ ಥಟ್ಟನೆ ಗುಪ್ತಯೋನಿಯಂತೆ ಕಂಡ ಅರಣ್ಯವನ್ನು ತೋರಿಸುತ್ತಾರೆ. ಒಂದು ಚೂರು ನೆಲಕ್ಕಾಗಿ ಪಂಚಮರನ್ನು ಜೀವಸಹಿತ ಸುಡುವ ನಮ್ಮ ನಾಗರಿಕತೆ ಈ ಅರಣ್ಯದಲ್ಲಿರುವ ವಿಶೇಷ ಜಾತಿಯ ಕೆಲವು ಮಂಗಗಳನ್ನು ಉಳಿಸುವುದು ಸಹಜವೆಂದು ನಾವೇಕೆ ತಿಳಿಯಬೇಕು ?

ಗಾಂಧಿ ಮತ್ತು ನೆಹರು

ನಾವು ಕೇಳಿಕೊಳ್ಳುವ ಮೇಲಿನ ಈ ಪ್ರಶ್ನೆಗಳು ನಮ್ಮನ್ನು ನಿಜವಾಗಿ ಬಾಧಿಸುವುದಿಲ್ಲ. ಭಾರತೀಯರಾದ ನಾವು ಬೌದ್ಧಿಕ ಸಂಕಟದಿಂದ ನರಳುವುದಿಲ್ಲ—ಇಕ್ಕಟ್ಟಿನಲ್ಲಿ ಸಿಕ್ಕು ನಮ್ಮ ಭವಿಷ್ಯದ ಕವಲುದಾರಿಗಳಲ್ಲಿ ಯಾವುದಾದರೂ ಒಂದನ್ನು ಆಯುವ ಕಷ್ಟವನ್ನು ನಾವು ಪಡುವವರಲ್ಲ. ಗಾಳಿ ಬೀಸಿದತ್ತ ನಾವು ತೂರುತ್ತ ಸಾಗಿದ್ದೇವೆ. ನಮ್ಮ ದೇಶದ ಸನಾತನವಾದಿಗಳಾಗಲೀ, ಆಧುನಿಕ ವಿಚಾರವಾದಿಗಳಾಗಲೀ ತಾವು ನಿಂತ ನೆಲೆಯನ್ನು ಬೌದ್ಧಿಕ ಸಂಕಟದಲ್ಲಿ ಪ್ರಶ್ನಿಸಿಕೊಳ್ಳುವುದಿಲ್ಲ. ನಮ್ಮ ತಾತ್ವಿಕ ವಾದಗಳಲ್ಲಿ, ರಾಜಕೀಯ ಸಂಘರ್ಷಗಳಲ್ಲಿ ಹೆಚ್ಚು ನಾವು ಕಾಣುವುದು ಕೇವಲ ಹುಂಬತನ ; ಪಂಗಡಗಳ ಸದ್ಯದ ಆಸಕ್ತಿಗಳ ಘರ್ಷಣೆ. ಈ ಆಸಕ್ತಿಗಳ ಘರ್ಷಣೆ ಧೀಮಂತರಲ್ಲಿ ಮುಕ್ತ ಶೋಧದ ವೈಚಾರಿಕ ಘರ್ಷಣೆಯಾಗುವುದಿಲ್ಲ. ಮೌನಕಣಿವೆಯಲ್ಲಿ ನಿಂತಾಗ ನನಗೆ ಸ್ವಾತಂತ್ರ್ಯದಕ್ಕಿದ ಸಂದರ್ಭದಲ್ಲಿ ಗಾಂಧೀಜಿ ಮತ್ತು ಪಂಡಿತ ನೆಹರೂರ ನಡುವೆ ನಡೆದ ಐತಿಹಾಸಿಕ ಮಹತ್ವದ ವಾದವೊಂದು ಇದಕ್ಕೆ ನಿದರ್ಶನವಾಗಿ ನನಗೆ ನೆನಪಾಯಿತು. ಗಾಂಧೀಜಿಯವರು 1908ನೇ ಇಸವಿಯಲ್ಲಿ ತಾವು ಬರೆದ **ಹಿಂದ್ ಸ್ವರಾಜ್** ಪುಸ್ತಕವನ್ನು ತನ್ನ ಪ್ರಿಯ ಶಿಷ್ಯನೂ ಉತ್ತರಾಧಿಕಾರಿಯೂ ಆದ ನೆಹರೂ ಸಾಕಷ್ಟು ಗಂಭೀರವಾಗಿ ತೆಗೆದುಕೊಂಡಿಲ್ಲವೆಂದು ದೂರಿ ನೆಹರೂಗೆ ಕಾಗದ ಬರೆದರು. ಗಾಂಧೀಜಿಗೆ ಮಾನವ ಇತಿಹಾಸ ಹಂತಹಂತವಾಗಿ ಪ್ರಗತಿಯ ದಿಕ್ಕಿನಲ್ಲಿ ಏರುತ್ತ ಹೋಗುವ ಪಥವಲ್ಲ; ಅದೊಂದು ಸುತ್ತುವ ಚಕ್ರವಾಗಿತ್ತು. ಮಾರ್ಕ್ಸ್‌ವಾದಕ್ಕಿಂತ ಈ ದೃಷ್ಟಿಯಲ್ಲಿ ಗಾಂಧೀವಾದ ಭಿನ್ನವಾದುದು. ಬಂಡವಾಳಶಾಹೀ ವ್ಯವಸ್ಥೆಯನ್ನು ಕಟುವಾಗಿ ಉಗ್ರವಾಗಿ ಟೀಕಿಸುವ ಮಾರ್ಕ್ಸ್‌ಗೆ ಈ ವ್ಯವಸ್ಥೆ ಕೂಡ ಅದರ ಹಿಂದಿನ ಫ್ಯೂಡಲ್ ವ್ಯವಸ್ಥೆಗಿಂತ ಮೇಲಿನದು. ಆಧುನಿಕ ನಾಗರಿಕತೆಯ ದಿಕ್ಕಿನಲ್ಲಿ ನಡೆಯುವ ಮಾನವನಿಗೆ ಈ ಘಟ್ಟ ಅನಿವಾರ್ಯವಾದ್ದು : ಅವರೆ ಏರಬೇಕಾದ್ದು. ಗಾಂಧೀಜಿಗಾದರೋ ರೈಲುಗಳು, ಲಾಯರುಗಳು, ಆಧುನಿಕ ವೈದ್ಯಶಾಸ್ತ್ರ ಎಲ್ಲವೂ ಮನುಷ್ಯನ ಸಫಲತೆಗೆ ಅನಗತ್ಯವೆಂದೂ, ಹಾನಿಕಾರಕವೆಂದೂ ಎನ್ನಿಸಿತ್ತು. ಈ ವಾದ ಮಂಡಿಸುವ **ಹಿಂದ್‌ಸ್ವರಾಜ್‌**ನಲ್ಲಿ ಗಾಂಧೀಜಿ ಬ್ರಿಟಿಷರು ಯಾಕೆ ನಮ್ಮನ್ನು ಆಳುವುದು ಸಾಧ್ಯವಾಯಿತು ಎಂಬ ಪ್ರಶ್ನೆಯನ್ನು ಕೇಳಿಕೊಂಡು. ಅದಕ್ಕೆ ಕಾರಣ ನಾವೂ ಆಧುನಿಕ ನಾಗರಿಕತೆಯಿಂದ ಮೋಹಿತರಾಗಿರುವುದು ಎಂದು ಉತ್ತರಿಸುತ್ತಾರೆ. ಈ ಆಧುನಿಕ ನಾಗರಿಕತೆಯ ದಿಕ್ಕಿನಲ್ಲಿ ನಾವು ಚಲಿಸುವುದು ಆತ್ಮಹತ್ಯೆಯಾಗುತ್ತದೆಂದು ವಾದಿಸುತ್ತ, ಮನುಷ್ಯನ ಮನೋವಿಕಾಸಕ್ಕೆ ಈ ಆಧುನಿಕ ನಾಗರಿಕತೆ ಅನವಶ್ಯಕವಾದ್ದರಿಂದ ನಾವು ಆ ದಾರಿಯಲ್ಲಿ ನಡೆಯುವುದನ್ನು ನಿಲ್ಲಿಸಬೇಕು ಮತ್ತು ಆ ಮೂಲಕ ಇಂಗ್ಲೆಂಡನ್ನೂ ಅದರ ಮೋಹದಿಂದ ಪಾರು ಮಾಡಬೇಕು ಎಂದು ಹೇಳುತ್ತಾರೆ. ಅಹಿಂಸಾತ್ಮಕ ವ್ಯವಸ್ಥೆ ಭಾರತದಲ್ಲಿ ಬೆಳೆಯಬೇಕಾದರೆ ಇದು ಅಗತ್ಯವೆಂದು ನೆಹರೂಗೆ ಬರೆಯುತ್ತಾರೆ: ''ಜನರು ಬದುಕಬೇಕಾದ್ದು ಹಳ್ಳಿಗಳಲ್ಲಿ, ನಗರಗಳಲ್ಲಿ ಅಲ್ಲ : ಗುಡಿಸಲುಗಳಲ್ಲಿ. ಅರಮನೆಗಳಲ್ಲಿ ಅಲ್ಲ. ಅಹಿಂಸೆ ನಿಜವೆನ್ನಿಸುವುದು ಗ್ರಾಮಜೀವನದ ಸರಳತೆಯಲ್ಲಿ ಮತ್ತು ಈ ಸರಳತೆ ನಮಗೆ ದಕ್ಕುವುದು ಚರಕಾದಲ್ಲಿ.'' ಆದರೆ ಆಧುನಿಕ ನಾಗರಿಕತೆ ಎಷ್ಟು ಆಕರ್ಷಕವಾಗುತ್ತದೆ ಜನರಿಗೆ ಎಂದೂ ಗಾಂಧೀಜಿಗೆ ಗೊತ್ತಿದ್ದ ಕಾರಣ ಸತ್ಯ ಮತ್ತು, ಸರಳತೆಗಳು ಗೆದ್ದೇ ಗೆಲ್ಲುತ್ತವೆ, ಅನಿವಾರ್ಯವಾಗಿ, ಎಂದೇನೂ ಅವರು ದೃಢವಾಗಿ ನಂಬಿರಲಿಲ್ಲ. ಆದ್ದರಿಂದ ಹೇಳುತ್ತಾರೆ: ''ಭಾರತ ಕೂಡ ಆ ದಾರಿಯನ್ನೇ ಹಿಡಿದೀತು – ಗಾದೆ ಮಾತಿನ ಪತಂಗದಂತೆ ಮೋಹಪರವಶನಾಗಿ ತಾನು ಸುತ್ತುತ್ತ ಕುಣಿಯುವ ದೀಪದಲ್ಲಿ ಬಿದ್ದು ಉರಿದುಹೋದೀತು. ಆದರೂ ನನ್ನ ಕೊನೆ ಉಸಿರಿನ ತನಕ ಭಾರತವನ್ನೂ, ಆ ಮೂಲಕ ಇಡೀ ಜಗತ್ತನ್ನೂ ಸರ್ವನಾಶದಿಂದ ರಕ್ಷಿಸುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.

ತಾನು ನೆಹರೂಗೆ ಹಿಂದೂಸ್ತಾನಿಯಲ್ಲಿ ಬರೆಯಬೇಕೋ ಇಂಗ್ಲಿಷಿನಲ್ಲೋ ಎಂಬ ಒಳತೋಟಿಯಿಂದ ಪ್ರಾರಂಭ

ವಾಗುವ ಈ ಕಾಗದದಲ್ಲಿ ಗಾಂಧೀಜಿ ತನ್ನ ನಲವತ್ತು ವರ್ಷಗಳ ಹಿಂದಿನ ಪುಸ್ತಕ **ಹಿಂದ್‌ಸ್ವರಾಜ್** ಅನ್ನು ನೆಹರೂ ಎಂದೂ ಗಂಭೀರವಾಗಿ ಓದಿಲ್ಲವೆಂದು ಪ್ರೀತಿಯಿಂದ ದೂರುತ್ತಾರೆ. ಈ ಕಾಗದಕ್ಕೆ ಉತ್ತರಿಸುತ್ತ ನೆಹರು **ಹಿಂದ್‌ಸ್ವರಾಜ್**‌ನ ಆದರ್ಶ ತೀರ ಅವಾಸ್ತವವೆಂದೂ, ಆ ಪುಸ್ತಕವನ್ನು ಓದಿ ತಾನು ಬಹಳ ವರ್ಷಗಳಾಯಿತೆಂದೂ ಒಪ್ಪಿಕೊಂಡು, ಜನರು ಅರಮನೆಗಳಲ್ಲಿ ಬದುಕುವುದರ ಪ್ರಶ್ನೆಯೇ ಇಲ್ಲವೆಂದೂ, ಆದರೆ ಎಲ್ಲರೂ ಒಳ್ಳೆಯ ಮನೆಗಳಲ್ಲಿ ಸುಸಂಸ್ಕೃತವಾಗಿ ಯಾಕೆ ಬದುಕಕೂಡದೆಂದೂ ನಮ್ರವಾಗಿ ಹೇಳಿ ಕಾಗದವನ್ನು ಹೀಗೆ ಕೊನೆ ಮಾಡುತ್ತಾರೆ: ಆಧುನಿಕ ನಾಗರೀಕತೆಯಲ್ಲೇ ಅಡಗಿರುವ ದುಷ್ಪರಿಣಾಮ ಒಂದು ಬೀಜದ ಅನಿವಾರ್ಯ ಬೆಳವಣಿಗೆಯಿಂದಾಗಿ ಈ ಪ್ರಪಂಚವೇ ಆತ್ಮಹತ್ಯೆಯ ಮಾರ್ಗದಲ್ಲಿರುವಂತೆ ಕಾಣುತ್ತದೆ. ಆದ್ದರಿಂದ ನಾವೇನು ಮಾಡಲು ಸಾಧ್ಯ?

ಏನನ್ನಾದರೂ ಮಾಡಲು ಸಾಧ್ಯವಿದ್ದ ಭಾರತದ ಪ್ರಧಾನಿ ಈ ಬಗೆಯ ವಿಷಾದದಿಂದ ಭಾವುಕವಾದ ಸಾಂತ್ವನ ಪಡೆಯುವುದು, ಜೊತೆಯಲ್ಲೇ ವಾಸ್ತವ ಜೀವನದಲ್ಲಿ ಐರೋಪ್ಯ ಮಾದರಿಯ ನಾಗರೀಕತೆ ಈ ದೇಶದಲ್ಲಿ ಬೇರೂರಲು ಏನೇನು ಮಾಡತಕ್ಕದ್ದೋ ಎಲ್ಲವನ್ನೂ ಮಾಡುವುದು ಕೇವಲ ಹಿಪೋಕ್ರಸಿಯೆಂದು ನಾವು ಜರೆದು ಪ್ರಯೋಜನವಿಲ್ಲ. ನಾವೆಲ್ಲರೂ ನಮ್ಮ ಬದುಕಿನ ಕ್ರಮದಲ್ಲಿ, ಯೋಜನಾಕ್ರಮದಲ್ಲಿ, ನಮ್ಮ ನಿಜಜೀವನದ ಸೆಳೆತಗಳಲ್ಲಿ ನೆಹರೂ ಯುಗದ ಸೃಷ್ಟಿಗಳೇ ಆಗಿದ್ದೇವೆ. ನೆಹರೂ ಮಾಡಿದ ಆಯ್ಕೆಯ ಫಲವನ್ನು ಉಣ್ಣುವವರಲ್ಲಿ ಆಧುನಿಕ ವಿದ್ಯಾವಂತ ವರ್ಗದ ನಾವೆಲ್ಲರೂ ಇದ್ದೇವೆ. ಇಂದಿನ ಎಲ್ಲ ರಾಜಕಾರಣಿಗಿಂತಲೂ ಹೆಚ್ಚು ಸೂಕ್ಷ್ಮಜ್ಞರಾದ ನೆಹರೂರವರೇ ನೈಜವಾದ ಬೌದ್ಧಿಕ ಯಾತನೆಯಿಲ್ಲದೆ ಗಾಂಧಿಯ ಮಾರ್ಗವನ್ನು ತ್ಯಜಿಸಿ ಭಾರತವನ್ನು ಐರೋಪ್ಯ ಮಾದರಿಯ ಯಂತ್ರಯುಗಕ್ಕೆ ಹಚ್ಚಿದರು. ನಾವು ಆ ದಾರಿಯಲ್ಲಿ ಮುನ್ನಡೆದಿದ್ದೇವೆ. ಪ್ರಾಯಶಃ ಇನ್ನು ಹತ್ತಿಪ್ಪತ್ತು ವರ್ಷಗಳಲ್ಲಿ ಭಾರತವೂ ಜಗತ್ತಿನ ಬಲಿಷ್ಠರ ಸಾಲಿನಲ್ಲಿರುತ್ತದೆ—ಚೈನಾದಷ್ಟು ಮುಂದಲ್ಲದಿದ್ದರೂ ಕೊಂಚ ಹಿಂದೆ. ಆದರೆ ಯಾವ ಭಾರತ? ಹಾವನೂರ್ ಇತ್ಯಾದಿ ಎಲ್ಲ ಸುಧಾರಣೆಗಳನ್ನೂ ಜಾರಿಗೆ ತಂದು, ಹಿಂದುಳಿದವರಿಗೆಲ್ಲ ನೌಕರಿಕೊಟ್ಟು ಈ ದಾರಿಯಲ್ಲಿ ಎಷ್ಟೇ ಪ್ರಾಮಾಣಿಕವಾಗಿ ಆಳುವ ಇಲ್ಲಿಯ ಜನ ಶ್ರಮಿಸಿದರೂ ಬಲಿಷ್ಠವಾಗುತ್ತಿರುವ ಭಾರತಕ್ಕೆ ಸ್ವದೇಶದಲ್ಲೇ ಒಂದು ದೊಡ್ಡ ದೀನದರಿದ್ರರ ಕಾಲೋನಿಯ ಅಗತ್ಯವಿದ್ದೇ ಇರುತ್ತದೆ. ಹೀಗೆ ಮುಂದುವರಿಯುವ ಆತುರದಲ್ಲಿರುವ ನಮಗೆ ಪ್ರಜಾತಂತ್ರದ ತೊಡಕುಗಳು ಅಸಹನೀಯವಾಗಿ ಕಂಡರೆ ಆಶ್ಚರ್ಯವಿಲ್ಲ. ಹಿಂದೆ ಬಂದು ಹೋದ ಎಮರ್ಜೆನ್ಸಿ, ಮುಂದೆ ಬರಬಹುದಾದ ಎಮರ್ಜೆನ್ಸಿ ನೆಹರೂ ಆಯ್ಕೆ ಮಾಡಿಕೊಂಡ ದಾರಿಯಲ್ಲಿ ಅನಿವಾರ್ಯವೆಂದು ತಿಳಿಯದೇ ಯಾರೋ ಕೆಲವು ವ್ಯಕ್ತಿಗಳ ಸ್ವಾರ್ಥದ ಫಲವೆಂದು ಮಾತ್ರ ತಿಳಿಯುವುದು ದಡ್ಡತನವಾಗುತ್ತದೆ. ಆಧುನಿಕ ನಾಗರಿಕತೆ ಪ್ರಪಂಚದ ಎಲ್ಲೆಡೆಯಲ್ಲಿಯೂ ಇಂಥ ಬಲಿ ಕೇಳಿದೆ. ಹಿಟ್ಲರ್, ಸ್ಟಾಲಿನ್, ಚೀನೀ ಕಮ್ಯುನಿಸ್ಟರು, ಕೈಗಾರಿಕಾ ಕ್ರಾಂತಿಯ ಇಂಗ್ಲೆಂಡಿನ ನಾಯಕರು—ಎಲ್ಲರೂ ನರಬಲಿಕೊಟ್ಟೇ ಆಧುನಿಕ ನಾಗರಿಕತೆಯನ್ನು ಕಟ್ಟಿದವರು. ಇಂಥ ಬಲಿ ಸ್ವದೇಶೀಯ ಅಲ್ಲದಿದ್ದಾಗ ಅದು ಜಿಪ್ಸಿಗಳಾಗಬಹುದು, ಆಸ್ಟ್ರೇಲಿಯಾದ ಪಿಗ್ಮಿಗಳಾಗಬಹುದು, ಅಮೇರಿಕಾದ ರೆಡ್‌ಇಂಡಿಯನ್ನರಾಗಬಹುದು—ಹೀಗೆ. ಆದರೆ ನೆಹರೂಯುಗದ ಫಲವನ್ನುಣ್ಣುತ್ತಿರುವ ನಮಗೂ ಗಾಂಧಿಯದೇ ಸರಿಯಾದ ಮಾರ್ಗವೆನ್ನಲು ಯಾವ ಅಧಿಕಾರವಿದೆ? ವಿದ್ಯುಚ್ಛಕ್ತಿಯಿಲ್ಲದೆ ಪ್ರಗತಿಸಾಧ್ಯವಿಲ್ಲೆಂದು ಮನವರಿಕೆಯಾದ ನಮಗೆ ಸೈಲೆಂಟ್ ವ್ಯಾಲಿಯಲ್ಲಿ ಮಾತ್ರ ಅಣೆಕಟ್ಟು ಕಟ್ಟದಂತೆ ತಡೆಯಲು ಸಾಧ್ಯವೆ?

ಎಂಬತ್ತರ ದಶಕ : ಮುರಿದು ಬಿದ್ದ ಮಾದರಿಗಳು

ನಮ್ಮ ಮನಸ್ಸಿನ ಸಾಂತ್ವನಕ್ಕಾಗಿ ಮಾತ್ರವಲ್ಲದೆ ನೈಜ ಪರ್ಯಾಯವ್ಯವಸ್ಥೆಯ ಶೋಧದಲ್ಲಿ ಆಧುನಿಕ ನಾಗರೀಕತೆಯ ನಿಷ್ಠುರವಾದ ವಿಮರ್ಶೆಯನ್ನು ನಾವು ನಡೆಸಬೇಕಾಗಿದೆ. ಈ ಎಂಬತ್ತರ ದಶಕಕ್ಕಿಂತ ಹಿಂದ ನಮ್ಮೆಲ್ಲರ ಮನಸ್ಸುಗಳಿಗೂ ಆಪ್ಯಾಯಮಾನವಾಗಿ ಕಂಡ ಹಲವು ವ್ಯವಸ್ಥೆಗಳ ಗತಿ ಈಗ ಏನಾಗಿದೆ ನೋಡಬೇಕು. ಇಪ್ಪತ್ತರ ದಶಕದಲ್ಲಿ ಜಗತ್ತಿನ ಹಲವರಿಗೆ ಲೆನಿನ್ ಸ್ಥಾಪಿಸಿದ ಸೋವಿಯತ್ ಕಮ್ಯೂನಿಸಂ ಮಾನವನ ಸಮಗ್ರ ಬೆಳವಣಿಗೆಗೆ

ಸಹಾಯಕವಾದ ಮಾದರಿಯಾಗಿ ಕಂಡಿತು. ಆದರೆ ರಷ್ಯಾದ ನಿಜವಾದ ಆದರ್ಶ ಅವಕ್ಕಿಂತ ಮುಂದಿದ್ದ ಯೂರೋಪ್ ಆದ್ದರಿಂದ ಸ್ಟಾಲಿನ್ನಿನ ಕ್ರೂರ ಆಳ್ವಿಕೆ ಅಲ್ಲಿ ಅಗತ್ಯವಾಯಿತು. ಯೂರೋಪ್ ನೂರು ವರ್ಷಗಳಲ್ಲಿ ಮಾಡಿದ್ದನ್ನು ಕೇವಲ ಒಂದೆರಡು ದಶಕಗಳಲ್ಲಿ ಸಾಧಿಸಲು ಹೋದ ಸ್ಟಾಲಿನ್ನನ ರಷ್ಯ ರಾಕ್ಷಸೀಯವಾದ ಕ್ರಮಗಳನ್ನು ಅನುಸರಿಸಬೇಕಾಯಿತು. ಟಾಲ್‌ಸ್ಟಾಯ್ ತನ್ನ ಮೌಲ್ಯಗಳನ್ನೂ ಅಂತಃಸತ್ವವನ್ನೂ ಪಡೆದಿದ್ದ ಗ್ರಾಮೀಣ ರೈತ ಸಂಸ್ಕೃತಿ ಈಗ ರಷ್ಯಾದಲ್ಲಿ ನಾಶವಾಗಿದೆ. ರಷ್ಯಾದ ನಂತರ ಚೈನಾ, ವಿಯಟ್ನಾಂ. ಕ್ಯೂಬಾ—ಎಲ್ಲವೂ ಒಂದೇ ಹಾದಿಯಲ್ಲಿ—ಆಧುನಿಕ ನಾಗರಿಕತೆಯನ್ನು ಕ್ಷಿಪ್ರವಾಗಿ ಸಾಧಿಸುವ ಹಾದಿಯಲ್ಲಿ—ನಡೆದಿವೆ. ನಿನ್ನೆ ಮೊನ್ನೆಯ ತನಕ ಮಾವೋನನ್ನು ಸರ್ವಜ್ಞನೆಂದು ತಿಳಿದಿದ್ದ ನಮ್ಮ ಅನೇಕ ಸ್ನೇಹಿತರೇ ಈಗ ಯಾವ ಮುಜುಗರವಿಲ್ಲದೆ ಅವನು ತಪ್ಪುಗಳನ್ನು ಮಾಡಿದ ಎನ್ನುತ್ತಾರೆ—ಚೀನಾದ ಆಧುನೀಕರಣ ಹೊಗಳುತ್ತಾರೆ. ನಮ್ಮಂಥವರ ದಿಗ್ಭ್ರಮೆ ಈ ನಿಷ್ಠಾವಂತರಿಗೆ ತಿಳಿಯುವುದೇ ಇಲ್ಲ. ಇಪ್ಪತ್ತನೇ ಶತಮಾನದ ಪ್ರತಿ ದಶಕದಲ್ಲೂ ಇದ್ದ ಅನೇಕ ಭ್ರಮೆಗಳು ಎಂಬತ್ತರ ದಶಕದಲ್ಲಿ ಕಾಲಿಡುತ್ತಿರುವ ನಮ್ಮಲ್ಲಿ ಕೆಲವರಿಗಾದರೂ ಉಳಿದಿಲ್ಲ—ಇದು ಅತ್ಯಂತ ಮಹತ್ವದ ಘಟನೆ. ಬಂಡವಾಳಶಾಹೀ ರಾಷ್ಟ್ರಗಳಂತೆ, ಕಮ್ಯೂನಿಸ್ಟ್ ರಾಷ್ಟ್ರಗಳೂ ಕಟ್ಟುವ ಜೀವನಕ್ರಮದಲ್ಲಿ ಅಂಥ ವಿಶೇಷ ವ್ಯತ್ಯಾಸಗಳೇನೂ ಕಾಣುತ್ತಿಲ್ಲ. ಗಾಂಧೀಜಿಯ ನೇತೃತ್ವದಲ್ಲಿ ಸ್ವಾತಂತ್ರ್ಯ ಸಂಪಾದಿಸಿದ ಭಾರತವೂ ಆ ದಿಕ್ಕಿನಲ್ಲೇ ಅವಸರ ಪಡುತ್ತ. ಪ್ರಜಾತಂತ್ರ ಸ್ವಾತಂತ್ರ್ಯ ಇತ್ಯಾದಿ ಮೌಲ್ಯಗಳು ಕಾಲ್ತೊಡಕೆಂದು ಆಗೀಗ ಗೊಣಗುತ್ತ ತೆವಳುತ್ತಿದೆ. ಮುಂದುವರಿಯುತ್ತಿರುವ ಇಡೀ ಜಗತ್ತಿಗೆ ಇರುವ ಆದರ್ಶ ಒಂದೇ—ಅದು, ಅಮೇರಿಕಾದಂತಾಗುವುದು. ಆದರೆ ಅಮೇರಿಕಾದಲ್ಲೂ ಕೆಲವರಿಗಾದರೂ ಅನ್ನಿಸುತ್ತಿದೆ : ಈ ಆದರ್ಶ ವಿಷಪೂರಿತವಾದ್ದು.

ರಾತ್ರೆ ಕಂಡ ಬಾವಿಗೆ ಹಗಲು ಬೀಳುವುದುಂಟೆ ? ಉಂಟು—ಅದಕ್ಕೆ ನಾವೆಲ್ಲರೂ ಸಾಕ್ಷಿ.

ಜಾತಿ ಮತ್ತು ಸಾಹಿತ್ಯ

ಎಪ್ಪತ್ತರ ದಶಕದಲ್ಲಿ ಕರ್ನಾಟಕದ ಕೆಲವು ಲೇಖಕರನ್ನು ಮಾರ್ಕ್ಸ್ ಮತ್ತು ಲೋಹಿಯಾ, ಮಾರ್ಕ್ಸ್ ಅಥವಾ ಲೋಹಿಯಾ ಆಕರ್ಷಿಸಿದರು. ಬರವಣಿಗೆಯನ್ನು ಪ್ರಾರಂಭಿಸಿದ ಕಾಲದಿಂದಲೂ ಈ ಇಬ್ಬರಿಂದ—ಹೆಚ್ಚಾಗಿ ಲೋಹಿಯಾರಿಂದ—ಪ್ರಭಾವಿತರಾದವರಲ್ಲಿ ನಾನೂ ಸೇರಿದ್ದೇನೆ. ರಾಜಕೀಯ ತಾತ್ವಿಕ ಚಿಂತನಗಳಿಂದ ಬರಹಗಾರನೊಬ್ಬ ಪ್ರಭಾವಿತನಾಗುವ ಕ್ರಮ ವಿಶಿಷ್ಟವಾದ್ದು ಎಂಬ ತಿಳುವಳಿಕೆಯಿಂದ ನಾನೀ ಮಾತುಗಳನ್ನು ಬರೆಯುತ್ತಿದ್ದೇನೆ. ಅಂದರೆ ಬರಹಗಾರನಿಗೆ ತಾತ್ವಿಕ ಚಿಂತನೆಯೊಂದು ತನ್ನ ಅನುಭವವನ್ನು ಕಟ್ಟುವ ದೃಷ್ಟಿಕೋನವನ್ನು ಕೊಡಬಹುದು ; ಒಟ್ಟು ಕೃತಿಯ ಅನುಭವದಲ್ಲಿ ಶೋಧಕ್ಕೊಡ್ಡಿದ ವಿಚಾರವಾಗಬಹುದು. ಓದುಗನ ಅಂತರಂಗ ಮುಟ್ಟಲು ಹವಣಿಸುವ ಕೃತಿ ಯಾವ ವಿಚಾರವನ್ನೂ ಕೇವಲ ಅಬ್ಬರದ ಪ್ರಚಾರ ಮಾಡಿಕೊಳ್ಳಲಾರದು. ಆದರೆ ಮಾರ್ಕ್ಸ್‌ನ ಪ್ರಭಾವ ಕೆಲವರನ್ನು ರಷ್ಯಾ ಅಥವಾ ಚೈನಾದ ಕುರುಡು ವಕೀಲರನ್ನಾಗಿ ಮಾಡಿತು ; ಇಲ್ಲವೇ ಭಾರತೀಯವಾದ ಶ್ರದ್ಧೆ. ನಂಬಿಕೆ, ಪರಂಪರೆಗಳೆಲ್ಲವೂ ಪ್ರಸ್ತುತ ಸಂದರ್ಭದಲ್ಲಿ ಅರ್ಥಹೀನವೆಂದೂ. ಹುರುಳಿಲ್ಲದ ಮೂಢನಂಬಿಕೆಗಳೆಂದೂ ತಿಳಿಯುವ ಅವರನ್ನು ಜನಸಾಮಾನ್ಯರ ಆಶೋತ್ತರಗಳನ್ನೇ ಅರಿಯಲಾರದಂಥವರನ್ನಾಗಿ ಮಾಡಿತು. ಒಂದು ದೇಶದ ಸಂಸ್ಕೃತಿ ಕೂಡ ಮೌನಕಣಿವೆಯ ಇಕಾಲಜಿಯಂತೆಯೇ ಒಂದನ್ನೊಂದು ಪೋಷಿಸುತ್ತ. ರಕ್ಷಿಸುತ್ತ, ಬದಲಿಸುತ್ತ, ಸೃಜನಕ್ರಿಯೆಯಲ್ಲಿ ತೊಡಗಿರುವಂಥವೆಂಬುದನ್ನೂ, ಈ ಹೊಂದಾಣಿಕೆಯ ರಹಸ್ಯ ತಿಳಿಯದೇ ಮಾಡುವ ಬದಲಾವಣೆಗಳು ಒಂದೋ ವಿಫಲವಾಗುತ್ತವೆ, ಅಥವಾ ಹಾನಿಕರವಾಗುತ್ತವೆ, ಎಂಬುದನ್ನೂ ಅರಿಯದಂಥ ರಾಜಕೀಯ ತತ್ವಗಳು ಅಪಾಯಕಾರಿಯಾದವು. ಆಫ್ಘಾನಿಸ್ತಾನದಲ್ಲಿ ರಷ್ಯದ ಟ್ಯಾಂಕುಗಳನ್ನು ನುಗ್ಗಿಸುವ ಕ್ರಾಂತಿಕಾರಕತೆ ಈ ಬಗೆಯ ಧೋರಣೆಯಿಂದಲೇ ಹುಟ್ಟಿದ್ದು. ಅಂಥವರ ಹುಂಬತನಕ್ಕೊಂದು ಉದಾಹರಣೆ ಕೊಡುವೆ. ಕೆಲವು ವರ್ಷಗಳ ಹಿಂದೆ ಆಂಧ್ರದ ಪ್ರಸಿದ್ಧ ಕ್ರಾಂತಿಕಾರಿ ಯುವ ಲೇಖಕರೊಬ್ಬರನ್ನು ಚೈನಾದಲ್ಲಾಗುತ್ತಿರುವ ಬದಲಾವಣೆಗಳು ಅವರನ್ನು ಬಾಧಿಸುತ್ತಿಲ್ಲವೇ ಎಂದು ನಾನು ಕೇಳಿದಾಗ ಆ ಬಗ್ಗೆ ಅವರು ಏನನ್ನು ಹೇಳಲೂ ನಿರಾಕರಿಸಿದರು. ಭಾರತದ ಬಗ್ಗೆ ಯಾವ ಸಂಕೋಚವಿಲ್ಲದೆ ಸದ್ಯ ಸ್ಫೂರ್ತಿಯಿಂದ

ಸನ್ನಿವೇಶ

ಮಾತಾಡುವ ಅವರು ತಮ್ಮ ಸ್ಫೂರ್ತಿಯ ಸೆಲೆಯಾದ ಮಾವೋ ವಿಚಾರಗಳ ಪುನರ್ವಿಮರ್ಶೆಯಾಗುತ್ತಿದೆ ಎಂದು ನಾನು ಹೇಳಿದ್ದನ್ನು ನಂಬಲೂ ಕೂಡ ನಿರಾಕರಿಸಿದರು. ಹಲವು ವರ್ಷ ತಮ್ಮ ನಂಬಿಕೆಗಾಗಿ ಜೈಲಲಿದ್ದ ಅವರನ್ನು ನಾನು ಗೌರವದಿಂದ ಕಾಣುವೆನಾದ್ದರಿಂದ ಸ್ವತಃ ಕವಿಯಾದ ಅವರ ಈ ಕುರುಡು ನಿಷ್ಠೆ ನನ್ನನ್ನು ನೋಯಿಸಿತು. ಈ ಬಗೆಯ ನಿಷ್ಠಾವಂತಿಕೆ ಸಾಹಿತಿಗೆ ಮಾರಕವಾದ್ದು. ಮಾರ್ಕ್ಸ್‌ವಾದದ ಸತ್ವಪೂರ್ಣತೆಯನ್ನಾಗಲೀ, ಜಗತ್ತನ್ನು ಅರಿಯಲು, ಬದಲಾಯಿಸಲು ಅದರಲ್ಲಿರುವ ಕೆಲವು ಅಂತರ್ನೋಟಗಳನ್ನಾಗಲೀ ನಿರಾಕರಿಸಲು ನಾನು ಈ ಉದಾಹರಣೆಯನ್ನು ಎತ್ತಿಕೊಂಡಿಲ್ಲ. ಯಾವುದೋ ಒಂದು ದೇಶದ ವ್ಯವಸ್ಥೆಯನ್ನಾಗಲೀ, ಪಕ್ಷವನ್ನಾಗಲೀ ನಮ್ಮ ಆದರ್ಶಮಾಡಿಕೊಂಡಾಗ ಸಾಹಿತ್ಯದ ಪ್ರಾಮಾಣಿಕತೆಗೆ ಆಗುವ ನಷ್ಟವನ್ನು ಕುರಿತು ನಾನು ಚಿಂತಿಸುತ್ತಿದ್ದೇನೆ.

ಗಾಂಧೀವಾದಕ್ಕೆ ಹಲ್ಲುಉಗುರುಗಳನ್ನು ಕೊಟ್ಟು ಭಾರತದ ಸಂದರ್ಭದಲ್ಲಿ ಅದನ್ನು ಜೀವಂತವಿಚಾರವಾಗಿ ಮಾಡುವ ಲೋಹಿಯಾವಾದ ಕೂಡ ಕರ್ನಾಟಕದಲ್ಲಿ ವಿರೂಪಗೊಂಡಿತು. ಜನತಾ ಸರ್ಕಾರದಲ್ಲಿ ಅದನ್ನು ವಿಕೃತಗೊಳಿಸಿದ ರಾಜನಾರಾಯಣರಂತೆಯೇ, ನಮ್ಮ ನಾಡಿನಲ್ಲೂ ಲೋಹಿಯಾರನ್ನು ಡಿ.ಎಂ.ಕೆ. ಮಾದರಿಯ ಬ್ರಾಹ್ಮಣ ದ್ವೇಷವನ್ನಾಗಿ ಮಾತ್ರ ಪರಿವರ್ತಿಸಲು ಯತ್ನಿಸಿದ ನಮ್ಮ ಕೆಲವು ಲೇಖಕ ಮಿತ್ರರು ಲೋಹಿಯಾವಾದವನ್ನು ಸರಳಗೊಳಿಸಿ, ನಮ್ಮ ಸಾಹಿತ್ಯಸಂದರ್ಭದಲ್ಲಿ ಗೊಂದಲವನ್ನುಂಟು ಮಾಡಿದರು. ಸೂಕ್ಷ್ಮ ಸಂವೇದನಾಶೀಲತೆ ಮತ್ತು ತನಗೆ ಹೊರಗಾದ್ದನ್ನು ಕಲ್ಪಿಸಿಕೊಳ್ಳಬಲ್ಲ ಶಕ್ತಿಗಳಿಲ್ಲದವನು ಸಾಹಿತಿಯಾಗಲಾರ ಎಂಬುದು ಸಾಹಿತ್ಯದ ಜೀವಾಳ ಸತ್ಯ. ಆದ್ದರಿಂದ ಲೇಖಕ ಯಾವ ಜಾತಿಯಲ್ಲೇ, ದೇಶದಲ್ಲೇ ಹುಟ್ಟಿರಲಿ, ತನ್ನ ದೇಶ ಮತ್ತು ಜಾತಿಯವರ ಜೊತೆ ಅವನಲ್ಲಿ ಇರಬಹುದಾದ ಸಾಮ್ಯಗಳಿಗಿಂತ ಮನೋಧರ್ಮದಲ್ಲಿ ಅವನು ಇತರ ಸಾಹಿತಿಗಳ ಜೊತೆಗೇ ಹೆಚ್ಚು ಸಾಮ್ಯಗಳನ್ನು ಪಡೆದಿರುತ್ತಾನೆ. ಸಾಹಿತ್ಯದ ಈ ಪ್ರಥಮ ಪಾಠಗಳನ್ನು ಪುನರುಚ್ಚರಿಸಬೇಕಾಗಿ ಬಂದಿರುವುದು ದುರದೃಷ್ಟಕರ. ಐತಿಹಾಸಿಕವಾಗಿ ನೋಡುವುದಾದರೆ ಭಾರತದಲ್ಲಿ ಮೇಲ್ಜಾತಿಗಳಲ್ಲಿ ಹುಟ್ಟಿದ ಲೇಖಕರು ತಮ್ಮ ತಮ್ಮ ಜಾತಿಗಳ ವಜ್ರಕವಚಗಳಿಂದ ಹೊರಬರುವುದೂ ಅವರು ಸೃಜನಶೀಲರಾಗುವುದಕ್ಕಾಗಿಯೇ ಅಗತ್ಯವಾದ್ದು. ಕನ್ನಡದಲ್ಲಿ ಹೇಳುವುದಾದರೆ ಈವರೆಗೂ ಯಾವ ಗೊಡ್ಡು ವೈದಿಕನೂ ಸೃಷ್ಟಿಶೀಲ ಸಾಹಿತಿಯಾದದ್ದಿಲ್ಲ. ಆದ್ದರಿಂದ ಸ್ವಜಾತಿಗಳ ಪರಿಮಿತವಾದ ಉಸಿರು ಕಟ್ಟಿಸುವ ಲೋಕಗಳಿಂದ ಬಿಡುಗಡೆ ಹೊಂದುವುದಕ್ಕೂ ಸೃಜನಶೀಲರಾಗುವುದಕ್ಕೂ ಸಂಬಂಧವಿರುವ ನಮ್ಮ ಕಾಲದ ಸಾಹಿತ್ಯ ಲೋಕದಲ್ಲಿ ಯಾವ ಜಾತಿಯ ಲೇಖಕನನ್ನಾಗಲೀ ಅವನ ಜಾತಿಯ ಮಿತಿಗಳ ಜೊತೆ ಸಮೀಕರಿಸುವುದು ಅವೈಜ್ಞಾನಿಕ ವಿಚಾರವಾಗುತ್ತದೆ. ಜಾತಿಯನ್ನೆಷ್ಟು ಮೀರಲು ಪ್ರಯತ್ನಿಸಿದರೂ ಅದರ ಮಿತಿಗಳು ಲೇಖಕನನ್ನು ಬಾಧಿಸುತ್ತವೆ ಎಂಬ ನಿಜವನ್ನು ಕೂಡ ನಾವು ಗಮನಿಸಬೇಕಾದ್ದು, ಹೀಗೆ ಮೀರುವುದಕ್ಕೆ ಆಯಾ ಜಾತಿಯ ಲೇಖಕ ಮಾಡುವ ಪ್ರಯತ್ನದಲ್ಲಿ; ಜಾತಿಯಿಂದ ಲಾಭ ಮಾಡಿಕೊಳ್ಳುತ್ತಿರುವ, ಅಥವಾ ಅದರಿಂದ ಆವರಿಸಲ್ಪಟ್ಟ ಅವನ ಜಾತಿಯ ಇತರರ ಸಂದರ್ಭದಲ್ಲಿ ಅಲ್ಲ.

ಬ್ರಾಹ್ಮಣ ಲೇಖಕ ತನ್ನ ಜಾತಿಯ ಮಿತಿಗಳಿಂದ ಪಾರಾಗುವ ಈ ಐತಿಹಾಸಿಕ ಸಂದರ್ಭವೇ, ಬ್ರಾಹ್ಮಣೇತರರು ಬ್ರಾಹ್ಮಣರಂತಾಗಲು ಶ್ರಮಿಸುತ್ತಿದ್ದ ಸಂದರ್ಭ ಕೂಡಆಗಿತ್ತು. ಇದನ್ನು ಸಂಸ್ಕೃತೀಕರಣ (Sanskritisation) ಎನ್ನುವುದಾದರೆ ದಕ್ಷಿಣ ಭಾರತದ ಆ ಬಗೆಯ ಇಬ್ಬರು ದೊಡ್ಡ ಲೇಖಕರೆಂದರೆ, ಕೇರಳದ ಕುಮಾರನ್ ಆಶಾನ್ ಮತ್ತು ನಮ್ಮ ಕುವೆಂಪುರವರು. ರಾಮಕೃಷ್ಣ, ವಿವೇಕಾನಂದ, ಅರವಿಂದ, ಗಾಂಧೀಜಿ, ಬೌದ್ಧಧರ್ಮ, ಉಪನಿಷತ್ತುಗಳು ಮುಂತಾದ ಕೊಂಡಿಗಳ ಮೂಲಕ ಇವರು ನಮ್ಮ ಭಾರತೀಯ ಪರಂಪರೆಯಲ್ಲಿ ಅತ್ಯುತ್ತಮವಾದ್ದನ್ನು ಉಳಿಸಿಕೊಳ್ಳುತ್ತಲೇ, ನಮ್ಮ ದೇಶವನ್ನು ನಾರುವ ಕೂಪವಾಗಿ ಮಾಡಿದ ಜಾತೀಯತೆ ಮತ್ತು ಮೂಢನಂಬಿಕೆಗಳನ್ನು ವಿರೋಧಿಸಿದರು. ಮೌನ ಕಣಿವೆಯ ನಿರಂತರತೆ, ಮತ್ತು ಸಾಯಬೇಕಾದ್ದು ಸಾಯುತ್ತ ಹೊಸದಾದ್ದು ಮೊಳೆಯುವ ಸೃಜನ ಶೀಲತೆ ಈ ಸಹಜ ಬಗೆಯದು. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬಂದ ಹೆಚ್ಚು ಪಾಲು

ಲೇಖಕರು ಭಾರತದ ಜೊತೆ ಇಂಥ ಕೊಂಡಿಗಳನ್ನು ಪಡೆದವರಾಗಿರಲಿಲ್ಲ — ಹಿಂದೂ ಧರ್ಮದ ನೆಲೆಯ ಬಗ್ಗೆಯೇ ಸಂಶಯವಿದ್ದವರು ಇವರು. ಆದ್ದರಿಂದ ಹಿಂದಿನ ತಲೆಮಾರಿನ ಬಂಡಾಯಗಾರರು ಉಳಿಸಿಕೊಂಡಿದ್ದ ಭಾರತೀಯ ಪರಂಪರೆ ಜೊತೆಗಿನ ಸಾತತ್ಯ ಇವರಲ್ಲಿ ಕಡಿಮೆ ಪ್ರಮಾಣದಲ್ಲಿತ್ತು. ಆದರೂ ಇವರು ಬರೆಯುವ ಭಾಷೆ ಕನ್ನಡವಾದ್ದರಿಂದ, ಭಾಷೆಗೆ ತನ್ನದೇ ಆದ ಸ್ಮೃತಿಯಿರುವುದರಿಂದ ಈ ಲೇಖಕರನ್ನು ಸಂಸ್ಕೃತಿಗೆ ಪರಕೀಯರು ಎಂದು ಕರೆಯುವುದು ತಪ್ಪಾಗುತ್ತದೆ. ಇವರು ಹೊರಗಿನ ಪ್ರೇರಣೆಗಳನ್ನು ಅರಗಿಸಿಕೊಳ್ಳುತ್ತಿರುವ ಕ್ರಮದಲ್ಲಿ ನಮ್ಮ ನುಡಿ ಮತ್ತು ಸಂಸ್ಕೃತಿಗಳು ಅರಿವಿನ ಇನ್ನೊಂದು ಮಜಲನ್ನು, ಸಮಗ್ರತೆಗೆ ಅಗತ್ಯವಾದ ಇನ್ನೊಂದು ಆಯಾಮವನ್ನು ಪಡೆಯುತ್ತಿರುವುದನ್ನು ಕಾಣಬೇಕು. ಮಾರ್ಗ ದೇಸಿಗಳು ಹೆಣೆಯುತ್ತ ಹೋದ ನಮ್ಮ ಸಂಸ್ಕೃತಿ ಕೇವಲ ಪ್ರಾಂತೀಯವಾಗಿ ಉಳಿಯದಂತೆ ಹಿಂದಿನಿಂದ ಮಾಡುತ್ತಲೇ ಬಂದ ಪ್ರಯತ್ನದ ಪರಂಪರೆಯಲ್ಲಿ ಇದನ್ನಿಟ್ಟು ನೋಡಬೇಕು. ಕೇವಲ ಸ್ವಪ್ರತಿಷ್ಠೆಗಾಗಿ ಬಂದದ್ದು, ಬರೆಯುವವನ ಸ್ವಪ್ರದರ್ಶನಕ್ಕಾಗಿ ಮಾತ್ರ ಹೊರಗಿಂದ ಆಮದಾದದ್ದು ಹೇಗೂ ಸಂಸ್ಕೃತಿಯಲ್ಲಿ ಬೆರೆಯಲಾರದೆ ನಿರಾಕರಿಸಲ್ಪಡುತ್ತದೆಯಾದ್ದರಿಂದ ನಾವು ಹೊರಗಿನ ವಿಚಾರಗಳಿಗೆ ಹೆದರಬೇಕಾದ್ದಿಲ್ಲ. ಎಮರ್‌ಸನ್, ಗಯಟೆ, ಥಾಮಸ್‌ಮನ್, ಏಟ್ಸ್, ಎಲಿಯಟ್—ಎಲ್ಲರೂ ಭಾರತೀಯ ವೇದಾಂತಕ್ಕೆ ತೆರೆದುಕೊಳ್ಳಲಿಲ್ಲವೆ ? ಮೌನಕಣಿವೆಯ ದಟ್ಟವಾದ ಬೇರೂರಿದ ಕಾಡು ತನ್ನ ಕೊಂಬೆಗಳನ್ನು ಎಲ್ಲರಿಗೂ ಸೇರಿದ ಆಕಾಶಕ್ಕೆ, ಅಲೆಯುವ ಮೋಡಗಳಿಗೆ ಒಡ್ಡಿಕೊಂಡಿದೆ. ಆದರೂ ಇದು ನಿಜ— "ಮೋಡವೂ ಇಳಿವಾಗ ತನು ರೂಪಿ ಬಿಂದು".

ಪ್ರಾರಂಭದಲ್ಲಿ ನವ್ಯ ಮಾರ್ಗದಲ್ಲಿ ಬರೆಯುತ್ತಿದ್ದ ಕೆಲವರು ತೀವ್ರವಾಗಿ . ಭಾರತದ ಸಂದರ್ಭಕ್ಕೆ ಪ್ರತಿಕ್ರಿಯೆ ತೋರಿಸುವ ಪ್ರಕ್ರಿಯೆಯಲ್ಲೇ ಹೊರಗಿನ ವಿಚಾರಗಳಿಗೂ ಒಡ್ಡಿಕೊಂಡವರಾಗಿದ್ದರು. ಉದಾಹರಣೆಗೆ ಅಡಿಗರು ತಮ್ಮ ಅನೇಕ ಕವನಗಳಲ್ಲಿ ನೆಹರೂ ಯುಗದ ಆದರ್ಶವಾದಕ್ಕೆ ಆಳವಾದ ಪ್ರತಿಭಟನೆಯನ್ನು ತೋರಿದ್ದನ್ನು ಗಮನಿಸಬಹುದು. ಆದರೆ ನವ್ಯ ಮಾರ್ಗದಲ್ಲಿ ಬರೆಯುತ್ತಿದ್ದ ಇನ್ನು ಕೆಲವರು ಅಬ್ಸರ್ಡ್ ನಾಟಕಗಳನ್ನು ಬರೆಯುತ್ತಲೋ, ರಾಜಕೀಯ ಸಾಮಾಜಿಕ ಸತ್ಯಗಳು ಅಪ್ರಸ್ತುತವೆನ್ನಿಸುವ ಮನುಷ್ಯವರ್ತನೆಗಳಲ್ಲಿ ಆಸಕ್ತರಾಗಿಯೋ ಇದ್ದವರು. ಇಂಥವರಲ್ಲಿ ಸಮಕಾಲೀನ ರಾಜಕೀಯ ಪ್ರಜ್ಞೆ ಮೂಡುತ್ತಿದ್ದಂತೆಯೇ ಸಂಕೀರ್ಣದೃಷ್ಟಿಯ ದೃಷ್ಟಾರರಾದ ಲೋಹಿಯಾ, ಇವರಿಗೆ ಉತ್ತರ ಭಾರತದ ರಾಮಸ್ವಾಮಿ ನಾಯ್ಕರ್ ಅಂತೆ ಕಂಡಿರಬೇಕು. ಮಧ್ಯಮ ಜಾತಿಗಳೂ ಕೂಡ ತಮ್ಮ ಲೋಕದೃಷ್ಟಿಯಲ್ಲೂ, ಜೀವನಕ್ರಮದಲ್ಲೂ ಕ್ರಮೇಣ ಬ್ರಾಹ್ಮಣರಂತಾಗುತ್ತಿದ್ದಾರೆ ಎಂಬ ಲೋಹಿಯಾ ಮಾತನ್ನು ಇವರು ಗಮನಿಸಿದ್ದರೆ ತಮ್ಮ ಹಿನ್ನೆಲೆಗಳ ವಿಮರ್ಶೆಯಲ್ಲಿ ಈ ಲೇಖಕರು ಗಟ್ಟಿಯಾಗಬಹುದಿತ್ತು. ಬದಲಾಗಿ, ಹುಟ್ಟಿನಿಂದ ಬ್ರಾಹ್ಮಣರಾದ ಎಲ್ಲ ಲೇಖಕರ ವೈಯಕ್ತಿಕ ನಿಂದೆಯಲ್ಲೆ ಇವರು ತೃಪ್ತರಾದರು ; ವಸ್ತುನಿಷ್ಠ ವಿಮರ್ಶೆ ಗಟ್ಟಿಯಾಗಿ ಬೆಳೆಯಲು ಪ್ರಯತ್ನಿಸುತ್ತಿದ್ದ ಕಾಲ ಹೀಗಾಗಿ ಕಲುಷಿತವಾಯಿತು. ಈ ಲೇಖಕರಲ್ಲಿ ಕೆಲವು ಪ್ರತಿಭಾನ್ವಿತರೂ ಇದ್ದುದರಿಂದಲೇ ಬರಹಗಾರರ ಒಕ್ಕೂಟ ಎಂಬ ಹೆಸರಿಂದ ಪ್ರಾರಂಭವಾದ ಈ ಆಂದೋಲನದ ಬಗ್ಗೆ ಎಲ್ಲರೂ ತಲೆಕೆಡಿಸಿಕೊಳ್ಳುವುದು ಅನಿವಾರ್ಯವಾಯಿತು. ಅವರಲ್ಲಿನ ಕೆಲವು ಪ್ರತಿಭಾನ್ವಿತರು ತಮ್ಮ ಕೃತಿಗಳಲ್ಲಿ ತಮ್ಮ ಘೋಷಣೆಗಳನ್ನೂ ಮೀರಿ ಬೆಳೆದರೆಂಬುದು ನಿಜ. ಆದರೆ ಒಟ್ಟನಲ್ಲಿ ಅಪಕ್ವವೆನಿಸುವ ಈ ಆಂದೋಳನ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ನೈಜ ಸಾಹಿತ್ಯಿಕ ಆಂದೋಳನವಾಗದೇ ಕೇವಲ ಪ್ರತಿಷ್ಠೆಯ ಬಡಿದಾಟವಾಗಿ ಕೊನೆಯಾಯಿತೆಂದೇ ಹೇಳಬೇಕಾಗುತ್ತದೆ. ಈ ಸಾಹಿತ್ಯ ಚಳುವಳಿಯ ಜೊತೆಯಲ್ಲೇ ಭಾರತದ ರಾಜಕೀಯದಲ್ಲೂ ನಡೆದ ಜಾತಿಮೂಲ ರಾಜಕೀಯ ಮೌಲಿಕವಾದದ್ದೇನನ್ನೂ ಸಾಧಿಸಲಾರದೆ ಹೋಯಿತೆನ್ನುವುದನ್ನೂ ಮರೆಯಕೂಡದು. ಭಾರತವನ್ನು ಬ್ರಾಹ್ಮಣ ಮತ್ತು ಬ್ರಾಹ್ಮಣೇತರರೆಂದು ವಿಭಾಗಿಸುವುದು ಅವಾಸ್ತವವೆಂಬುದನ್ನು ಲೋಹಿಯಾ, ಅದಕ್ಕಾಗಿ ಪ್ರಯತ್ನಿಸಿ ಸೋತು, ತಿಳಿದಿದ್ದರು. ಜಾತಿಯಲ್ಲಿ ಪಂಚಮರೆನಿಸಿಕೊಂಡವರನ್ನು ಶೋಷಿಸುವುದರಲ್ಲಿ, ಕೊಲ್ಲುವುದರಲ್ಲಿ ಮೇಲ್ಜಾತಿಗಳಲ್ಲದೆ ಕೆಳಜಾತಿಯವರೂ ಇದ್ದಾರೆ—ಹೆಚ್ಚಾಗಿ ಕೆಳಜಾತಿಯ

ವರೇ ಇದ್ದಾರೆಂದರೆ ಉತ್ಪ್ರೇಕ್ಷೆಯಲ್ಲ. ಬ್ರಾಹ್ಮಣರು ಇದರಿಂದೇನೂ ಸಮಾಧಾನಪಟ್ಟುಕೊಳ್ಳಬೇಕಿಲ್ಲ— ಹಲವು ಶತಮಾನಗಳಕಾಲ ಅವರ ನೇತೃತ್ವದಲ್ಲೇ ಸೃಷ್ಟಿಯಾದ ಪ್ರಶ್ನೆಯಿದು. ಮುಖ್ಯವಾಗಿ ಸಮಾಜವಾದಿಯೆನಿಸಿಕೊಂಡವನು ಯಾವ ಆರ್ಥಿಕಶಕ್ತಿಯೂ ಇಲ್ಲದೆ ನಿಸ್ತ್ರಾಣರಾದ ಎಲ್ಲರ ಪರವಾಗಿ ನಿಲ್ಲಬೇಕಾದವನಾದ್ದರಿಂದ ಹಸಿದವರ ನಡುವೆ ಜಾತಿವೈರವನ್ನು ಬೆಳೆಸುವುದರಲ್ಲಿ ಆಸಕ್ತನಾಗಿರಕೂಡದು. ಹಸಿದವನು ಯಾವ ಜಾತಿಯವನೇ ಇರಲಿ ಹಸಿದವನೇ. ಜಾತಿರಾಜಕಾರಣದ ಮುಖಾಂತರ ಈ ದೇಶದ ದೀನದರಿದ್ರರ ಪರಿಸ್ಥಿತಿ ಬದಲಾಗಿಲ್ಲ; ಪ್ರತಿ ಜಾತಿಯಲ್ಲೂ ಸ್ವಲ್ಪ ಮುಂದುವರಿದಿದ್ದವರು ಇನ್ನಷ್ಟು ಮುಂದೆ ಬಂದಿದ್ದಾರೆ ಅಷ್ಟೆ. ದಟ್ಟದಾರಿದ್ರ್ಯವಿರುವ ದೇಶದಲ್ಲಿ ಹೀಗೆ ಮುಂದೆಬಂದವರು, ಯಾವ ಜಾತಿಯವರೇ ಇರಲಿ, ತಮ್ಮ ಸವಲತ್ತುಗಳಿಗೆ ಆತುಕೊಳ್ಳುವವರೂ, ತಮ್ಮ ಜಾತಿಯ ಬಹುಸಂಖ್ಯಾತರು ಕೊಳೆಯುತ್ತಿರುವ ಕಂದಕದಲ್ಲಿ ತಾವು ಎಂದೂ ಜಾರಿಬಿಡಬಾರದೆಂಬ ದಿಗಿಲಿನಲ್ಲಿ ಏನಕೇನ ಮೇಲೇರಲು ಹವಣಿಸುವ ಜನರಾಗುವುದೂ ಅತ್ಯಂತ ಸಹಜ. ಆದ್ದರಿಂದಲೇ ಕೇವಲ ತಾತ್ವಿಕ ಕಾರಣಕ್ಕಾಗಿ ಹರಿಜನರನ್ನೂ ಕೂರ್ಮಿಗಳನ್ನೂ ಒಟ್ಟಿಗೆ ತರುವುದರಲ್ಲಿ ಬಿಹಾರದ ಕರ್ಪೂರಿ ಠಾಕೂರರು ಸೋತದ್ದು; ಕರ್ನಾಟಕದ ದೇವರಾಜ ಅರಸರು ಇಂದಿರಾಗಾಂಧಿಯವರ ಕೃಪೆಯನ್ನು ಕಳಕೊಂಡದ್ದೇ ಸಣ್ಣಪುಟ್ಟ ಜಾತಿಗಳ ನಾಯಕರ ಬೆಂಬಲ ಕಳಕೊಂಡದ್ದು.

ಈ ಹಿನ್ನೆಲೆಯಲ್ಲಿ ನಮ್ಮ ಸಾಹಿತಿಗಳು ಜಾತಿಯ ವಿಷಯವೆತ್ತುವಾಗ ತಾವು ಸದ್ಯದ ರಾಜಕಾರಣಕ್ಕಾಗಿ ಮಾತ್ರ ಅದನ್ನು ಎತ್ತುತ್ತಿಲ್ಲ ಎಂಬುದನ್ನು ಮನಗಾಣಬೇಕಿತ್ತು. ತಮ್ಮ ತಮ್ಮ ಜಾತಿಯ ಜನರಿಗಿಂತಲೂ ಮನೋಧರ್ಮದಲ್ಲಿ ತಮಗೆ ಹತ್ತಿರವಾಗಿದ್ದ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಸಾಹಿತಿಗಳನ್ನು ಹೀಯಾಳಿಸುವುದರಲ್ಲಿ ತಮ್ಮ ಕಾಲಹರಣ ಮಾಡಬಾರದಿತ್ತು; ಬದಲಾಗಿ, ಭಾರತದ ಮನಸ್ಸಿಗೂ ಜಾತಿಗೂ ಇರುವ ಸಂಬಂಧವನ್ನು ಆಳವಾಗಿ ಅರಿಯಲು ತಮ್ಮ ವೈಯಕ್ತಿಕ ಅನುಭವಗಳನ್ನೂ ಒಡ್ಡಿಕೊಳ್ಳಲು ಹಿಂಜರಿಯದೆ ಬರೆಯಬೇಕಿತ್ತು. ಬಲಿಷ್ಠರಾದ ಒಕ್ಕಲಿಗರು ಲಿಂಗಾಯಿತರು ಬ್ರಾಹ್ಮಣನನ್ನು ಜಾತಿಯ ಕಾರಣಕ್ಕಾಗಿ ಟೀಕಿಸುವುದು, ಬಡ ಬ್ರಾಹ್ಮಣನೊಬ್ಬ ತಾನು ಹುಟ್ಟಿದ ಜಾತಿಯಿಂದಾಗಿ ಎಲ್ಲರಿಗಿಂತ ಶ್ರೇಷ್ಠನೆಂದು ಭ್ರಮೆಯಲ್ಲಿ ಬೀಗುವಷ್ಟೇ ಹಾಸ್ಯಾಸ್ಪದವಾಯಿತು. ಮನುಷ್ಯನನ್ನು ಒಂದು ಗುಂಪಿನ ಪ್ರತಿನಿಧಿಯಂತಲ್ಲದೆ ಸುಖದುಃಖಗಳಿಗೆ ತೆರೆದುಕೊಂಡ ವ್ಯಕ್ತಿಯನ್ನಾಗಿಯೂ ನೋಡಬೇಕಾದ ಸಾಹಿತ್ಯಕ್ಕೆ, ಸಾಧಾರಣಗೊಳಿಸಿದಾಗ ಮಾತ್ರ ಸತ್ಯವೆನಿಸುವ ಎಲ್ಲ ವಿಚಾರಗಳ ಬಗ್ಗೆಯೂ ಅನುಮಾನವಿರಬೇಕು. ಇಲ್ಲವಾದಲ್ಲಿ ವರ್ಗ ಪ್ರಜ್ಞೆ, ಜಾತಿಪ್ರಜ್ಞೆ—ಎಲ್ಲವೂ ಸಾಹಿತ್ಯವನ್ನು ತೆಳುಗೊಳಿಸುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಸಾಹಿತ್ಯ ತಳಸ್ಪರ್ಶಿಯಾಗಿ, ಸೂಕ್ಷ್ಮವಾಗಿ ಭಾರತದ ಮನಸ್ಸನ್ನು ಮುಟ್ಟಿ ಬದಲಿಸಬೇಕಾದ ಕಾರ್ಯ ಕನ್ನಡನಾಡಿನಲ್ಲಿ ಸ್ವಲ್ಪಮಟ್ಟಿಗೆ ಈ ಗೊಂದಲದಿಂದಾಗಿ ಹಿಂಜರಿಯಿತು. ತನ್ನ ಜಾತಿಯವನ ಕೃತಿಯನ್ನು ಮೆಚ್ಚುವುದಾಗಲೀ, ಬೇರೆಜಾತಿಯವರನ್ನು ಟೀಕಿಸುವುದಾಗಲೀ ಮುಜುಗರದ ವಿಷಯವಾಯಿತು. ವಸ್ತುನಿಷ್ಠವಿಮರ್ಶೆ ಹಿಮ್ಮೆಟ್ಟಿತು. ಎಂ.ಜಿ.ಕೃಷ್ಣಮೂರ್ತಿ, ಜಿ.ಎಚ್.ನಾಯಕ, ಗಿರಡ್ಡಿ ಗೋವಿಂದರಾಜ, ಕೀರ್ತಿನಾಥ ಕುರ್ತಕೋಟಿ, ಜಿ. ಎಸ್.ಆಮೂರ್ ಇಂಥವರು ಬರೆದಿರುವ ವಿಮರ್ಶೆ ವೈದಿಕ ಒಳಸಂಚಿನಿಂದ ಹುಟ್ಟಿದ್ದೆಂಬಂತೆ ಕಂಡಿತು. ಜಾತಿಯನ್ನು ಆಧಾರವಾಗಿಟ್ಟುಕೊಂಡು ಮನಬಂದಂತೆ ಕೃತಿಕಾರರ ಮೇಲೆ ಮಾಡುವ ಆರೋಪಗಳೇ ಕೃತಿವಿಮರ್ಶೆ ಎಂಬ ಭ್ರಾಂತಿಯಲ್ಲಿ ಅನೇಕ ಹಸಿತರುಣರೂ, ಹಸಿಯಾಗಿಯೇ ಉಳಿದ ಹಿಂದಿನ ತಲೆಮಾರಿನ ಕೆಲವು ಅತೃಪ್ತ ಲೇಖಕರೂ ಬರೆಯಲು ಪ್ರಾರಂಭಿಸಿದರು. ತುಂಬ ಧಾರಾಳವಾದ ಅರ್ಥದಲ್ಲಿ ನವ್ಯರೆನ್ನಬಹುದಾದ, ಆದರೆ ಅವರವರ ನಡುವೆ ಅನೇಕ ಅರ್ಥಪೂರ್ಣ ಭಿನ್ನಾಭಿಪ್ರಾಯಗಳಿರುವ ಹಲವು ಲೇಖಕರು ಅಕಾಡೆಮಿ, ಪರಿಷತ್ತು ಇತ್ಯಾದಿ ಸಾಹಿತ್ಯ ಸಂಸ್ಥೆಗಳಿಗೆ, ಕೆಲವು ಕನ್ನಡ ಇಲಾಖೆಗಳಿಗೆ ಸಂಶಯಾಸ್ಪದ ವ್ಯಕ್ತಿಗಳಂತೆ ಕಂಡರು. ನವ್ಯಸಾಹಿತಿಗಳೆಂದು ಕರೆಸಿಕೊಂಡವರ ನಡುವಲ್ಲೇ ಜಾತೀಯ ಒಡಕು ತಲೆದೋರಿದಮೇಲೆ, ವಿಮರ್ಶೆಯ ಮುಖಾಂತರ ಕೃತಿಮೌಲ್ಯ ನಿರ್ಧಾರವಾಗಬೇಕೆನ್ನುವ ಸಾಹಿತ್ಯವ್ರತ ಸಡಿಲವಾಗಿ, ಜಾತಿಯಿಂದ ಪ್ರತಿಷ್ಠೆ ನಿರ್ಧಾರವಾಗತೊಡಗಿ, ಹೊಸದಾಗಿ ಬರೆಯಲು

ಪ್ರಾರಂಭಿಸಿದವರು. ಅವರು ಎಷ್ಟೇ ಉದಾರ ಧೋರಣೆಯವರಿರಲಿ, ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರೆಂಬ ಮಾತ್ರಕ್ಕೆ ಆರಂಭದಲ್ಲಿ ಪಡೆಯಬೇಕಾದ ಪ್ರೋತ್ಸಾಹವನ್ನು ಪಡೆಯಲಾರದೆ ಹೋದರು. ಕೆಲವು ಯುವಕ ಬ್ರಾಹ್ಮಣೇತರ ಲೇಖಕರು ಹುಂಬತನದಿಂದ ತಾವು ಬರೆದುದ್ದಕ್ಕೆಲ್ಲಾ ಪ್ರತ್ಯಕ್ಷ ಪರೋಕ್ಷ ಪ್ರೋತ್ಸಾಹ ಪಡೆಯುತ್ತ ಕಷ್ಟದ ದಾರಿ ತುಳಿದು ಪಕ್ವವಾಗಬೇಕಾದ ಪ್ರಕ್ರಿಯೆಯಿಂದ ವಂಚಿತರಾದರು. ಇವೆಲ್ಲವೂ ಕನ್ನಡ ಸಾಹಿತ್ಯಕ್ಕೆ ಆದ ನಷ್ಟವೆಂಬ ಪ್ರಜ್ಞೆಯಿಂದ, ನನ್ನೀ ಮಾತುಗಳಿಗೆ ಅಪಾರ್ಥ ಬರಬಹುದಾದ ಅಪಾಯವಿರುವುದನ್ನೂ ಲೆಕ್ಕಿಸದೆ ನಾನು ಬರೆಯುತ್ತಿದ್ದೇನೆ. ಈ ಕಾಲದಲ್ಲಿ ಸಲ್ಲುವುದಕ್ಕಾಗಿ ಅಥವಾ ತಾನು ಜಾತೀಯವಾದಿಯಲ್ಲವೆಂದು ಸ್ಥಾಪಿಸಿಕೊಳುವುದಕ್ಕಾಗಿ ಎಷ್ಟೋ ಜನ ವಿಮರ್ಶಕರು (ಇವರೆಲ್ಲರೂ ಬ್ರಾಹ್ಮಣರೇ) ತಮ್ಮ ಜಾತಿಯವರನ್ನು ತೆಗಳಿ ಬೇರೆಯವರನ್ನು ಹೊಗಳಿದ್ದೂ ಇದೆ. ಅಥವಾ ಹೊಗಳಲೆಂದು ಮತ್ತು ತೆಗಳಲೆಂದು ಸಮಸಂಖ್ಯೆಯಲ್ಲಿ ಬ್ರಾಹ್ಮಣ ಮತ್ತು ಶೂದ್ರ ಲೇಖಕರನ್ನು ಆಯ್ದುಕೊಳ್ಳಲು ಪರದಾಡಿದ್ದಿದೆ. ಈ ಪೇಚಿಗೆ ಒಳಗಾದವರು ಸಾಮಾನ್ಯವಾಗಿ ಪ್ರಗತಿಶೀಲ ಧೋರಣೆಯ ಬ್ರಾಹ್ಮಣರೇ ಆಗಿದ್ದಾರೆ ಸಾಹಿತ್ಯ ಕ್ಷೇತ್ರದಲ್ಲಿ ಹೀಗಾಗುವುದಕ್ಕಿಂತ ಹೆಚ್ಚು ಅಸಹ್ಯವಾದ್ದು ಇನ್ನೇನೂ ಇಲ್ಲ.

ಈ ಒಕ್ಕೂಟ ಬ್ರಾಹ್ಮಣೇತರ ಮಧ್ಯ ಜಾತಿಗಳ ಉದ್ದೇಶಪೂರ್ವಕ ಕುತಂತ್ರವೆಂದು ಮಾತ್ರ ನಾನು ಹೇಳುತ್ತಿಲ್ಲ—ಹಾಗೆ ಹೇಳುವುದರಿಂದ ಪ್ರಯೋಜನವೂ ಇಲ್ಲ. ಈ ಶತಮಾನದ ಪ್ರಾರಂಭದಲ್ಲೇ ಬ್ರಾಹ್ಮಣೇತರ ಜಾತಿಗಳಿಂದ ಅತ್ಯುತ್ತಮ ಲೇಖಕರನ್ನು (ಕುಮಾರನ್ ಆಶಾನ್ ಅಂಥವರನ್ನು) ಪಡೆದ ಕೇರಳದಲ್ಲಿ ಇಂಥ ಆಂದೋಲನವೊಂದು ಎಪ್ಪತ್ತರ ದಶಕದಲ್ಲಿ ಅನಗತ್ಯವಾಯಿತೆಂಬುದನ್ನೂ, ಆದರೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಚ್ಚು ಪಾಲು ಬ್ರಾಹ್ಮಣರೇ ಇದ್ದ ಕರ್ನಾಟಕದಲ್ಲಿ ಆರ್ಥಿಕವಾಗಿ ಬ್ರಾಹ್ಮಣರಿಗಿಂತ ಬಲಿಷ್ಠರಾಗಿದ್ದರೂ ಕೂಡ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ—ಪತ್ರಿಕೆ, ಸಿನಿಮಾ, ನಾಟಕ, ಸಾಹಿತ್ಯ ಇತ್ಯಾದಿಗಳಲ್ಲಿ—ಈ ಮಧ್ಯಜಾತಿಗಳು ಬ್ರಾಹ್ಮಣರಿಗೆ ಸಮವಾಗಲೆಂದು ನಡೆಸಿದ ಹೋರಾಟ ಇದೆಂದೂ ಸಮಾಜಶಾಸ್ತ್ರದ ದೃಷ್ಟಿಯಿಂದ ವ್ಯಾಖ್ಯಾನ ಮಾಡಬಹುದು. ಆದರೆ ಇದು ಕೂಡ ನಿಜವಲ್ಲವೆಂದು ನನಗನ್ನಿಸುತ್ತದೆ. ನವ್ಯರಲ್ಲಿ ಹೆಚ್ಚು ಪಾಲು ಪ್ರತಿಭಾಶಾಲಿಗಳು ಬ್ರಾಹ್ಮಣೇತರೇ ಆಗಿದ್ದರು. ನವ್ಯ ವಿಮರ್ಶಕರಿಗೆ ಬೇಂದ್ರೆಯ ನಂತರ ಅತ್ಯಂತ ಸತ್ವಶಾಲಿಯಾಗಿ ಜಾನಪದ ಬೆಳೆಸಿಕೊಂಡ ಕವಿಯಾಗಿ ಕಂಬಾರರು ಕಂಡಿದ್ದರು. ಎಲ್ಲ ಯುವಕವಿಗಳಿಗಿಂತ ಅವರ ಪ್ರತಿಭೆ ಮೇಲಿನದೆಂದು ಅನೇಕರು ತಿಳಿದಿದ್ದರು. ಲಂಕೇಶರನ್ನ ಅಡಿಗರು ಕನ್ನಡದ 'ಅಗ್ರಗಣ್ಯ ಲೇಖಕ'ರೆಂದು ಕರೆದಿದ್ದರು. ಆಲನಹಳ್ಳಿ ಕೃಷ್ಣರ ಬರವಣಿಗೆಗೆ ಬಹುಬೇಗನೆ ಮಾನ್ಯತೆ ಸಿಕ್ಕಿತು. ದೇವನೂರು ಮಹಾದೇವರ ಪ್ರತಿಭೆ ಈ ನವ್ಯ ಸಾಹಿತ್ಯದ ಸಂದರ್ಭದಲ್ಲೇ ಅರಳಲು ತೊಡಗಿತ್ತು. ಇನ್ನು ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬೆಳವಣಿಗೆಯ ದೃಷ್ಟಿಯಿಂದ ಮುಖ್ಯವಾದ ವಿದ್ಯಾಸಂಸ್ಥೆಗಳು—ಬೆಂಗಳೂರು, ಮೈಸೂರು, ಧಾರವಾಡದ ವಿಶ್ವವಿದ್ಯಾನಿಲಯದ ಕನ್ನಡ ಸಂಸ್ಥೆಗಳು—ಬ್ರಾಹ್ಮಣೇತರರ ನಾಯಕತ್ವ ಪಡೆದವು. ಪ್ರಾಯಶಃ ಪತ್ರಿಕೋದ್ಯಮವೊಂದರಲ್ಲಿ, ಸಾಹಿತ್ಯ ಪ್ರಕಾಶನದಲ್ಲಿ ಮಾತ್ರ ಬ್ರಾಹ್ಮಣರೇ ಮುಖ್ಯರಾಗಿದ್ದರು.

ವೈಯುಕ್ತಿಕವಾಗಿ ಹೇಳುವುದಾದರೆ ನಾನು ಸುಮಾರು 1967 ರಲ್ಲಿ ಬರೆದ 'ಸಾಹಿತ್ಯದಲ್ಲಿ ಬ್ರಾಹ್ಮಣ ಮತ್ತು ಶೂದ್ರ'ದ ಮುಖ್ಯ ವಿಚಾರಕ್ಕೆ ಇನ್ನೂ ಬದ್ಧವಾಗಿಯೇ ಮೇಲಿನ ಟೀಕೆಯನ್ನು ಮಾಡಿದ್ದೇನೆ. ಭಾರತದ ಸಾಹಿತ್ಯ ಬ್ರಾಹ್ಮಣ ಮತ್ತು ಶೂದ್ರ ಲೋಕಗಳ ಒಟ್ಟು ಅನುಭವವನ್ನು ಹೇಗೆ ಒಳಗೊಳ್ಳಬಹುದು ಎಂಬ ಪ್ರಶ್ನೆಗೆ ಆ ಲೇಖನದಲ್ಲಿ ನಾನು ಉತ್ತರ ಹುಡುಕಿದ್ದೇನೆ ಡಿ.ಎಂ.ಕೆ. ಮಾದರಿಯ ಜಾತಿ ವಿಶ್ಲೇಷಣೆಯಿಂದ ನಾನು ನನ್ನ ಲೇಖನದಲ್ಲಿ ಸೂಚಿಸಿದ ಸಾಹಿತ್ಯ ವಿಶ್ಲೇಷಣೆ ಮಾಡುವುದು ಅಸಾಧ್ಯ. ಈಚೆಗೆ ಈ ಒಕ್ಕೂಟದ ಕೆಲವು ಮುಖ್ಯರು ಬಂಡಾಯ ಸಾಹಿತ್ಯ ಸಂಸ್ಥೆಯಲ್ಲಿದ್ದಾರೆ—ಜಾತಿಗೂ ಭಾರತೀಯ ಮನಸ್ಸಿಗೂ ಇರುವ ಸಂಬಂಧಗಳ ಆಳ ವಿಶ್ಲೇಷಣೆಯನ್ನೂ ಕೈಬಿಟ್ಟವರಂತೆ ಕಾಣುತ್ತಾರೆ. ತಮ್ಮದು ಕೇವಲ ಬ್ರಾಹ್ಮಣ ದ್ವೇಷವಲ್ಲವೆಂಬುದನ್ನು ಸ್ಥಾಪಿಸಲೆಂಬಂತೆ ತಮ್ಮ ಜಾತಿಯ ಕೆಲವು ಧುರೀಣರನ್ನು ಟೀಕಿಸುತ್ತಿದ್ದಾರೆ. ಹೀಗೆ ಸದ್ಯದ ರಾಜಕಾರಣದಲ್ಲಿ ಪರಿಣಾಮಕಾರಿಯಾಗಲಷ್ಟು ಮಾತ್ರ

ಸನ್ನಿವೇಶ

ಮಾಡುವ ಕೆಲಸಗಳು ಹೆಚ್ಚನ್ನು ಸಾಧಿಸಲಾರದು. ರಾಗದ್ವೇಷಗಳಲ್ಲಿ ಮಾತ್ರ ಕೊನೆಯಾಗುವಂಥ, ಅಥವಾ ಕೇವಲ ಜನಪ್ರೀತಿ ಪಡೆಯುವಂಥ ವರ್ತನೆಗಳು ರಾಜಕೀಯ ಕ್ಷೇತ್ರದಲ್ಲೂ ಅವಿವೇಕವಾಗುವುದರಿಂದ, ಸಾಹಿತಿಗಳು ಇನ್ನಷ್ಟು ಆಳವಾಗಿ ನೋಡಬೇಕು. ಪಾಶ್ಚಾತ್ಯರಂತೆ ಆಧುನಿಕ ನಾಗರೀಕತೆಯ ಬೆನ್ನುಹತ್ತದೆ, ಭಾರತದಲ್ಲಿ ವಿಕೇಂದ್ರಿಕೃತವಾದ ವ್ಯವಸ್ಥೆಯನ್ನು ಆಯ್ದುಕೊಳ್ಳಬೇಕೆಂಬ ಒಲವಿರುವ ಈ ನಮ್ಮ ಲೋಹಿಯಾವಾದಿ ಮಿತ್ರರು ಗ್ರಾಮೀಣ ಸಂಸ್ಕೃತಿಯ ನಮ್ಮ ಈ ಮೌನ ಕಣಿವೆಯ ಇಕಾಲಜಿಯಲ್ಲಿ ಜಾತಿ ವ್ಯವಸ್ಥೆ ಯಾಕೆ ಇನ್ನೂ ಜನರಿಗೆ ಪ್ರಿಯವಾಗಿಯೇ ಉಳಿದಿದೆ, ಅದರಲ್ಲಿ ಸೃಜನಶೀಲವಾದದ್ದೆಷ್ಟು ಇನ್ನೂ ಇದೆ, ಎಲ್ಲಿ ಅದು ವಿನಾಶಕಾರಿಯಾಗುತ್ತಿದೆ ಎಂಬುದನ್ನು ಆಳವಾಗಿ ಅರಿತು ಹೊಸ ಸಮಾಜ ನಿರ್ಮಾಣದೆಡೆಗೆ ಮುಂದುವರಿಯಬೇಕಾಗಿದೆ. ಸದ್ಯದ ರಾಜಕಾರಣದಂತೆ ಅದನ್ನು ಬಯ್ಯುತ್ತಲೇ ಬಳಸಿಕೊಳ್ಳುತ್ತ ಹೋಗುವುದು ಇನ್ನಷ್ಟು ಗೊಂದಲಕ್ಕೆ ಕಾರಣವಾದೀತು. ಸಾಹಿತಿ ರಾಜಕೀಯದಲ್ಲಿ ಆಸ್ಥನಾಗಿರಬೇಕೆಂಬುದರ ಅರ್ಥ ಅವನು ಸಾಹಿತ್ಯದಲ್ಲೇ ರಾಜಕೀಯ ಮಾಡಬೇಕೆಂಬುದಲ್ಲ. ಆದರೆ ಈಗ ಹಾಗಾಗಿದೆ.

ಹಕ್ಕಿ ಮತ್ತು ಬಂಡಿ

ನವ್ಯ ಚಳುವಳಿಯಲ್ಲೂ ಈ ಬಗೆಯ ರಾಜಕೀಯ ಕಾರಣಗಳಿಗಲ್ಲದಿದ್ದರೂ, ವಿಮರ್ಶಾವಿವೇಕ ಕಳಕೊಂಡ ಅತಿರೇಕಗಳಾಗಲಿಲ್ಲವೆಂದಲ್ಲ. ನವೋದಯ ಮಾರ್ಗ ತನ್ನ ಸತ್ವವನ್ನು ಕಳೆದುಕೊಂಡಿತೆಂಬ ನಿಲುವಿನಿಂದ ನವ್ಯ ಚಳುವಳಿ ಹುಟ್ಟಿಕೊಂಡಿತು. ನವೋದಯದ ಅತ್ಯಂತ ಮುಖ್ಯ ಲೇಖಕರಾದ, ಮಾಸ್ತಿ, ಬೇಂದ್ರೆ, ಕಾರಂತ, ಕುವೆಂಪು, ಶ್ರೀರಂಗರವರು — ಅನೇಕ ಸಾಮ್ಯಗಳು ಅವರಲ್ಲಿ ಇರಬಹುದಾದರೂ—ಪ್ರತಿಭೆಯಲ್ಲಿ ಒಬ್ಬರಿಗಿಂತ ಒಬ್ಬರು ಭಿನ್ನರು. ಇವರ ಮಾರ್ಗದಲ್ಲಿ ಬರೆಯುತ್ತಿದ್ದ ಹಲವರು ಸತ್ವಹೀನರಾದದ್ದು ನಿಜ—ಆದರೆ ಗಂಗಾಧರ ಚಿತ್ತಾಲ, ಜಿ. ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ, ನರಸಿಂಹಸ್ವಾಮಿಯಂಥ ಲೇಖಕರ ಈ ಕಾಲದ ಬೆಳವಣಿಗೆಯನ್ನು ಅಭ್ಯಾಸ ಮಾಡಿದಾಗ ನವೋದಯದ ಕೆಲವು ರೂಢಿಗತ ವಿಚಾರಗಳನ್ನೂ, ರಚನಾವಿಧಾನಗಳನ್ನೂ ಬಿಟ್ಟು ಬರೆಯಲು ಸಾಧ್ಯವಾದಷ್ಟು ಮಾತ್ರ ಇವರು ಜೀವಂತವೆನ್ನಿಸುವಂತೆ, ಅನನ್ಯವೆನ್ನಿಸುವಂತೆ ಬರೆಯುವುದು ಸಾಧ್ಯವಾಯಿತೆಂಬುದನ್ನು ಕಾಣಬಹುದು. ಕಾದಂಬರಿಯಲ್ಲಿ ಮಾತ್ರ ಅದಕ್ಕೆ ಹಿನ್ನೆಲೆಯಲ್ಲಿದ್ದ ಐರೋಪ್ಯ ಮತ್ತು ಭಾರತೀಯ ಮಾದರಿಗಳು—ಟಾಲ್‌ಸ್ಟಾಯ್, ಹಾರ್ಡಿ, ಡಿಕನ್ಸ್, ಬಂಕಿಂ ಅಂಥವರು—ಮತ್ತು ಸಮಕಾಲೀನಕ್ಕೆ ಸ್ಪಂದಿಸಲೇಬೇಕಾದ ಆದರ ವಾಸ್ತವಮಾರ್ಗದ ಅಗತ್ಯಗಳು—ಇವುಗಳಿಂದಾಗಿ ನವೋದಯದಿಂದ ನವ್ಯದವರೆವಿಗೂ ಬಿರುಕಿಲ್ಲದ ಬೆಳವಣಿಗೆ ಕಾಣಬಹುದು.

ನವೋದಯದ ಮೊದಲ ಜನಾಂಗದ ಲೇಖಕರು ಮಾತ್ರ ನವ್ಯ ಚಳುವಳಿ ಪ್ರಾರಂಭವಾದ ನಂತರವೂ ತಮ್ಮ ತಮ್ಮ ಮಾರ್ಗದಲ್ಲೇ ಇನ್ನೂ ಸೃಜನಶೀಲರಾಗಿ ಉಳಿದಿದ್ದಾರೆ. ಈ ಲೇಖಕರ ಇತಿಮಿತಿಗಳ ಬಗ್ಗೆ ನಮ್ಮ ತೀರ್ಮಾನವೇನೇ ಇರಲಿ, ಇವರ ಅಸಾಧಾರಣ ಸೃಜನಶಕ್ತಿಯನ್ನು ಯಾರೂ ಕಡೆಗಣಿಸುವಂತಿಲ್ಲ. ಆದ್ದರಿಂದ ನವೋದಯ ಕಾಲದ ಎಲ್ಲರೂ ಸಮಕಾಲೀನ ಮಹತ್ವ ಕಳಕೊಂಡರು ಎಂಬಂತೆ ಕೆಲವು ನವ್ಯ ಲೇಖಕರು ಮಾತಾಡಿದ್ದರೆ ಅದು ಸತ್ಯದೂರವಾದದ್ದು ಹೇಗೋ ಹಾಗೆಯೇ ನವ್ಯದ ಯುಗ ಮುಗಿಯಿತೆನ್ನುವ ಒಕ್ಕೂಟ ಮತ್ತು ಬಂಡಾಯ ಸಾಹಿತಿಗಳ ಘೋಷಣೆಯೂ ಅವಸರದ ತೀರ್ಮಾನವಾಗಿದೆ. ನವ್ಯರೆಂದು ಕರೆಸಿಕೊಂಡಿದ್ದ ಮುಖ್ಯ ಲೇಖಕರು ಈಗಲೂ ಸತ್ವಶಾಲಿಗಳಾಗಿಯೇ ಉಳಿದಿದ್ದಾರೆ. ಅಡಿಗರ ಕಾವ್ಯ ಇವತ್ತಿಗೂ ಸಮಕಾಲೀನ ವಾಸ್ತವಗಳನ್ನು 'ಭೂಮಿಗೀತ', 'ವರ್ಧಮಾನ' ಸಂಕಲನಗಳ ಸಂಕೀರ್ಣ ತೀವ್ರತೆಯಲ್ಲಿ ಅಲ್ಲದಿದ್ದರೂ, ತನ್ನ ಒಗರು ಮೊನಚುಗಳನ್ನು ಕಳಕೊಳ್ಳದಂತೆ ಜೀವಂತವಾಗಿ ನಿರ್ವಹಿಸುತ್ತಲೇ ಇದೆ. ತನ್ನ ಅಂತರ್ನೋಟಗಳನ್ನು ಕಳಕೊಳ್ಳದಂತೆ ಅವರು ಸಮಕಾಲೀನಕ್ಕೆ ಸ್ಪಂದಿಸಬಲ್ಲರು ಎಂಬುದಕ್ಕೆ ರೇಗಿದ ಧಾಟಿಯ ವೈಯಕ್ತಿಕ ಮಾತುಗಳು 'ಮೂಲಕ ಮಹಾಶಯರು' ಕವನದ ಅಂತ್ಯದಲ್ಲಿ ಸಮಾಧಾನದ ಆಳಚಿಂತನೆಯಾಗುವ ಬಗೆಯಲ್ಲಿ ಗುರುತಿಸಬಹುದು. ಆದರೆ ನವ್ಯದ ಮೇಲ್ಮೈಯನ್ನು ಮಾತ್ರ ಪಡಕೊಂಡವರು ಹುಸಿಯಾದ ಸಂಕೇತಗಳಲ್ಲಿ ಗಹನದ

ಭ್ರಮೆ ಹುಟ್ಟಿಸಿದರೆಂಬುದೂ, ನವೋದಯದ ಹಲವು ಆದರ್ಶವಾದಿಗಳಾದ, ಭಾವಾತಿರೇಕಿಗಳಾದ, ಹಿಂಬಾಲಕರು ಕೃತಕರಾದರೆಂಬುದಷ್ಟೇ ನಿಜ.

ಬರಹಗಾರರ ಒಕ್ಕೂಟ ಕೂಡ ಹಲವು ದಿಕ್ಕುಗಳಲ್ಲಿ ಹರಿಯಲು ಪ್ರಯತ್ನಿಸಿ ತನ್ನ ನಿಲುವನ್ನು ಗಟ್ಟಿಯಾಗಿಸಿಕೊಳ್ಳಲು ಪ್ರಯತ್ನಿಸಿದ್ದಿಲ್ಲವೆಂದಲ್ಲ. ಇದರಲ್ಲಿ ಮುಖ್ಯರಾಗಿದ್ದವರು ಅದರ ಪ್ರಾರಂಭದ ದೆಸೆಯಲ್ಲಾದರೂ ಜಯಪ್ರಕಾಶರ ಆಂದೋಳನದಲ್ಲಿ ಭಾಗಿಗಳಾದರು; ವಿಚಾರವಾದಿಗಳಾಗಿ ಮೂಢನಂಬಿಕೆಗಳನ್ನು ಪ್ರತಿಭಟಿಸಿದರು. ಎಮರ್ಜೆನ್ಸಿ ಕಾಲದಲ್ಲಿ ಸರ್ಕಾರದ ಗುಮಾನಿಗೊಳಗಾಗಿ ಶ್ರೀ ಚಂದ್ರಶೇಖರ ಪಾಟೀಲರು ಕೆಲದಿನಗಳ ಕಾಲ ಸೆರೆಮನೆಯಲ್ಲಿರಬೇಕಾಯಿತು. ಇದೇ ಕಾಲದಲ್ಲಿ ತಮ್ಮ ಪದ್ಮಭೂಷಣವನ್ನು ಹಿಂದಕ್ಕೆ ಕೊಟ್ಟ ಶ್ರೀ ಶಿವರಾಮ ಕಾರಂತರೂ, ಮೊದಲಿನಿಂದಲೂ ಕಾಂಗ್ರೆಸ್ ಸಂಸ್ಕೃತಿಯ ಭ್ರಷ್ಟಾಚಾರಕ್ಕೆ ವಿರೋಧಿಗಳಾಗಿದ್ದ ಶ್ರೀ ಗೋಪಾಲಕೃಷ್ಣ ಅಡಿಗರೂ ತಮ್ಮ ಅನೇಕ ಭಾಷಣಗಳಲ್ಲಿ ಸೆನ್ಸರ್ ನೀತಿಯನ್ನು ಧಿಕ್ಕರಿಸಿ ನಿರ್ಭಯವಾಗಿ ಸರ್ಕಾರದ ನೀತಿಯನ್ನು ಖಂಡಿಸಿ ಮಾತಾಡಿದರು. ನವ್ಯ ಸಾಹಿತ್ಯಮಾರ್ಗ ವ್ಯಕ್ತಿಯ ಸ್ವಾನುಭವಕ್ಕೆ ಆದ್ಯತೆ ಕೊಟ್ಟು, ಗಂಭೀರವಾದ ರೀತಿಯಲ್ಲಿ ರಾಜಕೀಯ ಪ್ರಜ್ಞೆಯನ್ನು ಹೊಂದಿದ್ದಾದರೂ ತಕ್ಷಣದ ಪ್ರತಿಕ್ರಿಯೆಗೆ ಅಗತ್ಯವಾದ ಕ್ರಮದಿಂದ ಈ ಮಾರ್ಗ ದೂರವಾಗಿಬಿಟ್ಟಿದ್ದರಿಂದ ಧುತ್ತನೆ ಎದುರಾದ ಎಮರ್ಜನ್ಸಿಗೆ ಸಾಹಿತ್ಯಿಕವಾಗಿ ಇದು ಕೂಡಲೇ ಪರಿಣಾಮಕಾರಿಯಾಗುವಂತೆ ಪ್ರತಿಕ್ರಿಯಿಸಲಾಗಲಿಲ್ಲ. ಜಿ. ಎಸ್. ಸದಾಶಿವರು ಆ ಸಮಯದಲ್ಲಿ ಬರೆದ ಒಂದು ಸಾಂಕೇತಿಕ ಕಥೆ, ಅಡಿಗರು ಬರೆದ ಕವನಗಳು ನಮಗೇ ನಮ್ಮ ಪಾಡನ್ನು ತಿಳಿಸಿಕೊಳ್ಳುವ ರೀತಿಯವು. ಹೀಗಾಗಿ ಸಂಕೀರ್ಣ ಸಾಹಿತ್ಯ ಅಭಿವ್ಯಕ್ತಿ ಅಪ್ರಸ್ತುತವೆಂಬ ಭಾವನೆ ತಲೆದೋರಿ ದೇಶದ ಪ್ರಜೆಗಳಾಗಿ ತಮ್ಮ ಕರ್ತವ್ಯ ನಿರ್ವಹಿಸುವುದೊಂದೇ ಮಾರ್ಗವೆಂದು ಇವರಲ್ಲಿ ಅನೇಕರಿಗೆ ಅನ್ನಿಸಿದ್ದು ಸಹಜ. ವ್ಯಂಗ್ಯ, ವ್ಯಕ್ತಿನಿಂದೆ, ಅಪಹಾಸ್ಯಗಳನ್ನೆ ತಮ್ಮ ವಿಧಾನಮಾಡಿಕೊಂಡು ಒಕ್ಕೂಟದಂಥ ಚಳವಳಿ ಮೂಲಕ ಪ್ರಸಿದ್ಧರಾದ ಚಂದ್ರಶೇಖರ ಪಾಟೀಲರ ಬೆಳವಣಿಗೆ ಈ ಸಮಯದಲ್ಲಿ ಕುತೂಹಲಕಾರಿಯಾದ್ದು. ಎಮರ್ಜನ್ಸಿಗೆ ಅವರು ತೋರಿಸಿದ ಕಾವ್ಯ ಪ್ರತಿಕ್ರಿಯೆ 'ಗಾಂಧಿ ಸ್ಮರಣೆ'ಯೆಂದು 1976ರಲ್ಲಿ ಪ್ರಕಟವಾಯಿತು. ಇಲ್ಲಿನ ಕೆಲವು ಕವನಗಳು ಕನ್ನಡ ಸಾಹಿತ್ಯದ ಒಳಜಗಳಗಳು ಸಾರ್ವಜನಿಕರಿಗೂ ಮಹತ್ವದ್ದಾದವು ಎಂಬ ಭ್ರಮೆಯಿಂದ ಬರೆದಂತಿವೆ. ಒಳಗಿನವರಿಗೆ ಮಾತ್ರ ಖುಷಿಕೊಡುವ ಅಪಹಾಸ್ಯ ಅಲ್ಪಾಯುವಾದ್ದು; ಅಡಿಗರ 'ನೆಹರೂ ನಿವೃತ್ತರಾಗುವುದಿಲ್ಲ'ವೆಂಬ ಕವನದ ವ್ಯಂಗ್ಯದ ಜೊತೆ ಅದನ್ನು ಹೋಲಿಸಿದಾಗ ನಮಗೆ ಅವುಗಳ ಮಿತಿ ತಿಳಿಯುತ್ತದೆ. ಆದರೆ 'ಗಾಂಧಿ ಸ್ಮರಣೆ' ಎಂಬ ಅವರ ಕವನದಲ್ಲಿ ಮಾತ್ರ—ಇದು ಕೂಡ ನಮ್ಮ ಪಾಡನ್ನು ನಮಗೇ ತಿಳಿಸುವ ಪದ್ಯವೆಂಬುದು ಮುಖ್ಯ—ಇಡೀ ದೇಶದ ಸಂದರ್ಭಕೊಡುವ ಆಯಾಮದಿಂದಾಗಿ ಸುಲಭವಾಗಿ ಆಡಿದಂತೆ ಕಾಣುವ ಮಾತೂ ವಿರೋಧಾಭಾಸದ ಇಂದಿರಾ ರಾಜಕೀಯದ ಚುರುಕು ಟೀಕೆಯಾಗುತ್ತದೆ. ಆದ್ದರಿಂದಲೇ ಒಕ್ಕೂಟದಿಂದ ಪ್ರಾರಂಭವಾದ ಚಳವಳಿಯಿಂದಾಗಿ ತಮ್ಮ ಕುಹಕದ ಶಕ್ತಿಯನ್ನು ಕೆಲವೆಡೆಗಳಲ್ಲಾದರೂ ಭೂಬಾಣದ ಮಾದರಿಯಲ್ಲಿ ಹೊರಗಿನ ವಿದ್ಯಮಾನಗಳನ್ನು ಟೀಕಿಸುವಂತೆ ಬಳಸುವುದು ಸಾಧ್ಯವಾದ್ದು ಅವರ ಗುಂಪಲ್ಲಿ ಪಾಟೀಲರೊಬ್ಬರಿಗೇ ಅನ್ನಿಸುತ್ತದೆ. ಕೇವಲ ಸ್ವಪ್ರದರ್ಶನವೋ, ಮಾತಿನ ಚಕಮಕಿಯೋ, ಕುಹಕದ ಬಯ್ಗಳವೋ, ಪಬ್ಲಿಕ್ ಸ್ಕೂಲಿನ ಹುಡುಗರ ರ್‍ಯಾಗಿಂಗೋ ಆಗುವ ರೀತಿಯ ಪಾಟೀಲರ ಬರವಣಿಗೆಯ ಕ್ರಮ 'ಗಾಂಧೀ ಸ್ಮರಣೆ' ಯಂಥ ಪದ್ಯದಲ್ಲಿ ಕವಿಯ ಮಾತುಗಾರಿಕೆಯು ಖುಷಿಗೆ ಮಾತ್ರ ಸೀಮಿತವಾಗದೆ ನಮಗೆ ಅರ್ಥಪೂರ್ಣವಾದ್ದನ್ನು ಹೇಳುತ್ತದೆ. ಮತ್ತೆ ಓದಬೇಕೆನ್ನಿಸುವ ಪದ್ಯ ಇದಲ್ಲದಿದ್ದರೂ ಪಾಟೀಲರ ಕುಹಕದ ಅಟ್ಟಹಾಸದ ನಡುವೆ ಈ ಪದ್ಯದ ವಿಷಾದಭಾವ ಗಮನಾರ್ಹವೆನ್ನಬಹುದು. ಬರೆಯುತ್ತಿರುವ ಎಲ್ಲರಿಗೆ ಎಲ್ಲರೂ ಗೊತ್ತಿರುವ ಸ್ವತಃ ಬರೆಯುವವರೇ ಉಳಿದವರು ಬರೆದಿದ್ದನ್ನೂ ಓದುವ ಕನ್ನಡ ಸಾಹಿತ್ಯಲೋಕದಲ್ಲಿ ಪಾಟೀಲರಂತೆ ಕುಹಕ ಅಪಹಾಸ್ಯಗಳ ಮೂಲಕ ಪ್ರಚಾರ ಪಡೆಯುವುದು ಅತಿ ಸುಲಭ. ಟೆನಿಸ್ ಆಡಲು ಕಲಿಯುವವರು ಮೊದಲು ವಾಲ್ ಪ್ರಾಕ್ಟೀಸ್ ಮಾಡುವಂತೆ ತಮಗೆ ಉಪದ್ರವ ಕೊಡಲಾರದಂಥ ಪ್ರಸಿದ್ಧರನ್ನು ಓನಾಮಾನ ವಿಮರ್ಶೆಯಲ್ಲಿ ಜರಿಯುವುದನ್ನು ಈಗಿನ ಕೆಲ ಎಳೆಯರು ಪ್ರಾರಂಭಿಸಿದ್ದಾರೆ. ಆದ್ದರಿಂದ ಪಾಟೀಲರ ಬಗೆಯ ಚುರುಕು ಮಾತು ಕಟಕಿಗಳ ಮೋಹ ಕನ್ನಡ

ಸನ್ನಿವೇಶ

ಸಾಹಿತ್ಯ ಲೋಕದಲ್ಲಿ ವ್ಯಕ್ತಿ ನಿರಪೇಕ್ಷವಾದ ಗಂಭೀರವಾದ ಸಾಂಸ್ಕೃತಿಕ ವಾತಾವರಣ ನಿರ್ಮಿಸುವ ಯತ್ನದಲ್ಲಿ ಕಂಟಕಗಳಾಗುತ್ತಿವೆ. ಏಟ್ಸ್ ಕಾವ್ಯವನ್ನು ಕುರಿತು ಒಂದು ಕಡೆ ಹೀಗೆ ಬರೆಯುತ್ತಾನೆ :

> ಇದೇ ನಮ್ಮ ಅತ್ಯಂತ ಮುಖ್ಯ ಆಯ್ಕೆ: ಹಕ್ಕಿಯ ಹಾಗೆ ಮೇಲೆರುತ್ತ ಸಾಮಾನ್ಯರ ದೃಷ್ಟಿಯಿಂದ ಕಳೆದು ಹೋಗಬೇಕೊ, ಅಥವಾ ಬೀದಿಗುಂಟ ಚಲಿಸುವ ಬಂಡಿಯಾಗಬೇಕೊ ಎಂಬುದು ಹಕ್ಕಿಯಂತೆ ಹಾರುತ್ತ ಅತಿಸೂಕ್ಷ್ಮವಾಗುವುದರಲ್ಲಿ ಕಾವ್ಯ ಆಧ್ಯಾತ್ಮಿಕವಾಗಿ ಬಿಡುತ್ತದೆ. ನನಗೆ ಬಂಡಿ ಪ್ರಿಯವೆನ್ನಿಸಿದರೆ ದೇಹದೊಳಗೆ ಆತ್ಮವನ್ನು ಬಿಗಿಯಾಗಿ ಹಿಡಿದುಕೊಂಡಿರಬೇಕು. ಯಾಕೆಂದರೆ ನಮ್ಮ ಆತ್ಮ ಹಲವು ಸೂಕ್ಷ್ಮ ಜನಾಂಗಗಳ ಸಹವಾಸದಲ್ಲಿ ಪರಿಶುದ್ಧವಾದ ಸೌಂದರ್ಯವನ್ನು ಪ್ರೀತಿಸುವುದನ್ನು ಕಲಿತು ಬಿಟ್ಟಿರುವುದರಿಂದ ರಕ್ತದ ತುಮುಲವನ್ನೂ, ಕೇವಲ ಶಕ್ತಿ ಪ್ರದರ್ಶನವನ್ನೂ, ವ್ಯಕ್ತಿತ್ವದ ಸೌಷ್ಟವವನ್ನೂ ಅಸಹನೆಯಿಂದ ಕಾಣುತ್ತವೆ.

ಪಾಟೀಲರಂಥವರ ಬರವಣಿಗೆ ಜೀವನ ಸಂಪರ್ಕದ ಮಾರುಕಟ್ಟೆಯ ಬಂಡಿಯಾದಾಗ ಅದರಿಂದ ಕುಲುಕಿಸಿಕೊಳ್ಳುವ ಖುಷಿಯಲ್ಲಿ ತಮ್ಮ ಆತ್ಮದ ಒಳದನಿಗಳನ್ನು ಕೇಳಿಸಿಕೊಳ್ಳದವರಂತೆ ಅವರು ತಮ್ಮ ಮಾತಿಗೆ ತಾವೇ ಹಿಗ್ಗುತ್ತಾರೆ. ಆದ್ದರಿಂದ 'ಅವರ ಜಾಣತನ 'ಗಾಂಧೀಸ್ಮರಣೆ', ಮತ್ತು ಮಾವೋ ಮೇಲಿನ ಅವರ ಪದ್ಯಗಳಲ್ಲಿ ಪಡೆಯುವ ಪಥ್ಯಗುಣವನ್ನು ಬೇರೆಕಡೆಗಳಲ್ಲಿ ಪಡೆಯಲಾರದೆ ಹೋಗುತ್ತದೆ. ಕಳೆದ ದಶಕದಲ್ಲಿ ಆದ ತಪ್ಪು ಇದು: ಸಾಹಿತ್ಯೇತರವಾದ ಗಂಭೀರವಲ್ಲದ ಕಾರಣಗಳಿಗಾಗಿ ಕ್ಷುಲ್ಲಕವಾದ್ದೂ ನಮ್ಮ ಗಮನ ಸೆಳೆಯಿತು; ಆದರೆ ಈ ಸಮಯದಲ್ಲೇ ಮೌನವಾಗಿ ಮೌಲಿಕವಾದ್ದನ್ನು ಬರೆಯುತ್ತಿದ್ದ ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಟಿ.ಜಿ.ರಾಘವ. ಜಿ.ಬಿ.ಜೋಶಿ, ತಿರುಮಲೇಶ, ಚನ್ನವೀರ ಕಣವಿ, ಕೆ.ಎಸ್.ನರಸಿಂಹಸ್ವಾಮಿಯಂಥವರು ಕಡೆಗಣಿಸಲ್ಪಟ್ಟರು. ನಾನು ಹಿಂದೆ ಸೂಚಿಸಿವಂತೆ ನಮ್ಮ ಅನೇಕ ವಿಮರ್ಶಕರು ಭಯಗ್ರಸ್ತರಾಗಿಯೋ ಸರ್ವಸಮ್ಮತರಾಗಬೇಕೆಂದೋ ದೊಡ್ಡದಾಗಿ ಕೂಗುವ ಎಲ್ಲ ಭೂತಗಳಿಗೂ ಬಲಿಕೊಡುತ್ತ ಮುಂದೆ ಸಾಗುವ ಪೂಜಾಕ್ರಮದಲ್ಲಿ ತೊಡಗಿದರು. ಜನರಿಗೆ ಪ್ರಿಯರಾದ ಬರಹಗಾರರಾದ ನಿಸಾರ್ ಅಹ್ಮದ್, ಭೈರಪ್ಪರಂಥವರಿಗೆ ವೈಯಕ್ತಿಕವಾಗಿ ಈ ವಾತಾವರಣದಿಂದ ಅನ್ಯಾಯವಾಗದೇ ಇರಬಹುದು; ಆದರೆ ಅಂಥವರ ಬರವಣಿಗೆ ಕೃತಿನಿಷ್ಠ ವಿಮರ್ಶೆಗೆ ಒಳಗಾಗದೇ ಹೋಗಿದ್ದರಿಂದ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಜನರು ಇಷ್ಟಪಡುವುದಕ್ಕೂ, ನಾವು ಸಾಹಿತ್ಯವೆಂದು ತಿಳಿದು ವಿಮರ್ಶಿಸುವುದಕ್ಕೂ ನಡುವಿನ ಅಂತರ ಅನಾರೋಗ್ಯವೆನ್ನಿಸುವಷ್ಟು ಬೆಳೆಯಿತು. ಕಥೆ, ಕವನ, ಕಾದಂಬರಿಗಳಿಗಾಗಿ ಜನರಿಗಿರುವ ಹಸಿವನ್ನು ತಣಿಸುವ ಎಲ್ಲ ಕೃತಿಗಳೂ ಗಂಭೀರವಾದ ಪರಿಶೀಲನೆಗೆ ಯೋಗ್ಯವೆಂಬುದನ್ನು ನಾವು ಮರೆತದ್ದು ನಮ್ಮ ಸಾಹಿತ್ಯಲೋಕದ ದೊಡ್ಡ ಕೊರತೆಯೆನ್ನಬಹುದು. ಡಿಕನ್ಸ್ ಅಂಥವರಲ್ಲಿ ಮನೋರಂಜನೆಯೂ ಗಾಢ ಸಾಹಿತ್ಯಾನುಭವವೂ ಒಟ್ಟಿಗೇ ಸಿಗುವಂತೆ ನಮ್ಮ ಜನಪ್ರಿಯ ಕೃತಿಗಳಲ್ಲೂ ಸಿಗುತ್ತವೆಯೇ ಎಂಬುದನ್ನೀಗ ನಾವು ವಿಮರ್ಶಿಸಬೇಕಾಗಿದೆ.

ಈ ದೃಷ್ಟಿಯಿಂದ, 'ಲಂಕೇಶ್ ಪತ್ರಿಕೆ' ಯು ಒಟ್ಟು ಧಾಟಿಧೋರಣೆಗಳು ಜನರಿಗೆ ಮುಟ್ಟುತ್ತಿರುವ ಬಗೆಯಲ್ಲಿ ಸಾಂಸ್ಕೃತಿಕವಾಗಿ ಒಟ್ಟು ಎಂಥ ಪರಿಣಾಮ ಮಾಡುತ್ತಿವೆ ಎಂಬುದನ್ನು ವಿವೇಚಿಸಬೇಕಾಗಿದೆ. ಇಂಗ್ಲಿಷ್‌ನಲ್ಲಿರುವ 'ಬ್ಲಿಟ್ಸ್' ನಂಥ ಪತ್ರಿಕೆಗಿಂತ (ಲಂಕೇಶರು ಅದರ ಸಂಪಾದಕರಾದ ಕಾರಂಜಿಯಗಿಂತ ಹೆಚ್ಚು ಪ್ರತಿಭಾಶಾಲಿಗಳಾದರೂ) ವಿಶೇಷವಾದದ್ದೇನನ್ನೂ ಮಾಡುತ್ತಿಲ್ಲವೆಂದು ನನಗನ್ನಿಸಿದೆ. ಕೆಚ್ಚು ಮತ್ತು ಜನಪ್ರಿಯ ರಂಜಕತೆಯ ಬೆರಕೆ, ಓದುಗರಿಗೆ ಕೊಡುವ ಸುಖ ಕ್ಷಣಿಕವಾದ್ದು ಮತ್ತು ಹಾಗದನ್ನು ಬೆಸೆಯುವುದು ಜನತೆಯ ಸದ್ಯದ ಚಪಲಗಳನ್ನು ತೀರಿಸುವ ಶಕ್ತಿಯನ್ನು ಮಾತ್ರ ಪಡಕೊಂಡಿರುತ್ತದೆ ಎಂಬ ಅನುಮಾನ ನನಗಿದೆ.

ಈ ಗದ್ದಲದ ನಡುವೆ ಎಷ್ಟೋ ಹೊಸ ಲೇಖಕರು ಕನ್ನಡದಲ್ಲಿ ಬರೆಯತೊಡಗಿದ್ದಾರೆ. ಸದ್ಯಚಾಲ್ತಿಯಲ್ಲಿರುವ ಯಾವುದಾದರೊಂದು ಪಂಥಕ್ಕೆ ಸೇರದ ಹೊರತು ತಮ್ಮ ಕೃತಿಗಳು ಗಮನಕ್ಕೆ ಬರದೇ ಹೋದೀತೆಂಬ ಆತಂಕಕ್ಕೆ ಇವರು ಒಳಗಾಗುವುದು ಸಹಜ. ರಾಜಕೀಯದ ದೃಷ್ಟಿಯಿಂದ ಸರಿಯಾದ ಧೋರಣೆ ಇದೊಂದೇ ಎಂಬ ನಿಶ್ಚಯದಿಂದಲೇ ಹೊರಟ ಪಂಥವಾದ ಬಂಡಾಯ ಸಾಹಿತ್ಯ ಆಂದೋಳನದಲ್ಲಿ ಭಾಗಿಗಳಾಗುತ್ತಿರುವ ಯುವಕರು ತಮ್ಮ ಕೃತಿಗಳನ್ನು ಆಳವಾಗಿಯೂ ವಿಶಿಷ್ಟವೆಂಬಂತೆಯೂ ರಚಿಸದಿದ್ದರೂ ಈ ಕಾಲದಲ್ಲಿ ಸಲ್ಲಬಹು

ವೆಂಬ ಧೋರಣೆಯಿಟ್ಟುಕೊಂಡಲ್ಲಿ ಕೃತಿ ಸಫಲತೆಯ ಕಷ್ಟದ ದಾರಿಯಿಂದ ಅವರು ವಂಚಿತರಾದಂತಾಗುತ್ತದೆ. ಇದರಿಂದ ಹೊರಗುಳಿದವರು ಯಾರ ಗಮನಕ್ಕೂ ಬರದೆ ಹೋಗಬಹುದು. ಆದರೆ ಸಾಹಿತ್ಯದ ಚರಿತ್ರೆಯಲ್ಲಿ ಹೀಗೆ ಚಾಲ್ತಿಯಲ್ಲಿರುವುದರಿಂದ ಹೊರಗುಳಿದು ತಮ್ಮ ಕಾಲದ ನಂತರ ಪ್ರಸಿದ್ಧರಾದ ಬ್ಲೇಕ್ ಮತ್ತು ಹಾಪ್‌ಕಿನ್ಸ್‌ರಂಥವರೂ ಇದ್ದಾರೆಂಬುದನ್ನು ಪ್ರಬುದ್ಧವೆಂದು ನಾವು ತಿಳಿದ ಆಂಗ್ಲ ಸಾಹಿತ್ಯ ಪರಂಪರೆಯಲ್ಲೂ ಕಾಣಬಹುದು. ಇದರಿಂದ ಆಗುವ ನಷ್ಟ ಲೇಖಕರಿಗೆ ಮಾತ್ರವಲ್ಲ; ಆಯಾಯ ಕಾಲದ ಸಂಸ್ಕೃತಿಗಳಿಗೆ, ಮತ್ತು ಜನಾಂಗಕ್ಕೆ. ಆದ್ದರಿಂದ ನಮ್ಮ ಪತ್ರಿಕೆ ತೆರೆದಮನಸ್ಸಿನದಾಗಿರುವುದಕ್ಕೆ ಪ್ರಯತ್ನಿಸುತ್ತದೆ. ಜೊತೆಗೇ ಸದ್ಯಸಲ್ಲುವ ಪಂಥಗಳ ಧೋರಣೆಗಳನ್ನು ಅವುಗಳ ಎಲ್ಲ ಸಂಕೀರ್ಣತೆಯಲ್ಲೂ ಅರಿಯುವಂತೆ ಒತ್ತಾಯಿಸಲು ಅಗತ್ಯವಾದ ಸಾಹಿತ್ಯಿಕ ಸಂವಾದದ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸುತ್ತದೆ.

ಮೌನಕಣಿವೆಯ ಜೀವಮಂಡಳದ ಅರಣ್ಯ ಪವಿತ್ರವಾದ್ದು, ಗಹನವಾದ್ದು. ಅಲ್ಲಿ ವಿಕಸಿಸುವ ಹೊಸ ಜೀವಕ್ಕೆ ಹೊಸರೂಪವಿರುವಂತೆಯೇ ಸ್ಮೃತಿಯ ಸಾತತ್ಯ ಕಳಕೊಳ್ಳದ ಭಾಷೆಯಲ್ಲೂ ಹೊಸತಾದ್ದರ ನಿರ್ಮಾಣವಾಗುತ್ತದೆ. ಇಡೀ ನಮ್ಮ ಸಂಸ್ಕೃತಿಯಲ್ಲಿ ಅದರ ಸನ್ನಾಹ ನಡೆಯುತ್ತಲೇ ಇರಬೇಕು. ಅದು ಎದುರಾದಾಗ ಅದನ್ನು ಕಾಣಬಲ್ಲ ವಿನಯವನ್ನು ಕಲಿತು ಕೊಳ್ಳುವುದೂ ಸಾಹಿತ್ಯ ವಿಮರ್ಶೆಯ ಬಹು ಮುಖ್ಯ ಜವಾಬ್ದಾರಿ.

ಧಾರ್ಮಿಕ ಪರಂಪರೆಯ ಅವನತಿ

ನಮ್ಮ ಹಿಂದಿನ ಜನಾಂಗಕ್ಕೆ ಹಿಂದೂ ಧರ್ಮದ ಆಧ್ಯಾತ್ಮಿಕತೆಯನ್ನು ಅದರ ಸೃಜನಶೀಲ ಶಕ್ತಿಮಂತಿಕೆಯಲ್ಲಿ ಪ್ರತಿನಿಧಿಸಬಲ್ಲ ವಿವೇಕಾನಂದ. ಪರಮಹಂಸ, ರಮಣ, ಅರವಿಂದರು ಇದ್ದರೆ, ಈಗಿನ ಕಾಲದಲ್ಲಿ ನಮಗೆ ಕಾಣುವವರು ಶ್ರೀ ಸತ್ಯಸಾಯಿಬಾಬಾರಂಥವರು. ಅಂದರೆ, ಭಾರತದ ಧಾರ್ಮಿಕ ಪರಂಪರೆ ಕೂಡ ಅವನತಿ ಹೊಂದಿದೆ ಎಂದರ್ಥ. ಶಂಕರ, ರಾಮಾನುಜ. ಆನಂದತೀರ್ಥರು ಒಬ್ಬರನ್ನು ಒಬ್ಬರು ಒಪ್ಪದೆ, ತಮ್ಮ ಕಾಣ್ಕೆಯನ್ನೂ ಶಾಸ್ತ್ರಗಳನ್ನೂ ಸುಸಂಬದ್ಧವೆನ್ನಿಸುವಂತೆ ಹೆಣೆಯಲು ಮಾಡಿದಂಥ ಬೌದ್ಧಿಕ ಪ್ರಯತ್ನವಾಗಲೀ, ವಿವೇಕಾನಂದ ಅರವಿಂದರಂಥವರು ವೈದಿಕ ಧರ್ಮವನ್ನು ಸಮಕಾಲೀನ ಜೀವನದ ಒತ್ತಡಗಳಿಗೆ ಅನ್ವಯಿಸಲು ತೋರಿಸಿದ ಕಾಳಜಿಯಾಗಲೀ ಈ ಕಾಲದ ಪವಾಡಪುರುಷರೆಂದು ಕರೆಸಿಕೊಳ್ಳುತ್ತಿರುವವರಲ್ಲಿ ಕಾಣುತ್ತಿಲ್ಲ. ಶಂಕರ, ರಾಮಕೃಷ್ಣ, ವಿವೇಕಾನಂದರಂಥವರ ದೃಷ್ಟಿಯಲ್ಲಿ ನೋಡಿದಾಗ ಬಹುಜನಪ್ರಿಯರಾದ ಶ್ರೀ ಸತ್ಯಸಾಯಿಬಾಬರು ನಮ್ಮ ಧರ್ಮವನ್ನು ಉಪಯೋಗಿಸಿಕೊಳ್ಳುವ ಬಗೆಗೂ, ಪತ್ತೇದಾರಿ ಕಾದಂಬರಿಗಳನ್ನೊ, ಚೀಪಾದ ರೊಮಾನ್ಸ್‌ಗಳನ್ನೊ ಬರೆಯುವ ಲೇಖಕನೊಬ್ಬ ಒಳ್ಳೆಯ ಸಾಹಿತ್ಯದ ಕೆಲವು ಗುಣಗಳನ್ನು ದುರುಪಯೋಗ ಪಡಿಸಿಕೊಳ್ಳುವ ಕ್ರಮಕ್ಕೂ ಅನೇಕ ಸಾಮ್ಯಗಳಿವೆ. ಆದರೆ ನಮ್ಮ ಧಾರ್ಮಿಕ ಪರಂಪರೆ ಈಗ ಎಷ್ಟು ಜಡವೂ, ಅವಿಮರ್ಶಾತ್ಮಕವೂ ಆಗಿದೆಯೆಂದರೆ ಧರ್ಮದ ಆಚರಣೆಯಲ್ಲಿ ಯಾವುದು ಸಾಚ ಯಾವುದು ಮೋಸ ಎಂದು ವಿವೇಚಿಸಬಲ್ಲ ಸೃಜನಶೀಲ ಚಿಂತಕರು ಅಲ್ಲಿ ಕಾಣುತ್ತಿಲ್ಲ.

ಸೃಷ್ಟಿಯ ರಹಸ್ಯಕ್ಕೆ ಕಿಂಡಿಯಾಗಿಯೂ, ಧ್ಯಾನದ ಶಿಸ್ತಾಗಿಯೂ, ನೈತಿಕ ಮೌಲ್ಯಗಳನ್ನು ನಮ್ಮ ಮಕ್ಕಳಿಗೆ ದಾಟಿಸುವ ವಾಹಕವಾಗಿಯೂ ಇರುವ ಧರ್ಮ ಹೀಗೆ ತನ್ನ ಸತ್ವ ಕಳಕೊಂಡಾಗ ಸಾಹಿತ್ಯ ಮತ್ತು ಕಲೆಗಳು ಆ ಕೆಲಸಗಳನ್ನು ನಿರ್ವಹಿಸಬೇಕಾಗುತ್ತವೆ. ಒಕ್ಕೂಟ, ವಿಚಾರವಾದಿ ಆಂದೋಳನಗಳ ಪ್ರಮುಖರಲ್ಲಿ ಒಬ್ಬರಾದ ತೇಜಸ್ವಿಯವರ ಈಚಿನ ಕಾದಂಬರಿ 'ಕರ್ವಾಲೊ' ಧರ್ಮಗಳ ಮೂಲಾಧಾರವಾದ ಈ ಸೃಷ್ಟಿ ರಹಸ್ಯದ ಅನುಭವವನ್ನೇ ವೈಜ್ಞಾನಿಕವಾಗಿ ಕೊಡಲು ಪ್ರಯತ್ನಿಸುವುದು ವಿಚಾರವಾದೀ ಆಂದೋಳನದ ಸಂದರ್ಭದಲ್ಲಿ ಗಮನಾರ್ಹವಾಗಿದೆ. ಸಾಯಿಬಾಬಾ ಮಂದಿರದಲ್ಲಿ ನಡೆಯುವ ಭಜನೆ ಅನೇಕರಿಗೆ ಮನಸ್ಸಿನ ನೆಮ್ಮದಿ ಕೊಡಬಹುದು; ಆದರೆ ನೀಗ್ರೊ ನಾಯಕ ಮಾರ್ಟಿನ್ ಲೂಥರ್ ಕಿಂಗ್ ಚಳುವಳಿಯಲ್ಲಿ ಭಾಗವಹಿಸಿದವರು 'We shall overcome' ಎಂಬ ಹಾಡನ್ನು ಹಾಡುವುದು, ವಿಯಟ್ನಾಂ ಯುದ್ಧ ವಿರೋಧಿಗಳು ಅಮೆರಿಕನ್

ಸರ್ಕಾರದ ವಿರುದ್ಧ ದಂಗೆಯೆದ್ದುದು, ಜಯಪ್ರಕಾಶರು ಸರ್ವಾಧಿಕಾರದ ವಿರುದ್ಧ ನಡೆಸಿದ ಚಳುವಳಿ, ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಧೀಮಂತರು ತೋರಿಸುತ್ತಿರುವ ವಿರೋಧ— ಇಂಥವೇ ಈ ಕಾಲದ ಅತ್ಯಂತ ಆಳವಾದ ಧಾರ್ಮಿಕ ಭಾವನೆಯನ್ನು ಪ್ರಚೋದಿಸಬಲ್ಲ ಸಂಗತಿಗಳು. ನಮ್ಮ ದೇಶದಲ್ಲಿ ಎಚ್ಚೆತ್ತ ದಲಿತರಿಗೆ ಈ ಬಗೆಯ ಆಳವಾದ ಧಾರ್ಮಿಕ ಭಾವನೆಯನ್ನು ಜನತೆಯಲ್ಲಿ ಮೊಳೆಯಿಸಬಲ್ಲ ಶಕ್ತಿಯಿದೆ. ದಿನನಿತ್ಯದ ಬದುಕಿನಲ್ಲಿ ಹಿಂಸೆಗೆ ಒಳಗಾಗುತ್ತಿರುವ ಈ ಜನ ದೇಶದ ಮುಖ್ಯ ಸ್ರೋತವೆನ್ನಿಸುವ ಚಳವಳಿಗಳಲ್ಲಿ— ಉದಾಹರಣೆಗೆ ಈ ಹಿಂದೆ ನಡೆದ ಎಮರ್ಜನ್ಸಿ ವಿರುದ್ಧದ ಆಂದೋಳನ ಮತ್ತು ಈಗ ನಡೆಯುತ್ತಿರುವ ರೈತ ಚಳುವಳಿಗಳಲ್ಲಿ— ಭಾಗಿಯಾಗಲಾರದೆ ತಮ್ಮ ಹಿತರಕ್ಷಣೆಗಷ್ಟೇ ಅನಿವಾರ್ಯವಾಗಿ ಪರಿಮಿತವಾಗಿ ಬಿಡಬೇಕಾದ ಅಪಾಯವೂ ಇದೆ. ಹಿಂದೆ ಜಯಪ್ರಕಾಶರ ಸರ್ವಾಧಿಕಾರಿ ವಿರುದ್ಧದ ಚಳುವಳಿಯ ಮುಖ್ಯ ಅಂಗವಾಗಿದ್ದ ವಿದ್ಯಾರ್ಥಿ ಸಮೂಹ ನಂತರ ಬಿಹಾರದಲ್ಲಿ ದಲಿತ ವಿರೋಧಿ ಚಳುವಳಿಯಾಯಿತು—ರಿಸರ್ವೇಶನ್ ಪ್ರಶ್ನೆ ಎದ್ದಾಗ. ಹಾಗೆಯೇ ಈ ರೈತ ಚಳುವಳಿಯಲ್ಲಿರುವ ಹಲವರು ಹರಿಜನರ ಕಣ್ಣಿನಲ್ಲಿ ಹಿಂಸಕರೇ ಆಗಿದ್ದಾರೆ. ಆದರೆ ಇಂದಿನ ವ್ಯವಸ್ಥೆಗೆ ಸವಾಲಾಗುವ ಶಕ್ತಿ ಪಡೆದ ರೈತ ಚಳುವಳಿ ತನ್ನ ಅನೇಕ ಮಾನಸಿಕ ಮಿತಿಗಳನ್ನು ಮೀರಿ ದೇಶದ ಸಮಷ್ಟಿ ಪ್ರಜ್ಞೆಯನ್ನು ಗಾಢವಾದ ಮಾನವಿಕ ಮೌಲ್ಯಗಳ ತಳಹದಿ ಮೇಲೆ ಕಟ್ಟಲು ಸಮರ್ಥವಾಗುತ್ತದೋ ಕಾದು ನೋಡಬೇಕಾಗಿದೆ. ಮಹಾರಾಷ್ಟ್ರದ ದಲಿತ ಲೇಖಕರಲ್ಲಿ ಕೆಲವರು, ನಮ್ಮಲ್ಲಿ ದೇವನೂರು ಮಹಾದೇವರು ನಮ್ಮ ಸಮಷ್ಟಿ ಜೀವನಕ್ಕೆ ಬೆಲೆಯುಳ್ಳದ್ದನ್ನು ಸೇರಿಸಬಲ್ಲಂಥ ಸಮರ್ಥರೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಎಲ್ಲ ಜಾತಿಗಳ ಧೀಮಂತರಲ್ಲೂ ಮೂಡುತ್ತಿರುವ ಈ ಪ್ರಜ್ಞೆ ಎಷ್ಟರ ಮಟ್ಟಿಗೆ ಇಡೀ ಜನಾಂಗಕ್ಕೆ ಹರಡಬಲ್ಲುದೆಂಬ ಅನುಮಾನವಂತೂ ಇರಲೇಬೇಕಾದ್ದು. ಯಾಕೆಂದರೆ, ತನ್ನ ಕಾಲ, ತನ್ನ ಜನ ತಾನು ಬರೆದದ್ದನ್ನು ಸಂಪೂರ್ಣವಾಗಿ ನಿರಾಕರಿಸಬಹುದು ಎಂಬ ಅನುಮಾನದಲ್ಲೇ ಬರೆಯುವ ಲೇಖಕರು ಮಾತ್ರ ನೈಜವಾದ್ದನ್ನು ಸೃಷ್ಟಿಸಬಲ್ಲರು. ಲೋಹಿಯಾ ಹೇಳಿದಂತೆ ನಿರಾಶೆಯ ಕರ್ತವ್ಯದ ಪಣ ತೊಟ್ಟ ಮಂದಿಯ ಅಗತ್ಯ ಎಲ್ಲ ಕಾಲದಲ್ಲೂ ಉಳಿದಿರುತ್ತದೆ.

ಸಾಹಿತ್ಯ ಮತ್ತು ಜನಪ್ರಿಯತೆ

ಜನಪ್ರಿಯತೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಳ್ಳುವುದು ಸಾಹಿತಿಗೆ ಮಾತ್ರ ಮಾರಕವಲ್ಲ—ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲೂ ಮೌಲಿಕವಾದ್ದನ್ನು ಸಾಧಿಸಬೇಕೆಂಬುವವರಿಗೆ ಅದು ಮಾರಕವಾಗಬಹುದು. ನಾಡಿನ ಸಂಸ್ಕೃತಿಯಲ್ಲಿ ಪಾಲುದಾರರಾಗುತ್ತಿರುವ ದಲಿತರು, ಬ್ರಾಹ್ಮಣೇತರರು, ಬ್ರಾಹ್ಮಣರು—ಹೀಗೆ ಎಲ್ಲರೂ ಸುಲಭವಾದ ಯಶಸ್ಸಿನಿಂದ ವಂಚಿತರಾಗದಂತೆ ಈ ನಮ್ಮ ಸನ್ನಿವೇಶದಲ್ಲಿ ದುಡಿಯಬೇಕಾಗಿದೆ. ಅಪ್ರಿಯವಾದ್ದನ್ನು ತಮ್ಮ ತಮ್ಮ ಜನರಿಗೂ ಹೇಳುವ ಧೈರ್ಯವನ್ನು ಆಯಾ ವರ್ಗದ ಧೀಮಂತರು ಕಳೆದುಕೊಳ್ಳದಿದ್ದಲ್ಲಿ ಮಾತ್ರ, ಚುನಾವಣೆಗಾಗಿ ಆಡುವ ಮೆರಗು ಮಾತುಗಳಲ್ಲಿ ಕಳೆದು ಹೋಗುತ್ತಿರುವ ಸತ್ಯಗಳನ್ನು ರಕ್ಷಿಸುವುದು ಸಾಧ್ಯ. ನಿಜವಾದ ಕಲೆಗೆ, ಈ ಕಾರಣದಿಂದಲೇ, ಮೇಲು ಮನಸ್ಸಿಗೆ ಅಪ್ರಿಯವಾಗುವುದರ ಮೂಲಕವೂ ಒಳಮನಸ್ಸಿನಲ್ಲಿ ನಾಟುವಂತೆ ಅಭಿವ್ಯಕ್ತವಾಗುವುದು ಅಗತ್ಯವಾಗುತ್ತದೆ. ಇಂಥ ಅಗತ್ಯದಿಂದಲೇ ಕನ್ನಡದಲ್ಲಿ ಹುಟ್ಟಿದ್ದು ನವ್ಯ ಸಾಹಿತ್ಯ. ವಕ್ರವಾದ, ಒಗರಾದ, ಕಠಿಣವಾದ ಸಂವಹನ ಕ್ರಿಯೆಯ ಮೂಲಕ ಓದುಗನಿಗೆ ಆಳವಾದ ಅಂತರ್ಬೋಧೆಯಾಗುವಂತೆ ಮಾಡುವ ಈ ಕೆಲಸ ನಮ್ಮ ನಾಡಿನಲ್ಲಿ ಒಂದು ಹೊಸ ಮಾನವೀಯ ನಾಗರಿಕತೆಯನ್ನು ಸೃಷ್ಟಿಸುವುದಕ್ಕಾಗಿ ಅವಿರತವಾಗಿ ನಡೆಯಬೇಕಾಗಿದೆ. ಮನುಷ್ಯನನ್ನು ಅವನ ರಾಕ್ಷಸೀಯತೆಗೂ, ದೈವಿಕ ಕಣಸುಗಳಿಗೂ ಎದುರಾಗಿ ನಿಲ್ಲಿಸುವ ಸಾಹಿತ್ಯ. ಈ ದೃಷ್ಟಿಯಿಂದ ನಿಜವಾಗಿಯೂ ಕ್ರಾಂತಿಕಾರಕವಾದ್ದು.

ಬಹುಮಟ್ಟಿಗೆ ಎಲ್ಲ ರಾಜಕೀಯ ಪಕ್ಷಗಳೂ, ಮಾದರಿಯಾಗಿ ಈವರೆಗೆ ಕಂಡಿದ್ದ ರಾಜಕೀಯ ವ್ಯವಸ್ಥೆಗಳೂ ಮನುಷ್ಯನ ಆಳವಾದ ಅಗತ್ಯಗಳನ್ನು ಪೂರೈಸಲಾರವು

ಎನ್ನಿಸಿದಾಗ. ರೂಢಿಯಲ್ಲಿದ್ದ ಧಾರ್ಮಿಕ ಆಚರಣೆಗಳು ಜಡ್ಡಾಗುತ್ತ ಹೋದಾಗ, ಪ್ರಪಂಚದ ಸಮತೋಲವನ್ನು ಕಾಪಾಡುತ್ತಿದ್ದ ಮೌನಕಣಿವೆಯಂಥ ಪ್ರದೇಶಗಳು ಯಾವ ರಾಜಕೀಯ ವ್ಯವಸ್ಥೆಯಲ್ಲಾಗಲೀ ನಿರ್ನಾಮವಾಗಬಹುದಾದ ಅಪಾಯ ಕಾಣಿಸಿಕೊಂಡಾಗ, ಆಧುನಿಕ ನಾಗರೀಕತೆಯ ಮುನ್ನುಗ್ಗುವ ಹಂಬಲದಿಂದಲೇ ಸ್ವಾತಂತ್ರ್ಯ, ಸಮಾನತೆ, ದಯಾಪಂಕ್ತಿಗಳು ನಾಶವಾಗಬಹುದು ಎನ್ನಿಸಿದಾಗ ಹಿಂದುಮುಂದನ್ನು ಕಾಣಬಲ್ಲ ಧೀಮಂತವರ್ಗ ತನ್ನ ಕಾಣ್ಕೆಯನ್ನು ವಿಮರ್ಶೆ ಸಂವಾದಗಳ ಮೂಲಕ ಹರಿತಗೊಳಿಸಿಕೊಳ್ಳುತ್ತ ಹೋಗಬೇಕಾಗುತ್ತದೆ. ಸಾಹಿತ್ಯದ ನೈಜವಾದ ಕ್ರಾಂತಿಕಾರಕತೆಯನ್ನು ಸ್ವೀಕರಿಸಬಲ್ಲ ಮನಸ್ಸುಗಳನ್ನು ಸೃಷ್ಟಿಸಲು ಶ್ರಮಿಸಬೇಕಾಗುತ್ತದೆ. ಹೀಗೆ ತನ್ನ ಅನುಭವಕ್ಕೆ, ಅಂತಃಸಾಕ್ಷಿಗೆ ಬದ್ಧವಾಗಿ ಲೇಖಕ ಬರೆದದ್ದು ಜನರಿಗೆ ಮುಟ್ಟುವಂತೆ ಮಾಡುವ ಕೆಲಸವನ್ನು ಅಧ್ಯಾಪಕರು, ವಿಮರ್ಶಕರು ಸತತವಾಗಿ ಮಾಡಬೇಕು. ಅಷ್ಟೇ ಸಾಲದೆಂದು ಈಚೆಗೆ ಅನೇಕರಿಗೆ ಅನ್ನಿಸುವುದರಿಂದಲೇ ಬೀದಿನಾಟಕಗಳು, ಸಮುದಾಯದ ಜಾಥಾಗಳು ಪ್ರಾರಂಭವಾಗಿವೆ. ಈ ಚಳವಳಿಗಳು ಸಾಹಿತಿಗಳನ್ನು ಜನಪ್ರಿಯವಾಗುವಂತೆಯೋ, ರಾಜಕೀಯ ಪಕ್ಷವೊಂದಕ್ಕೆ ನಿಷ್ಠವಾಗುವಂತೆ ಬರೆಯುವುದಕ್ಕೋ ಮಾತ್ರ ಪ್ರಚೋದಿಸಕೂಡದು. ಬದಲಾಗಿ, ಉತ್ತಮ ಸಾಹಿತ್ಯವನ್ನು ಜನ ಪುರಸ್ಕರಿಸುವಂತೆಯೂ ವ್ಯಾಪಾರೀ ಸಾಹಿತ್ಯದಿಂದ ಜನರ ರುಚಿಕೆಡದಂತೆಯೂ ಇಂಥ ಆಂದೋಲನಗಳು ಶ್ರಮಿಸಬೇಕು. (ಈ ದೃಷ್ಟಿಯಿಂದ ಪ್ರಾಯಶಃ ಇಡೀ ಭಾರತದಲ್ಲೇ ಮಹತ್ವದ ಸಾಧನೆಯೆಂದರೆ ಸುಬ್ಬಣ್ಣನವರದು. ಅವರ ಕನಸಿನ ಫಲವಾದ ಹೆಗ್ಗೋಡಿನ ಶಿವರಾಮ ಕಾರಂತ ರಂಗ ಮಂದಿರದಲ್ಲಿ ಹಳ್ಳಿ ಮತ್ತು ನಗರ, ಜಾನಪದ ಮತ್ತು ಅಭಿಜಾತ ಏಕತ್ರ ಕೂಡುತ್ತಿರುವ ಬಗೆ, ನಾನು ವ್ಯಕ್ತಪಡಿಸಲು ಶ್ರಮಿಸುತ್ತಿರುವ ಆದರ್ಶಕ್ಕೆ ಉದಾಹರಣೆಯಾಗಿದೆ). ಹಿಂದೆ ನಡೆದ ಕಮ್ಯುನಿಸ್ಟ್ ಪಕ್ಷ ಪ್ರೇರಿತ ಚಳುವಳಿಗಳು ಸ್ಟಾಲಿನ್ನನ ಕ್ರೌರ್ಯವನ್ನು ಮುಚ್ಚಿಟ್ಟಂತೆ ಈಗಿನ ಪ್ರಗತಿಶೀಲರು ವರ್ತಿಸಬಾರದು. ಲೇಖಕ ತನ್ನ ಅಂತಃಸಾಕ್ಷಿಗೆ ಸುಳ್ಳಾಗದಂತೆ ನಡೆಯುವುದು ಸಾಧ್ಯವಿದ್ದಲ್ಲಿ ಮಾತ್ರ ಇಂಥ ಆಂದೋಳನಗಳಲ್ಲಿ ಭಾಗಿಯಾದಾನು.

ಆದರೆ ಸಾಹಿತ್ಯ ವಿಮರ್ಶೆಯ ಸತತ ಶ್ರಮದಿಂದ ಕೆಲವೇ ಕೆಲವರಿಗೆ ಮಾತ್ರ ಅರ್ಥಪೂರ್ಣರಾದ ಅಡಿಗರಂಥ ಕವಿಗಳನ್ನು ಒಂದು ಲಕ್ಷ ಜನರಾದರೂ ಓದುವ ಲಂಕೇಶ್ ಪತ್ರಿಕೆಯಲ್ಲಿ ಅಸಭ್ಯವೆನ್ನಿಸುವಂತೆ ಗೇಲಿ ಮಾಡುವುದು, ಬಂಡಾಯ ಸಾಹಿತ್ಯದ ಆಂದೋಳನಕ್ಕೆ ಆಕರ್ಷಿತರಾದ ಹಲವು ಎಳೆಯರಿಗೆ ನವ್ಯ ಸಾಹಿತ್ಯದ ಉತ್ಕೃಷ್ಟ ಕೃತಿಗಳನ್ನು ಪ್ರತಿಗಾಮಿ ಧೋರಣೆಯವೆಂದು ಹೇಳಿ, ಅವುಗಳ ಅಭ್ಯಾಸ ಅನಗತ್ಯವೆಂಬ ಹುಂಬತನವನ್ನು ಅವರಲ್ಲಿ ಬೆಳಸುವುದು ಸೃಜನಶೀಲತೆಗೇ ವಿರೋಧವಾದ ನಿಲುವುಗಳಾಗುತ್ತವೆ. ಇದೇನೂ ಹೊಸತಲ್ಲ; ಇಂಥ ಅಸಹನೆಯನ್ನು ಹಿಟ್ಲರ್, ಸ್ಟಾಲಿನ್, ಮೆಕಾರ್ಥಿಗಳೂ ತೋರಿದ್ದರು.

ಬಿ. ಜಿ. ಎಲ್. ಸ್ವಾಮಿ

ನಾನು ಕೇರಳದ ಮೌನ ಕಣಿವೆಗೆ ಹೋದಾಗ ಒಂದು ದೊಡ್ಡ ಮರದ ಎದುರು ನಿಂತು ಶ್ರೀ ಬಿ. ಜಿ. ಎಲ್. ಸ್ವಾಮಿಗಳನ್ನು ನೆನೆದೆ. ಧರ್ಮಸ್ಥಳದ ಸಾಹಿತ್ಯ ಸಮ್ಮೇಳನಕ್ಕೆ ಅವರೂ ಬಂದಿದ್ದರು. ನಮ್ಮನ್ನು ಕಾಡುತೋರಿಸುತ್ತೇನೆಂದು ಕರೆದೊಯ್ದಿದ್ದರು. ಅವರ ಕೈಯಲ್ಲಿ ಪುಟ್ಟದೊಂದು ಲೆನ್ಸ್ ಜೋಡಿಸಿದ ಸೂಕ್ಷ್ಮದರ್ಶಕವಿತ್ತು. ಬಿಳಿಯ ದೊಗಳೆ ಪಾಯಜಾಮದಲ್ಲವರು ಪಾದರಸದಂತೆ ಅತ್ತಿಂದಿತ್ತ ಚಲಿಸುತ್ತ, ಪೊದೆಗಳಲ್ಲಿ ನುಗ್ಗುತ್ತ ನಾವು ನಿತ್ಯ ನೋಡುವ ಕ್ಷುದ್ರವಸ್ತುಗಳನ್ನು ತಂದು, ಸೂಕ್ಷ್ಮದರ್ಶಕದಲ್ಲಿ ತೋರಿಸಿ ನಮ್ಮನ್ನು ಮಕ್ಕಳಂತೆ ನಲಿಸಿದ್ದರು. ವಿಜ್ಞಾನಕ್ಕೂ ಕಾವ್ಯಕ್ಕೂ ನಡುವಿನ ಅಂತರವನ್ನು ನನ್ನ ಪಾಲಿಗೆ ಹೋಗಲಾಡಿಸಿದವರು ಬಿ. ಜಿ. ಎಲ್. ಸ್ವಾಮಿ. ಅವರದು ಕ್ರಾಂತಿಕಾರಕವಾದ ಅವಧೂತ ರೀತಿಯ ವ್ಯಕ್ತಿತ್ವ. ಅವತ್ತು ಧರ್ಮಸ್ಥಳದಲ್ಲಿ ಅವರು ನನ್ನನ್ನು ಒಂದು ಭವ್ಯವಾದ, ಆಗತಾನೇ ಚಿಗುರಿದ ಮರವೊಂದರ ಮುಂದೆ ನಿಲ್ಲಿಸಿ 'ನೋಡಿ' ಎಂದರು. ಸೂರ್ಯನ ಎಳೆ ಬಿಸಿಲನ್ನು ಹೊತ್ತು ಅದು ನಿಂತಿತ್ತು. 'ಈ ಕ್ಷಣದಲ್ಲಿ ಈ ಮರ ಸೂರ್ಯನ ಬೆಳಕನ್ನು ಪಡೆದು

ವಿಶಿಷ್ಟವಾದ ನೆರಳು ಬೆಳಕಿನ ನ್ಯಾಸದಲ್ಲಿ ಕಾಣುತ್ತಿರುವಂತೆ ಅಪಾರ ಕಾಲದಲ್ಲಿ ಇನ್ನು ಎಂದೂ ಅದು ಕಾಣದು. ಈ ಅನುಭವ ನೋಡಿ, ಕವಿ ಮಾತ್ರ ತಿಳಿದಾನು. ವಿಜ್ಞಾನಿಯಾದ ನನಗೆ ಅದನ್ನು ಹೇಳಲು ಬೇಕಾದ ಭಾಷೆಯಿಲ್ಲ", ಎಂದು ಬೆರಗಿನಲ್ಲಿ ಅವರು ನನ್ನ ಜೊತೆ ನಿಂತಿದ್ದರು.

ಮೌನ ಕಣಿವೆಯಿಂದ ನಾನು ಮೈಸೂರಿಗೆ ಹಿಂದೆ ಬಂದು ಮನೆಯೊಳಗೆ ಬರುತ್ತಿದ್ದಂತೆಯೇ ಅವರು ಸತ್ತರು ಎಂಬ ಸುದ್ದಿ ಕೇಳಿದೆ ; ಇನ್ನೊಮ್ಮೆ ಬೆರಗಾದೆ. ಅವರು ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದ್ದಾರೆ. ಅಷ್ಟೊಂದು ಜೀವಂತವಾದ್ದನ್ನು ತಮ್ಮ ಬರವಣಿಗೆಯಲ್ಲಿ ಸೃಷ್ಟಿಸಿ, ಕೆಲಸದ ನಡುವೆ ಸತ್ತ ಅವರು, ನಮಗೆ ಜೀವಂತವಾಗಿಯೇ ಉಳಿದಿದ್ದಾರೆ. ಲಿಯನಾರ್ಡೋ ಡ ವಿಂಚಿಗೆ ಕಲೆ, ವಿಜ್ಞಾನ, ಸಾಹಿತ್ಯ ಎಲ್ಲದರಲ್ಲೂ ಆಸಕ್ತಿಯಿತ್ತು ಎನ್ನುತ್ತಾರೆ. ಹೋಮಿ ಬಾಬಾ ರು ಸತ್ತಾಗ ಈ ತನ್ನ ಪ್ರಿಯ ಸ್ನೇಹಿತ ಲಿಯನಾರ್ಡೋ ಡ ವಿಂಚಿಯಂತೆ ಬಹುಮುಖವಾದ ವ್ಯಕ್ತಿತ್ವ ಪಡೆದಿದ್ದವರು ಎಂದು ಪ್ರಸಿದ್ಧ ವೈಣಿಕ ಯೆಹುದಿ ಮೆನುಹಿನ್ ಹೇಳಿದರು. ಕನ್ನಡ ನಾಡಿನ ನಮಗಂತೂ ಬಿ. ಜಿ. ಎಲ್. ಸ್ವಾಮಿ ಲಿಯನಾರ್ಡೋಡ ವಿಂಚಿಯಂಥ ವ್ಯಕ್ತಿತ್ವವೇ.

ನಮ್ಮ ಕೃತಜ್ಞತೆ

ಸೃಜನಶೀಲತೆಯನ್ನು ವಿನಯದಿಂದಲೂ, ಗಾಂಭೀರ್ಯದಿಂದಲೂ ವಿಮರ್ಶಾತ್ಮಕ ನಿಲುವಿನಿಂದ ಪೋಷಿಸುವ ಕೆಲಸವನ್ನು ಕನ್ನಡದ ಅನೇಕ ಕಿರು ಪತ್ರಿಕೆಗಳು ಮಾಡುತ್ತಿವೆ. ಅವರ ಜೊತೆ ನಾವೂ ಸೇರುತ್ತಿದ್ದೇವೆ. ನಮ್ಮ ಹಿಂದೆ 'ಸಾಕ್ಷಿ' ಮೌನವಾಗಿ ಬೆಳೆಸಿದ ಪರಂಪರೆಯಿದೆ; ನಮ್ಮಲ್ಲಿ ಹಲವರನ್ನು ಬೆಳೆಸಿದ ಕವಿ ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದಲ್ಲಿ ಮತ್ತೆ ಅದು ಪ್ರಕಟವಾಗುತ್ತಿದೆ. 'ಸಾಕ್ಷಿ' ಗೆ ಕೃತಜ್ಞತೆ ಹೇಳುತ್ತಲೇ ಮತ್ತೆ ಪ್ರಕಟವಾಗುವ ಅದನ್ನು ಸ್ವಾಗತಿಸುತ್ತೇವೆ. ಈ ನಮ್ಮ ಪತ್ರಿಕೆಯ ಹುಟ್ಟಿನಲ್ಲಿ 'ಅಂಕಣ', 'ಶೂದ್ರ', 'ಪುಸ್ತಕಪುರವಣಿ'ಯ ಸಂಪಾದಕರು ಮತ್ತು ವೈಯಕ್ತಿಕವಾಗಿ ನನ್ನನ್ನು ಆದರಿಸುವ ಹಲವು ಮಿತ್ರರು ನಿರ್ವ್ಯಾಜ ಪ್ರೀತಿಯಿಂದ ಭಾಗಿಯಾಗಿದ್ದಾರೆ. ಗಂಭೀರ ಧೋರಣೆಯ ಈ ಎಲ್ಲ ಪತ್ರಿಕೆಗಳ ಜೊತೆಯಲ್ಲಿ, ಅವರು ಮಾಡುತ್ತಿರುವ ಕೆಲಸಕ್ಕೆ ಪೂರಕವಾಗುವಂತೆ 'ರುಜುವಾತು' ದುಡಿಯಲು ಹವಣಿಸಿದೆ. ಯಾವ ಒಂದೇ ಒಂದು ಮತಕ್ಕಾಗಲೀ, ಸಾಹಿತ್ಯದ ಗುಂಪಿಗಾಗಲೀ ಬದ್ಧವಾಗಿ 'ರುಜುವಾತು' ಹೊರಡುತ್ತಿಲ್ಲ. ತೆರೆದ ಮನಸ್ಸಿನ ಹೊಸ ದಿಕ್ಕುಗಳ ಹುಡುಕಾಟವೇ ಇದರ ಗುರಿ. ಈ ಗುರಿಸಾಧನೆಗಾಗಿ ನಾವು ಸಾಹಿತ್ಯದಿಂದ ಮಾತ್ರವಲ್ಲದೆ ಉಳಿದ ಮಾನವಿಕ ಶಾಸ್ತ್ರಗಳಿಂದಲೂ ಲೇಖನಗಳನ್ನು ಪಡೆಯಲು ಶ್ರಮಿಸುತ್ತೇವೆ. ವಿಮರ್ಶೆಯಾಗಲೀ, ಚಿಂತನೆಯಾಗಲೀ ಕೂಡಿ ಮಾಡುವ ಕೆಲಸವೆಂಬ ಧೋರಣೆ ಈ ಪತ್ರಿಕೆಯ ಲೇಖಕರನ್ನು ಒಟ್ಟಿಗೆತಂದಿದೆ. ನಾವು ನಿಷ್ಠುರವಾಗಿ, ಅಗತ್ಯವಾದರೆ ಅಪ್ರಿಯವಾಗಿ ಬರೆಯಬಹುದು. ಆದರೆ ಈ ಪತ್ರಿಕೆಯಲ್ಲಿ ವ್ಯಕ್ತಿ ನಿಂದೆಗಾಗಲೀ, ಅಪಹಾಸ್ಯ ಕುಹಕಗಳಿಗಾಗಲೀ ಎಡೆಯಿಲ್ಲ. ನಮ್ಮ ನಮ್ಮ ವ್ಯಕ್ತಿತ್ವಗಳ ಪ್ರದರ್ಶನಕ್ಕಿಂತ ನಾಡಿನ ಸಂಸ್ಕೃತಿ ಮುಖ್ಯವಾದ್ದೆಂಬುದರಲ್ಲಿ ಅಚಲವಾದ ನಂಬಿಕೆ 'ರುಜುವಾತಿ' ಗಿದೆ.

ಯು.ಆರ್. ಅನಂತಮೂರ್ತಿ

ಮುಂದಿನ ಸಂಚಿಕೆಯಲ್ಲಿ :

ಗಿರೀಶ್ ಕಾರ್ನಾಡ್: ಹಿಟ್ಟಿನ ಕೋಳಿ ; ಒಂದು ಹಂಗೇರಿಯನ್ ಕಥೆ(ಅನು: ಶಶಿ) ; ಕೆ ಪಿ ವಾಸುದೇವನ್ : ಜನಪ್ರಿಯ ಕಲೆ; ಯು ಆರ್ ಅನಂತಮೂರ್ತಿ : ಏಟ್ಸ್ ಪದ್ಯಗಳು; ಕೆ ವಿ ಸುಬ್ಬಣ್ಣ : ಐಸೆನ್ಸ್ಟೀನರ ಸಿನಿಮಾ ಸಿದ್ಧಾಂತ ; ಡಿ. ಎ ಶಂಕರ್ : ಸಾಹಿತ್ಯದಲ್ಲಿ ಕೊಡುಕೊಳ್ಳುವಿಕೆ; ಕೆ ಸತ್ಯನಾರಾಯಣ: ಗ್ಯಾಸೆಯ ವಿಮರ್ಶೆ ; ಸರ್ವಮಂಗಳಾ: ಶಾಂತಿನಾಥ ದೇಸಾಯಿಯವರ ಕಥಾ ಸಾಹಿತ್ಯ, ಅಲ್ಲದೆ ಜಿ.ಆರ್.ಲಕ್ಷ್ಮಣ ರಾವ್, ಕೆ.ವಿ.ನಾರಾಯಣ್, ಶಂಕರಮೊಕಾಶಿ, ಕಿ.ರಂ. ನಾಗರಾಜ, ಮಾನವೇಂದ್ರನಾಥ ಎಸ್.ಶೆಟ್ಟಿ ಇತ್ಯಾದಿಯವರ ಬರಹಗಳು.

ಯು. ಆರ್. ಅನಂತಮೂರ್ತಿ

ಅಳಿದ ಗೆಳೆಯ

ವೆಂಕಟರಾಮ್

"ಸಾವು ತುಂಬ ಗೂಢವಾದದ್ದು ಆದರೂ ಅದರ ಬಗ್ಗೆ ನಾನು ಸಮಾಧಾನ ಹೇಳಲಾರೆ. ತುಂಬ ಪ್ರೀತಿಸಿದವರ ಸಾವು ಪೆಚ್ಚು ಮಾಡುತ್ತದೆ- ನಿಜ ಆದರೆ ಅವರ ಮೇಲಿನ ಪ್ರೀತಿಯೂ ಅದನ್ನು ಹೋಗಲಾಡಿಸುತ್ತದೆಯೇನೋ? ಸಾವಿನ ಬಗ್ಗೆ ದೊಡ್ಡ ಮಾತುಗಳನ್ನು ಹೇಳುವಷ್ಟು ವೈರಾಗ್ಯ ನನಗೆ ಇನ್ನೂ ಬಂದಿಲ್ಲ." (ಸಾಯುವ ತಿಂಗಳ ಮುಂಚೆ ವೆಂಕಟರಾಮ್ ಸರ್ವಮಂಗಳಾರಿಗೆ ಬರೆದ ಪತ್ರದಿಂದ)

ವೆಂಕಟರಾಮ್‌ನ ಅನಿರೀಕ್ಷಿತ ಸಾವಿನಿಂದ ನಾನೊಬ್ಬ ಪ್ರೀತಿಯ ಗೆಳೆಯನನ್ನು ಕಳೆದುಕೊಂಡೆ. ಅವನು ನನಗೆ ಅಣ್ಣನಂತಿದ್ದ. ಈ ದೇಶದ ರಾಜಕೀಯ ಸಾಮಾಜಿಕ ಸಂಗತಿಗಳಿಗೂ ನನಗೂ ಅವನೊಬ್ಬ ಅರ್ಥಪೂರ್ಣ ಕೊಂಡಿಯಾಗಿದ್ದ. ಲೋಹಿಯಾ, ಗೋಪಾಲಗೌಡ, ವೆಂಕಟರಾಮ್— ನನ್ನಂಥವರ ಪಾಲಿಗೆ ಸಾಹಿತ್ಯ, ಸಂಸ್ಕೃತಿ, ರಾಜಕೀಯ, ವೈಯಕ್ತಿಕ ಸಂಬಂಧಗಳು ಅನ್ಯೋನ್ಯ ವಿಷಯಗಳೆಂಬುದನ್ನು ಸಾಯುವ ತನಕ ತಮ್ಮ ಬದುಕಿನ ಶೈಲಿಯಲ್ಲಿ ರುಜುವಾತು ಪಡಿಸಿದವರು.. ನನ್ನ ಎಳೆಯ ವಯಸಲ್ಲೆ ನನ್ನ ಜೀವನಕ್ಕೆ ಬಂದ ಇವರನ್ನು ಹಚ್ಚಿಕೊಂಡಷ್ಟು ಪ್ರಾಯಶಃ ಮುಂದೆ ಯಾರನ್ನೂ ನಾನು ಹಚ್ಚಿಕೊಳ್ಳಲಾರೆ. ನಾವು ಪ್ರೀತಿಸುವ ವಸ್ತುಗಳು

ಹೀಗೆ ಕ್ರಮೇಣ ನಮ್ಮಿಂದ ಸರಿದು ಹೋಗುತ್ತಾ ನಾವೂ ಸಾಯುತ್ತಾ ಹೋಗುತ್ತೇವೆ. ನನಗಿಂತ ವಯಸ್ಸಲ್ಲಿ ಚಿಕ್ಕವರಾದ ಉತ್ಸಾಹಿ ಯುವಕರಲ್ಲನೇಕರಿಗೆ ವೆಂಕಟರಾಮ್ ಸಾವಿನಿಂದ ಹೀಗೆ ಅನ್ನಿಸಿದೆ.

‘ರುಜುವಾತು’ ಪತ್ರಿಕೆ ಲೇಖಕ ಸಂಪಾದಕರಲ್ಲಿ ಒಬ್ಬನನ್ನು ಕಳಕೊಂಡು ಹುಟ್ಟುತ್ತಿದೆ– ಈ ಸಾವಿನ ನಷ್ಟ ಸಂಪಾದಕನಾದ ನನಗೆ ಎಷ್ಟು ನೋವಿನದು ಎಂಬುದನ್ನು ಸಾವಿಗೆ ಮುಂಚೆ ಯುಗೋಸ್ಲಾವಿಯಾಕ್ಕೆ ಹೊರಡುವ ಅವಸರದಲ್ಲಿ ವೆಂಕಟರಾಮ್ ಈ ಪ್ರಥಮ ಸಂಚಿಕೆಗೆಂದು ಬರೆದುಕೊಟ್ಟ ಅಸ್ಸಾಂ ಮೇಲಿನ ಲೇಖನದಿಂದ ಓದುಗರು ತಿಳಿಯಬಹುದು. ದುರಂತವೆಂದರೆ, ತನ್ನ ಕ್ರಿಯಾಶೀಲತೆಯ ಪರಾಕಾಷ್ಠ ಸ್ಥಿತಿಯಲ್ಲಿದ್ದಾಗ ಅವನು ಸತ್ತಿದ್ದು.

ಅವನದೊಂದು ಪ್ರವಾಸಕಥನ, ‘ಪ್ರದಕ್ಷಿಣೆ’, ಅಕ್ಷರ ಪ್ರಕಾಶನದಲ್ಲಿ ಅಚ್ಚಾಗುತ್ತಿದೆ. ಹಿಂದ್ ಮಜದೂರ್ ಸಭಾದ ಅಧ್ಯಕ್ಷನಾಗಿ ರಷ್ಯ, ಅಮೆರಿಕ, ಸ್ವಿಟ್ಸರ್ಲೆಂಡುಗಳಲ್ಲಿ ಅವನು ಮಾಡಿದ ಪ್ರವಾಸದ ಅಪೂರ್ವ ಬರವಣಿಗೆ ಇದು. ಅವನ ಮೊದಲ ಪುಸ್ತಕವಾದ ಇದಕ್ಕೆ ‘ಇಷ್ಟವಾದರೆ ಮುನ್ನುಡಿ ಬರಿ’ ಎಂದು ಸಂಕೋಚ ಪಡುತ್ತಾ ಕೇಳಿದ್ದ. ನನಗೆ ತುಂಬ ಇಷ್ಟವಾದ ಈ ಪುಸ್ತಕಕ್ಕೆ ನಾನು ಬರೆದ ಮುನ್ನುಡಿಯನ್ನು ಓಡಾಟದ ಅವಸರಗಳಲ್ಲಿ ಅವನು ಓದಲಾಗಲೇ ಇಲ್ಲ. ಅಚ್ಚಾದ ಈ ಪುಸ್ತಕವನ್ನು ನೋಡಬೇಕೆಂದು ಎಳೆಯರಂತೆ ಅವನು ಆತುರ ಪಡುತ್ತಿದ್ದುದನ್ನು ಕಂಡು ನನಗೆ ಅವನ ಮೇಲಿನ ಅಭಿಮಾನ ಹೆಚ್ಚಿತ್ತು. ನಾನೆಲ್ಲಿ ಮುನ್ನುಡಿ ತಡಮಾಡುವೆನೋ, ನನಗದು ಅನಗತ್ಯ ಶ್ರಮವಾದೀತೋ ಎಂದು ಆತಂಕಪಡುತ್ತ ‘ನಾಲ್ಕು ಸಾಲು ಬರೆದರೆ ಸಾಕು’ ಎಂದು ಪದೇ ಪದೇ ಅವನು ಹೇಳುತ್ತಿದ್ದುದು ಕಂಡು ನಾನು ತಮಾಷೆ ಮಾಡಿ ನಕ್ಕಿದ್ದೆ. ಅಡಿಗೆ ಮಾಡಿ ಬಡಿಸುವುದು . ಹರಟೆ, ಪ್ರವಾಸ, ವಾಗ್ವಾದ, ಹೊಸದೊಂದು ಪುಸ್ತಕ, ತರುಣರ ಪ್ರೇಮ– ಯಾವುದರ ಬಗ್ಗೆಯೂ ಅವನ ಹುರುಪು ಇಳಿದಿರಲಿಲ್ಲ. ತನಗೆ ಪ್ರಿಯರಾದವರೆಲ್ಲ ನನಗೂ ಪ್ರಿಯರಾಗಬೇಕು, ನಾನು ಅವನ ಜೊತೆಗೊಮ್ಮೆ ಕಲ್ಕತ್ತಕ್ಕೆ ಹೋಗಿ ಇಂಥಿಂಥವರನ್ನು ಸಂಧಿಸಬೇಕು, ಈ ಪುಸ್ತಕ ಓದಲೇಬೇಕು, ನಾನು ಪ್ರೀತಿಸುವವರನ್ನೆಲ್ಲ ಅವನೂ ಪರಿಚಯ ಮಾಡಿಕೋಬೇಕು, ಕಾರ್ಮಿಕರ ಜೊತೆ ನಾನು ಸಾಹಿತ್ಯ ಚರ್ಚಿಸಬೇಕು— ಅವನಿಗೆ ಹತ್ತಿರವಾದವರ ಜಗತ್ತನ್ನು ಅವನು ವಿಸ್ತರಿಸುತ್ತಿದ್ದ ಬಗೆ ಅದು. ಕನ್ನಡನಾಡಿನ ಯಾವ ರಾಜಕಾರಣಿ ಸಾಯುವಾಗ ಅವನ ಪಕ್ಕದಲ್ಲಿ ಕವಿಗಳು. ಕಾರ್ಮಿಕರು, ಪತ್ರಕರ್ತರು, ಅನಕ್ಷರಸ್ಥರು, ರಾಜಕೀಯ ನಾಯಕರು, ಕಮ್ಯುನಿಸ್ಟರು, ಸೋಷಲಿಸ್ಟರು, ಕಾಂಗ್ರೈಪಕ್ಷದವರು ಹರಿಜನರು, ಮುಸ್ಲಿಮರು, ಹುಡುಗರು, ಮುದುಕರು ಒಂದು ಕುಟುಂಬದವರಂತೆ ಸೇರಿರುವುದು ಸಾಧ್ಯ? ವೆಂಕಟರಾಮ್‌ನಂಥವರು ಮುಂದಿನ ರಾಜಕೀಯದಲ್ಲಿ ಪ್ರಾಯಶಃ ಇನ್ನೂ ವಿರಳವಾಗುತ್ತ ಹೋಗುತ್ತಾರೆ.

ಪ್ರಕಟವಾಗಬೇಕಾದ ಅವನ ಬರವಣಿಗೆಯ ಪಟ್ಟಿ ನೋಡಿದರೆ ಈ ಕಾರ್ಮಿಕ ನಾಯಕ, ಧೀಮಂತ ರಾಜಕಾರಣಿಯ ಬಹುಮುಖ ಪ್ರತಿಭೆಯನ್ನು ತಿಳಿಯಬಹುದು: ಸಮಕಾಲೀನ ಕನ್ನಡ ಕಾದಂಬರಿಗಳ ಮೇಲೆ ಅವನು ಬರೆದ ಲೇಖನಗಳ ಸಂಗ್ರಹ; ಎಮರ್ಜನ್ಸಿ ಕಾಲದಲ್ಲಿ ಜೈಲಲ್ಲಿದ್ದಾಗ ಅವನು ಭಕ್ತಿಪಂಥ, ನಾಗರಿಕತೆ, ಸಂಸ್ಕೃತಿಗಳ ಬಗ್ಗೆ ಮಾಡಿರುವ ಟಿಪ್ಪಣಿಗಳು; ಭಗವದ್ಗೀತೆ ಮತ್ತು ದಾಸ್ತೊವಸ್ಕಿ ಎಂಬ ಲೇಖನ; ಎಚ್. ಎಂ ಎಸ್.ಅಧ್ಯಕ್ಷನಾಗಿ ಅವನು ಕಾರ್ಮಿಕ ಸಮಸ್ಯೆಗಳ ಮೇಲೆ ಇಂಗ್ಲಿಷಲ್ಲಿ ಬರೆದಿರುವ ಪುಸ್ತಕ; ಯುಗೋಸ್ಲಾವಿಯಾ ಪ್ರವಾಸ ಕಥನ; ಲೋಹಿಯಾ ಕೃತಿಗಳಿಂದ ಆಯ್ದ ಭಾಗಗಳ ಸಂಗ್ರಹ ಹಲವು ಶಿಸ್ತುಗಳ ಅಂತರ್ನೋಟಗಳನ್ನು ಪರಸ್ಪರ ಪೂರಕವೆಂಬಂತೆ ಸ್ವಂತ ಅನುಭವದಲ್ಲಿ ನೇಯಬಲ್ಲ ಅವನ ಕುಶಲತೆಯನ್ನು, ಹರಿತವಾದ ಬುದ್ಧಿಶಕ್ತಿಯನ್ನು ಈ ಎಲ್ಲದರಲ್ಲೂ ಕಾಣಬಹುದು. ಮಾರ್ಕ್ಸ್ ಮತ್ತು ಲೋಹಿಯಾ– ಇಬ್ಬರಿಂದಲೂ ಇವನಷ್ಟು ಕಲಿತವರು ನಮ್ಮಲ್ಲಿ ವಿರಳವೇ ಎನ್ನಬೇಕು. ಮಾರ್ಕ್ಸ್ ಮತ್ತು ಟ್ರಾಟ್ಸ್ಕಿಯರಿಂದ ಇವನು ಕಲಿತಿದ್ದ ತಾರ್ಕಿಕ ಚಿಂತನಾಕ್ರಮ ಲೋಹಿಯಾ, ಗಾಂಧಿ. ಯವರಿಂದ ಪಡೆದ ಭಾರತೀಯ ಅನುಭವದ ವಿಶಿಷ್ಟತೆಯಿಂದಾಗಿ ತನ್ನ ಹದ

ವನ್ನೂ ಶಠತ್ವವನ್ನೂ ಕಳೆದುಕೊಂಡು, ಆದರೆ ಮೊನಚನ್ನು ಉಳಿಸಿಕೊಂಡು ಶಕ್ತಿಯುತವೂ, ದೃಢವೂ, ವೈಯಕ್ತಿಕ ಗೀಳುಗಳಿಂದ ಮುಕ್ತವೂ ಆಗಿತ್ತು. ಆದ್ದರಿಂದಲೇ ಇವನಿಗೆ ಹಲವು ಮಾರ್ಕ್ಸ್‌ವಾದಿಗಳ ಸೆಟೆದುಕೊಂಡ ನಿಷ್ಠೆಯಂತೆಯೇ, ಅನೇಕ ಲೋಹಿಯಾವಾದಿಗಳ ಸ್ವಪ್ರದರ್ಶನರತಿಯೂ, ಶಿಸ್ತಿಗೆ ಒಲ್ಲದ ಸ್ವಪ್ರತಿಷ್ಠೆಯೂ ಅಸಹನೀಯವಾಗಿ ಕಾಣುತ್ತಿದ್ದುದು.

ಬದುಕಿದ್ದರೆ ಅವನು ಈಗ ಜಪಾನಿನಲ್ಲಿರಬೇಕಿತ್ತು. ಭಾರತದ ಲೇಖಕರು, ಕಲಾವಿದರು, ನಟರು ಎಲ್ಲರನ್ನೂ ಒಟ್ಟಾಗಿ ತರುವ ಸೃಜನಶೀಲರ ಟ್ರೇಡ್ ಯೂನಿಯನ್ ಒಂದರ ರೂಪುರೇಕ್ಷೆಗಳನ್ನು ಸಿದ್ಧಪಡಿಸಬೇಕಿತ್ತು. ಸಾಯುವುದಕ್ಕೆ ಮುಂಚೆ ಅವನನ್ನು ಭೇಟಿಯಾದಾಗ ಎಸ್. ಆರ್. ರಾವ್, ಬುವಗದ್ದೆ ರಮೇಶ್, ಪುರುಷೋತ್ತಮ, ಶೂದ್ರ ಶ್ರೀನಿವಾಸ್ ಮತ್ತು ನಾನು ಇಂಥ ಹಲವಾರು ಯೋಜನೆಗಳನ್ನು ಅವನ ಜೊತೆ ಚರ್ಚಿಸಿದ್ದೆವು. ವ್ಯವಸ್ಥಿತವಾದ ಸಂಘಟನೆಯ ಕೆಲಸಕ್ಕೆ ತೀರ ನಾಲಾಯಕ್ಕಾದ ನಾನು ವೆಂಕಟರಾಮ್‌ನನ್ನು ಇಂಥವಕ್ಕೆ ನೆಚ್ಚಿಕೊಂಡಿದ್ದೆ. ದೇಶದ ರಾಜಕೀಯದ ಬಗ್ಗೆ ಈಚೆಗೆ ಹತಾಶ ಭಾವನೆ ಬೆಳೆಯುತ್ತಿರುವ ನನ್ನಲ್ಲಿ ಹೋದ ಬಾರಿ ಭೆಟ್ಟಿಯಾದಾಗ ವೆಂಕಟರಾಮ್ ಭರವಸೆಮೂಡಿಸಲು ಯತ್ನಿಸಿದ್ದ. ಅಸ್ಸಾಮ್ ಗಲಭೆ. ರೈತರ ಬಂಡಾಯ, ರಾಜಕೀಯ ಪಕ್ಷಗಳಲ್ಲಿ ಕಾಣಿಸುತ್ತಿರುವ ಒಡಕುಗಳು, ಮೊರಾರ್ಜಿ, ಜಗಜೀವನರಾಮ್, ಚರಣಸಿಂಗ್‌ರಂಥವರನ್ನು ಮೂಲೆಗೆ ತಳ್ಳುತ್ತಿರುವ ಬೆಳವಣಿಗೆಗಳು— ಈ ಎಲ್ಲವೂ ಸದಾ ಚಿಂತನಶೀಲನೂ, ಕಾರ್ಯಪ್ರವೃತ್ತನೂ ಆಗಿದ್ದ ಅವನಿಗೆ ಹೊಸ ಭವಿಷ್ಯದ ಮುನ್ಸೂಚನೆಗಳಾಗಿ ಕಂಡಿದ್ದವು. ಜನತೆಯ ಸದ್ಯದ ಆಶಯಗಳಿಂದಲೇ ಹುಟ್ಟುವ, ಹೋರಾಟಗಳ ಮುಖೇನ ರೂಪತಾಳುವ ವಿಕೇಂದ್ರಿಕೃತ ವ್ಯವಸ್ಥೆಯನ್ನು ಅನಿವಾರ್ಯವಾಗಿಸುವ ಸಮಾಜವಾದ ಹೇಗಿರುತ್ತದೆಂದು ಚರ್ಚಿಸುತ್ತಲೇ ಅವನು ಹೊರಟು ಹೋದ. ಅವನು ಸತ್ತಿದ್ದಾನೆಂದು ನಂಬುವುದು ಕಷ್ಟ.

ವೆಂಕಟರಾಮ್ ಜೈಲಲ್ಲಿದ್ದಾಗ ಅವನ ಇಬ್ಬರು ಹೆಣ್ಣು ಮಕ್ಕಳಾದ ಗೀತ ಮತ್ತು ಶೋಭ ತಮ್ಮ ಗಂಡಂದಿರನ್ನು ತಾವೇ ಹುಡುಕಿಕೊಂಡಿದ್ದರು. ವೆಂಕಟರಾಮ್ ಇದರಿಂದ ತುಂಬ ಖುಷಿಯಾಗಿ ಹೇಳಿದ್ದ: "ನೋಡು, ಇನ್ನೇನು ಅಪ್ಪ ಹೊರಗೆ ಬರುವುದಿಲ್ಲೆಂದು ತಿಳಿದು ನನ್ನ ಮಕ್ಕಳು ತಮ್ಮ ಜವಾಬ್ದಾರಿ ತಾವೇ ಹೊತ್ತರು." ಅವನ ಗಂಡು ಮಕ್ಕಳಾದ ಸುರೇಶ್ ಪ್ರದೀಪರೂ ವಿದ್ಯಾಭ್ಯಾಸ ಮುಗಿಸಿ ಉದ್ಯೋಗ ಹಿಡಿದರು. ಐವತ್ತಾರನೇ ವಯಸ್ಸಿನ ವೆಂಕಟರಾಮ್‌ಗೆ ಮೊಮ್ಮಕ್ಕಳೂ ಆದರು. ಈ ಮೂರುನಾಲ್ಕು ವರ್ಷಗಳು ಹೀಗೆ ವೆಂಕಟರಾಮ್‌ನ ಹೋರಾಟದ, ಬಡತನದ ಬದುಕಿನಲ್ಲಿ ಮಹತ್ವದ್ದಾಗಿದ್ದವು. ಜನತೆಗಾಗಿ ಬದುಕುವ ಅನೇಕ ಕ್ರಾಂತಿಕಾರಿ ರಾಜಕಾರಣಿಗಳ ಸಾಂಸಾರಿಕ ಜೀವನದಂತೆ ವೆಂಕಟರಾಮನದು ಒಡೆದು ಹೋಗಲಿಲ್ಲ. ವೆಂಕಟರಾಮ್ ಈ ಬಗ್ಗೆ ಅರ್ಧ ತಮಾಷೆಯಲ್ಲಿ ಅರ್ಧ ಗಾಂಭೀರ್ಯದಲ್ಲಿ ಹೇಳುತ್ತಿದ್ದ— ತನ್ನ ಬದುಕಿನ ಯಶಸ್ಸಿಗೆ ಕಾರಣರಾದ ಸಹಧರ್ಮಿಣಿ ಸರೋಜಾ ಕಡೆ ನೋಡುತ್ತ: "ನಾವಿನ್ನು ವಾನಪ್ರಸ್ಥ ಜೀವನ ಪ್ರಾರಂಭಿಸಬಹುದು." ಹೊಸ ಬದುಕಿಗಾಗಿ ಹಗುರಾದ ನಿರಂಬಳತೆಯಿಂದ ಸನ್ನದ್ಧನಾಗುತ್ತಿದ್ದಾಗಲೇ ವೆಂಕಟರಾಮ್ ಸತ್ತ.

ಕ್ರಿಸ್‌ಮಸ್ ಸಮಯದಲ್ಲಿ ಕೊನೆಯಬಾರಿ ನಾನು ಅವನ ಜೊತೆ ಕೂತು ಮಾತಾಡಿದ್ದು. ಅವನ ಪರಮಾಪ್ತರಲ್ಲಿ ಒಬ್ಬರಾದ ಎಸ್.ಆರ್.ರಾವ್ ಬೊಂಬಾಯಿಂದ ಬಂದಿದ್ದರು. ಹೊಸಮನೆ ಕಟ್ಟುವುದಕ್ಕಿಂತ ಮೊದಲು ಅವನು ಇದ್ದ ಪುಟ್ಟ ಮನೆಯ ಒಂದು ಸಣ್ಣ ಕೋಣೆಯಲ್ಲಿ ಇಪ್ಪತ್ತು ಮುವ್ವತ್ತು ಜನ ಕಿಕ್ಕಿರಿದು ಕೂರುತ್ತಿದ್ದರೆ, ಈಗ ಎಂಜಿನಿಯರ್ ಸುರೇಶ್ ಅಪ್ಪನ ಜೀವನ ಕ್ರಮಕ್ಕೆ ಅನುಕೂಲವಾಗಲೆಂದು ಯೋಜಿಸಿ ಕಟ್ಟಿದ್ದ ಈ ಹೊಸ ಮನೆಯ ಬೆಳಗಿನ ಬಿಸಿಲು ತುಂಬಿದ ಹಾಲಿನಲ್ಲಿ ನಾವೆಲ್ಲ ಆರಾಮವಾಗಿ ಟ್ರಾಟ್ಸ್ಕಿ, ಲೋಹಿಯಾ, ಮಾವೊ ಇತ್ಯಾದಿ ಮಾತಾಡುತ್ತ, ಒಳಗಿಂದ ಸತತವಾಗಿ ಹರಿದು ಬರುತ್ತಿದ್ದ ಚಹ ಕುಡಿಯುತ್ತ ಕೂತಿದ್ದೆವು. ಮಹಡಿ ಮೇಲೆ ದೊಡ್ಡದೊಂದು ಕಾರ್ಮಿಕರ ಗುಂಪು ವೆಂಕಟರಾಮ್‌ಗೆ ಕಾದಿತ್ತು. ಮೊಮ್ಮಕ್ಕಳು ಒಬ್ಬರ ಕೈಯಿಂದ

ಸನ್ನಿವೇಶ

ಇನ್ನೊಬ್ಬರ ಕೈಗೆ ಸಾಗುತ್ತ ಹರ್ಷದಲ್ಲಿದ್ದವು. ವೆಂಕಟರಾಮ್ ಮಕ್ಕಳ ಪಠ್ಯಪುಸ್ತಕಗಳ ಬಗ್ಗೆ ಆರ್ತವಾದ ಕೋಪದಿಂದ ಮಾತಾಡಲು ಶುರುಮಾಡಿದ. ಎಲ್ಲ ಕನ್ನಡ ಪಠ್ಯ ಪುಸ್ತಕಗಳನ್ನೂ ಓದಿ, ಟಿಪ್ಪಣಿ ಮಾಡಿಕೊಂಡು, ಅವುಗಳ ಹಾನಿಕರವಾದ ನ್ಯೂನತೆಗಳ ಬಗ್ಗೆ 'ಕನ್ನಡ ಪ್ರಭ' ದಲ್ಲಿ ಅವನು ಎತ್ತಿದ್ದ ಚರ್ಚೆಯಲ್ಲಿ ಯಾರೂ ಭಾಗವಹಿಸಲಿಲ್ಲೆಂದು ಅವನಿಗೆ ತುಂಬ ಯಾತನೆಯಾಗಿತ್ತು. ನಾನು ಈ ಬಗ್ಗೆ ಏನೂ ಬರೆಯಲಿಲ್ಲೆಂದು ನನಗೆ ನಾಚಿಕೆಯಾಗಿತ್ತು. ಕಾರ್ಮಿಕರಿಗೆ ಚಹಾ ಕಳಿಸುವಂತೆ ಹೇಳಿ ವೆಂಕಟರಾಮ್ ಮೇಲಕ್ಕೆ ಹೋಗಿ ಅವರ ಸಮಸ್ಯೆ ಬಗೆಹರಿಸಿ ಕೆಳಗೆ ಬಂದ. ಪ್ರಸ್ತುತ ರಾಜಕೀಯದ ಬಗ್ಗೆ ಮಾತು ಹರಿಯಿತು. "ಮುಂದೇನು ವೆಂಕಟರಾಮ್?" ಎಂದು ಕೇಳಿದೆ.

ವೆಂಕಟರಾಮ್ ತನ್ನ ದಪ್ಪ ಗಾಜಿನ ಕನ್ನಡಕವನ್ನು ಸರಿಮಾಡಿಕೊಂಡು ದಿಟ್ಟಿಸಿ ನೋಡುತ್ತ ಹೇಳಿದ: "ಎಮರ್ಜನ್ಸಿಯಲ್ಲಿ ಪ್ರಜಾಸತ್ತೆ ಪ್ರಶ್ನೆಯಾಗಿ ಇಂದಿರಾ ಸರ್ಕಾರ ಉರುಳಿತು. ಜನತಾ ಸರ್ಕಾರದಲ್ಲಿ ಸೆಕ್ಯುಲರಿಸಂ ಪ್ರಶ್ನೆಯಾಗಿ ನಮ್ಮ ಸರ್ಕಾರ ಉರುಳಿತು. ಈಗ ಇಂದಿರಾ ಆಡಳಿತದ ವೈಖರಿಯಲ್ಲಿ ಫೆಡರಲಿಸಂ ಪ್ರಶ್ನೆಯಾಗಿ ಇಂದಿರಾ ಸರ್ಕಾರ ಮತ್ತೆ ಉರುಳಬಹುದು ..."

ರಂಗದ ಹಿಂದೆ ನಿಂತು ಕೆಲಸ ಮಾಡುತ್ತಿದ್ದ ರಾಜಕಾರಣಿ ವೆಂಕಟರಾಮ್. ಸದಾ ಗುಂಪುಗಳ ನಡುವೆ ಬದುಕಿದ್ದೂ ಅವನಲ್ಲಿ ಇನ್ನೂ ಸಂಕೋಚ ಪ್ರವೃತ್ತಿ, ನಾಚಿಕೆಗಳು ಉಳಿದಿದ್ದವು. ಕಾರ್ಮಿಕ ನಾಯಕನಾಗಿಯೂ ಅವನು ಡೆಮೋಗಾಗ್‌ನಂತೆ ಮಾತಾಡುತ್ತಿರಲಿಲ್ಲ. ಅವನ ಬದುಕಿನ ಕ್ರಮವೇ ಸಮಾಜವಾದಿಯದಾಗಿತ್ತು. ಎಷ್ಟೋ ತಬ್ಬಲಿಗಳನ್ನು, ಮನೆಯಲ್ಲಿ ಇರುವುದನ್ನೇ ಹಂಚಿಕೊಂಡು ಅವನು ಸಾಕಿದ್ದಾನೆ. ನಂದನಾ, ಬಂದಗದ್ದೆ ರಮೇಶ್, ಸೀತಾರಾಮ್, ಪುರುಷೋತ್ತಮ್— ಹೀಗೆ ಹಲವಾರು ಯುವಜನರು ಈ ದಿಕ್ಕುಕಾಣದ ದಿನಗಳಲ್ಲಿ ವೆಂಕಟರಾಮ್ ಹತ್ತಿರ ಮಾರ್ಗದರ್ಶನಕ್ಕಾಗಿ ಬರುತ್ತಿದ್ದರು. ಅವನ ಇನ್ನೊಬ್ಬ ಮಗನಂತೆ ಮನೆಯಲ್ಲಿರುತ್ತಿದ್ದ ವಿಶ್ವನಾಥ್ ಆಜಾನುಬಾಹು ಯುವಕ; ಇನ್ನೊಬ್ಬ, ಚಿಕ್ಕಮಗಳೂರು ಚುನಾವಣೆಯಲ್ಲಿ ಹುತಾತ್ಮಳಾದ ಗಾಯಿತ್ರಿಯ ಸೋದರ, ಗುರುರಾಜ. ಟ್ಯಾಕ್ಸಿಯನ್ನು ಕರೆದರೆ ವೆಂಕಟರಾಮ್ ಎಂದೂ ಹಿಂದಿನ ಸೀಟಲ್ಲಿ ಕೂರುವವನಲ್ಲ— ಡ್ರೈವರ್ ಪಕ್ಕದಲ್ಲೇ ಕೂರಬೇಕು....

ಇಂಥ ಒಬ್ಬ ಗೆಳೆಯನಿಲ್ಲದ ಪ್ರಪಂಚದಲ್ಲಿ ಅವನಿಗೆ ಆಪ್ತರಾಗಿದ್ದ ನಾವು ಹಲವರು ಬದುಕುವುದನ್ನು ಕಲಿಯಬೇಕಾಗಿ ಬಂದಿದೆ ..

✲

ಪ್ರಿಯ ಓದುಗರೆ,

'ಸನ್ನಿವೇಶ' ಎಂಬ ಹೆಸರು ನಮಗೆ ಸಿಗಲಿಲ್ಲವಾದ್ದರಿಂದ 'ರುಜುವಾತು' ಎಂಬ ಹೆಸರಲ್ಲಿ ಈ ನಮ್ಮ ತ್ರೈಮಾಸಿಕ ಪ್ರಕಟವಾಗುತ್ತಿದೆ. ಇದು 'ಸನ್ನಿವೇಶ ಪ್ರಕಾಶನ'ದ ಪತ್ರಿಕೆ. ಆದ್ದರಿಂದ ಚಂದಾಹಣವನ್ನು **ಸನ್ನಿವೇಶ, 43/48.** ಮಹಡಿ, **7** ನೇ ಕ್ರಾಸ್, ವಸಂತನಗರ, ಬೆಂಗಳೂರು–560 052, ಈ ವಿಳಾಸಕ್ಕೆ ಕಳುಹಿಸಬೇಕೆಂದು ಪ್ರಾರ್ಥನೆ. ಜನವರಿಯಲ್ಲೆ ನಿಮ್ಮ ಕೈಸೇರಬೇಕಾಗಿದ್ದ ಈ ಪತ್ರಿಕೆ ಪ್ರೆಸ್ ಬದಲಾವಣೆ ಇತ್ಯಾದಿ ತೊಂದರೆಗಳಿಂದಾಗಿ ಇಷ್ಟು ತಡವಾದ್ದನ್ನು ಕ್ಷಮಿಸಬೇಕು. ಮುಂದಿನ ಸಂಚಿಕೆ ನಿಮಗೆ ಏಪ್ರಿಲ್ ಮೊದಲ ವಾರದಲ್ಲೇ ತಲುಪುವುದು. ಈ ಸಂಚಿಕೆ ಬಗ್ಗೆ ನಿಮ್ಮ ಅಭಿಪ್ರಾಯ ದಯಮಾಡಿ ಸಂಪಾದಕರ ವಿಳಾಸಕ್ಕೆ ತಿಳಿಸಿ. ಪತ್ರಿಕೆಗೆ ಚಂದಾದಾರರನ್ನು ಮಾಡಿಕೊಡುವುದರ ಮುಖಾಂತರ ನಮ್ಮೊಡನೆ ಸಹಕರಿಸಲು ಪ್ರಾರ್ಥನೆ.

— ಸಂಪಾದಕವರ್ಗ.

With best compliments from

S.K. AGARWAL

Contractor

HIDKAL DAM

DIST. BELGAUM

With best Compliments from :

M/s. SUDHA TRADERS

N. T. PET, BANGALORE-560 002.

WITH BEST COMPLIMENTS FROM :

M/s. Sudha Enterprises

N. T. Pet, Bangalore-560002

"I am a housewife.
I want clothes that are comfortable."



Your kind of fabrics
for your kind of clothes

Mafatlal
Fabrics

Suitings. Shirtings. Sarees. Dress Materials and Denims.

MAFATLAL INDUSTRIES NEW SHORROCK MILLS MAFATLAL FINE

With best Wishes from

B. T. VENKATARAMAIAH & SONS.

12, ANE KALLAPPA LANE

NARAYANA SETTY PET

BANGALORE-560 002

With Best Wishes from

Phone : Off. : 74467
Res. : 52921

Grams : ASHIKASARI

ASHA BROS

SAREE WHOLESALERS

Specialists in : Satin, Silk & Chiffon Printed Sarees

44 46, Jumma Masjid, I st Floor, Bangalore 560 002

Compliments from

Off. 70172

Ree. 57c329

Deluxe Silks

SAREE SPECIALISTS

64, Chowdeswari Temple Street, I st Floor; Bangalore-560 002

ಗೋಪಾಲಕೃಷ್ಣ ಅಡಿಗರ
ಸಂಪಾದಕತ್ವದಲ್ಲಿ ಬರಲಿದೆ:

ಸಾ ಕ್ಷಿ

ವಿವರಗಳಿಗೆ ಬರೆಯಿರಿ:

460/A, 6th cross, 7th Block west
Jayanagar, Bangalore-560 011

ಓದಿರಿ:

ಪುಸ್ತಕ ಪುರವಣಿ

ಶೂದ್ರ

ಅಂಕಣ

Tel. 'JILLABANK' Tel. 4040 & 4440

THE PALGHAT CO-OPERATIVE CENTRAL BANK LIMITED.
H.O. PALGHAT – 678 014.

A leading Co-operative Central Bank in Kerela

PARTNERS in PROGRESS and DEVELOPMENT of AGRICULTURE in PALGHAT DISTRICT.

We take pride in serving you.

Rush up to us . . . To push up your Savings.

We have several attractive DEPOSIT SCHEME for you.

"Safe Deposit Lockers" available at our Palghat and Ottapalam Branches

Ladies counter at Sultanpet, Palghat functioning on Sundays.

Banking facilities available from Dawn to Dusk
through our Branches at Palghat.

C. V. Ramachandran
President.

K. V. Unni Nair, B.Com., B.L.
General Manager.

ಹನಿ ಹನಿ ಸೇರಿದಾಗ ಸಾಗರ,
ಹಾಗೆಯೇ
ನಿಮ್ಮ ಉಳಿತಾಯದ ಒಂದು ಸಣ್ಣ ಅಂಶ
ಪ್ರತಿ ದಿನ ಸಿಂಡಿಕೇಟ್ ಬ್ಯಾಂಕ್‌ನಲ್ಲಿರುವ
ನಿಮ್ಮ ಆದರ್ಶ ಉಳಿತಾಯ ಯೋಜನೆಯಲ್ಲಿ ಸೇರಿ
ಬೆಳೆದು ಐದು ವರ್ಷಗಳಲ್ಲಿ
ದೊಡ್ಡ ಮೊತ್ತವಾಗುತ್ತದೆ.
ದಿನಕ್ಕೆ ಕೇವಲ 25 ಪೈಸೆಯಷ್ಟು
ಸಣ್ಣ ಮೊತ್ತವನ್ನೂ ಉಳಿಸಬಹುದು.
ಬ್ಯಾಂಕಿನ ಪ್ರತಿನಿಧಿ ಮನೆ ಬಾಗಿಲಿಗೆ ಬಂದು
ಠೇವಣಿಯನ್ನು ಸಂಗ್ರಹಿಸುತ್ತಾನೆ.
ಆದರ್ಶ ಉಳಿತಾಯ ಯೋಜನೆಯೊಂದನ್ನು
ಇಂದೇ ಆರಂಭಿಸಿ.

ಸಿಂಡಿಕೇಟ್ ಬ್ಯಾಂಕ್
ನಿಮ್ಮ ಉಳಿತಾಯ ಯೋಜನೆಗಳ ಶಿಲ್ಪಿ.

ಹಾರ್ದಿಕ

ಶುಭಾಷಯ

WITH COMPLIMENTS FROM

A. Nanjappa & Sons.

Silk Merchants
Bangalore-560002

* ವೃಕ್ಷ — ಎಸ್. ಜಿ. ವಾಸುದೇವ್ - ತಾಮ್ರ ಲೋಹದ ಉಬ್ಬು ಚಿತ್ರ (ಮುಖ ಚಿತ್ರ) ಮತ್ತು ಇದು

* ಭೂಮಿಯ ಆಳದಿಂದ ಮರದ ಮುಖೇನ ಮೇಲೇರುವ, ಹೊಸ ಬಾಳು ತುಂಬುವ ನೀರು, ಫಲವಂತಿಕೆ, ಕಾಮ ಮತ್ತು ಪುನರ್ಜನ್ಮಗಳನ್ನು ಸಂಕೇತಿಸುವ ಸರ್ಪವಾಗಿ ಮೈ ತಳೆದಿದೆ; ಸ್ವರ್ಗ ಭೂಮಿ ಪಾತಾಳಗಳ ವಿವಿಧ ಘಟ್ಟಗಳ ನಡುವಿನ ಸಂಬಂಧವನ್ನೂ ಪ್ರತಿನಿಧಿಸಿದೆ.

* "ನಾನು ಈ ವೃಕ್ಷದಿಂದ ಆವಾಹಿತನಾಗಿದ್ದೇನೆ. ಸ್ವರ್ಗ ಮರ್ತ್ಯ ಪಾತಾಳಗಳನ್ನು ವೃಕ್ಷಆವರಿಸಿದೆ ; ಕೊಂಬೆಗಳನ್ನು ಸ್ವರ್ಗದಲ್ಲಿ ಚೆಲ್ಲಿದೆ, ಪಾತಾಳದಲ್ಲಿ ಬೇರುಗಳನ್ನು ಇಳಿಸಿದೆ......

ವೃಕ್ಷದಂತೆಯೇ ಕಲ್ಪನೆಯೂ ಅನಂತ ಮರುಹುಟ್ಟುಗಳನ್ನು ಪಡೆಯಬಲ್ಲ ಮೂಲಾಧಾರ ಶಕ್ತಿ......

ನನ್ನ ಒಳಜೀವನದ ಅನುಭವದಲ್ಲಿ ಈ ವೃಕ್ಷಗಳು ಊರಿವೆ. ನನಗೆ ಬೆಳೆಯುವ ಆಸೆ; ನನ್ನ ಹೊರಗಿನದನ್ನು ಕಾಣುವ ಆಸೆ...ನನ್ನದು ಜಂತು ಪ್ರಪಂಚ......"

ಎಸ್. ಜಿ. ವಾಸುದೇವ್ : ಈ ನನ್ನ ವೃಕ್ಷ

[ಒಳಗೆ ನೋಡಿ]